ಕರ್ನಾಟಕ ಸರ್ಕಾರ

ಶಾಲಾ ಶಿಕ್ಷಣ ಇಲಾಖೆ

## ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ

3ನೇ ಹಂತ, ಬನಶಂಕರಿ, ಬೆಂಗಳೂರು – 560085

## ಸೇವಾ ಪೂರ್ವ ಶಿಕ್ಷಕ ಶಿಕ್ಷಣ ವಿಭಾಗದ ಡಿ.ಇಎಲ್.ಇಡಿ ಕೋರ್ಸ್‌ನ ಬೋಧನಾ ವಿಷಯಗಳ ಪೂರಕ ಸಂಪನ್ಮೂಲ ಸಾಹಿತ್ಯ

# ಶಿಶು ವಿಕಸನ ಮತ್ತು ಬೋಧನಾ ಶಾಸ್ತ್ರ







ಶಿಕ್ಷಕರ ಅರ್ಹತಾ
ಪರೀಕ್ಷೆ (TET)–ಪತ್ರಿಕೆ 1
ಪಠ್ಯವಸ್ತು ಆಧಾರಿತ

ಸಹಯೋಗ

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್), ಮೈಸೂರು.

ಮತ್ತು

ಸರ್ಕಾರಿ ಮಹಾರಾಣಿ ಮಹಿಳಾ ಪ್ರಶಿಕ್ಷಣ ಸಂಸ್ಥೆ, ಮೈಸೂರು.

ನಹೀ ಜ್ಞಾನೇನ ಸದೃಶಂ

# ಸೇವಾ ಪೂರ್ವ ಶಿಕ್ಷಕ ಶಿಕ್ಷಣ ವಿಭಾಗದ
# ಡಿ.ಇಎಲ್.ಇಡಿ ಕೋರ್ಸ್‌ನ ಬೋಧನಾ ವಿಷಯಗಳ
# ಪೂರಕ ಸಂಪನ್ಮೂಲ ಸಾಹಿತ್ಯ

# ಶಿಶು ವಿಕಸನ ಮತ್ತು ಬೋಧನಾ ಶಾಸ್ತ್ರ

# 2024



ಪ್ರಕಾಶಕರು ಮತ್ತು ಹಕ್ಕು ಸಾಮ್ಯತೆ

ನಿರ್ದೇಶಕರು

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ.

3 ನೇ ಹಂತ. ಬನಶಂಕರಿ. ಬೆಂಗಳೂರು 560085

## ಆಶಯ ನುಡಿ



'The destiny of a nation is being shaped in it's classrooms' ಎಂಬ ಕೊಠಾರಿ ಆಯೋಗದ ಧ್ಯೇಯ ನುಡಿಗಳು ಪ್ರತಿಧ್ವನಿಸುವಂತೆ, ಇಂದು ಒಂದು ದೇಶದ ಅಭಿವೃದ್ಧಿಯ ಪ್ರತಿಫಲನ ಅಲ್ಲಿನ ಶಿಕ್ಷಣದ ಗುಣಮಟ್ಟವೇ ಆಗಿದೆ. ಜ್ಞಾನವಂತ, ಶ್ರೇಷ್ಠ, ಮಾನವೀಯ ಮೌಲ್ಯಗಳುಳ್ಳ ಶಿಕ್ಷಕರಿಂದ ಮಾತ್ರ ಉತ್ತಮ ಸಮಾಜ ನಿರ್ಮಾಣ ಸಾಧ್ಯ. ಈ ನಿಟ್ಟಿನಲ್ಲಿ ಜ್ಞಾನ, ಅರಿವು ಮತ್ತು ತಿಳಿವಳಿಕೆ ಎಂಬ ಮೂರು ಆಯಾಮಗಳನ್ನು ಆಧರಿಸಿ ಗುಣಮಟ್ಟ ಹೊಂದಿದ ಶಿಕ್ಷಕರನ್ನು ಹೊರ ತರುವುದು ಸೇವಾ ಪೂರ್ವ ಶಿಕ್ಷಕರ ಶಿಕ್ಷಣ ವಿಭಾಗದ ಎಲ್ಲಾ ಭಾಗೀದಾರರ ಜವಾಬ್ದಾರಿಯಾಗಿದೆ. ಸೇವಾ ಪೂರ್ವ ಶಿಕ್ಷಕರ ಶಿಕ್ಷಣ ವಿಭಾಗದ ಉಪಕ್ರಮಗಳಲ್ಲಿ ಒಂದಾದ ಪ್ರಾಥಮಿಕ ಶಾಲಾ ಶಿಕ್ಷಕ ಶಿಕ್ಷಣ ತರಬೇತಿ (D.El.Ed – Diploma in Elementary Education) ಯು 1 ರಿಂದ 8ನೇ ತರಗತಿ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವ ಶಿಕ್ಷಕರನ್ನು ರೂಪಿಸುವ ಕೋರ್ಸ್ ಆಗಿದೆ.

ಪ್ರಸ್ತುತ ಬದಲಾಗುತ್ತಿರುವ ತಂತ್ರಜ್ಞಾನ ಮತ್ತು ಸ್ಪರ್ಧಾತ್ಮಕ ಯುಗದಲ್ಲಿ ಶಿಕ್ಷಣದ ಗುಣಮಟ್ಟ ಕಾಯ್ದುಕೊಳ್ಳುವ ಅಗತ್ಯತೆಯನ್ನೂ ಯಾರೂ ಅಲ್ಲಗಳೆಯುವಂತಿಲ್ಲ. ಗುಣಮಟ್ಟದ ಶಿಕ್ಷಣ ನೀಡುವ ಶಿಕ್ಷಕರಿಗೆ ಮಕ್ಕಳ ಕಲಿಕಾ ಸಾಮರ್ಥ್ಯವನ್ನು ಅರ್ಥ ಮಾಡಿಕೊಂಡು, ಅವರಿಗೆ ಕಲಿಕಾ ಸ್ನೇಹಿ ವಾತಾವರಣ ಸೃಷ್ಟಿಸುವ ಒಳನೋಟ ಇರಬೇಕು. ಮಕ್ಕಳ ಕುತೂಹಲ, ಆಲೋಚನಾ ಶಕ್ತಿಯ ವೃದ್ಧಿಗೆ ಪೂರ್ವ ಸಿದ್ಧತೆ ಅತೀ ಅವಶ್ಯಕ. ಬೋಧನಾ ಶಾಸ್ತ್ರದ ಜ್ಞಾನದೊಂದಿಗೆ ಪಠ್ಯಕ್ರಮ ಆಧಾರಿತ ವಿಷಯ ಜ್ಞಾನದ ಅಗತ್ಯತೆಯನ್ನು ಪರಿಗಣಿಸಿ, ಇಲಾಖೆಯು ಶಿಕ್ಷಕರ ವೃತ್ತಿ ಆಯ್ಕೆ ಬಯಸುವವರಿಗೆ **'ಶಿಕ್ಷಕರ ಅರ್ಹತಾ ಪರೀಕ್ಷೆ'** (TET) ಹಾಗೂ ಶಿಕ್ಷಕರ ನೇಮಕಾತಿ ಪ್ರವೇಶ ಪರೀಕ್ಷೆ (CET)ಗಳನ್ನು ನಡೆಸುವ ಮೂಲಕ ನೇಮಕಾತಿ ಹಂತದಲ್ಲೇ ಗುಣಮಟ್ಟವನ್ನು ಕಾಯ್ದುಕೊಳ್ಳುವ ಪೂರ್ವಸಿದ್ಧತಾ ಕ್ರಮಗಳನ್ನು ಕೈಗೊಂಡಿರುವುದು ಗಮನಾರ್ಹ ಅಂಶವಾಗಿದೆ.

ನಮ್ಮ ಇಲಾಖೆಯ ಸಂಪನ್ಮೂಲ ತಂಡದೊಂದಿಗೆ ಶೈಕ್ಷಣಿಕ ಪ್ರಗತಿ ಪರಿಶೀಲನಾ ಕಾರ್ಯಕ್ಕಾಗಿ ಮೈಸೂರಿನ ಸರ್ಕಾರಿ ಮಹಾರಾಣಿ ಮಹಿಳಾ ಪ್ರಶಿಕ್ಷಣ ಸಂಸ್ಥೆಗೆ ಭೇಟಿ ನೀಡಿದಾಗ, ಅಲ್ಲಿನ ಪ್ರಾಂಶುಪಾಲರು ಮತ್ತು ಉಪನ್ಯಾಸಕರ ತಂಡದವರು ಉಪನ್ಯಾಸಕರ ಮತ್ತು ಪ್ರಶಿಕ್ಷಣಾರ್ಥಿಗಳ ವೃತ್ತಿಪರ ಅಭಿವೃದ್ಧಿಗಾಗಿ ನಡೆಸಿರುವ ಕೆಲವು ನಾವಿನ್ಯಯುತ ಉಪಕ್ರಮಗಳಲ್ಲಿ ಡಯಟ್‌ರವರ ಸಹಕಾರದೊಂದಿಗೆ **ಶಿಕ್ಷಕರ ಅರ್ಹತಾ ಪರೀಕ್ಷೆಗೆ** ಹಾಜರಾಗುವ ಅಭ್ಯರ್ಥಿಗಳಿಗೆ ಸ್ವಯಂ ಪ್ರೇರಿತರಾಗಿ ಉಚಿತವಾಗಿ ಮುಖಾಮುಖಿ ಮತ್ತು ಆನ್‌ಲೈನ್ ತರಬೇತಿಗಳನ್ನು ನಡೆಸಿರುವುದನ್ನು ಗಮನಿಸಲಾಯಿತು.

D.El.Ed ಕೋರ್ಸ್‌ನ ಬೋಧನಾ ವಿಷಯಗಳಿಗೆ ಪೂರಕವಾದ ಸಂಪನ್ಮೂಲ ಸಾಹಿತ್ಯವನ್ನು ರಚಿಸಿ, ರಾಜ್ಯದ ಎಲ್ಲಾ ಶಿಕ್ಷಕ ಶಿಕ್ಷಣ ತರಬೇತಿ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರಶಿಕ್ಷಣಾರ್ಥಿಗಳಿಗೆ ಬೋಧನಾಭ್ಯಾಸ ತರಗತಿಗಳು ಮತ್ತು ನಿಕಟ ಪೂರ್ವ ಸೇವಾ ತರಬೇತಿಯಲ್ಲಿ ಮಾತ್ರವಲ್ಲದೆ ಶಿಕ್ಷಕ ವೃತ್ತಿ ಪ್ರವೇಶದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಜ್ಜುಗೊಳಿಸುವ ಆಲೋಚನೆ ಉಂಟಾಯಿತು.

ಶಿಕ್ಷಕರ ಅರ್ಹತಾ ಪರೀಕ್ಷೆಯ ಪತ್ರಿಕೆ–1 ರ ಪಠ್ಯವಸ್ತುವನ್ನು ಆಧರಿಸಿ **ಭಾಷೆ: 01–ಕನ್ನಡ, ಭಾಷೆ: 02–ಇಂಗ್ಲೀಷ್, ಶಿಶು ವಿಕಸನ ಮತ್ತು ಬೋಧನಾ ಶಾಸ್ತ್ರ, ಗಣಿತ ಮತ್ತು ಪರಿಸರ ಅಧ್ಯಯನ ಎಂಬ** 05 ವಿಷಯಗಳಿಗೆ ಪೂರಕ ಸಂಪನ್ಮೂಲ ಸಾಹಿತ್ಯಗಳನ್ನು ರಚಿಸಲಾಗಿದೆ. ಈ ಸಂಪನ್ಮೂಲ ಸಾಹಿತ್ಯಗಳು ಕೇವಲ TET ಪರೀಕ್ಷೆಗೆ ತಯಾರಿ ನಡೆಸುತ್ತಿರುವ ಅಭ್ಯರ್ಥಿಗಳಿಗೆ ಮಾತ್ರವಲ್ಲದೆ ವೃತ್ತಿ ನಿರತ ಶಿಕ್ಷಕರಿಗೂ ಹಾಗೂ ಶಿಕ್ಷಕರ ತರಬೇತಿ ಸಂಸ್ಥೆಯಲ್ಲಿನ ಎಲ್ಲಾ ಬೋಧಕರಿಗೂ ಹಾಗೂ ಪ್ರಶಿಕ್ಷಣಾರ್ಥಿಗಳಿಗೂ ಅತ್ಯಂತ ಉಪಯುಕ್ತ ಕೈಪಿಡಿ ಆಗಲಿದೆ.

'ಶಿಶು ವಿಕಸನ ಹಾಗೂ ಬೋಧನಾ ಶಾಸ್ತ್ರ' ವಿಷಯಕ್ಕೆ ಸಂಬಂಧಿಸಿದಂತೆ ರೂಪುಗೊಂಡಿರುವ ಈ ಸಂಪನ್ಮೂಲ ಸಾಹಿತ್ಯ, ಮೂಲಭೂತವಾಗಿ ಶೈಕ್ಷಣಿಕ ಮನೋವಿಜ್ಞಾನದ ತಳಹದಿಯನ್ನು ಹೊಂದಿದೆ. ಮಗುವಿನ ಅಭಿವೃದ್ಧಿ ಮತ್ತು ವಿಕಸನ, ಅಭಿವೃದ್ಧಿಯ ತತ್ವಗಳು, ಕಲಿಕೆ, ಕಲಿಕೆಯ ಮೇಲೆ ಪ್ರಭಾವ ಬೀರುವ ಅಂಶಗಳು, ಕಲಿಕಾ ಸಿದ್ಧಾಂತಗಳು, ಕಲಿಕಾ ನ್ಯೂನತೆಗಳು ಹೀಗೆ ಹಲವಾರು ಪ್ರಮುಖ ಆಯಾಮಗಳ ಮಾಹಿತಿಗಳನ್ನು ಒಳಗೊಂಡಿದೆ.

ಈ ಪೂರಕ ಸಂಪನ್ಮೂಲ ಸಾಹಿತ್ಯ ರಚನೆಯ ಗುರುತರವಾದ ಜವಾಬ್ದಾರಿಯನ್ನು ನಿರ್ವಹಿಸಿದ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ವಸಂತ ಮಹಲ್) ಮೈಸೂರು ಇಲ್ಲಿನ ಪ್ರಾಂಶುಪಾಲರಾದ ಶ್ರೀ ನಾಗರಾಜಯ್ಯ ಸಿ ಆರ್ ಮತ್ತು ಸರ್ಕಾರಿ ಮಹಾರಾಣಿ ಮಹಿಳಾ ಪ್ರಶಿಕ್ಷಣ ಸಂಸ್ಥೆ. ಮೈಸೂರು. ಇಲ್ಲಿನ ಪ್ರಾಂಶುಪಾಲರಾದ ಶ್ರೀಮತಿ ಗಾಯತ್ರಿ ಟಿ ಎನ್ ಮತ್ತು ಸಂಪನ್ಮೂಲ ರಚನಾ ತಂಡದ ಸದಸ್ಯರಿಗೆ ನನ್ನ ಅಭಿನಂದನೆಗಳು.

ಈ ಒಂದು ಪುಟ್ಟ ಪ್ರಯತ್ನದಿಂದಾಗಿ ಸದೃಢ ಸಮಾಜ ನಿರ್ಮಿಸುವಲ್ಲಿ ಪ್ರೇರಕ ಶಕ್ತಿಯಾದ ಸದೃಢ ಶಿಕ್ಷಕರು ರೂಪಗೊಳ್ಳುವಂತಾಗಲಿ ಎಂಬುದೇ ನನ್ನ ಆಶಯ.

**ಸುಮಂಗಲ. ವಿ**
ನಿರ್ದೇಶಕರು
ಡಿಎಸ್‌ಇಆರ್‌ಟಿ ಬೆಂಗಳೂರು

## ಮುನ್ನುಡಿ



ಶಿಕ್ಷಕ ವೃತ್ತಿ ಅತ್ಯಂತ ಪವಿತ್ರವಾದ ವೃತ್ತಿ. ಸಮಾಜ ನಿರ್ಮಾಣ ಕಾರ್ಯದಲ್ಲಿ ಶಿಕ್ಷಕರ ಪಾತ್ರ ಅಗಾಧವಾದದ್ದು. ಗುಣಮಟ್ಟವನ್ನು ಹೊಂದಿದ ಶ್ರೇಷ್ಠ ಶಿಕ್ಷಕರನ್ನು ರೂಪಿಸುವುದು ಅತ್ಯಂತ ಜವಾಬ್ದಾರಿಯುತ ಕಾರ್ಯ ಎನ್ನುವುದರಲ್ಲಿ ಯಾವುದೇ ಸಂದೇಹವಿಲ್ಲ. ಇಂದು ನಮಗೆ ಮಾಹಿತಿ ಲಭ್ಯತೆಯಲ್ಲಿ ಯಾವುದೇ ಕೊರತೆ ಇಲ್ಲ. ಲಭ್ಯವಿರುವ ಮಾಹಿತಿಯನ್ನು ಜ್ಞಾನವನ್ನಾಗಿ ಪರಿವರ್ತಿಸಿಕೊಳ್ಳುವುದೇ ನಮ್ಮೆದುರಿನ ಬೃಹತ್ ಸವಾಲು.

ಸೇವಾ ಪೂರ್ವ ಶಿಕ್ಷಕರ ಶಿಕ್ಷಣ ವಿಭಾಗದ ಉಪಕ್ರಮಗಳಲ್ಲಿ ಒಂದಾದ 1 ರಿಂದ 8ನೇ ತರಗತಿ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವ ಶಿಕ್ಷಕರನ್ನು ರೂಪಿಸುವ ಕೋರ್ಸ್ ಆಗಿರುವ **'ಪ್ರಾಥಮಿಕ ಶಾಲಾ ಶಿಕ್ಷಕರ ಶಿಕ್ಷಣ ತರಬೇತಿ'** (D.El.Ed – Diploma in Elementary Education ) ಯನ್ನು ವ್ಯಾಸಂಗ ಮಾಡುತ್ತಿರುವ ಪ್ರಶಿಕ್ಷಣಾರ್ಥಿಗಳಿಗೆ ಅವರ ವೃತ್ತಿಪರ ಅಭಿವೃದ್ಧಿಗೆ ಒಂದು ಸಂಪನ್ಮೂಲ ಕೈಪಿಡಿ ದೊರೆಯುವಂತಾಗಬೇಕು ಎಂಬುದು ನಮ್ಮ ಬಹುದಿನದ ಕನಸಾಗಿತ್ತು. ಈ ನಿಟ್ಟಿನಲ್ಲಿ ಶ್ರೀಮತಿ ಸುಮಂಗಲ ನಿರ್ದೇಶಕರು ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ ಬೆಂಗಳೂರು ರವರ ಕಳಕಳಿಯ ಆಲೋಚನೆ ಮತ್ತು ಸಹಕಾರದಿಂದಾಗಿ ನನ್ನ ಕನಸು ಈಡೇರುವಂತಾಗಿದೆ. ಶಿಕ್ಷಕರ ಅರ್ಹತಾ ಪರೀಕ್ಷೆ ಪತ್ರಿಕೆ–01 ಒಳಗೊಂಡಿರುವ ಎಲ್ಲಾ ಐದು ವಿಷಯಗಳಿಗೆ ಸಂಬಂಧಿಸಿದಂತೆ ಸಂಪನ್ಮೂಲ ಸಾಹಿತ್ಯ ಲಭ್ಯವಾಗುವಂತಾಗಿದೆ.

ಶಿಕ್ಷಕರ ಅರ್ಹತಾ ಪರೀಕ್ಷೆಯ ಪತ್ರಿಕೆ–01 ರಲ್ಲಿನ ಒಂದು ಪ್ರಮುಖ ವಿಷಯ **'ಮಗುವಿನ ಅಭಿವೃದ್ಧಿ ಮತ್ತು ಬೋಧನಾ ಶಾಸ್ತ್ರ'**. ಈ ಹಿಂದೆ ಶಿಕ್ಷಕರ ತರಬೇತಿ ಪಠ್ಯಕ್ರಮದಲ್ಲಿ ಅಳವಡಿಸಲಾಗಿದ್ದ 'ಆಧುನಿಕ ಶಿಕ್ಷಣದಲ್ಲಿ ಮನೋವಿಜ್ಞಾನ' ವಿಷಯದ ತಳಹದಿಯ ಮೇಲೆಯೇ ಈ ವಿಷಯಾಂಶವು ರೂಪುಗೊಂಡಿದೆ. ಪ್ರಸ್ತುತ ಡಿ.ಇಎಲ್.ಇಡಿ. ಪಠ್ಯಕ್ರಮದಲ್ಲಿ 'ಶೈಕ್ಷಣಿಕ ಮನೋವಿಜ್ಞಾನ' ಎಂಬ ಶೀರ್ಷಿಕೆಯಲ್ಲಿ ಯಾವುದೇ ಪಠ್ಯ ವಸ್ತು ಇರುವುದಿಲ್ಲವಾದರೂ ಪ್ರತಿಯೊಂದು ವಿಷಯದಲ್ಲಿಯೂ ಶೈಕ್ಷಣಿಕ ಮನೋವಿಜ್ಞಾನ ಅಂತರ್ಗತವಾಗಿದೆ. ಈ ನಿಟ್ಟಿನಲ್ಲಿ ಪೂರ್ಣ ಪರಿಕಲ್ಪನಾತ್ಮಕ ದೃಷ್ಟಿಕೋನ ಮೂಡಿಸುವ ಉದ್ದೇಶದಿಂದ ಶಿಕ್ಷಕರ ಅರ್ಹತಾ ಪರೀಕ್ಷೆಗೆ ತಯಾರಿ ನಡೆಸುತ್ತಿರುವ ಅಭ್ಯರ್ಥಿಗಳಿಗೆ ಮಾತ್ರವಲ್ಲದೆ ಸೇವಾ ನಿರತ ಶಿಕ್ಷಕರಿಗೆ ಹಾಗೂ ಶಿಕ್ಷಕ ಶಿಕ್ಷಣ ತರಬೇತಿ ವ್ಯಾಸಾಂಗ ಮಾಡುತ್ತಿರುವ ಪ್ರಶಿಕ್ಷಣಾರ್ಥಿಗಳಿಗೆ ಪೂರಕ ಸಂಪನ್ಮೂಲವನ್ನಾಗಿ ಈ ಸಾಹಿತ್ಯವನ್ನು ರೂಪಿಸಲಾಗಿದೆ. ಡಿ.ಇಎಲ್.ಇಡಿ. ಪಠ್ಯವಸ್ತು ಹಾಗೂ ಶಿಕ್ಷಕರ ಅರ್ಹತಾ ಪರೀಕ್ಷೆಯ ಪಠ್ಯಕ್ರಮ ಎರಡು ಅಂಶಗಳನ್ನು ಆಧರಿಸಿ ಈ ಸಂಪನ್ಮೂಲವನ್ನು ಸಿದ್ಧಪಡಿಸಲಾಗಿದೆ.

ಈ ಸಂಪನ್ಮೂಲ ಸಾಹಿತ್ಯ ರೂಪಗೊಳ್ಳಲು ಪ್ರೇರಕ ಶಕ್ತಿಯಾದ ಶ್ರೀಮತಿ ಸುಮಂಗಲ ನಿರ್ದೇಶಕರು ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ ಬೆಂಗಳೂರು ರವರಿಗೆ ಹೃತ್ಪೂರ್ವಕ ವಂದನೆಗಳು. ಒಂದು ಉತ್ಕೃಷ್ಟವಾದ ಸಾಹಿತ್ಯ ಹೊರಹೊಮ್ಮುವುದಕ್ಕೆ ಕಾರಣೀಭೂತರಾದ ಡಿ.ಎಸ್.ಇಆರ್‌ಟಿ.ಯ ಹಿರಿಯ ಸಹಾಯಕ ನಿರ್ದೇಶಕರುಗಳಾದ ಶ್ರೀಯುತ ವಿಶ್ವನಾಥ್‌ಕೆ ವಿ ಮತ್ತು ಶ್ರೀಮತಿ ಭಾನುಮತಿ ಟಿ ವಿ ರವರಿಗೆ ಹಾಗೂ ಸಂಪನ್ಮೂಲ ಸಾಹಿತ್ಯ ನಿರ್ಮಾಣದಲ್ಲಿ ಪರಿಪೂರ್ಣವಾಗಿ ತಮ್ಮನ್ನು ತಾವು ತೊಡಗಿಸಿಕೊಂಡು ಗುಣಮಟ್ಟ ಕಾಪಾಡುವಲ್ಲಿ ಶ್ರಮಿಸಿದ ನೋಡಲ್ ಅಧಿಕಾರಿಗಳಾದ ಶ್ರೀಮತಿ ಟಿ ಎನ್ ಗಾಯತ್ರಿ ಪ್ರಾಂಶುಪಾಲರು ಸರ್ಕಾರಿ ಮಹಾರಾಣಿ ಮಹಿಳಾ ಪ್ರಶಿಕ್ಷಣ ಸಂಸ್ಥೆ ಮೈಸೂರು. ರವರಿಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ಸಂಪನ್ಮೂಲ ಸಾಹಿತ್ಯ ರೂಪುಗೊಳ್ಳಲು ಸಹಕರಿಸಿದ ಎಲ್ಲಾ ಸಂಪನ್ಮೂಲ ವ್ಯಕ್ತಿಗಳಿಗೂ ನಾನು ಆಭಾರಿ.

ಈ ಸಂಪನ್ಮೂಲ ಸಾಹಿತ್ಯವನ್ನು ಸಂಬಂಧಿಸಿದ ಎಲ್ಲರೂ ತಮ್ಮ ಅಗತ್ಯಕ್ಕೆ ತಕ್ಕಂತೆ ಯುಕ್ತವಾಗಿ ಬಳಸಿಕೊಂಡು ತಮ್ಮ ಉಜ್ವಲ ಭವಿಷ್ಯವನ್ನು ರೂಪಿಸಿಕೊಳ್ಳಲಿ ಎಂಬುದೇ ನನ್ನ ಆಶಯ.


**ಶ್ರೀ ನಾಗರಾಜಯ್ಯ. ಸಿ ಆರ್.**
ಪ್ರಾಂಶುಪಾಲರು ಮತ್ತು ಉಪನಿರ್ದೇಶಕರು(ಅಭಿವೃದ್ಧಿ)
ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ
ಮೈಸೂರು.

# ಕೃತಜ್ಞತೆಗಳು



ಡಿಇಎಲ್.ಇಡಿ ಕೋರ್ಸ್ ವ್ಯಾಸಂಗ ಮಾಡುತ್ತಿರುವ ಪ್ರಶಿಕ್ಷಣಾರ್ಥಿಗಳ ಶೈಕ್ಷಣಿಕ ಹಾಗೂ ವೃತ್ತಿಪರ ಪ್ರಗತಿಗಾಗಿ ಚಿಂತಿಸಿದ ಹಾಗೂ ಈ ಕೋರ್ಸ್‌ನ ಬೋಧನಾ ವಿಷಯಗಳಿಗೆ ಪೂರಕ ಸಂಪನ್ಮೂಲ ಸಾಹಿತ್ಯ ರಚನೆಯ ಗುರುತರವಾದ ಜವಾಬ್ದಾರಿಯನ್ನು ನಮ್ಮ ಸಂಸ್ಥೆಗೆ ವಹಿಸಿ, ಸಂಪನ್ಮೂಲ ಸಾಹಿತ್ಯ ಮೂರ್ತರೂಪವನ್ನು ಪಡೆಯಲು ಅವಕಾಶ ಕಲ್ಪಿಸಿದ ಶ್ರೀಮತಿ ಸುಮಂಗಲ ವಿ ನಿರ್ದೇಶಕರು ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ. ಬೆಂಗಳೂರು. ಇವರಿಗೆ ನಾನು ಆಭಾರಿ. ಕಾಲಕಾಲಕ್ಕೆ ಸೂಕ್ತ ಮಾರ್ಗದರ್ಶನ ನೀಡಿದ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಮೈಸೂರು ಇಲ್ಲಿನ ಪ್ರಾಂಶುಪಾಲರಾದ ಶ್ರೀಯುತ ನಾಗರಾಜಯ್ಯ ಸಿ ಆರ್ ರವರು ಹಾಗೂ ಡಿಎಸ್.ಇ.ಆರ್.ಟಿ ಬೆಂಗಳೂರು. ಇಲ್ಲಿನ ಹಿರಿಯ ಸಹಾಯಕ ನಿರ್ದೇಶಕರುಗಳಾದ ಶ್ರೀಯುತ ವಿಶ್ವನಾಥ್ ಕೆ ವಿ ಹಾಗೂ ಶ್ರೀಮತಿ ಭಾನುಮತಿ ಟಿ ವಿ. ರವರಿಗೆ ಧನ್ಯವಾದಗಳು. ಈ ಸಂಪನ್ಮೂಲ ಸಾಹಿತ್ಯವನ್ನು ರಚಿಸಲು ಹಗಲಿರುಳು ಶ್ರಮಿಸಿದ ಎಲ್ಲಾ ಸಂಪನ್ಮೂಲ ತಂಡದವರಿಗೆ ಅಭಿನಂದನೆಗಳು.

ಈ ಸಂಪನ್ಮೂಲ ಸಾಹಿತ್ಯವು ಶಿಕ್ಷಕ ವೃತ್ತಿಯನ್ನು ಆಯ್ಕೆ ಮಾಡಿಕೊಂಡು ಸ್ಪರ್ಧಾತ್ಮಕ ಪರೀಕ್ಷೆಗೆ ಸಿದ್ಧರಾಗುತ್ತಿರುವ ಎಲ್ಲಾ ಅಭ್ಯರ್ಥಿಗಳಿಗೆ, ವೃತ್ತಿನಿರತ ಶಿಕ್ಷಕರಿಗೆ ಹಾಗೂ ಶಿಕ್ಷಕರ ತರಬೇತಿ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರಶಿಕ್ಷಣಾರ್ಥಿಗಳಿಗೆ ದಾರಿದೀಪವಾಗಲಿ ಎಂಬುದು ನನ್ನ ಆಶಯ.

**ಶ್ರೀಮತಿ ಗಾಯತ್ರಿ ಟಿ ಎನ್**
ನೋಡಲ್ ಅಧಿಕಾರಿಗಳು ಹಾಗೂ ಪ್ರಾಂಶುಪಾಲರು
ಸರ್ಕಾರಿ ಮಹಾರಾಣಿ ಮಹಿಳಾ ಪ್ರಶಿಕ್ಷಣ ಸಂಸ್ಥೆ
ಮೈಸೂರು

## ಸಲಹೆ ಮತ್ತು ಸಹಕಾರ



**ಶ್ರೀ ಕೆ.ವಿ ವಿಶ್ವನಾಥ್**
ಹಿರಿಯ ಸಹಾಯಕ ನಿರ್ದೇಶಕರು
ಡಿಎಸ್ ಇ ಆರ್.ಟಿ ಬೆಂಗಳೂರು



**ಶ್ರೀಮತಿ ಭಾನುಮತಿ ಟಿ ವಿ**
ಹಿರಿಯ ಸಹಾಯಕ ನಿರ್ದೇಶಕರು
ಡಿಎಸ್ ಇ ಆರ್.ಟಿ ಬೆಂಗಳೂರು



**ಶ್ರೀಯುತ ಡಿ ಆರ್ ಅಮಿತ್**
ಹಿರಿಯ ಉಪನ್ಯಾಸಕರು
ಡಯಟ್ (ವಸಂತ ಮಹಲ್)
ಮೈಸೂರು



**ಶ್ರೀಮತಿ ಉಮಾ ವಿ ಈ**
ಉಪನ್ಯಾಸಕರು
ಸರ್ಕಾರಿ ಮಹಾರಾಣಿ ಮಹಿಳಾ ಪ್ರಶಿಕ್ಷಣ ಸಂಸ್ಥೆ
ಮೈಸೂರು





**ಶ್ರೀಮತಿ ಭಾಗ್ಯ**
ಉಪನ್ಯಾಸಕರು
ಡಯಟ್ (ವಸಂತ ಮಹಲ್)
ಮೈಸೂರು

**ಶ್ರೀಯುತ ದಿನೇಶ್ ಎಂ**
ತಾಂತ್ರಿಕ ಸಹಾಯಕರು
ಪ್ರಾಜೆಕ್ಟ್ ಕೋಆರ್ಡಿನೇಟರ್
ಸ್ಪೂರ್ತಿ ಪರ್ಫಾರ್ಮೆನ್ಸ್ ಅಂಡ್ ಸಲ್ಯೂಷನ್ಸ್ ಮೈಸೂರು

## ಸಂಪನ್ಮೂಲ ರಚನಾಕಾರರು– ಬಿಇಡಿ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರು





**ಡಾ. ಜಗದೀಶ್ ಈ**
ನಿಸರ್ಗ ಇನ್ಸ್ಟಿಟ್ಯೂಟ್ ಆಫ್ ಎಜುಕೇಷನ್
ಕೊಳ್ಳೇಗಾಲ ಚಾಮರಾಜನಗರ ಜಿಲ್ಲೆ

**ಶ್ರೀಮತಿ ವಿಕ್ಟೋರಿಯ ರೋಚ್**
ಶಂಕರೇಗೌಡ ಶಿಕ್ಷಣ ಮಹಾವಿದ್ಯಾಲಯ
ಮಂಡ್ಯ ಮಂಡ್ಯ ಜಿಲ್ಲೆ





**ಡಾ. ವಿಕ್ರಮ್ ಸಿ ಬಿ**
ಜೆಎಸ್ಎಸ್ ಶಿಕ್ಷಣ ಮಹಾವಿದ್ಯಾಲಯ
ಸಕಲೇಶಪುರ ಹಾಸನ ಜಿಲ್ಲೆ

**ಶ್ರೀಮತಿ ಜ್ಯೋತಿ ಹೆಚ್ ಡಿ**
ಭಾರತಿ ಶಿಕ್ಷಣ ಮಹಾವಿದ್ಯಾಲಯ
ಭಾರತಿ ನಗರ ಮಂಡ್ಯ ಜಿಲ್ಲೆ

## ಮುಖಪುಟ ವಿನ್ಯಾಸ



**ಶ್ರೀ ಸತೀಶ ಬಿ ಸಿ**
ಬಾಲಕಿಯರ ಸರ್ಕಾರಿ ಪ್ರೌಢಶಾಲೆ
ಬನ್ನಿಮಂಟಪ ಬಡಾವಣೆ

## ಸಲಹೆಗಳು.

ಆತ್ಮೀಯರೇ,

ಶಿಕ್ಷಕರಿಗೆ ವಿಷಯ ಜ್ಞಾನ ಮತ್ತು ಬೋಧನಾ ಶಾಸ್ತ್ರದ ಪರಿಪೂರ್ಣ ಅರಿವು ಇದ್ದಾಗ ಮಾತ್ರವೇ ಮಕ್ಕಳಲ್ಲಿ ನಿರೀಕ್ಷಿತ ಕಲಿಕಾ ಫಲಗಳನ್ನು ಕಾಣಲು ಸಾಧ್ಯ. ಆದ್ದರಿಂದ ನಮ್ಮ ಇಲಾಖೆಯಲ್ಲಿ ಡಿ.ಇಎಲ್.ಇಡಿ ಕೋರ್ಸ್‌ನ ಪ್ರಮಾಣ ಪತ್ರ ಪಡೆದವರಿಗೂ ಈ ವೃತ್ತಿ ಪ್ರವೇಶಕ್ಕೆ **ಶಿಕ್ಷಕರ ಅರ್ಹತಾ ಪರೀಕ್ಷೆ** ಮತ್ತು **ಶಿಕ್ಷಕರ ನೇಮಕಾತಿ ಪ್ರವೇಶ ಪರೀಕ್ಷೆ**ಗಳನ್ನು ನಡೆಸಿ, ವಿಷಯದ ಬಗ್ಗೆ ಆಳವಾದ ಜ್ಞಾನ ಹೊಂದಿರುವ ಶಿಕ್ಷಕರನ್ನು ಆಯ್ಕೆ ಮಾಡಲಾಗುತ್ತಿದೆ.

ಶಿಕ್ಷಕ ವೃತ್ತಿ ಪ್ರವೇಶದ ಮೊದಲ ಸ್ಪರ್ಧಾತ್ಮಕ ಪರೀಕ್ಷೆ– **ಶಿಕ್ಷಕರ ಅರ್ಹತಾ ಪರೀಕ್ಷೆ (ಟಿಇಟಿ)** ಎದುರಿಸುವ ಅಭ್ಯರ್ಥಿಗಳಿಗೆ ಈ ಸಂಪನ್ಮೂಲ ಸಾಹಿತ್ಯ ಸಹಕಾರಿಯಾಗುವಂತೆ ರಚಿಸಲಾಗಿದೆ. ಈ ಸಾಹಿತ್ಯವನ್ನು ಕೇವಲ ಸ್ಪಧಾತ್ಮಕ ಪರೀಕ್ಷೆಯಲ್ಲಿ ಅರ್ಹತೆ ಗಳಿಸಲು ಮಾತ್ರ ಬಳಸದೆ, ಜ್ಞಾನಾರ್ಜನೆಯ ಕೈಪಿಡಿಯಾಗಿ ಬಳಸಿ. ಇದರಲ್ಲಿ ಶಿಕ್ಷಕರ ಅರ್ಹತಾ ಪರೀಕ್ಷೆಯ ಪತ್ರಿಕೆ–01 ರ ಐದೂ ವಿಷಯಗಳ **(ಭಾಷೆ–01: ಕನ್ನಡ, ಭಾಷೆ–02: ಇಂಗ್ಲೀಷ್, ಶಿಶು ವಿಕಸನ ಮತ್ತು ಬೋಧನಾ ಶಾಸ್ತ್ರ, ಗಣಿತ ಮತ್ತು ಪರಿಸರ ಅಧ್ಯಯನ)** ಪಠ್ಯವಸ್ತುವನ್ನು ಆಧರಿಸಿದ ಘಟಕಾಂಶಗಳು, ಪರಿಕಲ್ಪನೆಗಳಿಗೆ ಸಂಬಂಧಿಸಿದ ಪ್ರಮುಖ ಮಾಹಿತಿಗಳನ್ನು ಮತ್ತು ಆ ಪರಿಕಲ್ಪನೆಗೆ ಸಂಬಂಧಿಸಿದ ಕೆಲವು ಬಹು ಆಯ್ಕೆ ಪ್ರಶ್ನೋತ್ತರಗಳನ್ನೂ ಅಳವಡಿಸುವ ಪ್ರಯತ್ನ ಮಾಡಲಾಗಿದೆ.

ಶಿಕ್ಷಕರ ಅರ್ಹತಾ ಪರೀಕ್ಷೆ–ಪತ್ರಿಕೆ–01 ಒಳಗೊಂಡಿರುವ ಐದು ವಿಷಯಗಳಿಂದ (ಪ್ರತಿ ವಿಷಯಕ್ಕೆ ತಲಾ 30 ರಂತೆ) ಒಟ್ಟು 150 ಬಹುಆಯ್ಕೆ ಪ್ರಶ್ನೆಗಳಿರುತ್ತದೆ. ಪ್ರತಿ ಸರಿ ಉತ್ತರಕ್ಕೆ ಒಂದು ಅಂಕಗಳನ್ನು ನಿಗಧಿ ಪಡಿಸಲಾಗಿರುತ್ತದೆ. ಈ 30 ಪ್ರಶ್ನೆಗಳಲ್ಲಿ ಸಾಮಾನ್ಯವಾಗಿ 15 ಪ್ರಶ್ನೆಗಳು ವಿಷಯ ಜ್ಞಾನವನ್ನು ಹಾಗೂ ಉಳಿದ 15 ಪ್ರಶ್ನೆಗಳು ಬೋಧನಾ ಶಾಸ್ತ್ರವನ್ನು ಆಧರಿಸಿರುತ್ತದೆ. ಈ ಅನುಪಾತದಲ್ಲಿಯೇ ಪ್ರಶ್ನೆಗಳನ್ನು ರೂಪಿಸಲಾಗುತ್ತದೆ ಎಂದು ನಿಖರವಾಗಿ ಹೇಳಲು ಬರುವುದಿಲ್ಲ. ಇದು ಶಿಕ್ಷಕರ ಅರ್ಹತಾ ಪರೀಕ್ಷೆ ಆಗಿರುವುದರಿಂದ ಈ ಅನುಪಾತದಲ್ಲಿ ಮಾರ್ಪಾಡುಗಳೂ ಉಂಟಾಗಬಹುದು. ಉದಾಹರಣೆಗೆ ಹೆಚ್ಚಿನ ಆದ್ಯತೆಯನ್ನು ವಿಷಯಜ್ಞಾನಕ್ಕೆ ಆಧರಿಸಿ ಪ್ರಶ್ನೆ ಪತ್ರಿಕೆ ರೂಪಿಸಿದಾಗ ಸಹಜವಾಗಿಯೇ ಹೆಚ್ಚಿನ ಪ್ರಶ್ನೆಗಳು ವಿಷಯಜ್ಞಾನಕ್ಕೆ ಸಂಬಂಧಪಟ್ಟವೇ ಆಗಿರುತ್ತದೆ. ಈ ನಿಟ್ಟಿನಲ್ಲಿ ಅಭ್ಯರ್ಥಿಗಳು ಗಮನಹರಿಸಿ ವಿಷಯ ಜ್ಞಾನ ಹಾಗೂ ಬೋಧನಾ ಶಾಸ್ತ್ರ ಎರಡರ ಬಗ್ಗೆಯೂ ಪೂರ್ಣ ಮನನ ಮಾಡಿಕೊಂಡು ಅಧ್ಯಯನಕ್ಕೆ ತೊಡಗಿಸಿಕೊಳ್ಳುವುದು ಅತ್ಯಂತ ಸೂಕ್ತ.

ಪ್ರಸ್ತುತ ಡಿಎಲ್‌ಇಡಿ ಪಠ್ಯಕ್ರಮದಲ್ಲಿ ***'ಶೈಕ್ಷಣಿಕ ಮನೋವಿಜ್ಞಾನ'*** ಎಂಬ ಶೀರ್ಷಿಕೆಯಲ್ಲಿ ಯಾವುದೇ ಪ್ರತ್ಯೇಕ ಪಠ್ಯವಸ್ತು/ ಸಾಹಿತ್ಯ ಇಲ್ಲದಿದ್ದರೂ, ಪ್ರತಿಯೊಂದು ವಿಷಯದಲ್ಲಿಯೂ ಶೈಕ್ಷಣಿಕ ಮನೋವಿಜ್ಞಾನ ಅಂತರ್ಗತವಾಗಿದೆ. ಈ ನಿಟ್ಟಿನಲ್ಲಿ ಶಿಕ್ಷಕರ ಅರ್ಹತಾ ಪರೀಕ್ಷೆ ಪತ್ರಿಕೆ–1 ರ ***ಶಿಶು ಅಭಿವೃದ್ಧಿ ಮತ್ತು ಬೋಧನಾಶಾಸ್ತ್ರ*** ವಿಷಯದ ಪಠ್ಯವಸ್ತುವಿಗೆ ಸಂಬಂಧಿಸಿದ ಎಲ್ಲಾ ಘಟಕಗಳ ಪರಿಕಲ್ಪನೆಗಳು, ಕಲಿಕಾಂಶಗಳನ್ನು ಪೂರ್ಣ ಪ್ರಮಾಣದಲ್ಲಿ ಅಳವಡಿಸಲು ಪ್ರಯತ್ನಿಸಲಾಗಿದೆ (ಶಿಕ್ಷಕರ ಅರ್ಹತಾ ಪರೀಕ್ಷೆಗೆ ನಿಗದಿಪಡಿಸಿರುವ ಪಠ್ಯ ವಸ್ತುವನ್ನು ಗಮನಿಸಿ). ಈ ಸಾಹಿತ್ಯದಲ್ಲಿ ಅಳವಡಿಸಿರುವ ಕಲಿಕಾಂಶಗಳ ಅಧ್ಯಯನಕ್ಕೆ ಮಾತ್ರ ನಿಮ್ಮ ಅಭ್ಯಾಸ ಸೀಮಿತವಾಗಿರಬಾರದು. ಇದನ್ನು ಮಾದರಿಯಾಗಿಟ್ಟುಕೊಂಡು ಕೊನೆಯಲ್ಲಿ ನೀಡಿರುವ **ಆಕರ ಗ್ರಂಥಗಳನ್ನೂ** ಅಧ್ಯಯನ ಮಾಡುವುದು ಜ್ಞಾನಾರ್ಜನೆಯ ಮತ್ತು ಅಂಕ ಗಳಿಕೆಯ ದೃಷ್ಟಿಯಿಂದ ಅತೀ ಅವಶ್ಯಕ.

**–: ಶುಭವಾಗಲಿ :–**

## ಪರಿವಿಡಿ

| ಮಗುವಿನ ಅಭಿವೃದ್ಧಿ ಮತ್ತು ಬೋಧನಾ ಶಾಸ್ತ್ರ | | |
|---|---|---|
| ಕ್ರ.ಸಂ | ಘಟಕ/ಕಲಿಕಾಂಶ | ಪುಟಸಂಖ್ಯೆ |
| | ಎ) ಮಗುವಿನ ಅಭಿವೃದ್ಧಿ | |
| 1 | **ಅಭಿವೃದ್ಧಿ ( ವಿಕಾಸದ ) :** ಪರಿಕಲ್ಪನೆ, ವಿಕಾಸದ ತತ್ವಗಳು, ಮಾನವ ವಿಕಾಸದ ಹಂತಗಳು, ವಿಕಾಸ ಮತ್ತು ಕಲಿಕೆಯೊಂದಿಗಿನ ಸಂಬಂಧ, ವಿಕಾಸದ ಮೇಲೆ ಪ್ರಭಾವ ಬೀರುವ ಅಂಶಗಳು–<br>**ಅನುವಂಶಿಯತೆ ಮತ್ತು ಪರಿಸರ :** ಅನುವಂಶಿಯತೆಯ ಅರ್ಥ, ಆಯಾಮಗಳು ಮತ್ತು ನಿಯಮಗಳು **ಪರಿಸರದ ವಿಧಗಳು–**<br>ಅನುವಂಶಿಯತೆ ಮತ್ತು ಪರಿಸರಗಳ ಸಾಪೇಕ್ಷ ಪ್ರಾಮುಖ್ಯತೆ | 1–2 |
| 2 | **ಸಾಮಾಜಿಕರಣ ಪ್ರಕ್ರಿಯೆಗಳು:** ಸಮಾಜ ಮತ್ತು ಮಕ್ಕಳು (ಶಿಕ್ಷಕರು, ಪೋಷಕರು, ಸಹವರ್ತಿಗಳು)<br>ಸಾಮಾಜಿಕರಣದ ನಿಯೋಗಗಳು ಮತ್ತು ಸಾಮಾಜಿಕರಣ ಪ್ರಕ್ರಿಯೆ<br>ಮಕ್ಕಳ ಸಾಮಾಜಿಕರಣದಲ್ಲಿ ಶಿಕ್ಷಕರು, ಪೋಷಕರು ಮತ್ತು ಸಹವರ್ತಿಗಳ ಪಾತ್ರ | 2–3 |
| 3 | ಪಿಯಾಜೆಯವರ ಬೌದ್ಧಿಕ ವಿಕಾಸದ ಸಿದ್ಧಾಂತ ಮತ್ತು ಹಂತಗಳು,<br>ಕೋಲ್ಬರ್ಗ್ ರವರ ನೈತಿಕ ವಿಕಾಸದ ಸಿದ್ಧಾಂತ ಮತ್ತು ಹಂತಗಳು<br>ವೈ ಗೋಟ್ ಸ್ಕೀ ರವರ ಜ್ಞಾನ ಸಂರಚನಾ ವಾದ ಮತ್ತು ಸಾಂಸ್ಕೃತಿಕ ಐತಿಹಾಸಿಕ ಸಿದ್ಧಾಂತ<br>ಶಿಶು ಕೇಂದ್ರಿತ ಶಿಕ್ಷಣ<br>ಪ್ರಗತಿದಾಯಕ ಶಿಕ್ಷಣ. | 4–6 |
| 4 | **ಬುದ್ಧಿ ಶಕ್ತಿ :** ಬುದ್ಧಿ ಶಕ್ತಿಯ ವಿಧಗಳು ಮತ್ತು ಬಹು ಆಯಾಮ ಸಿದ್ಧಾಂತಗಳು, ಬುದ್ಧಿಶಕ್ತಿ ಸೂಚ್ಯಂಕ, ಸಂವೇಗಾತ್ಮಕ ಬುದ್ಧಿಶಕ್ತಿ, ಬುದ್ಧಿಶಕ್ತಿಯ ಪರೀಕ್ಷೆಗಳು.<br>**ಸೃಜನಶೀಲತೆ :** ಅರ್ಥ ಮತ್ತು ಸೃಜನಶೀಲ ವ್ಯಕ್ತಿಗಳ ಗುಣಲಕ್ಷಣಗಳು<br>ಸೃಜನಶೀಲತೆಯನ್ನು ಅಭಿವೃದ್ಧಿಪಡಿಸುವ ಕ್ರಮಗಳು<br>ಭಾಷೆ ಮತ್ತು ಆಲೋಚನೆ<br>ಭಾಷಾ ವಿಕಾಸದಲ್ಲಿ ಕಂಡುಬರುವ ಹಂತಗಳು | 6–11 |
| 5 | **ಸಾಮಾಜಿಕ ರಚನೆಯಲ್ಲಿ ಲಿಂಗತ್ವ,** ಲಿಂಗತ್ವದ ಪಾತ್ರಗಳು, ಲಿಂಗ ತಾರತಮ್ಯ ಮತ್ತು ಶೈಕ್ಷಣಿಕ ಅಭ್ಯಾಸಗಳು, ಸಮಾಜದಲ್ಲಿ ಲಿಂಗ ತಾರತಮ್ಯ ಹೋಗಲಾಡಿಸುವಲ್ಲಿ ಶಿಕ್ಷಣದ ಪಾತ್ರ ಹಾಗೂ ಶೈಕ್ಷಣಿಕ ಅಭ್ಯಾಸಗಳು.<br>ಕಲಿಕಾರ್ಥಿಗಳಲ್ಲಿ ವೈಯಕ್ತಿಕ ಭಿನ್ನತೆಗಳು ಮತ್ತು ವ್ಯಕ್ತಿ ಭಿನ್ನತೆಗೆ ಕಾರಣಗಳು<br>ವೈಯಕ್ತಿಕ ಭಿನ್ನತೆಯ ಕ್ಷೇತ್ರಗಳು–<br>ಸಾಮಾಜಿಕ ಹಾಗೂ ನೈತಿಕ ವಿಕಾಸದಲ್ಲಾಗುವ ವ್ಯತ್ಯಾಸಗಳು<br>ಭಾಷೆಯ ವೈವಿಧ್ಯತೆ, ಜಾತಿ, ಲಿಂಗ, ಸಮುದಾಯ, ಧರ್ಮ ಇತ್ಯಾದಿಗಳನ್ನ ಆಧರಿಸಿ ಭಿನ್ನತೆಗಳನ್ನು ಅರ್ಥೈಸುವುದು.<br>ಲಿಂಗತ್ವದ ನೆಲೆಯಲ್ಲಿ ಪಠ್ಯಪುಸ್ತಕಗಳ ಪರಿಶೀಲನೆ. | 11–16 |
| 6 | **ಮೌಲ್ಯಮಾಪನ** : ಅರ್ಥ ಮತ್ತು ವ್ಯಾಖ್ಯೆಗಳು<br>ಶೈಕ್ಷಣಿಕ ಮೌಲ್ಯಮಾಪನದ ಕಾರ್ಯಗಳು<br>ಮೌಲ್ಯಮಾಪನದ ಮಹತ್ವ ಮತ್ತು ವಿಧಗಳು<br>ಕಲಿಕೆಗಾಗಿ ಮೌಲ್ಯಮಾಪನ ಕಲಿಕೆಯಾಗಿ ಮೌಲ್ಯಮಾಪನದ ವ್ಯತ್ಯಾಸ<br>ಪರೀಕ್ಷೆಯ ಅರ್ಥ, ಉತ್ತಮ ಪರೀಕ್ಷೆಯ ಲಕ್ಷಣಗಳು<br>ಸಾಧನ ಪರೀಕ್ಷೆ, ಪ್ರಾಮುಖ್ಯತೆ ಮತ್ತು ವಿಧಗಳು<br>ಶಿಕ್ಷಕ ನಿರ್ಮಿತ ಪರೀಕ್ಷೆಯ ವಿಧಗಳು<br>ಪ್ರಶ್ನೆಯ ಅರ್ಥ,ಉದ್ದೇಶಗಳು ಮತ್ತು ರೀತಿಗಳು<br>ಪ್ರಶ್ನೆಗಳ ಉತ್ತಮ ಗುಣಲಕ್ಷಣಗಳು. | 16–20 |

| | | |
|---|---|---|
| | **ಬಿ) ಅಂತರ್ಗತ ಶಿಕ್ಷಣದ ಪರಿಕಲ್ಪನೆ ಮತ್ತು ವಿಶೇಷ ಅಗತ್ಯತೆಯುಳ್ಳ ಮಕ್ಕಳನ್ನು ಅರ್ಥೈಸಿಕೊಳ್ಳುವುದು** | |
| **7** | **ಸಮನ್ವಯ ಶಿಕ್ಷಣ :** ಅರ್ಥ ಮತ್ತು ಲಕ್ಷಣಗಳು– ಸಮಗ್ರ ಶಿಕ್ಷಣ– ವಿಶೇಷ ಮಕ್ಕಳು– ವಿಶೇಷ ಶಿಕ್ಷಣ– ವಿಶೇಷ ಶಿಕ್ಷಣದ ಸೇವೆಗೆ ಅಗತ್ಯವಾದ ಪ್ರಮುಖ ಅಂಶಗಳು– **ವಿಶೇಷ ಶಿಕ್ಷಣದ ಪ್ರಾಮುಖ್ಯತೆ, ಉದ್ದೇಶಗಳು ಮತ್ತು ವಿಶೇಷ ಮಕ್ಕಳ ವಿಧಗಳು–** 1.ದೈಹಿಕ ಸವಾಲುಳ್ಳ ಮಕ್ಕಳು 2.ಬೌದ್ಧಿಕ ಸವಾಲುಗಳುಳ್ಳ ಮಕ್ಕಳು 3 ಸಂವೇಗಾತ್ಮಕ ಸವಾಲುಗಳುಳ್ಳ ಮಕ್ಕಳು 4.ಸಾಮಾಜಿಕ ಸವಾಲುಗಳುಳ್ಳ ಮಕ್ಕಳು 5 ಶೈಕ್ಷಣಿಕವಾಗಿ ಸವಾಲುಗಳುಳ್ಳ ಮಕ್ಕಳು– **ವಿಕಾಸಾತ್ಮಕ ವೈಫಲ್ಯತೆ** ವಿಭಿನ್ನ ಹಿನ್ನೆಲೆ ಹೊಂದಿರುವ ಸಮಸ್ಯಾತ್ಮಕ ಮಕ್ಕಳ ಸಮಸ್ಯೆಗಳು– ದೈಹಿಕ ಸಮಸ್ಯೆಯುಳ್ಳ, ದೃಷ್ಟಿ ಸಮಸ್ಯೆಯುಳ್ಳ, ಶ್ರವಣ ಸಮಸ್ಯೆಯುಳ್ಳ, ಮಾತುಗಾರಿಕೆ ಸವಾಲುಳ್ಳ ಮಕ್ಕಳನ್ನು ಗುರುತಿಸುವಿಕೆ, ವರ್ಗೀಕರಣ ಮತ್ತು ಲಕ್ಷಣಗಳು ಬೌದ್ಧಿಕ ಸವಾಲುಳ್ಳ ಮಕ್ಕಳು, ಪ್ರತಿಭಾನ್ವಿತರು–ಮಂದಗತಿಯಲ್ಲಿ ಕಲಿಯುವ ಮಕ್ಕಳ ಗುಣಲಕ್ಷಣಗಳು– | **20–29** |
| | **ಸಿ) ಕಲಿಕೆ ಮತ್ತು ಬೋಧನಾಶಾಸ್ತ್ರ:** | |
| **8** | **ಕಲಿಕೆ** –ಅರ್ಥ ಮತ್ತು ವ್ಯಾಖ್ಯಾನಗಳು<br>ಕಲಿಕೆಯ ಸ್ವರೂಪ/ಲಕ್ಷಣಗಳು, ವಿಧಗಳು, ಪ್ರಕಾರಗಳು ಮತ್ತು ಸಿದ್ಧಾಂತಗಳು.<br>ಮಕ್ಕಳು ಹೇಗೆ ಯೋಚಿಸುತ್ತಾರೆ, ಕಲಿಯುತ್ತಾರೆ.<br>ಜೀನ್ ಪಿಯಾಜೆ ಅವರ ಪ್ರಕಾರ ಮಕ್ಕಳ ಕಲಿಕೆಯ ಹಂತಗಳು,<br>**ಕಲಿಕಾ ಶೈಲಿಗಳು, ಥಾರ್ನ್‌ಡೈಕ್** ರವರ ಪ್ರಯತ್ನ ಪ್ರಮಾದ ಕಲಿಕೆ<br>**ಪಾವಲೋವ್** ರವರ ಸಾಂಪ್ರದಾಯಿಕ ಅನುಬಂಧನ ಕಲಿಕೆ<br>**ಬಂಡೂರಾರ್** ರವರ ವೀಕ್ಷಣ ಕಲಿಕೆ<br>**ಬ್ರೂನರ್** ರವರ ಕಲಿಕಾ ಸಿದ್ಧಾಂತ–ಕ್ರಿಯಾ ಪ್ರಾತಿನಿಧ್ಯ ,ಪ್ರತಿಮಾ /ಬಿಂಬ ಪ್ರಾತಿನಿಧ್ಯ, ಸಾಂಕೇತಿಕ ಪ್ರಾತಿನಿಧ್ಯ ಮತ್ತು ಶೈಕ್ಷಣಿಕ ನಿಹಿತಾರ್ಥಗಳು<br>**ಗ್ಯಾನೆರವರ** ಪದ ಸೋಪಾನ ಕಲಿಕಾ ಸಿದ್ಧಾಂತ – ಶೈಕ್ಷಣಿಕ ನಿಹಿತಾರ್ಥಗಳು<br>**ಬೆಂಜಮಿನ್ ಬ್ಲೂಮ್** ರವರ ಪ್ರಭುತ್ವ ಕಲಿಕಾ ಮಾದರಿ–ಪ್ರಭುತ್ವ ಕಲಿಕೆಯ ಪ್ರಕಾರ ಕಲಿಕೆಯ ಮೇಲೆ ಪ್ರಭಾವ ಬೀರುವ ಅಂಶಗಳು. ಪ್ರಭುತ್ವ ಕಲಿಕೆಯ ವಿಧಾನಗಳು.<br>**ಸ್ಕಿನ್ನರ್** ರವರ ಕ್ರಿಯಾಜನ್ಯ ಅನುಬಂಧಿತ ಕಲಿಕೆ– ಸ್ಕಿನ್ನರ್ ರವರ ಪ್ರಯೋಗಗಳು– ಶೈಕ್ಷಣಿಕ ನಿಹಿತಾರ್ಥಗಳು<br>ಮಕ್ಕಳು ಏಕೆ ನಿರೀಕ್ಷಿತ ಸಾಧನೆಯನ್ನು ಸಾಧಿಸಲು ವಿಫಲರಾಗುತ್ತಾರೆ? | **29–41** |
| **9** | ಕಲಿಕೆಯ ಮೇಲೆ ಪ್ರಭಾವ ಬೀರುವ ಕೆಲವು ವೈಯಕ್ತಿಕ ಅಂಶಗಳು– ವಿವೇಚನೆ ಮತ್ತು ಭಾವನಾತ್ಮಕತೆ, ಅಭಿಪ್ರೇರಣೆ– ಅಭಿಪ್ರೇರಣೆಯ ಗುಣಲಕ್ಷಣಗಳು<br>**ಪಕ್ವತೆ–** ಶೈಕ್ಷಣಿಕ ನಿಹಿತಾರ್ಥಗಳು, ಆಸಕ್ತಿ –ಆಸಕ್ತಿಯ ಗುಣಲಕ್ಷಣಗಳು,<br>**ಅವಧಾನ–** ಅವಧಾನದ ವಿಧಗಳು.<br>ಮನೋಭಾವ, ಆಯಾಸ, ಸ್ಮೃತಿ– ಸ್ಮೃತಿಯ ಹಂತಗಳು<br>ವಿಸ್ಮೃತಿ– ಮರೆವಿಗೆ ಕಾರಣಗಳು<br>ಕಲಿಕೆ ಮತ್ತು ಪರಿಸರ– ಶಾಲೆ– ಶಾಲೆಯ ಪರಿಸರ– ಸಹವರ್ತಿಗಳು<br>ಪಠ್ಯಕ್ರಮ, ಬೋಧನಾ ವಿಧಾನ, ಮೌಲ್ಯಮಾಪನ, | **41–43** |
| **10** | ಬಹು ಆಯ್ಕೆಯ ಪ್ರಶ್ನೋತ್ತರಗಳು | **44–56** |
| **11** | ಮಾದರಿ ಪ್ರಶ್ನೆ ಪತ್ರಿಕೆಗಳು | **57–58**<br>**60–62** |
| **12** | ಮಾದರಿ ಪ್ರಶ್ನೆ ಪತ್ರಿಕೆಗಳಿಗೆ ಉತ್ತರಗಳು | **59 & 63** |

## ಎ) ಮಗುವಿನ ಅಭಿವೃದ್ಧಿ:

**ಅಭಿವೃದ್ಧಿಯ ಪರಿಕಲ್ಪನೆ ಮತ್ತು ಕಲಿಕೆಯೊಂದಿಗಿನ ಅದರ ಸಂಬಂಧ, ಮಕ್ಕಳ ಅಭಿವೃದ್ಧಿಯ ತತ್ವಗಳು, ಅನುವಂಶೀಯತೆಯ ಮತ್ತು ಪರಿಸರದ ಪ್ರಭಾವ:**

## ವಿಕಾಸದ ಪರಿಕಲ್ಪನೆ

ವಿಕಾಸ ಎಂಬ ಪದದ ಸಾಮಾನ್ಯ ಅರ್ಥ ವೃದ್ಧಿ ಅಥವಾ ಪ್ರಗತಿ ಅಥವಾ ಪರಿವರ್ತನೆ ಎನ್ನಬಹುದು.

- ಗುಣಾತ್ಮಕ ಮತ್ತು ಪರಿಮಾಣಾತ್ಮಕ ಬದಲಾವಣೆಯನ್ನು ವಿಕಾಸ ಎನ್ನುವರು.
- ವ್ಯಕ್ತಿಯಲ್ಲಾಗುವ ಕ್ರಮಬದ್ಧ ಮತ್ತು ಊರ್ಧ್ವಮುಖ ಪರಿವರ್ತನೆಗಳಿಗೆ ವಿಕಾಸ ಎನ್ನುವರು.
- ವ್ಯಕ್ತಿಯಲ್ಲಿ ಸುವ್ಯವಸ್ಥಿತ ಹಾಗೂ ಸುಸಂಬಂಧ ರೀತಿಯಲ್ಲಿ ಉಂಟಾಗುವ ಪರಿವರ್ತನೆಯ ಸರಣಿಗೆ ವಿಕಾಸ ಎಂದು ಕರೆಯುವರು.

### ವಿಕಾಸದ ತತ್ವಗಳು

| | | |
|---|---|---|
| 1)ನಿರಂತರತೆಯ ತತ್ವ | 2)ಕ್ರಮಬದ್ಧ ವಿನ್ಯಾಸದ ತತ್ವ | 3)ನಿರ್ದಿಷ್ಟತೆಯ ತತ್ವ |
| 4)ಏಕತೆಯ ತತ್ವ | 5)ಶಿರಾ –ಪಾದಾಭಿಮುಖ ವಿನ್ಯಾಸದ ತತ್ವ | 6)ಸಾಂಸ್ಕೃತಿಕ ಅಂಶಗಳ ತತ್ವ |
| 7)ಪ್ರಗತಿ ಮತ್ತು ವಿಗತಿಯ ತತ್ವ | 8)ಕೇಂದ್ರ –ಪರಿಧಿ ಅಭಿಮುಖ ವಿನ್ಯಾಸದ ತತ್ವ | 9)ನಮ್ಯತೆಯ ತತ್ವ |
| 10)ಅನುವಂಶೀಯತೆ ಮತ್ತು ಪರಿಸರದ ನಡುವಿನ ಅನ್ಯೋನ್ಯ ಕ್ರಿಯೆಯ ತತ್ವ | 11)ವ್ಯಕ್ತಿ ಭಿನ್ನತೆಯ ತತ್ವ | 12)ಸಾರ್ವತ್ರಿಕತೆಯ ತತ್ವ |
| 13)ಸೃಜನಾತ್ಮಕ ಪ್ರಕ್ರಿಯೆಯ ತತ್ವ | 14)ದ್ವಿಪಾರ್ಶ್ವತೆಯಿಂದ ಏಕಪಾರ್ಶ್ವತೆಯ ತತ್ವ | 15)ಪಕ್ವತೆ ಹಾಗೂ ಕಲಿಕೆಯ ತತ್ವ |
| 16}ಸಾಮಾನ್ಯದಿಂದ ನಿರ್ದಿಷ್ಟತೆಯ ತತ್ವ | 17)ವ್ಯಕ್ತಿಗತ ಪ್ರಕ್ರಿಯೆಯ ತತ್ವ | |

### ಮಾನವ ವಿಕಾಸದ ಹಂತಗಳು

| | | |
|---|---|---|
| 1.ಪ್ರಸವ ಪೂರ್ವ ಹಂತ | 4.ಉತ್ತರಬಾಲ್ಯ | 8ಪೂರ್ವ ವಯಸ್ಕತನ |
| 2.ಶೈಶವಹಂತ | 5.ಲೈಂಗಿಕಪಕ್ವತೆಯ ಕಾಲ | 9.ಮಧ್ಯವಯಸ್ಕತನ |
| 3.ಪೂರ್ವಬಾಲ್ಯ | 6.ಪೂರ್ವ ತಾರುಣ್ಯಾವಸ್ಥೆ | 10.ಉತ್ತರ ವಯಸ್ಕತನ |
| | 7ಉತ್ತರ ತಾರುಣ್ಯಾವಸ್ಥೆ | 11.ವೃದ್ಧಾಪ್ಯ |

### ವಿಕಾಸ ಮತ್ತು ಕಲಿಕೆಯೊಂದಿಗೆ ಸಂಬಂಧ

- ಪ್ರತಿಯೊಬ್ಬ ಶಿಕ್ಷಕನಿಗೂ ಬೆಳವಣಿಗೆ ಮತ್ತು ವಿಕಾಸದ ಅರಿವು ಅವಶ್ಯಕ ಹಾಗೂ ಅನಿವಾರ್ಯವಾದುದು.
- ಸರಿಯಾದ ರೀತಿಯಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳನ್ನು ಕೈಗೊಳ್ಳಲು ಬೆಳವಣಿಗೆ ಮತ್ತು ವಿಕಾಸದ ಜ್ಞಾನ ಅತ್ಯವಶ್ಯಕ.
- ಉತ್ತಮವಾದ ವ್ಯಕ್ತಿತ್ವ ಮತ್ತು ವಿಕಾಸವನ್ನು ಮಗುವಿನಲ್ಲಿ ಉಂಟುಮಾಡಲು, ಶಿಕ್ಷಣದ ಗುರಿ ಮತ್ತು ಉದ್ದೇಶಗಳನ್ನು ಈಡೇರಿಸಲು, ವಿಕಾಸದ ತತ್ವಗಳು, ವಿಕಾಸದ ಮೇಲೆ ಪ್ರಭಾವ ಬೀರುವ ಅಂಶಗಳು ಶಿಕ್ಷಕರಿಗೆ ತಿಳಿದಿರಬೇಕು. ಆದ್ದರಿಂದ ವಿಕಾಸ ಮತ್ತು ಕಲಿಕೆ ಅಂತರ್‌ಸಂಬಂಧವನ್ನು ಹೊಂದಿದೆ ಎಂದು ಹೇಳಬಹುದು.

### ಅನುವಂಶೀಯತೆ ಮತ್ತು ಪರಿಸರ

### ಅನುವಂಶೀಯತೆಯ ಅರ್ಥ

- ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ಗುಣಗಳು ವರ್ಗಾವಣೆಯಾಗುವುದನ್ನು ಅನುವಂಶೀಯತೆ ಎನ್ನುವರು.
- ವಂಶವಾಹಿಗಳ ಮುಖಾಂತರ ಸ್ವಭಾವ ಗುಣಲಕ್ಷಣಗಳನ್ನು ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ಸಾಗಿಸುವ ಗುಣಕ್ಕೆ ಅನುವಂಶೀಯತೆ ಎನ್ನುವರು.
- ಎಲ್ಲಾ ರೀತಿಯ ದೈಹಿಕ ರಚನೆಗಳು, ಭೌತಿಕ ಗುಣಲಕ್ಷಣಗಳು, ಕಾರ್ಯಗಳು ಅಥವಾ ಸಾಮರ್ಥ್ಯಗಳು ತಂದೆ–ತಾಯಿಗಳು ಅಥವಾ ಇನ್ನಿತರ ಪೂರ್ವಜರಿಂದ ಬರುವ ಎಲ್ಲಾ ಅಂಶಗಳನ್ನು ಅನುವಂಶೀಯತೆ ಎನ್ನುವರು.

## ಅನುವಂಶೀಯತೆಯ ಆಯಾಮಗಳು

1) ಜೈವಿಕ ಅನುವಂಶೀಯತೆ
2) ಸಾಮಾಜಿಕ ಅನುವಂಶೀಯತೆ
3) ಮಾನಸಿಕ ಅನುವಂಶೀಯತೆ

## ಅನುವಂಶೀಯ ನಿಯಮಗಳು:

1) ರೂಪಕ್ಕೆ ಪ್ರತಿರೂಪವಾಗಿರುವ ತತ್ವ ; ಈ ತತ್ವದ ಪ್ರಕಾರ ರೂಪಕ್ಕೆ ಪ್ರತಿರೂಪವಾಗಿರುವವರನ್ನೆ ಪಡೆಯುವುದು.
2) ಭಿನ್ನತೆಯ ತತ್ವ ; ತಂದೆ ತಾಯಿಗಳ ಪ್ರತಿರೂಪವಾಗಿರುವುದಿಲ್ಲ ಭಿನ್ನತೆಯನ್ನು ಹೊಂದಿರುತ್ತಾರೆ.
3) ಸಮಾಶ್ರಯಣದ ತತ್ವ; ಈ ತತ್ವದ ಪ್ರಕಾರ ಮಕ್ಕಳಲ್ಲಿ ಸರಾಸರಿಯ ಕಡೆಗೆ ಹೋಲುವ ಪ್ರವೃತ್ತಿಯನ್ನು ಕಾಣಬಹುದು.

## ಪರಿಸರ;

ವ್ಯಕ್ತಿಯನ್ನು ಪ್ರಚೋದಿಸುವ ಸಮಸ್ತ ಉದ್ದೀಪಕಗಳ ಮೊತ್ತವೇ ಆ ವ್ಯಕ್ತಿಯ ಪರಿಸರ, ಗರ್ಭಧೃತ ಅಂಡಾಣುವಿನ ರೂಪದಲ್ಲಿ ವ್ಯಕ್ತಿ ಉದಯಿಸಿದ ಕ್ಷಣದಿಂದ ಸಾಯುವ ತನಕ ಪತಿಕ್ಷಣ ಹಲವಾರು ಉದ್ದೀಪಕಗಳು ಅವನನ್ನು ಪ್ರಚೋದಿಸುತ್ತಲೇ ಇರುತ್ತವೆ. ಪರಿಸರವು ಭೌತಿಕ, ಮಾನಸಿಕ, ಸಾಮಾಜಿಕ, ನೈತಿಕ, ಆರ್ಥಿಕ, ಸಾಂಸ್ಕೃತಿಕ ಹಾಗೂ ಸಂವೇಗಾತ್ಮಕ ಅಂಶಗಳನ್ನು ಒಳಗೊಂಡಿರುತ್ತದೆ. ಮಗುವಿನ ಜನನದ ನಂತರ ಭೌತಿಕ, ಮಾನಸಿಕ ಹಾಗೂ ಸಾಮಾಜಿಕ ಪರಿಸರಗಳು ವಿಕಾಸದ ಮೇಲೆ ಪ್ರಭಾವ ಬೀರುತ್ತವೆ ಭೌತಿಕ ಪರಿಸರ ಮಗುವಿನ ಪ್ರಸವ ಪೂರ್ವ ಬೆಳವಣಿಗೆಯ ಮೇಲೂ ಸಹ ಪ್ರಭಾವ ಬೀರುತ್ತದೆ.

## ಪರಿಸರದ ವಿಧಗಳು;

**ಭೌತಿಕ ಪರಿಸರ** ; ಮಗುವಿನ ಪ್ರಸವ ಪೂರ್ವ ವಿಕಾಸದ ಮೇಲೆ ಭೌತಿಕ ಪರಿಸರ ಅಂಶಗಳು ಪರೋಕ್ಷ ಪ್ರಭಾವ ಬೀರುತ್ತವೆ: ತಾಯಿಯ ಗರ್ಭಧಾರಣೆ ಅವಧಿಯಲ್ಲಿ ತೆಗೆದುಕೊಳ್ಳುವ ಆಹಾರ, ಔಷಧಿಗಳು, ಅವಳ ಕಾಯಿಲೆಗಳು ಮತ್ತು ಅವಳು ಹೊಂದಿರುವ ಮನಸ್ಥಿತಿ ಮಗುವಿನ ಬೆಳವಣಿಗೆಯ ಮೇಲೆ ಪ್ರಭಾವ ಬೀರುತ್ತದೆ. ಇಷ್ಟು ಮಾತ್ರವಲ್ಲದೆ ಹವಾಗುಣ, ಕೊಠಡಿಯ ಕತ್ತಲೆ, ಸ್ಥಳದ ಭೌಗೋಳಿಕ ಸ್ಥಿತಿ, ಆಹಾರ, ಪೋಷಣೆ ಮತ್ತು ಭೌತಿಕ ಸೌಲಭ್ಯಗಳು ಮಗುವಿನ ಜನನದ ನಂತರ ವಿಕಾಸದ ಮೇಲೆ ಪ್ರಭಾವ ಬೀರುತ್ತದೆ.

**ಬೌದ್ಧಿಕ ಪರಿಸರ;** ವ್ಯಕ್ತಿಯ ಬೌದ್ಧಿಕ ವಿಕಾಸಕ್ಕೆ ಅಗತ್ಯವಾದ ವಾತಾವರಣವನ್ನು ಬೌದ್ಧಿಕ ಪರಿಸರ ಎನ್ನುವರು ಮಗುವಿನ ಬೌದ್ಧಿಕ ವಿಕಾಸಕ್ಕೆ ಸಹಾಯವಾಗುವ ಎಲ್ಲ ಅಂಶಗಳನ್ನು ಒಟ್ಟಾಗಿ ಬೌದ್ಧಿಕ ಪರಿಸರ ಎನ್ನಲಾಗುತ್ತದೆ. ಮಗುವಿನ ಬೌದ್ಧಿಕ ವಿಕಾಸವು ಪೋಷಕರು ಶಾಲೆ ಹಾಗೂ ಸಮಾಜ ಒದಗಿಸುವ ತರಬೇತಿ ಅನುಭವಗಳ ಮೇಲೆ ಅವಲಂಬಿಸಿರುತ್ತದೆ.

**ಸಾಮಾಜಿಕ ಪರಿಸರ**: ಸಾಮಾಜಿಕ ಪರಿಸರ ವ್ಯಕ್ತಿಯ ಸಾಂಸ್ಕೃತಿಕ ಪರಿಸರಕ್ಕೆ ಸಂಬಂಧಿಸಿದಂತೆ. ಇದನ್ನು ಕೆಲವೊಮ್ಮೆ ಸಾಮಾಜಿಕ ಅನುವರಶೀಯತೆ ಅಥವಾ ಸಾಮಾಜಿಕ ಪರಂಪರೆ ಎನ್ನುವರು. ಏಕೆಂದರೆ ಸಾಂಸ್ಕೃತಿಕ ಜೀವನ ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆ ಹರಿದು ಬಂದಿರುತ್ತದೆ. ಹಾಗಾಗಿ ಭಾಷೆ, ಸಂಪ್ರದಾಯಗಳು, ನಡತೆ, ಆತಿಥ್ಯ, ಆಚಾರ ವಿಚಾರ, ಪರಂಪರೆ ಮುಂತಾದವುಗಳು ಸಾಮಾಜಿಕ ಪರಿಸರಕ್ಕೆ ಸೇರಿರುತ್ತವೆ. ಹಾಗೂ ಸಾಮಾಜಿಕ ವಿಕಾಸಕ್ಕೆ ಕಾರಣವಾಗಿದೆ.

## ಅನುವಂಶಿಯತೆ ಮತ್ತು ಪರಿಸರಗಳ ಸಾಪೇಕ್ಷ ಪ್ರಾಮುಖ್ಯತೆ

ಅನುವಂಶೀಯತೆ ಮತ್ತು ಪರಿಸರಗಳು ವ್ಯಕ್ತಿಯ ವಿಕಾಸದ ಮೇಲೆ ತಮ್ಮದೇ ಆದ ಪ್ರಭಾವವನ್ನು ಬೀರುತ್ತವೆ. ಅನುವಂಶೀಯತೆ ಮತ್ತು ಪರಿಸರದ ಪ್ರಭಾವವನ್ನು ಬೇರ್ಪಡಿಸಲಾಗದು. ಇವು ಒಂದಕ್ಕೊಂದು ಯಾವಾಗಲೂ ಪೂರಕವಾಗಿರುತ್ತದೆ ವಿರುದ್ಧವಾಗಿರುವುದಿಲ್ಲ ಎಂಬುದನ್ನು ಶಿಕ್ಷಕ ಅರ್ಥಮಾಡಿಕೊಳ್ಳಬೇಕು. ಇವೆರಡರ ಪ್ರಾಮುಖ್ಯತೆಯ ಜ್ಞಾನದ ಹಿನ್ನೆಲೆಯಲ್ಲಿ ಶಿಕ್ಷಕನು ವಿದ್ಯಾರ್ಥಿಗಳ ಅಂತರ್ಗತ ಸಾಮರ್ಥ್ಯಗಳು, ಬುದ್ಧಿಶಕ್ತಿ, ಪ್ರೇರಣೆಗಳು ಇವುಗಳನ್ನು ಅವರ ತಂದೆ ತಾಯಿಯಿಂದ ನೋಡಿ ಅರ್ಥಮಾಡಿಕೊಳ್ಳಬೇಕಾಗಿದೆ. ಶಿಕ್ಷಕ ಮಾಡಬೇಕಾದ ಉತ್ತಮ ಕೆಲಸವೆಂದರೆ ಶೈಕ್ಷಣಿಕ ಪ್ರಕ್ರಿಯೆ ಮೂಲಕ ಮಕ್ಕಳಲ್ಲಿರುವ ಉತ್ತಮ ಗುಣಗಳನ್ನು ಪೋಷಿಸಬೇಕು ಹಾಗೂ ಕೆಟ್ಟ ಗುಣಗಳನ್ನು ಬೆಳೆಯದಂತೆ ನೋಡಿಕೊಳ್ಳಬೇಕು. ಹಾಗಾಗಿ ಪರಿಸರ ಮತ್ತು ಅನುವಂಶಿಯತೆ ಪೂರಕವಾಗಿದ್ದರೆ ವಿಕಾಸವು ಉತ್ತಮವಾಗಿರುತ್ತದೆ ಎಂಬುದರ ಅರಿವು ಶಿಕ್ಷಕನಿಗೆ ಅತ್ಯಗತ್ಯ.

## ಸಾಮಾಜೀಕರಣದ ಪ್ರಕ್ರಿಯೆಗಳು: ಸಮಾಜ ಮತ್ತು ಮಕ್ಕಳು (ಶಿಕ್ಷಕ, ಪೋಷಕರು, ಸಹವರ್ತಿಗಳು).

ವ್ಯಕ್ತಿ ಸಮೂಹದ ಕಟ್ಟಳೆಗಳನ್ನು ಪಾಲಿಸುವುದನ್ನು ಕಲಿಸುವ ಪ್ರಕ್ರಿಯೆಯೇ ಸಾಮಾಜೀಕರಣ. ವ್ಯಕ್ತಿಯ ಒಡನಾಡಿಗಳಲ್ಲಿ ನಾವು ಮತ್ತು ನಮ್ಮವರು ಎಂಬ ಭಾವನೆಗಳನ್ನು ವ್ಯಕ್ತಪಡಿಸುವ ಸಾಮರ್ಥ್ಯವನ್ನು ಬೆಳೆಸುವ ಹಾಗೂ ಒಗ್ಗೂಡಿ ವರ್ತಿಸುವಂತೆ ಮನಸ್ಸು ಮಾಡುವ ಪ್ರಕ್ರಿಯೆಯೇ ಸಾಮಾಜೀಕರಣ.

ಸಾಮಾಜಿಕರಣ ಒಂದು ನಿರಂತರ ಪ್ರಕ್ರಿಯೆಯಾಗಿದೆ. ಮಾನವನು ತನ್ನ ಜೀವನದ ಬೇರೆ ಬೇರೆ ಹಂತಗಳಲ್ಲಿ ಬೇರೆ ಬೇರೆ ಸಮೂಹಗಳಿಗೆ ಸೇರಬೇಕಾಗುವುದು ಹೀಗೆ ಸೇರಬೇಕಾದರೆ ಆ ಸಮೂಹದ ರೀತಿನೀತಿಗಳನ್ನು. ನಡತೆಯ ಕ್ರಮಗಳನ್ನು

ಕಲಿಯುವುದು ಅನಿವಾರ್ಯವಾಗುವುದು. ಸಾಮಾಜೀಕರಣವು ವ್ಯಕ್ತಿ ಯು ಸನ್ನಿವೇಶವನ್ನು ಹೇಗೆ ಗ್ರಹಿಸುತ್ತಾನೆ ಎಂಬುದನ್ನು ಅವಲಂಬಿಸಿರುತ್ತದೆ.

## ಸಾಮಾಜೀಕರಣದ ನಿಯೋಗಗಳು

- ಔಪಚಾರಿಕ ಸಂಸ್ಥೆಗಳು
- ಅನೌಪಚಾರಿಕ ಸಂಸ್ಥೆಗಳು
- ಔಪಚಾರಿಕವಲ್ಲದ ಸಂಸ್ಥೆಗಳು

## ಸಾಮಾಜೀಕರಣದ ಪ್ರಕ್ರಿಯೆ

ಸಾಮಾಜೀಕರಣ ಒಂದು ನಿರಂತರ ಪ್ರಕ್ರಿಯೆಯಾಗಿದೆ. ಸಾಮಾಜೀಕರಣವು ವ್ಯಕ್ತಿಯನ್ನು ಸಾಮಾಜಿಕ ಪ್ರಪಂಚಕ್ಕೆ ತೊಡಗಿಸುವ ಅಥವಾ ಸಾಮಾಜಿಕ ಜೀವನಕ್ಕೆ ಅಣಿಗೊಳಿಸುವ ಒಂದು ಪ್ರಕ್ರಿಯೆಯಾಗಿದೆ. ಪ್ರತಿಯೊಬ್ಬ ವ್ಯಕ್ತಿಯೂ ಇತರರೊಂದಿಗೆ ಹೊಂದಿಕೊಂಡಿರಬೇಕಾದ ಸಂಸ್ಕೃತಿಯ ಬೋಧನಾ ಪ್ರಕ್ರಿಯೆಯಾಗಿದೆ. ಮಾನವನು ತನ್ನ ಜೀವನದ ಬೇರೆ ಬೇರೆ ಹಂತಗಳಲ್ಲಿ ಬೇರೆ ಬೇರೆ ಸಮೂಹಗಳಿಗೆ ಸೇರಬೇಕಾಗುವುದು. ಈ ಸಮೂಹಗಳು ಬದಲಾದಂತೆ ಆತನ ನಡುವಳಿಕೆಯು ಬದಲಾಗುವುದು.

## ಸಾಮಾಜಿಕ ಪ್ರಕ್ರಿಯೆಯು ಕೆಳಗಿನಂತೆ ನಡೆಯುತ್ತದೆ

* ಮಗು ತನ್ನ ಸುತ್ತಲಿರುವ ವ್ಯಕ್ತಿಗಳ ವರ್ತನೆಯನ್ನು ಅನುಕರಿಸುತ್ತದೆ
* ಇಲ್ಲಿ ಮಗುವಿನ ಮಾನಸಿಕ ತಯಾರಿ ಪ್ರಮುಖ ಪಾತ್ರವನ್ನು ವಹಿಸುತ್ತದೆ
* ಮಗು ಸನ್ನಿವೇಶವನ್ನು ಗ್ರಹಿಸಲು ಪ್ರಾರಂಭಿಸುತ್ತದೆ
* ಮಗು ಪ್ರಚೋದನೆಗೆ ಪ್ರತಿಕ್ರಿಯಿಸುತ್ತಾನೆ
* ಸರಿಯಾದ ಪ್ರತಿಕ್ರಿಯೆಗೆ ಸರಿಯಾದ ಪುನರ್ಬಲನ ದೊರೆತಾಗ ಮಗು ಅಂತಹ ಪ್ರತಿಕ್ರಿಯೆಯನ್ನು ದೈನಂದಿನ ಹವ್ಯಾಸವನ್ನಾಗಿ ರೂಡಿಸಿಕೊಳ್ಳುತ್ತಾನೆ.

## ಮಕ್ಕಳ ಸಾಮಾಜೀಕರಣದಲ್ಲಿ ಶಿಕ್ಷಕರ ಪೋಷಕರ ಮತ್ತು ಸಹವರ್ತಿಗಳ ಪಾತ್ರ

### ಶಿಕ್ಷಕ :

ಮಕ್ಕಳ ಸಾಮಾಜೀಕರಣ ಪ್ರಕ್ರಿಯೆಯಲ್ಲಿ ಶಿಕ್ಷಕರ ಪಾತ್ರ ಮಹತ್ತರವಾಗಿದೆ. ಈ ಕೆಳಗಿನವುಗಳು ಶಿಕ್ಷಕರ ಮುಖ್ಯ ಕಾರ್ಯಗಳಾಗಿವೆ.

1. ಮಕ್ಕಳ ದೈಹಿಕ, ಮಾನಸಿಕ, ನೈತಿಕ ಮತ್ತು ಆಧ್ಯಾತ್ಮಿಕ ಶಕ್ತಿಗಳ ವಿಕಾಸ
2. ಉತ್ತಮ ನಾಗರೀಕರನ್ನು ತಯಾರಿಸುವುದು
3. ರಾಷ್ಟ್ರಾಭಿಮಾನವನ್ನು ಬೆಳೆಸುವುದು
4. ಭಾವೈಕ್ಯತೆ ಮತ್ತು ಜಾತ್ಯಾತೀತತೆಯನ್ನು ಮಕ್ಕಳಲ್ಲಿ ಬೆಳೆಸುವುದು
5. ಸಾಮಾಜಿಕ ಪ್ರಜ್ಞೆ ಬೆಳೆಸಿ ಸಮಾಜ ಸೇವೆಗೆ ಸಿದ್ಧಪಡಿಸುವುದು

### ಪೋಷಕರು

1. ಮಗುವಿನ ಬೌದ್ಧಿಕ, ನೈತಿಕ, ಧಾರ್ಮಿಕ ಮತ್ತು ಆಧ್ಯಾತ್ಮಿಕ ಬೆಳವಣಿಗೆಗೆ ಪೂರಕವಾದ ತಳಹದಿ ಹಾಕುವುದು
2. ಮಗುವಿಗೆ ವೇಷ –ಭೂಷಣ ರೀತಿ ನೀತಿಗಳನ್ನು ಕಲಿಸುವುದು
3. ತಮ್ಮ ಕುಟುಂಬದ ಹಿಂದಿನ ಸಂಸ್ಕೃತಿಯನ್ನು ಸಂರಕ್ಷಣೆ ಮಾಡುವುದು.
4. ಭಾಷಾ ಬೆಳವಣಿಗೆ
5. ಸ್ವ ಸಾಮರ್ಥ್ಯ ಬೆಳೆಸಿಕೊಳ್ಳಲು ನೆರವು ನೀಡುವುದು

### ಸಹವರ್ತಿಗಳು

ಮಕ್ಕಳ ಸಾಮಾಜೀಕರಣ ಪ್ರಕ್ರಿಯೆಯಲ್ಲಿ ಸಹವರ್ತಿಗಳ ಪಾತ್ರ ಪ್ರಮುಖವಾಗಿದೆ

* ತಮ್ಮಲ್ಲಿರುವ ಆಸಕ್ತಿಗಳು, ಸಿದ್ಧಾಂತಗಳು ಮತ್ತು ಸಂಸ್ಕೃತಿಗಳ ಅನ್ವೇಷಣೆಗಳು ಸಹಪಾಠಿಗಳಿಂದ ಆಗುತ್ತದೆ
* ಸಹವರ್ತಿಗಳೊಡನೆ ಅಂತರ್ ಕ್ರಿಯೆಯಿಂದ ಮಗುವು ಸಾಮಾಜಿಕ ಮೌಲ್ಯಗಳನ್ನು ಕಲಿಯುತ್ತದೆ
* ಮಗುವಿನ ನಡವಳಿಕೆ ಆಯ್ಕೆಗಳು ಮತ್ತು ನಂಬಿಕೆಗಳ ಮೇಲೆ ಗಮನಾರ್ಹವಾದ ಪರಿಣಾಮ ಬೀರುತ್ತದೆ.

**ಪಿಯಾಜೆ, ಕೋಲ್ಬರ್ಗ್ ಮತ್ತು ವೈಗೋಟ್ಸ್ಕಿ: ರಚನಾತ್ಮಕ ಮತ್ತು ವಿಮರ್ಶಾತ್ಮಕ ದೃಷ್ಟಿಕೋನಗಳು. ಶಿಶು ಕೇಂದ್ರಿತ ಮತ್ತು ಪ್ರಗತಿಪರ ಶಿಕ್ಷಣದ ಪರಿಕಲ್ಪನೆಗಳು, ಬುದ್ಧಿವಂತಿಕೆ ಸಂರಚನೆಯ ವಿಮರ್ಶಾತ್ಮಕ ದೃಷ್ಟಿಕೋನ, ಮಲ್ಟಿ ಡೈಮೆನ್ಷನಲ್ ಇಂಟೆಲಿಜೆನ್ಸ್ – ಬುದ್ಧಿವಂತಿಕೆಯ ಬಹು ಆಯಾಮ, ಭಾಷೆ ಮತ್ತು ಚಿಂತನೆ,**

## ಪಿಯಾಜೆಯವರ ಬೌದ್ಧಿಕ ವಿಕಾಸದ ಹಂತಗಳು;

ಸ್ವಿಜಲ್ಯಾರ್ಂಡ್ ನ ಪತಿಭಾನ್ವಿತ ಜೀನ್ ಪಿಯಾಜೆ ವಿಶ್ವದ ಶ್ರೇಷ್ಠ ಮನೋವಿಜ್ಞಾನಿಯಾಗಿ ಗುರುತಿಸಿಕೊಂಡಿದ್ದಾರೆ .ಮಕ್ಕಳಲ್ಲಿ ಬುದ್ಧಿಶಕ್ತಿ ಹೇಗೆ ವಿಕಾಸಗೊಳ್ಳುತ್ತದೆ ಎಂದು ತಿಳಿಯಲು ತಮ್ಮ ಇಬ್ಬರು ಮಕ್ಕಳ ಮೇಲೆಯೇ ಅಧ್ಯಯನ ಕೈಕೊಂಡರು. ಈ ಅಧ್ಯಯನದ ಫಲವೇ ಇವರು ಬೌದ್ಧಿಕ ವಿಕಾಸದ ಸಿದ್ಧಾಂತ ರೂಪಿಸಲು ಕಾರಣವಾಯಿತು.

ಪಿಯಾಜೆಯವರು ಬೌದ್ಧಿಕ ವಿಕಾಸದಲ್ಲಿ ಪ್ರತಿ ಮಗುವು ಹೊಂದಿರುವ ನಾಲ್ಕು ಕ್ರಮಾನುಗತ ಅಂಶಗಳನ್ನು ಗುರುತಿಸಿದ್ದಾರೆ.

1. **ಸಂವೇದನಾಗತಿ ಹಂತ; (ಹುಟ್ಟಿದಾಗಿನಿಂದ ಎರಡು ವರ್ಷದವರೆಗೆ)**

ಮಗುವಿನ ಇಂದ್ರೀಯ ಸಂವೇದನೆಗಳು ಗತಿಶೀಲನ ಚಟುವಟಿಕೆಗಳ ನಡುವಿನ ಅನ್ಯೋನ್ಯ ಕ್ರಿಯೆಯನ್ನು ಗುರುತಿಸಿ ಇದನ್ನು ಸಂವೇದನಾ ಗತಿ ಹಂತ ಎಂದು ಕರೆಯಲಾಗಿದೆ.

2. **ಕಾರ್ಯ ಪೂರ್ವ ಹಂತ ( ಎರಡರಿಂದ ಏಳು ವರ್ಷಗಳವರೆಗೆ)**

ಈ ಹಂತದಲ್ಲಿ ಮಗುವಿನಲ್ಲಿ ಅಹಂ ಕೇಂದ್ರೀತ ಪ್ರವೃತ್ತಿ ಕಂಡುಬರುತ್ತದೆ. ಇತರರ ಭಾವನೆ, ದೃಷ್ಟಿಕೋನಗಳಿಗೆ ಬೆಲೆ ಕೊಡುವುದಿಲ್ಲ, ಭಾಷೆಯ ಬಳಕೆ ಪದ ಮತ್ತು ಬಿಂಬಗಳಿಂದ ಕಂಡು ಬರುತ್ತದೆ .

3. **ಮೂರ್ತ ಕಾರ್ಯಗಳ ಹಂತ( ಏಳರಿಂದ 11 ವರ್ಷಗಳು)**

ಮಗುವಿನಲ್ಲಿ ತಾರ್ಕಿಕ ಸಾಮರ್ಥ್ಯ ಮೂಡುತ್ತದೆ. ಹಲವಾರು ಕ್ಲಿಷ್ಟ ಮೂರ್ತ ಪರಿಕಲ್ಪನೆಗಳನ್ನು ಅರ್ಥೈಸಿಕೊಳ್ಳುವ ಸಾಮರ್ಥ್ಯ ಬೆಳೆಸಿಕೊಳ್ಳುತ್ತಾರೆ.

4. **ಔಪಚಾರಿಕ ಕಾರ್ಯಗಳ ಹಂತ( 11 ವರ್ಷಗಳ ಮೇಲ್ಪಟ್ಟು)**

ಅಮೂರ್ತ ಚಿಂತನಾ ಸಾಮರ್ಥ್ಯ ಮೂಡುತ್ತದೆ ತರ್ಕಬದ್ಧ ಹೇಳಿಕೆಗಳನ್ನು ಆಧರಿಸಿ ತರ್ಕಿಸುತ್ತಾರೆ .ಸ್ವತಂತ್ರ ಆಲೋಚನಾ ಸಾಮರ್ಥ್ಯ ತಾರ್ಕಿಕ ಸಾಮರ್ಥ್ಯ, ವೈಜ್ಞಾನಿಕ ಚಿಂತನೆ ನಿರ್ಧಾರ ತೆಗೆದುಕೊಳ್ಳುವ ,ಸಾಮರ್ಥ್ಯ ಸಮಸ್ಯೆ ಪರಿಹಾರ ಕೌಶಲಗಳು ವೃದ್ಧಿಯಾಗುತ್ತವೆ.

**ಈ ಘಟಕದಲ್ಲಿ ಕಲಿಕಾರ್ಥಿಗಳು ಅರ್ಥೈಸಿಕೊಳ್ಳಬೇಕಾದ ಅಂಶಗಳು**

1. ಸ್ಕೀಮ schema
2. ಸಂಘಟುಸುವಿಕೆ. Organisation
3. ಹೊಂದಾಣಿಕೆ. Adjustment
4. ಮನೋಗತ ಮಾಡಿಕೊಳ್ಳುವಿಕೆ. Assimilation
5. ಸ್ಥಳಾವಕಾಶ ಒದಗಿಸುವಿಕೆ. Accomodation

## ಕೋಲ್ಬರ್ಗ್‌ರವರ ನೈತಿಕ ವಿಕಾಸ ಸಿದ್ಧಾಂತ :

ಹಾರ್ವರ್ಡ್ ವಿಶ್ವವಿದ್ಯಾನಿಲಯದ ಮನೋವಿಜ್ಞಾನಿ ಲಾರೆನ್ಸ್ ಕೋಲ್ಬರ್ಗ್‌ರವರು ವ್ಯಕ್ತಿಯಲ್ಲಿ ಪೂರ್ವ ಪ್ರಾಬಲ್ಯದಿಂದ ಪ್ರಾರಂಭವಾಗುವ ನೈತಿಕ ಸಿದ್ಧಾಂತವನ್ನು ಪ್ರತಿಪಾದಿಸಿದ್ದಾರೆ. ವಿವಿಧ ಸಂಸ್ಕೃತಿಯ ನೂರಾರು ಮಕ್ಕಳ ಮೇಲೆ ಕೈಗೊಂಡ ಅಧ್ಯಯನದ ಆಧಾರದ ಮೇಲೆ ನೈತಿಕ ವಿಕಾಸದ ಸಿದ್ಧಾಂತವನ್ನು ಮಂಡಿಸಿದ್ದಾರೆ.

ಇವರ ಪ್ರಕಾರ ಜ್ಞಾನಾತ್ಮಕ ಪ್ರಕ್ರಿಯೆಗಳಾದ ಆಲೋಚನೆ ಮತ್ತು ತಾರ್ಕಿಕತೆಯು ಮಗುವಿನ ನೈತಿಕ ವಿಕಾಸದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಇವರು ಕೂಡ ನೈತಿಕ ವಿಕಾಸದ ಹಂತಗಳನ್ನು ಗುರುತಿಸುತ್ತಾರೆ. ಇವರೇ ಹೇಳುವಂತೆ ನೈತಿಕ ವಿಕಾಸವು ಒಂದು ಹಂತದಿಂದ ಮತ್ತೊಂದು ಹಂತಕ್ಕೆ ಸಾಗುವುದು ಜ್ಞಾನಾತ್ಮಕ ಸಾಮರ್ಥ್ಯಗಳಿಂದಲೇ ಹೊರತು ಹಿರಿಯರ, ಪೋಷಕರ, ಸ್ನೇಹಿತರ, ನೈತಿಕ ಮೌಲ್ಯಗಳಿಂದಲ್ಲ.

### ನೈತಿಕ ವಿಕಾಸದ ಮೂರು ಹಂತಗಳು;

1. ಸಾಂಪ್ರದಾಯಿಕ ಪೂರ್ವ ನೈತಿಕತೆಯ ಹಂತ( ನಾಲ್ಕರಿಂದ ಹತ್ತು ವರ್ಷಗಳು)
2. ಸಾಂಪ್ರದಾಯಿಕ ನೈತಿಕತೆಯ ಹಂತ( ಹತ್ತರಿಂದ 13 ವರ್ಷಗಳು)
3. ಸ್ವಯಂ ಸ್ವೀಕೃತ ನೈತಿಕ ತತ್ವಗಳ ಹಂತ (13 ವರ್ಷಗಳ ಮೇಲ್ಪಟ್ಟು)

ನೈತಿಕ ವಿಕಾಸದ ಮೇಲೆ ಪ್ರಭಾವಿಸುವ ಅಂಶಗಳು ಹೊಗಳಿಕೆ, ಬಹುಮಾನ, ತೆಗಳಿಕೆ, ಶಿಕ್ಷೆ, ಕುಟುಂಬದ ಸದಸ್ಯರು, ಸಮಾಜ ಸ್ವಾನುಭವ, ಸ್ವತಾರ್ಕಿಕತೆ ಇತ್ಯಾದಿ.

**ಜ್ಞಾನ ಸಂರಚನಾವಾದ**

ಜ್ಞಾನ ಸಂರಚನಾವಾದವೆಂದರೆ ಪ್ರತಿಯೊಬ್ಬ ವ್ಯಕ್ತಿಯೂ ಸಹ ತನ್ನ ಸ್ವಂತ ಅನುಭವಗಳ ಸಹಾಯದಿಂದ ಜ್ಞಾನವನ್ನು ನಿರ್ಮಿಸಿಕೊಳ್ಳುತ್ತಾನೆ.

**ಜ್ಞಾನ ಸಂರಚನವಾದಿಗಳ ಪ್ರಕಾರ**

- ಜ್ಞಾನ ನಿಷ್ಕ್ರಿಯವಾಗಿ ಕ್ರೋಡಿಕೃತವಾಗಿರುವುದಿಲ್ಲ. ಇದು ವ್ಯಕ್ತಿಯ ಕ್ರಿಯಾತ್ಮಕ ಸಂಜ್ಞಾನಾತ್ಮಕ ಚಟುವಟಿಕೆಯ ಫಲ.
- ಜ್ಞಾನ ಸಂರಚನೆ ಒಂದು ಮಾರ್ಪಡಿಸುವ ಪ್ರಕ್ರಿಯೆಯಾಗಿದ್ದು, ಇದು ವ್ಯಕ್ತಿಯ ಅನುಭವಗಳನ್ನು ಸಂಘಟಿಸುತ್ತದೆ ಮತ್ತು ಅದರಿಂದ ಅರ್ಥ ಪಡೆಯುವಂತೆ ಮಾಡುತ್ತದೆ.

**ಶೈಕ್ಷಣಿಕ ಕೊಡುಗೆಗಳು**

ಜ್ಞಾನ ಸಂರಚನಾವಾದವು ಸಾಮಾನ್ಯ ಪಠ್ಯ ಕ್ರಮವನ್ನು ಅಲ್ಲಗಳೆಯುತ್ತದೆ. ವಿದ್ಯಾರ್ಥಿಗಳ ಪೂರ್ವ ಜ್ಞಾನಕ್ಕೆ ಅನುಗುಣವಾದ ಪಠ್ಯ ಕ್ರಮ ಒತ್ತಿ ಹೇಳುತ್ತದೆ.

- ವಿದ್ಯಾರ್ಥಿಗಳು ವಿಷಯವನ್ನು ವಿಶ್ಲೇಷಿಸಿ ಅರ್ಥೈಸಿಕೊಳ್ಳಬೇಕು ಶಿಕ್ಷಕ ಮತ್ತು ವಿದ್ಯಾರ್ಥಿಗಳಲ್ಲಿ ಸಾಕಷ್ಟು ಚರ್ಚೆಗೆ ಅವಕಾಶ ನೀಡಬೇಕು.
- ತರಗತಿಯಲ್ಲಿ ಪರಿಣಾಮಕಾರಿಯಾಗಿ ಭೋದಿಸಬೇಕಾದರೆ, ವಿದ್ಯಾರ್ಥಿಗಳು ಹೊಂದಿರುವ ಮಾನಸಿಕ ಮಾದರಿಗಳನ್ನು ಅರ್ಥಮಾಡಿಕೊಳ್ಳಬೇಕು

**ವೈಗಾಸ್ಕಿ ಅವರ ಸಾಂಸ್ಕೃತಿಕ ಐತಿಹಾಸಿಕ ಸಿದ್ಧಾಂತ**

- ಇವರ ಪ್ರಕಾರ ಸಾಮಾಜಿಕ ಅಂತರ ಕ್ರಿಯೆಗಳಿಂದ ವ್ಯಕ್ತಿಯ ವರ್ತನೆ ಮತ್ತು ಜ್ಞಾನ ಉಂಟಾಗುತ್ತದೆ.
- ಕುಟುಂಬದೊಂದಿಗೆ ಸಮುದಾಯದೊಂದಿಗೆ ಬೆರೆತಾಗ ಅವರಲ್ಲಿ ವಿಚಾರಗಳು ವರ್ತನೆಗಳು ಕಲಿಕೆಯ ವಿನಿಮಯವಾಗುತ್ತದೆ.
- ಸಮಾಜದ ಸಂಸ್ಕೃತಿಯಿಂದ ಮಗುವಿನ ವಿಕಾಸ ದಲ್ಲಿ ಬದಲಾವಣೆ ಕಂಡು ಬರುತ್ತದೆ
- zone of proximal development
- Internalization

**ಶಿಶು ಕೇಂದ್ರಿತ ಶಿಕ್ಷಣ**

**ಲಕ್ಷಣಗಳು :**

- ಶಿಶು ಪ್ರಧಾನ
- ಶಿಶುವಿನ ಆಸಕ್ತಿ ಅಗತ್ಯತೆ ಮತ್ತು ಸಾಮರ್ಥ್ಯಕ್ಕೆ ಇಳಿದು ಬೋಧನೆ
- ಸ್ವಯಂ ಕಲಿಕೆಗೆ ಪ್ರೋತ್ಸಾಹ
- ಶಿಕ್ಷಕ ಮಾರ್ಗದರ್ಶಕನಾಗಿ,ಆಪ್ತ ಸಲಹೆಗಾರರಾಗಿ ಶಿಕ್ಷಣಕ್ಕೂ ಮಗುವಿಗೂ ಮಧ್ಯವರ್ತಿಯಾಗಿರುತ್ತಾನೆ
- ಶಿಶುವೇ ಕೇಂದ್ರ ಆದ್ದರಿಂದ ಮುಕ್ತ ಅವಕಾಶ ನೀಡಲಾಗಿದೆ
- ಚಟುವಟಿಕೆಗಳ ಮೂಲಕ ಕಲಿಕೆಗೆ ಅವಕಾಶ
- ಶಿಶು ಕೇಂದ್ರೀತ ಶಿಕ್ಷಣದ ಪ್ರತಿಪಾದಕರು ರೂಸೋ ಪ್ರೊಬೆಲ್ ,ಪೆಸ್ಟಾಲಜಿ, ರವೀಂದ್ರನಾಥ್ ಟ್ಯಾಗೋರ್ ಹಾಗೂ ಇತ್ಯಾದಿ.

**ಪ್ರಗತಿದಾಯಕ ಶಿಕ್ಷಣ**

19 ನೇ ಶತಮಾನದಲ್ಲಿ ಅನುಸರಿಸುತ್ತಿದ್ದ ಸಾಂಪ್ರದಾಯಿಕ ಬೋಧನಾ ವಿಧಾನಗಳಿಗೆ ಬದಲಾಗಿ ಈಗಿನ ಸನ್ನಿವೇಶ ಮತ್ತು ಕಲಿಕಾ ಪರಿಸ್ಥಿತಿಗಳಿಗೆ ಅನುಗುಣವಾಗಿ ಸೂಕ್ತವಾದ ನೂತನ ಶಿಕ್ಷಣ ಪದ್ದತಿಯನ್ನು ಜಾರಿಗೆ ತರಲಾಯಿತು. ಇದನ್ನೇ ಪ್ರಗತಿದಾಯಕ ಶಿಕ್ಷಣ ಎನ್ನುವರು.

ಈ ಶಿಕ್ಷಣ ಪದ್ದತಿಯ ಮೂಲ ರೂವಾರಿಗಳು ಇಂಗ್ಲೆಂಡಿನ ಮನೋವಿಜ್ಞಾನಿ ಜಾನ್‌ಲಾಕ್ ಮತ್ತು ಫ್ರಾನ್ಸ್ ದೇಶದ ಮನೋವಿಜ್ಞಾನಿ ಜೀನ್‌ಜಾಕ್ ರೂಸೋ. ಇವರಷ್ಟೇ ಅಲ್ಲದೆ ಸ್ವಿಟ್ಜರ್‌ಲ್ಯಾಂಡ್‌ನ ಹೆನ್ರಿಚ್ ಪೆಸ್ಟಾಲಜಿಯವರೂ ಕೂಡಾ ಪ್ರಗತಿದಾಯಕ ಶಿಕ್ಷಣವನ್ನು ಬೆಂಬಲಿಸಿ "ಕಲಿಕಾರ್ಥಿಗಳು ಆಂತರಿಕ ಪ್ರೇರಣೆಯಿಂದ ಕಲಿಯಬೇಕೇ ಹೊರತು ಹೊರಗಿನ ಬೇರೆ ಯಾವುದೇ ಪ್ರೇರಣೆಯಿಂದಲ್ಲ. ಮಗುವಿನ ಆಸಕ್ತಿ ಕಲಿಕೆಯತ್ತ ಹರಿಸುವುದೇ ಪ್ರಗತಿದಾಯಕ ಶಿಕ್ಷಣದ ಉದ್ದೇಶವಾಗಿದೆ" ಎಂದು ಹೇಳುತ್ತಾ Learning by hand, head and heart ಎಂಬ ಧ್ಯೇಯವಾಕ್ಯವನ್ನು ರೂಪಿಸಿದ್ದಾರೆ.

ಪ್ರೊಬೆಲ್ ರವರು ಕ್ರೀಡೆ ಮತ್ತು ಗುಂಪು ಚಟುವಟಿಕೆಯನ್ನು ಪ್ರಗತಿದಾಯಕ ಶಿಕ್ಷಣದಲ್ಲಿ ಅಳವಡಿಸಿಕೊಳ್ಳಬೇಕು, ಆ ಮೂಲಕ ಮಗು ನಲಿಯುತ್ತಾ ಖುಷಿಯಾಗಿ ಕಲಿಕೆಯಲ್ಲಿ ಸಹಜವಾಗಿ ತೊಡಗಿಸಿಕೊಳ್ಳುತ್ತದೆ ಎಂದು ಪ್ರಗತಿದಾಯಕ ಶಿಕ್ಷಣವನ್ನು ಉತ್ತೇಜಿಸಿದ್ದಾರೆ. ಜರ್ಮನಿಯ ಹರ್ಬಾರ್ಟ್‌ಸ್ಪೆನ್ಸರ್ ರವರು ಕೂಡಾ ಪ್ರಗತಿದಾಯಕ ಶಿಕ್ಷಣಕ್ಕೆ ತಮ್ಮ ಸಹಮತವನ್ನು ಸೂಚಿಸುತ್ತಾ

ಪರಿಣಾಮಕಾರಿ ಬೋಧನೆಗಾಗಿ ಪಂಚ ಸೋಪಾನ ( Five steps or Stages for teaching) ವನ್ನು ಪರಿಚಯಿಸಿದರು. ಇದೇ ರೀತಿ ಪ್ರಗತಿದಾಯಕ ಶಿಕ್ಷಣಕ್ಕೆ ತಮ್ಮ ಬೆಂಬಲವನ್ನು ಸೂಚಿಸುವ ಮರಿಯಾ ಮಾಂಟೆಸ್ಸೋರಿಯವರು ಮಗುವು ಪರಿಸರದೊಂದಿಗೆ ಹೊಂದಿಕೊಂಡು ಆನಂದದಾಯಕವಾಗಿ ಕಲಿಕೆಯಲ್ಲಿ ತೊಡಗಿಸಿಕೊಳ್ಳಬೇಕಾದರೆ ವೈಜ್ಞಾನಿಕ ಬೋಧನಾ ಕ್ರಮವನ್ನು ಬಳಸಬೇಕೆಂದು ತಿಳಿಸಿದ್ದಾರೆ.

**ಪ್ರಗತಿದಾಯಕ ಶಿಕ್ಷಣದ ಗುಣಲಕ್ಷಣಗಳು ಈ ಕೆಳಕಂಡಂತಿವೆ**

- ಸಮಸ್ಯಾ ಪರಿಹಾರ ಮತ್ತು ತಾರ್ಕಿಕ ಆಲೋಚನೆಗೆ ಒತ್ತು ನೀಡಲಾಗಿದೆ.
- ಸಂಯೋಜಿತ ಮತ್ತು ಸಹಕಾರ ಕಲಿಕೆಗೆ ಅವಕಾಶ ಕಲ್ಪಿಸಲಾಗಿದೆ.
- ಪ್ರಾಯೋಗಿಕ ಕಲಿಕೆಗೆ ಪ್ರೋತ್ಸಾಹ ನೀಡಲಾಗಿದೆ.
- ಜೀವನ ಪರ್ಯಂತ ಕಲಿಕೆ ಹಾಗೂ ಸಾಮಾಜಿಕ ಕೌಶಲಕ್ಕೆ ಉತ್ತೇಜನ ನೀಡಲಾಗಿದೆ.
- ಸಾಮಾಜಿಕ ಜವಾಬ್ದಾರಿ ಮತ್ತು ಪ್ರಜಾಪ್ರಭುತ್ವ ಈ ಅಂಶಗಳಿಗೆ ಆದ್ಯತೆ ನೀಡಲಾಗಿದೆ.

ಹೀಗೆ ಪ್ರಗತಿದಾಯಕ ಶಿಕ್ಷಣದಲ್ಲಿ ಬೋಧನಾ ವಿಧಾನ, ಪಠ್ಯವಸ್ತು, ಶಾಲಾ ಚಟುವಟಿಕೆಗಳು ಸಾಂಪ್ರದಾಯಿಕ ಶಿಕ್ಷಣಕ್ಕಿಂತ ಸಾಕಷ್ಟು ಭಿನ್ನವಾಗಿದೆ.

## ಬುದ್ಧಿವಂತಿಕೆ ಸಂರಚನೆಯ ವಿಮರ್ಶಾತ್ಮಕ ದೃಷ್ಟಿಕೋನ, ಮಲ್ಟಿ ಡೈಮೆನ್ಷನಲ್ ಇಂಟೆಲಿಜೆನ್ಸ್ – ಬುದ್ದಿವಂತಿಕೆಯ ಬಹು ಆಯಾಮ, ಭಾಷೆ ಮತ್ತು ಚಿಂತನೆ:

**ಬುದ್ಧಿಶಕ್ತಿ :** ಒಂದು ಮಗು ಸಮಸ್ಯೆಯನ್ನು ವೇಗವಾಗಿ ಮತ್ತು ನಿಖರವಾಗಿ ಬಿಡಿಸಿದರೆ ಅಥವಾ ಸಂಭಾಷಣೆಯಲ್ಲಿ ವಿವೇಕ ಮತ್ತು ಚತುರತೆಯನ್ನು ತೋರಿಸಿದರೆ ಆ ಮಗುವನ್ನು ಬುದ್ದಿವಂತ/ಬುದ್ಧಿವಂತೆ ಎಂದು ಕರೆಯುತ್ತೇವೆ. ಮನೋವಿಜ್ಞಾನ ಮತ್ತು ಶಿಕ್ಷಣದಲ್ಲಿ ಬುದ್ಧಿಶಕ್ತಿ ಎಂಬ ಪದ ಸಾಕಷ್ಟು ಬಳಕೆಯಲ್ಲಿದೆ.
**ಬೀನೆ ಮತ್ತು ಸೈಮನ್** ರವರ ಪ್ರಕಾರ **"**ಉತ್ತಮವಾಗಿ ನಿರ್ಣಯ ಕೈಗೊಳ್ಳುವ ಉತ್ತಮವಾಗಿ ಸನ್ನಿವೇಶವನ್ನು ಗ್ರಹಿಸುವ ಮತ್ತು ಉತ್ತಮವಾಗಿ ತರ್ಕಿಸುವ ವ್ಯಕ್ತಿಯ ಸಾಮರ್ಥ್ಯವೇ ಬುದ್ಧಿಶಕ್ತಿಯಾಗಿದೆ**"**.

**ಬುದ್ಧಿಶಕ್ತಿಯ ವಿಧಗಳು:** ಥಾರ್ನ್‌ಡೈಕ್ ರವರು ಬುದ್ಧಿಶಕ್ತಿಯನ್ನು 1. ಮೂರ್ತ, 2. ಅಮೂರ್ತ 3. ಸಾಮಾಜಿಕ ಬುದ್ಧಿಶಕ್ತಿ ಎಂದು ವಿಂಗಡಿಸಿದ್ದಾರೆ.

- **ಮೂರ್ತಬುದ್ಧಿಶಕ್ತಿ** : ಒಬ್ಬ ವ್ಯಕ್ತಿ ಜೀವನದ ನೈಜ ಸನ್ನಿವೇಶವನ್ನು ಗ್ರಹಿಸಿ ಅದಕ್ಕೆ ಸೂಕ್ತವಾಗಿ ಪ್ರತಿಕ್ರಿಯಿಸುವ ಸಾಮರ್ಥ್ಯ
- **ಅಮೂರ್ತ ಬುದ್ಧಿಶಕ್ತಿ** : ಇದು ಪದಗಳು, ಸಂಖ್ಯೆಗಳು ಮತ್ತು ವಿಚಾರಗಳಿಗೆ ಪ್ರತಿಕ್ರಿಯಿಸುವ ಸಾಮರ್ಥ್ಯ
  ಉದಾ : ಗಣಿತದ ತರ್ಕ ಸಾಮರ್ಥ್ಯ ಮತ್ತು ತಾರ್ಕಿಕ ಚಿಂತನೆ (Logical thinking) ಯಲ್ಲಿ ಕಂಡುಬರುತ್ತದೆ.
- **ಸಾಮಾಜಿಕ ಬುದ್ಧಿಶಕ್ತಿ** : ದಿನನಿತ್ಯದ ಸಾಮಾಜಿಕ ಸನ್ನಿವೇಶಗಳಲ್ಲಿ ವ್ಯಕ್ತಿಯು ಪ್ರತಿಕ್ರಿಯಿಸುವ ಸಾಮರ್ಥ್ಯವಾಗಿದೆ.

### ಬುದ್ಧಿಶಕ್ತಿಯ ಸಿದ್ಧಾಂತಗಳು

1. ಮಾನಸಿಕ ಶಿಸ್ತಿನ ಸಿದ್ಧಾಂತ
2. ದ್ವಿಕಾರಕ ಸಿದ್ಧಾಂತ–( 'G' ಕಾರಕ ಮತ್ತು S ಕಾರಕ)
3. ಬಹುಕಾರಕ ಸಿದ್ದಾಂತ
4. ಸಮೂಹಕಾರಕ ಸಿದ್ಧಾಂತ
5. ಬುದ್ಧಿಶಕ್ತಿಯ 3 ಆಯಾಮ ಸಿದ್ಧಾಂತ
6. ಬಹುಬುದ್ಧಿಶಕ್ತಿ (ಹೋವಾರ್ಡ್ ಗಾರ್ಡನರ್)

### ಬುದ್ಧಿಶಕ್ತಿಯ ಬಹು ಆಯಾಮ ಸಿದ್ಧಾಂತಗಳು

ಮನೋವಿಜ್ಞಾನಿಗಳು ಬುದ್ಧಿಶಕ್ತಿಯ ಸ್ವರೂಪವನ್ನು ಕುರಿತು ಹಲವಾರು ಸಿದ್ಧಾಂತಗಳನ್ನು ರೂಪಿಸಿದ್ದಾರೆ. ಅವುಗಳೆಂದರೆ,

**ಮಾನಸಿಕ ಶಿಸ್ತಿನ ಸಿದ್ಧಾಂತ:–**ಈ ಸಿದ್ದಾಂತದ ಪ್ರಕಾರ ಮನಸ್ಸು ಎನ್ನುವುದು ತಾರ್ಕಿಕತೆ, ಸ್ಮೃತಿ, ವಿಬೇಧೀಕರಣ ಮತ್ತು ಕಲ್ಪನಾಶಕ್ತಿಯಿಂದ ಕೂಡಿದೆ. ಈ ಎಲ್ಲಾ ಮಾನಸಿಕ ಶಕ್ತಿಗಳು ಪರಸ್ಪರ ಸ್ವತಂತ್ರವಾಗಿದೆ. ಮತ್ತು ಅವುಗಳನ್ನು ಸೂಕ್ತ ತರಬೇತಿಯ ಮೂಲಕ ಅಭಿವೃದ್ಧಿಪಡಿಸಬಹುದಾಗಿದೆ. ಆದರೆ ಪ್ರಾಯೋಗಿಕ ಮನೋವಿಜ್ಞಾನಿಗಳು ಈ ವಾದವನ್ನು ಅಲ್ಲಗಳೆದಿದ್ದಾರೆ.

**ದ್ವಿಕಾರಕ ಸಿದ್ಧಾಂತ:–**ಈ ಸಿದ್ಧಾಂತವನ್ನ ಬ್ರಿಟಿಷ್ ಮನೋವಿಜ್ಞಾನಿ ಚಾರ್ಲ್ಸ್ ಸ್ಪಿಯರ್‌ಮನ್ ಅಭಿವೃದ್ಧಿಪಡಿಸಿದರು. ಇವರ ಪ್ರಕಾರ ಬೌದ್ಧಿಕ ಸಾಮರ್ಥ್ಯಗಳು ಎರಡು ಅಂಶಗಳಿಂದ ಕೂಡಿವೆ.

1. **G ಕಾರಕ–** ಎಂದರೆ ಸಾಮಾನ್ಯ ಮಾನಸಿಕ ಸಾಮರ್ಥ್ಯ
2. **S ಕಾರಕ–** ಎಂದರೆ ನಿರ್ದಿಷ್ಟ ಸಾಮರ್ಥ್ಯಗಳು

G ಕಾರಕವು ಹುಟ್ಟಿನಿಂದ ಪಡೆದುಕೊಂಡು ಬಂದ ಸಾಮರ್ಥ್ಯ. ಇದು ಸಾಮಾನ್ಯ ಮಾನಸಿಕ ಶಕ್ತಿಯಾಗಿದ್ದು, ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುತ್ತದೆ. ವ್ಯಕ್ತಿಯಲ್ಲಿ G ಕಾರಕ ಹೆಚ್ಚಾಗಿದ್ದಷ್ಟು ಜೀವನದಲ್ಲಿ ಯಶಸ್ಸು ಹೆಚ್ಚಾಗಿರುತ್ತದೆ. S ಕಾರಕವು ಕಲಿಕೆ ಮತ್ತು ಪರಿಸರದಿಂದ ರೂಢಿಗತವಾದ ಗುಣ. ಇದು ಒಬ್ಬನೇ ವ್ಯಕ್ತಿಯಲ್ಲಿಯೂ ಸಹ ಕ್ರಿಯೆಯಿಂದ ಕ್ರಿಯೆಗೆ ಭಿನ್ನವಾಗಿರುತ್ತದೆ. ನಿರ್ದಿಷ್ಟ ಸಾಮರ್ಥ್ಯದ ಪ್ರಮಾಣದಲ್ಲಿ ವ್ಯಕ್ತಿಗಳಲ್ಲಿ ಭಿನ್ನತೆ ಕಂಡು ಬರುತ್ತದೆ.

**ಬಹುಕಾರಕ ಸಿದ್ಧಾಂತ:–**ಇದನ್ನು ಇ.ಎಲ್.ಥಾರ್ನ್‌ಡೈಕ್‌ರವರು ಪ್ರಸ್ತುತಪಡಿಸಿದರು. ಇವರ ಪ್ರಕಾರ ನಿರ್ದಿಷ್ಟ ಉದ್ದೀಪನಗಳಿಗೆ, ನಿರ್ದಿಷ್ಟ ಅನುಕ್ರಿಯೆಗಳು ಕಂಡುಬರುತ್ತವೆ. ಬುದ್ಧಿಶಕ್ತಿಯು ಅನೇಕ ಚಿಕ್ಕ ಚಿಕ್ಕ ಮೂಲಾಂಶಗಳಿಂದ ಕೂಡಿದೆ. ಯಾವುದೇ ಮಾನಸಿಕ ಕ್ರಿಯೆಯಲ್ಲಿ ಒಂದಕ್ಕಿಂತ ಹೆಚ್ಚು ಮೂಲಾಂಶಗಳು ಒಗ್ಗೂಡಿ ಕಾರ್ಯನಿರ್ವಹಿಸಬಹುದು. ಇವರ ಪ್ರಕಾರ ಸಾಮಾನ್ಯ ಬುದ್ಧಿಶಕ್ತಿ ಎಂಬುದಿಲ್ಲ. ಬುದ್ಧಿಶಕ್ತಿಯ ಮಟ್ಟ, ವ್ಯಾಪ್ತಿ, ಕ್ಷೇತ್ರ ಮತ್ತು ವೇಗ ಎಂಬ 4 ಆಯಾಮಗಳನ್ನು ಒಳಗೊಂಡಿದೆ.

**ಬುದ್ಧಿ ಶಕ್ತಿಯ ಸಮೂಹಕಾರಕ ಸಿದ್ಧಾಂತ:–** ಈ ಸಿದ್ಧಾಂತವನ್ನ ಎಲ್.ಎಲ್. ಥರ್ಸ್ಟನ್ ರವರು ಪ್ರತಿಪಾದಿಸಿದ್ದಾರೆ. ಈ ಸಿದ್ಧಾಂತದ ಪ್ರಕಾರ ಕಾರಕಗಳ ವಿಶ್ಲೇಷಣೆಯ ಆಧಾರದ ಮೇಲೆ 7 ಪ್ರಾಥಮಿಕ ಮಾನಸಿಕ ಸಾಮರ್ಥ್ಯಗಳನ್ನ ಗುರುತಿಸಿದ್ದಾರೆ.

1. ಸಂಖ್ಯಾ ಸಾಮರ್ಥ್ಯ
2. ಶಾಬ್ದಿಕ ಸಾಮರ್ಥ್ಯ
3. ಸ್ಥಳಾವಕಾಶ ಸಾಮರ್ಥ್ಯ
4. ಸ್ಮೃತಿ
5. ತಾರ್ಕಿಕತೆ
6. ಪದಗಳ ನಿರರ್ಗಳತೆ
7. ಗ್ರಹಿಸುವ ವೇಗ

ಈ ಮೇಲಿನ ಎಲ್ಲವೂ ಸಂಪೂರ್ಣ ಸ್ವತಂತ್ರವಲ್ಲ. ಆದರೆ ಇವೆಲ್ಲವೂ ಪರಸ್ಪರ ಸಹಸಂಬಂಧ ಹೊಂದಿವೆ.

**ಬುದ್ಧಿ ಶಕ್ತಿಯ 3 ಆಯಾಮಗಳ ಹಂತ :–** ಇದನ್ನು ಗಿಲ್‌ಫೋರ್ಡ್ ರವರು 1966 ರಲ್ಲಿ ಅಭಿವೃದ್ಧಿಪಡಿಸಿದ್ದಾರೆ. ಇವರ ಪ್ರಕಾರ ಮನಸ್ಸು 3 ಮುಖ್ಯ ಆಯಾಮಗಳಿಂದ ರಚಿತವಾಗಿದೆ. ಅವುಗಳೆಂದರೆ, ಕ್ರಿಯೆಗಳು, ವಸ್ತು ಮತ್ತು ಉತ್ಪನ್ನ.

**ಬಹು ಬುದ್ಧಿಶಕ್ತಿ ಸಿದ್ಧಾಂತ :–** ಹೋವರ್ ಗಾರ್ಡನರ್ (1983) ಇವರು 3 ಮುಖ್ಯ ತತ್ವಗಳನ್ನಾಧರಿಸಿ ಬಹು ಬುದ್ಧಿಶಕ್ತಿಯನ್ನು ಪ್ರತಿಪಾದಿಸಿದ್ದಾರೆ.

1. ಇವರ ಪ್ರಕಾರ ಬುದ್ಧಿ ಶಕ್ತಿ ಎಂಬುದು ಒಂದು ಸಾಮರ್ಥ್ಯದಿಂದ ಕೂಡಿರುವುದಿಲ್ಲ. ಆದರೆ ಬಹುಬುದ್ಧಿಶಕ್ತಿ ಕಂಡುಬರುತ್ತದೆ.
2. ಎಲ್ಲಾ ಬುದ್ಧಿಶಕ್ತಿಗಳು ಒಂದರಿಂದ ಇನ್ನೊಂದು ಸ್ವತಂತ್ರವಾಗಿರುತ್ತದೆ. ವ್ಯಕ್ತಿಯ ಒಂದು ಕ್ಷೇತ್ರದಲ್ಲಿನ ಬುದ್ಧಿಶಕ್ತಿ ಮತ್ತೊಂದು ಕ್ಷೇತ್ರದಲ್ಲಿ ಉತ್ತಮವಾಗಿರುತ್ತದೆ ಎಂದು ಹೇಳಲಾಗದು.
3. ವಿವಿಧ ರೀತಿಯ ಬುದ್ಧಿಶಕ್ತಿಗಳಲ್ಲಿ ಅಂತರ್ ಕ್ರಿಯೆಯನ್ನು ಕಾಣಬಹುದು. ಒಂದು ಸಮಸ್ಯೆಗೆ ಪರಿಹಾರ ವಿವಿಧ ರೀತಿಯ ಬುದ್ಧಿ ಶಕ್ತಿಗಳ ಅಂತರ್ ಕ್ರಿಯೆಯಿಂದ ದೊರೆಯಬಹುದು.

**ಗಾರ್ಡನರ್ ಪ್ರತಿಪಾದಿಸಿದ 8 ಬಹುಬುದ್ಧಿಶಕ್ತಿಗಳು ಇವುಗಳಾಗಿವೆ.**

* **ಭಾಷಾ ಬುದ್ಧಿಶಕ್ತಿ;** ಇದು ಓದುವಿಕೆ, ಬರೆಯುವಿಕೆ, ಆಲಿಸುವಿಕೆ ಮತ್ತು ಮಾತನಾಡುವಿಕೆ ಹಾಗೂ ಅರಿತುಕೊಳ್ಳುವಿಕೆ ಇತ್ಯಾದಿಗಳಿಗೆ ಸಂಬಂದಿಸಿದೆ. ಕವಿಗಳಲ್ಲಿ, ನಿರೂಪಕರುಗಳಲ್ಲಿ, ವಕೀಲರುಗಳಲ್ಲಿ ಹಾಗೂ ಭಾಷೆಯನ್ನು ಹೆಚ್ಚಾಗಿ ಬಳಸುವವರಲ್ಲಿ ಈ ಸಾರ್ಮಥ್ಯ ಹೆಚ್ಚಾಗಿ ವ್ಯಕ್ತವಾಗುತ್ತದೆ.
* **ತಾರ್ಕಿಕ ಗಣಿತದ ಬುದ್ಧಿಶಕ್ತಿ;** ಗಣಿತದ ಸಮಸ್ಯೆ ಬಿಡಿಸುವಲ್ಲಿ ಅಮೂರ್ತ ಚಿಂತನೆ ಮತ್ತು ಸಂಕೇತದ ಬಳಕೆಯ ಸಾಮರ್ಥ್ಯವನ್ನು ಒಳಗೊಳ್ಳುತ್ತದೆ.ವೈಜ್ಞಾನಿಕ ಕಾರ್ಯಗಳಲ್ಲಿ ಈ ಸಾಮರ್ಥ್ಯ ವ್ಯಕ್ತವಾಗುತ್ತದೆ.

* **ಸ್ಥಳಾವಕಾಶ ಸಂಬಂಧಿತ ಬುದ್ಧಿಶಕ್ತಿ** ; ಸ್ಥಳಾವಕಾಶ ಸಂಬಂಧಗಳನ್ನು ಕಲ್ಪಿಸಿಕೊಳ್ಳುವಲ್ಲಿ ಮಾನಸಿಕ ಚಿತ್ರಣವನ್ನು ರೂಪಿಸಿಕೊಳ್ಳುವಿಕೆ, ಅಂತರಿಕ್ಷಯಾನದಲ್ಲಿ ಕಂಡುಬರುತ್ತದೆ. ನಾವಿಕರು ಅಭಿಯಂತರರು, ಶಸ್ತ್ರಚಿಕಿತ್ಸಾ ತಜ್ಞರು , ಚಾಲಕರು, ಶಿಲ್ಪಿಗಳು, ಕಲಾವಿದರಲ್ಲಿ ಈ ರೀತಿಯ ಬುದ್ದಿ ಶಕ್ತಿ ಉತ್ತಮವಾಗಿ ಬೆಳವಣಿಗೆಯಾಗಿರುತ್ತದೆ.
* **ಸಂಗೀತದ ಬುದ್ಧಿಶಕ್ತಿ;** ಹಾಡುವಿಕೆಗೆ ಅಗತ್ಯವಾದ ರಾಗ, ತಾಳ, ಲಯ, ಶೃತಿ, ಸ್ವರ, ಸಂಗೀತದ ವಾದ್ಯಗಳನ್ನು ನುಡಿಸುವಿಕೆ,ರಾಗ ಸಂಯೋಜನೆ ಮುಂತಾದವುಗಳಲ್ಲಿ ಸಂವೇದನಾ ಶೀಲತೆಯನ್ನು ವ್ಯಕ್ತಪಡಿಸುತ್ತಾರೆ.
* **ದೈಹಿಕ-ಗತಿಸಂವೇದನಾತ್ಮಕ ಬುದ್ಧಿಶಕ್ತಿ;** ನಾಟ್ಯ ಕ್ರೀಡೆ, ಶಸ್ತಚಿಕಿತ್ಸೆ ಕರಕುಶಲತೆ ಮುಂತಾದ ಸಮನ್ವಯದಿಂದ ಕೂಡಿದ ಗತಿಶೀಲನಾ ಚಟುವಟಿಕೆಗಳಿಗೆ ಅಗತ್ಯವಾದ ಕೌಶಲ್ಯಗಳು ಮತ್ತು ನೈಪುಣ್ಯತೆಯನನ್ನು ಈ ಬುದ್ದಿಶಕ್ತಿಯು ಹೊಂದಿರುತ್ತದೆ
* **ಅಂತರ ವ್ಯಕ್ತಿ ಸಂಬಂದದ ಬುದ್ಧಿಶಕ್ತಿ;** ಇತರರ ಭಾವನೆಗಳು ಪ್ರೇರಣೆಗಳು ಹಾಗೂ ವರ್ತನೆಗಳನ್ನು ಅರ್ಥ ಮಾಡಿಕೊಳ್ಳುವುದು .ಈ ಬುದಿಶಕ್ತಿಯು ಶಿಕ್ಷಕರು, ರಾಜಕಾರಿಣಿಗಳು ,ವ್ಯಾಪಾರಿಗಳು ಮತ್ತು ಧಾರ್ಮಿಕ ನಾಯಕರುಗಳಲ್ಲಿ ಕಂಡುಬರುತ್ತದೆ.
* **ವ್ಯಕ್ತಿ ಅಂತರ್ಗತ ಬುದ್ಧಿಶಕ್ತಿ;** ಇದು ತನ್ನನ್ನು ತಾನು ಅರ್ಥ ಮಾಡಿಕೊಳ್ಳುವಿಕೆ ಮತ್ತು ಅನನ್ಯತೆಯನ್ನು ರೂಪಿಸಿಕೊಳ್ಳುವಿಕೆಗೆ ಸಂಬಂದಿಸಿದೆ.
* **ನೈಸರ್ಗಿಕ ಬುದ್ಧಿಶಕ್ತಿ:** ಪರಿಸರದಲ್ಲಿರುವ ಪ್ರಾಣಿ ಹಾಗೂ ಸಸ್ಯ ಪ್ರಭೇದವನ್ನು ಗುರುತಿಸುವ ಸಾಮರ್ಥ್ಯವನ್ನು ಒಳಗೊಳ್ಳುತ್ತದೆ. ಈ ಬುದ್ದಿಶಕ್ತಿಯು ಹೆಚ್ಚಾಗಿ ಬೇಟೆಗಾರರು, ರೈತರು ,ಪ್ರವಾಸಿಗರು ಮತ್ತು ಜೀವ ವಿಜ್ಞಾನದ ವಿದ್ಯಾರ್ಥಿಗಳಲ್ಲಿ ಕಂಡು ಬರುತ್ತದೆ.

## ಬುದ್ಧಿಶಕ್ತಿಯ ಸೂಚ್ಯಾಂಕ :

ಬುದ್ದಿಶಕ್ತಿಯನ್ನು ಅಳೆಯಲು ಬಳಸಬಹುದಾದ ಸೂಕ್ತ ವಿಧಾನವೆಂದರೆ ಬುದ್ದಿಶಕ್ತಿ ಸೂಚ್ಯಾಂಕವನ್ನು ಕಂಡುಹಿಡಿಯುವುದು. ಬುದ್ಧಿಶಕ್ತಿ ಸೂಚ್ಯಾಂಕವನ್ನು ಪರಿಚಯಿಸಿದವರು ಜರ್ಮನಿಯ ಮನೋವಿಜ್ಞಾನಿ ವಿಲಿಯಂ ಸ್ಟರ್ನ್ ರವರು. ಮಾನಸಿಕ ವಯಸ್ಸನ್ನು ದೈಹಿಕ ವಯಸ್ಸಿನಿಂದ ಭಾಗಿಸುವುದರ ಮೂಲಕ ಬುದ್ಧಿಶಕ್ತಿ ಸೂಚ್ಯಂಕವನ್ನು ಕಂಡು ಹಿಡಿಯಬಹುದು.

$$\text{ಬುದ್ಧಿಶಕ್ತಿ ಸೂಚ್ಯಂಕ} = \frac{\text{ಮಾನಸಿಕ ವಯಸ್ಸು}}{\text{ದೈಹಿಕ ವಯಸ್ಸು}} \times 100$$

$$IQ = \frac{MA}{CA} \times 100$$

**ಉದಾ : 12 ವರ್ಷ ಮಾನಸಿಕ ವಯಸ್ಸು ಹೊಂದಿರುವ ಮಗುವಿನ ದೈಹಿಕ ವಯಸ್ಸು 10 ಆಗಿದ್ದರೆ ಅವನ ಬುದ್ಧಿಶಕ್ತಿ ಸೂಚ್ಯಾಂಕ 120 ಆಗಿರುತ್ತದೆ.**

$$IQ = \frac{12}{10} \times 100 = 120$$

## ಸಂವೇಗಾತ್ಮಕ ಬುದ್ಧಿಶಕ್ತಿ (Emotional Intelligence)

ಇಂದಿನ ಯುವಜನತೆ ಮತ್ತು ಮಕ್ಕಳಲ್ಲಿ ಆಕ್ರಮಣ ಪ್ರವೃತ್ತಿ, ಖಿನ್ನತೆ, ಆತ್ಮಹತ್ಯಾ ಪ್ರಮಾಣ, ಮಾನಸಿಕ ಒತ್ತಡ ಹೆಚ್ಚಾಗಿರುವುದನ್ನು ನಾವು ಹಿಂದೆಂದಿಗಿಂತಲೂ ಹೆಚ್ಚಾಗಿ ಕಾಣುತ್ತಿದ್ದೇವೆ. ಆದ್ದರಿಂದ ಈ ಹಿನ್ನೆಲೆಯಲ್ಲಿ ನಾವು ನೋಡಿದಾಗ ನಮ್ಮ ಮಕ್ಕಳು ಜೀವನವನ್ನು ಸಮರ್ಥವಾಗಿ ನಿರ್ವಹಿಸಿಕೊಂಡು ಹೋಗಲು ಅಗತ್ಯವಾದಂತಹ ಸಾಮರ್ಥ್ಯಗಳನ್ನು ಬೆಳೆಸುವುದರ ಮೂಲಕ ಸರಿಯಾದ ಮಾರ್ಗದಲ್ಲಿ ಮುನ್ನೆಡೆಯಲು ಮಾರ್ಗದರ್ಶನದ ಅಗತ್ಯವಿದೆ. ತನ್ನ ಮತ್ತು ಇತರರ ಭಾವನೆಗಳನ್ನು ಅರ್ಥಮಾಡಿಕೊಳ್ಳುವುದರ ಮೂಲಕ ಇತರರ ಭಾವನೆಗಳಿಗೆ ಸ್ಪಂದಿಸುವ ಹಾಗೂ ರಚನಾತ್ಮಕವಾಗಿ ವರ್ತಿಸುವ ಸಾಮರ್ಥ್ಯವನ್ನು ಬೆಳೆಸಬೇಕಾಗಿದೆ. ಇದನ್ನೇ ಸಂವೇಗಾತ್ಮಕ ಬುದ್ಧಿಶಕ್ತಿ ಎನ್ನುವರು. ಸಂವೇಗಾತ್ಮಕ ಬುದ್ಧಿಶಕ್ತಿ ಪರಿಕಲ್ಪನೆಯನ್ನು ಜಾನ್ ಮೇಯರ್ ಮತ್ತು ಪೀಟರ್ ಸಾಲೋವೈರವರು 1990 ರಲ್ಲಿ ಜಾರಿಗೆ ತಂದರು. ವ್ಯಕ್ತಿ ತನ್ನ ಒಳಗಿನ ಮತ್ತು ಬಾಹ್ಯ ಪರಿಸರದ ವಿವಿಧ ರೀತಿಯ ಭಾವನಾತ್ಮಕ ಪ್ರಚೋದನೆಗಳಿಗೆ ಸೂಕ್ತವಾಗಿ ಪ್ರತಿಕ್ರಿಯಿಸುವ ಸಾಮರ್ಥ್ಯವೇ ಸಂವೇಗಾತ್ಮಕ ಬುದ್ಧಿಶಕ್ತಿ.

**ಸಂವೇಗಾತ್ಮಕ ಬುದ್ಧಿಶಕ್ತಿ 3 ಆಯಾಮಗಳನ್ನು ಒಳಗೊಂಡಿದೆ.**

1. ಸಂವೇಗಾತ್ಮಕ ಪರಿಪಕ್ವತೆ
2. ಸಂವೇಗಾತ್ಮಕ ಸಾಮರ್ಥ್ಯ
3. ಸಂವೇಗಾತ್ಮಕ ಸಂವೇದನಾಶೀಲತೆ.

## ಸಂವೇಗಾತ್ಮಕ ಬುದ್ಧಿಶಕ್ತಿಯ 5 ಮೂಲ ಸಾಮರ್ಥ್ಯಗಳು

- ಸ್ವಯಂ ಅರಿವು
- ಸ್ವಯಂ ನಿಯಂತ್ರಣ
- ಸ್ವಯಂ ಪ್ರೇರಣೆ
- ಅನುಭೂತಿ ಶಕ್ತಿ
- ಸಾಮಾಜಿಕ ಕೌಶಲಗಳು

## ಟರ್ಮನ್ ರವರ ಬುದ್ಧಿಶಕ್ತಿ ಸೂಚ್ಯಕಗಳ ವಿತರಣೆ ಮತ್ತು ವರ್ಗೀಕರಣ

| IQ | ಶೇ. ಪ್ರಮಾಣ | ವರ್ಗೀಕರಣ |
|---|---|---|
| 140 ಕ್ಕಿಂತ ಮೇಲ್ಪಟ್ಟು | 1 | ಅತಿ ಪ್ರತಿಭಾನ್ವಿತರು (ಮೇಧಾವಿ) |
| 130–139 | 2 | ಪ್ರತಿಭಾನ್ವಿತರು |
| 120–129 | 8 | ಪ್ರತಿಭಾನ್ವಿತರು |
| 110–119 | 16 | ಸರಾಸರಿಗಿಂತ ಮೇಲ್ಪಟ್ಟ ಬುದ್ಧಿವಂತರು |
| 100–109 | 23 | ಸರಾಸರಿ ಬುದ್ಧಿಶಕ್ತಿ ಉಳ್ಳವರು |
| 90–99 | 23 | ಸರಾಸರಿ ಬುದ್ಧಿಶಕ್ತಿ ಉಳ್ಳವರು |
| 80–89 | 16 | ಸರಾಸರಿಗಿಂತ ಕಡಿಮೆ ಬುದ್ಧಿ ಉಳ್ಳವರು |
| 70–79 | 8 | ಬುದ್ಧಿಮಾಂದ್ಯತೆಯ ಸೀಮಾರೇಖೆಯಲ್ಲಿರುವವರು |
| 60–69 | 2 | ಮಾನಸಿಕ ನ್ಯೂನತೆ ಉಳ್ಳವರು |
| 60 ಕ್ಕಿಂತ ಕಡಿಮೆ | 1 | ಮಾನಸಿಕ ನ್ಯೂನತೆ ಉಳ್ಳವರು |

## ಬುದ್ಧಿಶಕ್ತಿ ಪರೀಕ್ಷೆಯ ವಿಧಾನಗಳು

## ಬುದ್ಧಿಶಕ್ತಿ ಪರೀಕ್ಷೆಗಳು

- **ವೈಯಕ್ತಿಕ ಪರೀಕ್ಷೆ –** ಶಾಬ್ದಿಕ, ಅಶಾಬ್ದಿಕ
- **ಸಾಮೂಹಿಕ ಪರೀಕ್ಷೆ –** ಕಾರ್ಯಾತ್ಮಕ , ಶಾಬ್ದಿಕ, ಅಶಾಬ್ದಿಕ

## ಸೃಜನಶೀಲತೆ

ಸೃಜನಶೀಲತೆಯು ಮೌಲ್ಯಯುತವಾದ ಮಾನವ ಗುಣಗಳಲ್ಲೊಂದು. ಸೃಜನಶೀಲ ಚಟುವಟಿಕೆಗಳು ವೈಜ್ಞಾನಿಕ ಪ್ರಗತಿಯನ್ನು ನಿರ್ಧರಿಸುತ್ತದೆ. ಯಾವ ರಾಷ್ಟ್ರಗಳು ತನ್ನ ವ್ಯಕ್ತಿಗಳಲ್ಲಿ ಸೃಜನಶೀಲತೆಯನ್ನು ಗುರುತಿಸಿ ಬೆಳಸಿ ಪ್ರೋತ್ಸಾಹಿಸುತ್ತದೆಯೋ ಅಂತಹ ರಾಷ್ಟ್ರಗಳು ಪ್ರಗತಿಪಥದಲ್ಲಿ ಇರುವುದನ್ನು ನಾವು ಕಾಣಬಹುದು. ಹಾಗಾಗಿ ಪ್ರತಿಯೊಬ್ಬ ಶಿಕ್ಷಕರೂ ಮಕ್ಕಳಲ್ಲಿರುವ ಸೃಜನಶೀಲತೆಯನ್ನು ಗುರುತಿಸುವುದು ಹಾಗೂ ಅದನ್ನು ಪೋಷಿಸುವ ಕ್ರಮಗಳನ್ನು ತಿಳಿದಿರಬೇಕು.

**ಸೃಜನಶೀಲತೆಯ ಅರ್ಥ:** ಸಾಮಾನ್ಯವಾಗಿ ವಸ್ತುಗಳು ಅಥವಾ ವಿಚಾರಗಳ ನಡುವೆ ಹೊಸ ಸಂಬಂಧವನ್ನು ಕಾಣುವುದನ್ನು ಅಥವಾ ವ್ಯಕ್ತಪಡಿಸುವುದನ್ನು ಸೃಜನಶೀಲತೆ ಎನ್ನುವರು. ಪ್ರತಿಯೊಬ್ಬ ವ್ಯಕ್ತಿಯು ಒಂದಲ್ಲ ಒಂದು ರೀತಿಯಲ್ಲಿ ಸೃಜನಶೀಲನಾಗಿರುತ್ತಾನೆ. ಆದರೆ ಸೃಜನಶೀಲತೆಯ ಪ್ರಮಾಣ ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುತ್ತದೆ. ನಾವು ಎಲ್ಲಾ ಮಕ್ಕಳಲ್ಲಿಯೂ ಸೃಜನಶೀಲತೆಯನ್ನು ಬೆಳೆಸಲು ಪ್ರಯತ್ನಿಸಬೇಕು. ಸೃಜನಶೀಲತೆ ಎಂಬುದು ಕೇವಲ ಒಂದು ಕ್ಷೇತ್ರಕ್ಕೆ ಮಾತ್ರ ಸೀಮಿತವಾಗದೆ ಜ್ಞಾನ ವಿಜ್ಞಾನ, ಸಂಗೀತ, ಸಾಹಿತ್ಯ ಕಲೆ, ನೃತ್ಯ ಇವೇ ಮೊದಲಾದ ಎಲ್ಲಾ ಕ್ಷೇತ್ರಗಳಲ್ಲಿಯೂ ಕಂಡುಬರುತ್ತದೆ. ನಮ್ಮ ಶಾಲೆಗಳಲ್ಲಿ ಈ ರೀತಿಯ ಸೃಜನಶೀಲತೆಯನ್ನು ಮಕ್ಕಳಲ್ಲಿ ಅಭಿವೃದ್ಧಿಪಡಿಸುವುದರ ಮೂಲಕ ರಾಷ್ಟ್ರದ ವಿವಿಧ ಕ್ಷೇತ್ರಗಳಿಗೆ ಅಗತ್ಯವಾದ ನಾಗರೀಕರನ್ನು ರೂಪಿಸಬೇಕು.

"ಸನ್ನಿವೇಶದಲ್ಲಿರುವ ಕೊರತೆಯನ್ನು ಸುಲಭವಾಗಿ ಗ್ರಹಿಸಿ ಅದರ ಸ್ವರೂಪವನ್ನು ಸ್ಪಷ್ಟವಾಗಿ ಅರಿತು, ಅದರ ಬಗ್ಗೆ ಆಧಾರ ಕಲ್ಪನೆ ರೂಪಿಸಿ ಪರೀಕ್ಷಿಸುವ ಸಂದರ್ಭದಲ್ಲಿ ಆಧಾರ ಕಲ್ಪನೆಯನ್ನು ಯುಕ್ತ ರೀತಿಯಲ್ಲಿ ಬದಲಿಸಿ ಪರೀಕ್ಷಿಸುವ ಫಲಿತಾಂಶವನ್ನು ಯಶಸ್ವಿಯಾಗಿ ಇತರಿಗೆ ತಿಳಿಯಪಡಿಸುವ ಪ್ರಕ್ರಿಯೆಯೇ ಸೃಜನಶೀಲತೆ".

**–ಪಾಲ್ ಟಾರೆನ್ಸ್**

### ಸೃಜನಶೀಲ ವ್ಯಕ್ತಿಗಳು ಈ ಕೆಳಕಂಡ ಗುಣಲಕ್ಷಣಗಳನ್ನು ಹೊಂದಿರುತ್ತಾರೆ :

- ಸ್ವಯಂ ಪ್ರೇರಣೆ, ನಾವಿನ್ಯತೆ, ಸಮಾಯೋಜನೆಯನ್ನು ಹೊಂದಿರುವ ವಿಶಿಷ್ಟ ವ್ಯಕ್ತಿಯಾಗಿರುತ್ತಾರೆ.
- ಸಮಾಜ ಒಪ್ಪಿಕೊಂಡ ವರ್ತನೆಗಿಂತ ಮುಂದುವರೆದು ಯೋಚಿಸಬಲ್ಲವನಾಗಿರುತ್ತಾರೆ.
- ಸಮಸ್ಯೆ ಪರಿಹರಿಸುವಾಗ ಒಳನೋಟಗಳನ್ನು ಪಡೆಯುತ್ತಾರೆ.
- ನಿರ್ಣಾಯಕ ವಿಷಯದಲ್ಲಿ ಸ್ವತಂತ್ರ ತೀರ್ಮಾನ ತೆಗೆದುಕೊಳ್ಳಬಲ್ಲರು.
- ರಚನಾತ್ಮಕ ಟೀಕೆ ಮಾಡುವವನಾಗಿರುತ್ತಾರೆ.
- ವಿಭಿನ್ನ ಚಿಂತನಾ ಸಾಮರ್ಥ್ಯವನ್ನು ಹೊಂದಿರುತ್ತಾರೆ.
- ಸಾಮಾನ್ಯವಾಗಿ ಅಂತರ್ಮುಖಿ ಮತ್ತು ಒಂಟಿತನ ಪ್ರೇಮಿಯಾಗಿರುತ್ತಾರೆ.
- ತಮಗಿಷ್ಟವಾದ ಕ್ಷೇತ್ರದಲ್ಲಿ ವಿಶಿಷ್ಟವಾದ ಕೊಡುಗೆಯನ್ನು ನೀಡಬಲ್ಲರು.
- ಇವರ ಕಲ್ಪನಾ ಶಕ್ತಿ ಉತ್ತಮವಾಗಿರುತ್ತದೆ.
- ಇವರಲ್ಲಿ ಪ್ರಶ್ನಿಸುವಿಕೆ ಹೆಚ್ಚಾಗಿರುತ್ತದೆ.
- ಇವರು ತಮ್ಮ ಮನಸ್ಸಿನ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವವನಾಗಿರುತ್ತಾರೆ.

### ಸೃಜನಶೀಲತೆಯನ್ನು ಅಭಿವೃದ್ಧಿಪಡಿಸುವ ಕ್ರಮಗಳು

- ಶಿಕ್ಷಕರು ಮಕ್ಕಳಿಗೆ ಮುಕ್ತ ಮತ್ತು ಸ್ವತಂತ್ರ ವಾತಾವರಣವನ್ನು ಒದಗಿಸಿಕೊಡುವುದು.
- ಅವರ ನಾಚಿಕೆ ಸ್ವಭಾವ ತೊಲಗಿಸಿ ಅವರಲ್ಲಿ ಆತ್ಮವಿಶ್ವಾಸ ಹೆಚ್ಚಿಸಬೇಕು.
- ಅವರಲ್ಲಿ ವಿಮರ್ಶಾತ್ಮಕ ಚಿಂತನೆ, ವೈಚಾರಿಕತೆ, ವಿಭಿನ್ನ ಆಲೋಚನಾ ಸಾಮರ್ಥ್ಯ ವೃದ್ಧಿಯಾಗುವಂತೆ ಪ್ರೋತ್ಸಾಹಿಸಬೇಕು.
- ಮನಮಂಥನ ಅಥವಾ ಬುದ್ಧಿಮಂಥನ (Brain Storming) ವಿಧಾನಗಳ ಮೂಲಕ ವಿಚಾರಗಳ ನಿರರ್ಗಳತೆಯನ್ನು ಹೆಚ್ಚಿಸಬೇಕು. ಸಮಸ್ಯೆಗಳನ್ನು ನೀಡಿ ವಿಭಿನ್ನ ಪರಿಹಾರಗಳನ್ನು ಸೂಚಿಸುವಂತೆ ತಿಳಿಸುವುದು. ಅದರಲ್ಲಿ ಅತ್ಯಂತ ಸೂಕ್ತವಾದ ಪರಿಹಾರವನ್ನು ಆಯ್ಕೆ ಮಾಡಿಕೊಂಡು ಸಮಸ್ಯೆ ಪರಿಹರಿಸುವಂತೆ ಕೇಳುವುದು.
- ಸೂಕ್ತವಾಗಿ ಅಭಿಪ್ರೇರೇಪಿಸಬೇಕು. ವಿದ್ಯಾರ್ಥಿಗಳಲ್ಲಿ ಅಸಾಧಾರಣ ಸೃಜನಶೀಲತೆ ಕಂಡು ಬಂದಾಗ ಆಯಾ ಕ್ಷೇತ್ರದ ಪರಿಣಿತರಿಂದ ಸೂಕ್ತ ತರಬೇತಿ ಹಾಗೂ ಮಾರ್ಗದರ್ಶನ ನೀಡಬೇಕು.
- ವಿಜ್ಞಾನ ವಸ್ತು ಪ್ರದರ್ಶನ, ಕಲಾಪ್ರದರ್ಶನ ,ಸಾಹಿತ್ಯ ಗೋಷ್ಠಿ ಮುಂತಾದವುಗಳನ್ನು ಆಯೋಜಿಸಿ ಮಗುವಿನ ಪ್ರತಿಭಾ ವಿಕಸನಕ್ಕೆ ಅವಕಾಶ ಕಲ್ಪಿಸಿ ಕೊಡಬೇಕು.

### ಭಾಷೆ ಮತ್ತು ಆಲೋಚನೆ

ಪಿಯಾಜೆಯವರು ಜ್ಞಾನಾತ್ಮಕ ವಿಕಾಸದ ವಿಭಿನ್ನ ಹಂತಗಳಲ್ಲಿ ಭಾಷೆಯು ಯಾವ ರೀತಿಯಾಗಿ ವಿಕಾಸಗೊಳ್ಳುತ್ತದೆ ಎಂಬುದನ್ನು ಸೂಚಿಸಿರುತ್ತಾರೆ. ಇವರಷ್ಟೇ ಅಲ್ಲದೆ ಹೆರಾಲ್ಡ್ ವೆಟ್ಟರ್ ಮತ್ತು ರಿಚರ್ಡ್ ಹೊವೆಲ್ ಹಾಗೂ ಎಲಿಜಬೆತ್ ಹರ್ಲಾಕ್ ಇವರುಗಳು ಮಕ್ಕಳ ಭಾಷಾ ವಿಕಾಸದ ಬಗ್ಗೆ ಆಳವಾಗಿ ಅಧ್ಯಯನ ನಡೆಸಿದ್ದಾರೆ. ಭಾಷಾ ವಿಕಾಸವು ಮಗುವಿನ ಧ್ವನ್ಯಂಗಗಳ ಬೆಳವಣಿಗೆ ಮತ್ತು ಪಕ್ವತೆ, ಬುದ್ಧಿಶಕ್ತಿಯ ಬೆಳವಣಿಗೆ ಹಾಗೂ ಮಗುವಿನ ವಯಸ್ಸು ಇವುಗಳ ಮೇಲೆ ಅವಲಂಬಿತವಾಗಿರುತ್ತದೆ.

ಸಾಮಾನ್ಯವಾದ ಮಗುವಿನ ಭಾಷಾ ವಿಕಾಸದಲ್ಲಿ ಕಂಡುಬರುವ ಹಂತಗಳು ಈ ರೀತಿಯಾಗಿವೆ

#### 1. ಭಾಷಾ ಪೂರ್ವ ಹಂತ

1. ಒಂದರಿಂದ ಮೂರು ತಿಂಗಳು – ಅಳುವಿಕೆ, ಕೂಗುವುದು ಅಸಂಬದ್ಧ ಧ್ವನಿ
2. ನಾಲ್ಕರಿಂದ ಆರು ತಿಂಗಳು –ತೊದಲುವಿಕೆ, ಇತರರು ಮಾತನಾಡಿಸಿದಾಗ ಧ್ವನಿ ಹೊರಡಿಸುವುದು
3. ಏಳರಿಂದ 11 ತಿಂಗಳು – ಕೇಕೆ ಹಾಕುವುದು, ಧ್ವನಿ ಪುನರುತ್ಪಾದಿಸುವಿಕೆ ಇತರರ ಧ್ವನಿಯನ್ನು ಅನುಕರಿಸುವುದು

#### 2. ಏಕಪದ ಉಚ್ಚಾರಣೆಯ ಹಂತ

ಪದಗಳನ್ನು ಅನುಕರಣೆಯ ಮೂಲಕ ಕಲಿಯುವಿಕೆ

12 ತಿಂಗಳು –ಮೊದಲ ಪದ ಉಚ್ಚಾರಣೆ (ಒಂದರಿಂದ ಮೂರು ಪದಗಳ ವರೆಗೆ)

18ನೇ ತಿಂಗಳು – ಒಂದು ಪದದ ಪದಗಳು (18 ರಿಂದ 22 ಪದಗಳು ಉದಾಹರಣೆಗೆ ; ಅಮ್ಮ, ಅಪ್ಪ. ಅಜ್ಜಿ, ಹಾಲು, ನಾಯಿ ಇತ್ಯಾದಿ. ಯಾವ ಪದಗಳನ್ನು ಹೆಚ್ಚು ತೊದಲುತ್ತಾನೋ ಆ ಪದಗಳ ಉಚ್ಚಾರವನ್ನು ಬೇಗ ಕಲಿಯುತ್ತಾನೆ.

### 3. ದ್ವಿಪದ ವಾಕ್ಯಗಳ ಹಂತ

ಎರಡು ವರ್ಷಗಳು – ಎರಡು ಪದದ ವಾಕ್ಯಗಳು (ಪದಸಂಪತ್ತು 270 ರಿಂದ 300 ಪದಗಳು)

ಕಾರ್ಯಾತ್ಮಕ ಪೂರ್ಣ ವಾಕ್ಯಗಳ ಬಳಕೆ

ಅನ್ನಬೇಕು, ಹಾಲು ಕೊಡು, ಬೊಂಬೆ ಬೇಕು, ಊಟ ಬೇಡ ಮುಂತಾದವು.

ಇದಲ್ಲದೆ ವಸ್ತು, ವ್ಯಕ್ತಿ, ಪ್ರಾಣಿಗಳ ಹೆಸರುಗಳು(ನಾಮಪದ)

ಚೆನ್ನಾಗಿಲ್ಲ, ಕಡಿಮೆ, ದೊಡ್ಡದು (ಗುಣವಾಚಕ)

ಬಾ, ಹೋಗು,ತಗೋ, ಕೊಡು (ಕ್ರಿಯಾಪದಗಳು) ಇದನ್ನು ಕಲಿಯುತ್ತದೆ.

**4. ವಾಕ್ಯ ರಚನೆ ನಿಯಮ ರೂಪಿಸುವ ಹಂತ :** ಈ ಹಂತದಲ್ಲಿ ಮಗುವು ಭಾಷೆಯ ಮೇಲೆ ಪ್ರಭುತ್ವಗಳಿಸಿಕೊಳ್ಳುತ್ತಾನೆ

| ವಯಸ್ಸು | ಭಾಷಾ ವಿಕಾಸದ ಲಕ್ಷಣಗಳು | ಪದಸಂಪತ್ತು |
|---|---|---|
| ಎರಡುವರೆ ವರ್ಷಗಳು | ಮೂರು ಪದದ ಪೂರ್ಣ ವಾಕ್ಯ ಬಳಕೆ ಸಾಂಕೇತಿಕ ಭಾಷೆ | 450 ಪದಗಳು |
| ಮೂರು ವರ್ಷಗಳು | ಕ್ರಿಯಾತ್ಮಕ ಸರಳ ವಾಕ್ಯಗಳು ಸರಳ ಪದಗಳಲ್ಲಿ ವಿವರಣೆ | 900 ಪದಗಳು |
| ಮೂರುವರೆ ವರ್ಷಗಳು | ನಾಲ್ಕರಿಂದ ಐದು ಪದಗಳ ವಾಕ್ಯಗಳ ಬಳಕೆ ವ್ಯಾಕರಣಬದ್ಧ ವಾಕ್ಯಗಳ ರಚನೆ | 1200 ಪದಗಳು |
| ನಾಲ್ಕು ವರ್ಷಗಳು | ಭಾವನೆಗಳನ್ನು ಪದಗಳ ಮೂಲಕ ವ್ಯಕ್ತಪಡಿಸುವಿಕೆ ಕಲ್ಪನಾ ಮಾತುಗಳು | 1500 ಪದಗಳು |
| ಐದು ವರ್ಷಗಳು | ಉತ್ತಮ ಸಂಕೀರ್ಣ ವಾಕ್ಯ ರಚನೆ, ಕಥೆ ಹೇಳುವಿಕೆ | 1800 ಪದಗಳು |
| ಆರರಿಂದ ಎಂಟು ವರ್ಷಗಳು | ಸುಸಂಸ್ಕೃತ ಪದಗಳ ಬಳಕೆ, ಭಾಷಾ ಕೌಶಲಗಳಿಗೆ ವ್ಯಾಕರಣ ಬದ್ಧ ವಾಕ್ಯ ರಚನೆ, ಭಾಷಾ ಪ್ರಭುತ್ವ ಗಳಿಕೆ | 2000 ಪದಗಳು |

**ಹೀಗೆ ಭಾಷೆಯನ್ನು ಕಲಿಯುವವನಲ್ಲಿ ನಾಲ್ಕು ಪ್ರಮುಖ ಕಾರ್ಯಗಳನ್ನು ಕಾಣುತ್ತೇವೆ**

1. ಪದಗಳ ಉಚ್ಚಾರಣೆ
2. ಹೊಸ ಪದಗಳ ಕಲಿಕೆ
3. ಪದಗಳ ಅರ್ಥ ಜೋಡಣೆ
4. ಪದಗಳನ್ನು ಜೋಡಿಸಿ ವಾಕ್ಯಗಳ ರಚನೆ

ಈ ನಾಲ್ಕು ಅಂಶಗಳು ಬಾಲ್ಯಾವಸ್ಥೆಯಲ್ಲಿಯೇ ಸುಧಾರಣೆಯಾಗುತ್ತವೆ. ಸುಧಾರಣೆಯ ಪ್ರಮಾಣ ಮಗು ಕಲಿಯಲು ಇರುವ ಬಯಕೆ , ಅವನಿಗೆ ದೊರೆಯುವ ಅವಕಾಶ ಮತ್ತು ಮಾರ್ಗದರ್ಶನದ ಮೇಲೆ ಅವಲಂಬಿತವಾಗಿರುತ್ತದೆ. ಸುಮಾರು ಎಂಟು ವರ್ಷಗಳಾಗುವುದರ ಒಳಗಾಗಿ ಮಗು ಭಾಷೆಯ ವಿವಿಧ ಅಂಶಗಳ ಮೇಲೆ ಪ್ರಭುತ್ವ ಗಳಿಸಿಕೊಂಡು ತನ್ನ ಮನಸ್ಸಿನ ಭಾವನೆ, ಆಲೋಚನೆ, ಅಭಿಪ್ರಾಯಗಳನ್ನು ಸರಾಗವಾಗಿ ಅಭಿವ್ಯಕ್ತಿಸಲು ಸಾಮರ್ಥ್ಯಗಳಿಸಿಕೊಳ್ಳುತ್ತಾನೆ.

- ಭಾಷೆಗೂ ಮತ್ತು ಆಲೋಚನೆಗೂ ನಿಕಟವಾದ ಸಂಬಂಧವಿದೆ. ಹೇಗೆಂದರೆ ಆಲೋಚನೆಗಳು ಭಾಷೆಯ ಮೂಲಕ ಪ್ರಕಟವಾಗುತ್ತದೆ. ಹಾಗೆಯೇ ಭಾಷೆಯು ಆಲೋಚನೆಯನ್ನು ಪ್ರತಿನಿಧಿಸುತ್ತದೆ. ಇದನ್ನು ಒಬ್ಬ ವ್ಯಕ್ತಿ ಆಲೋಚನೆಯನ್ನು ಅವನು ವ್ಯಕ್ತಪಡಿಸುವ ಭಾಷೆಯಿಂದ ಕಂಡುಕೊಳ್ಳಬಹುದು.
- ಭಾಷೆ ಎಂಬುದು ಧ್ವನಿ ಸಂಕೇತಗಳ ಅರ್ಥಬದ್ಧ ವ್ಯವಸ್ಥೆಯಾಗಿದೆ. ಭಾಷೆಯು ಅದರದೇ ಆದ ನಿಯಮಗಳನ್ನು ಹೊಂದಿರುತ್ತದೆ. ಧ್ವನಿ ಸಂಕೇತಗಳ ಅರ್ಥಗ್ರಹಿಕೆಯಿಂದ ಭಾಷಾ ನಿಯಮವನ್ನು ಗ್ರಹಿಸಿಕೊಂಡ ಮಗುವು ಪರಿಣಾಮಕಾರಿಯಾಗಿ ಸಂವಹನವನ್ನು ನಡೆಸುತ್ತದೆ.

ಹಾಗಾಗಿ ಭಾಷೆಯು,

- ಸಂಕೇತಗಳು
- ನಿಯಮಗಳು
- ಸಂವಹನ ಹೊಂದುವುದು ಎಂಬ ಲಕ್ಷಣವನ್ನು ಹೊಂದಿದೆ

## ಸಾಮಾಜಿಕ ರಚನೆಯಲ್ಲಿ ಲಿಂಗತ್ವ

**ಲಿಂಗತ್ವದ ಪಾತ್ರಗಳು , ಲಿಂಗತ್ವದ ತಾರತಮ್ಯ ಮತ್ತು ಶೈಕ್ಷಣಿಕ ಅಭ್ಯಾಸಗಳು, ಕಲಿಕಾರ್ಥಿಗಳಲ್ಲಿ ವೈಯಕ್ತಿಕ ಭಿನ್ನತೆಗಳು, ಭಾಷೆಯ ವೈವಿಧ್ಯತೆ, ಜಾತಿ, ಲಿಂಗ, ಸಮುದಾಯ ಧರ್ಮ ಇತ್ಯಾದಿಗಳನ್ನು ಆಧರಿಸಿ ಭಿನ್ನತೆಗಳನ್ನು ಅರ್ಥೈಸುವುದು.**

ಲಿಂಗವು ಜೈವಿಕ ಅಂಶ. ಅದು ಮಾನವನನ್ನು ಗಂಡು ಅಥವಾ ಹೆಣ್ಣು ಎಂದು ವರ್ಗೀಕರಿಸುತ್ತದೆ. ಲಿಂಗತ್ವ ಎಂಬುದು ಸಾಮಾಜಿಕವಾಗಿ ಪುರುಷ ಹಾಗೂ ಮಹಿಳೆಯರು ಸಮಾಜದಲ್ಲಿ ತಮ್ಮ ಲಿಂಗಕ್ಕೆ ಪ್ರತಿಯಾಗಿ ವಹಿಸುವ ಪಾತ್ರಗಳು ಮತ್ತು ಅದರೊಳಗೆ ಅವರು ಆಕ್ರಮಿಸುವ ಸ್ಥಾನಮಾನಗಳಲ್ಲಿ ಪ್ರತಿಪಲಿಸುತ್ತದೆ. ಲಿಂಗ ಪಾತ್ರಗಳು ಕ್ರಿಯಾತ್ಮಕವಾಗಿರುತ್ತವೆ. ಅವು ಸಂಸ್ಕೃತಿ ಮತ್ತು ಕಾಲಕ್ಕೆ ತಕ್ಕಂತೆ ಬದಲಾಗುತ್ತವೆ.

ಮಗು ಸಮಾಜದಲ್ಲಿ ಹೇಗಿರಬೇಕು?, ಹೇಗೆ ವರ್ತಿಸಬೇಕು? ಎಂಬುದನ್ನು ಕುಟುಂಬ, ಸಮುದಾಯ ಮತ್ತು ಶಾಲೆ ಕಲಿಸಿಕೊಡುತ್ತದೆ. ಇದನ್ನು ನಾವು ಮಗುವಿನ ಸಾಮಾಜೀಕರಣ ಎನ್ನುತ್ತೇವೆ. ತಮ್ಮ ಲಿಂಗತ್ವ ಪಾತ್ರಗಳಿಗೆ ವ್ಯತಿರಿಕ್ತವಾಗಿ ವರ್ತಿಸಿದಾಗ ಅವರನ್ನು ಶಿಕ್ಷಿಸಿ ಮರಳಿ ವ್ಯವಸ್ಥೆಗೆ ಒಗ್ಗಿಸುವ ಹಲವಾರು ನಿಷೇಧ ನಿರ್ಬಂಧಗಳು ಎಲ್ಲಾ ಸಮಾಜಗಳಲ್ಲೂ ಕಾಣಬಹುದು.

ಸಮಾಜದಲ್ಲಿ ಲಿಂಗ ಸಮಾನತೆಯನ್ನು ತರಲು ಬಯಸುವುದಾದರೆ ಮೊದಲು ಗಂಡು ಮತ್ತು ಹೆಣ್ಣಿನ ನಡುವಿನ ಲಿಂಗ ಪಕ್ಷಪಾತ ಮತ್ತು ತಾರತಮ್ಯವನ್ನು ಕೊನೆಗೊಳಿಸಿ ಮಹಿಳೆಯರ ಸಬಲೀಕರಣದತ್ತ ಗಮನ ಹರಿಸ ಬೇಕಾಗಿದೆ.

## ಲಿಂಗತ್ವದ ಪಾತ್ರಗಳು

ಲಿಂಗತ್ವದ ಪಾತ್ರಗಳು ಎಂದರೆ ಸಾಮಾಜಿಕವಾಗಿ ಅಂಗೀಕರಿಸಲ್ಪಟ್ಟ ನಡವಳಿಕೆಗಳು ಮತ್ತು ವರ್ತನೆಗಳ ಒಂದು ಗುಂಪಾಗಿದ್ದು ಪುರುಷ ಮತ್ತು ಮಹಿಳೆಯರು, ಹೆಣ್ಣು ಮತ್ತು ಗಂಡು ಸಮಾಜದಲ್ಲಿ ಹೇಗೆ ವರ್ತಿಸಬೇಕು, ಮಾತನಾಡಬೇಕು ಮತ್ತು ಅವರ ಉಡುಗೆ ತೊಡುಗೆಗಳನ್ನು ಸೂಚಿಸುತ್ತದೆ. ಇವು ಸಮಾಜದ ನಿರೀಕ್ಷೆಗಳಾಗಿವೆ. ಲಿಂಗ ಪಾತ್ರಗಳು ಸಾಮಾನ್ಯವಾಗಿ ಪುರುಷತ್ವ ಮತ್ತು ಸ್ತ್ರೀತ್ವದ ಕಲ್ಪನೆಗಳ ಮೇಲೆ ಕೇಂದ್ರೀಕೃತವಾಗಿರುತ್ತದೆ.

ಲಿಂಗ ಪಾತ್ರಗಳ ಅನುಸರಣೆಯು ಮಗುವಿನ ಮಾನಸಿಕ ಹಾಗೂ ಸಾಮಾಜಿಕ ಬೆಳವಣಿಗೆ, ವಿಕಸನ ಮತ್ತು ಶಿಕ್ಷಣ ಮತ್ತು ಕಾರ್ಯಕ್ಷಮತೆಯ ಮೇಲೆ ಪ್ರಭಾವ ಬೀರುತ್ತದೆ. ಸಾಂಪ್ರದಾಯಿಕ ಲಿಂಗ ಪಾತ್ರಗಳ ಪ್ರಕಾರ ಮಹಿಳೆಯರೆಂದರೆ ಗೃಹಿಣಿಯರು, ಮಕ್ಕಳನ್ನು ಆರೈಕೆ ಮಾಡುವವರು, ಪೋಷಿಸುವವರು ಮತ್ತು ಸಹಾಯಕರು. ಪುರುಷರೆಂದರೆ ಮನೆಯ ಯಜಮಾನರು, ಹೊರಗೆ ದುಡಿದು ಹೆಂಡತಿ ಮಕ್ಕಳನ್ನು ಸಾಕುವವರು, ಬಲಿಷ್ಠರು ಧೈರ್ಯವಂತರು ಎಂದು ಬಿಂಬಿಸಲಾಗುತ್ತದೆ.

ಪುರುಷರ ಚಟುವಟಿಕೆಗಳು ಬೇರೆ ಮತ್ತು ಮಹಿಳೆಯರ ಚಟುವಟಿಕೆಗಳು ಬೇರೆ ಎಂದು ಸ್ಪಷ್ಟವಾಗಿ ಸೂಚಿಸುವ ಚಟುವಟಿಕೆಗಳಿಗೆ ಒಡ್ಡಿಕೊಳ್ಳುತ್ತಾ ಹೋದಂತೆ ಗಂಡಸುತನದ, ಹೆಣ್ತನದ ಭಾವನೆಗಳು ಹುಡುಗ ಹುಡುಗಿಯರ ಮನದಲ್ಲಿ ಅಚ್ಚು ಒತ್ತಿ ನಿಲ್ಲುತ್ತವೆ. ಈ ಮೂಲಕ ಸಾಮಾಜಿಕ ಲಿಂಗೀಕರಣ ಉಂಟಾಗುತ್ತದೆ.

## ಲಿಂಗ ತಾರತಮ್ಯ ಮತ್ತು ಶೈಕ್ಷಣಿಕ ಅಭ್ಯಾಸಗಳು

ಲಿಂಗ ತಾರತಮ್ಯ ಅಥವಾ ಪಕ್ಷಪಾತವು ಯಾವುದಾದರೂ ಒಂದು ಲಿಂಗದ ಕಡೆಗೆ ಆದ್ಯತೆ ತೋರಿಸುವ ಪ್ರವೃತ್ತಿಯಾಗಿದೆ ಅಥವಾ ನಿರ್ದಿಷ್ಟ ಲಿಂಗದ ವಿರುದ್ಧ ಪೂರ್ವಗ್ರಹವನ್ನು ಹೊಂದುವ ಪ್ರವೃತ್ತಿಯಾಗಿದೆ. ಇದು ಒಂದು ರೀತಿಯ ಪ್ರಜ್ಞಾಹೀನ ಪಕ್ಷಪಾತ ಹಾಗೂ ವ್ಯಕ್ತಿಯ ವೈಯಕ್ತಿಕ ಅಥವಾ ಕಲಿತ ಅನುಭವಗಳ ಆಧಾರದ ಮೇಲೆ ಲಿಂಗ ಪಾತ್ರಗಳ ಬಗ್ಗೆ ಪೂರ್ವಗ್ರಹ ಪೀಡನೆಯಾಗಿದೆ.

ಸಮಾನತೆಯು ನಮ್ಮ ಸಂವಿಧಾನದ ಪ್ರಮುಖ ತತ್ವವಾಗಿದೆ. ಇದರ ಪ್ರಕಾರ ವ್ಯಕ್ತಿಯ ಲಿಂಗವು ತಾರತಮ್ಯ ಅಥವಾ ಪಕ್ಷಪಾತಕ್ಕೆ ಕಾರಣವಾಗಬಾರದು. ನಮ್ಮ ದೇಶ ವಿಜ್ಞಾನ ಹಾಗೂ ತಂತ್ರಜ್ಞಾನದಲ್ಲಿ ವೇಗವಾಗಿ ಮುಂದುವರೆಯುತ್ತಿದೆ ಆದರೂ ಸಾಮಾಜಿಕವಾಗಿ ಅದು ಇನ್ನೂ ಪುರುಷ ಪ್ರಧಾನವಾಗಿಯೇ ಉಳಿದಿದೆ. ಮಹಿಳೆಯರಿಗೆ, ಪುರುಷರಿಗೆ ಸಮಾನವಾಗಿ ಎಲ್ಲಾ ಕ್ಷೇತ್ರಗಳಲ್ಲೂ ಸಮಾನವಾದ ಹಕ್ಕುಗಳನ್ನು ಸಂವಿಧಾನ ಕೊಟ್ಟಿದೆಯಾದರೂ ಸಮಾಜದಲ್ಲಿನ ರೂಢಿ ಸಂಪ್ರದಾಯಗಳು, ಮಹಿಳೆ ದೈಹಿಕವಾಗಿ ಹಾಗೂ ಭಾವನಾತ್ಮಕವಾಗಿ ಪುರುಷರಿಗಿಂತ ಕೆಳಮಟ್ಟದ ದಕ್ಷತೆಯನ್ನು ಹೊಂದಿರುತ್ತಾಳೆ ಎಂಬ ಪೂರ್ವ ಗ್ರಹ ಆಲೋಚನೆಯಿಂದ ಬೆರಳಣಿಕೆಯಷ್ಟು ಮಹಿಳೆಯರು ಮಾತ್ರ ಉನ್ನತ ಮಟ್ಟದ ಉದ್ಯೋಗಗಳಲ್ಲಿ ಛಾಪನ್ನು ಮೂಡಿಸಿದ್ದಾರೆ.

ಲಿಂಗ ಪಕ್ಷಪಾತ ಮತ್ತು ತಾರತಮ್ಯವನ್ನು ಕೊನೆಗೊಳಿಸುವುದು ಮಹಿಳೆಯರ ಸಬಲೀಕರಣಕ್ಕೆ ಮತ್ತು ಲಿಂಗ ಸಮಾನತೆಯ ಸಾಧನೆಗೆ ನಿರ್ಣಾಯಕವಾಗಿದೆ. ಅನಾದಿ ಕಾಲದಿಂದಲೂ ಮಹಿಳೆಯರು ಪುರುಷರಿಗೆ ಎಲ್ಲಾ ಕಾರ್ಯ ಚಟುವಟಿಕೆಗಳಲ್ಲಿ ಬೆನ್ನೆಲುಬಾಗಿ ನಿಂತು ಅವರ ಮತ್ತು ಅವರ ಕುಟುಂಬದ ಶ್ರೇಯೋಭಿವೃದ್ಧಿಗೆ ಶ್ರಮಿಸುತ್ತ ಬಂದಿರುವುದನ್ನು ಕಾಣಬಹುದು. ಆದರೆ ಅಂದಿನ ಸಮಾಜದ ಸಂಪ್ರದಾಯಗಳು, ಕಟ್ಟುಪಾಡುಗಳಿಂದ ಸ್ತ್ರೀಯು ಕೆಲವೇ ಕೆಲವು ಔದ್ಯೋಗಿಕ ಕ್ಷೇತ್ರಗಳಿಗೆ ಮಾತ್ರ ಸೀಮಿತಳಾಗಿದ್ದಳು. ಆದರೆ ಇಂದು ಮಹಿಳೆ ಎಲ್ಲಾ ಕ್ಷೇತ್ರಗಳಲ್ಲೂ ತನ್ನ ಪ್ರಾಬಲ್ಯ ಸಾಧಿಸಿರುವುದನ್ನು ಕಾಣಬಹುದು. ಅದು ಕೃಷಿ, ಕೈಗಾರಿಕೆ, ರಾಜಕೀಯ,ಶಿಕ್ಷಣ, ವೈದ್ಯಕೀಯ, ಕಾನೂನು, ರಕ್ಷಣಾ ಕ್ಷೇತ್ರ ಹೀಗೆ ಎಲ್ಲಾ ಕ್ಷೇತ್ರಗಳಲ್ಲಿಯೂ ಗಣನೀಯವಾದ ಸ್ಥಾನವನ್ನು ಪಡೆದಿದ್ದಾಳೆ ಇದಕ್ಕೆ ಕಾರಣವೆಂದರೆ, ಅದು ಲಿಂಗ ತಾರತಮ್ಯವನ್ನು ತೊಡೆದು ಹಾಕುವ ಸರ್ಕಾರದ ಕಾಯ್ದೆಗಳು ಹಾಗೂ ಜಾಗೃತಿ ಕಾರ್ಯಕ್ರಮಗಳು. ಆದರೂ ಕೆಲವೊಂದು ಕ್ಷೇತ್ರಗಳಲ್ಲಿ ಮಹಿಳೆಯರು ಸಕ್ರಿಯವಾಗಿ ಪಾಲ್ಗೊಂಡರೂ ಅವರನ್ನು ಗುರುತಿಸುವ ಪ್ರಯತ್ನಗಳು ನಡೆಯುತ್ತಿಲ್ಲ. ಇದಕ್ಕೆ ಕಾರಣವಾಗುವ ಅಂಶಗಳೆಂದರೆ,

- ಪುರುಷ ಪ್ರಧಾನವಾದ ಸಮಾಜ
- ಮಹಿಳೆಯರು ಕಡಿಮೆ ದೈಹಿಕ ಸಾಮರ್ಥ್ಯವನ್ನು ಹೊಂದಿದ್ದಾರೆ ಎಂಬ ಭಾವನೆ

- ಸ್ತ್ರೀಯರಿಗೆ ಉದ್ಯೋಗ ಕ್ಷೇತ್ರದಲ್ಲಿನ ತಿಳುವಳಿಕೆ ಕಡಿಮೆ ಎಂಬ ಭಾವನೆ
- ಸ್ತ್ರೀಯರಲ್ಲಿ ಮುಂದಾಳತ್ವ ಅಥವಾ ನಾಯಕತ್ವ ಇಲ್ಲವೆಂಬ ಪರಿಕಲ್ಪನೆ
- ಕಾರ್ಯಕ್ಷೇತ್ರಗಳಲ್ಲಿ ಅವಕಾಶಗಳ ಕೊರತೆ
- ಮತ್ತೊಂದು ಲಿಂಗದ ಉತ್ತೇಜನ ಇಲ್ಲದಿರುವುದು
- ಕುಟುಂಬದ ಸದಸ್ಯರಿಂದ ಬೆಂಬಲ ಸಿಗದಿರುವುದು
- ಮಹಿಳೆಯರಲ್ಲಿಯೇ ಇರುವಂತಹ ಕೀಳರಿಮೆ ಮತ್ತು ಹಿಂಜರಿಕೆಯ ಮನೋಭಾವನೆ
- ಪುರುಷರು ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಬಲಿಷ್ಠರು ಎಂಬ ಭಾವನೆ
- ಹೆಣ್ಣು ಅಬಲೆ, ಸ್ವಾತಂತ್ರ್ಯಕ್ಕೆ ಅರ್ಹಳಲ್ಲ ಅವಳು ಯಾವಾಗಲೂ ಪುರುಷರ ಅಧೀನದಲ್ಲಿರುವುದು ಸೂಕ್ತ ಎಂಬ ಸಮಾಜದ ನಿಲುವು
- ಔದ್ಯೋಗಿಕವಾಗಿ ಯಾವುದೇ ಕೊಡುಗೆಗಳನ್ನು ಸ್ತ್ರೀಯರು ಸಮಾಜಕ್ಕೆ ನೀಡುವ ಸಾಮರ್ಥ್ಯ ಇಲ್ಲದಿರುವವರು ಎಂಬ ಮನೋಧೋರಣೆ

## ಸಮಾಜದಲ್ಲಿ ಲಿಂಗ ತಾರತಮ್ಯ ಹೋಗಲಾಡಿಸುವಲ್ಲಿ ಶಿಕ್ಷಣದ ಪಾತ್ರ ಹಾಗೂ ಶೈಕ್ಷಣಿಕ ಅಭ್ಯಾಸಗಳು

ಸಮಾಜದ ಆರೋಗ್ಯವನ್ನು ಕಾಪಾಡುವಲ್ಲಿ ಶಿಕ್ಷಣವು ಬಹು ಮುಖ್ಯ ಪಾತ್ರವನ್ನು ವಹಿಸುತ್ತದೆ. ಶಾಲೆಯಲ್ಲಿ ಕಲಿಯುವ ಕಲಿಕಾರ್ಥಿಗಳಲ್ಲಿ ಲಿಂಗ ತಾರತಮ್ಯ ಅಥವಾ ಅಸಮಾನತೆಯನ್ನು ಹೋಗಲಾಡಿಸಿ ಸಮಾನತೆಯನ್ನು ತರುವಲ್ಲಿ ಯಶಸ್ವಿಯಾಗಬೇಕಾದರೆ ಈ ಕೆಳಕಂಡ ಶೈಕ್ಷಣಿಕ ಅಭ್ಯಾಸಗಳನ್ನು ಪ್ರತಿ ಶಾಲೆಯು ನಿರ್ವಹಿಸಬೇಕಾಗುತ್ತದೆ. ಅವುಗಳೆಂದರೆ,

- ಪಠ್ಯಕ್ರಮ
- ಬೋಧನಾ ವಿಧಾನ
- ಶಿಕ್ಷಕರ ಮನೋಭಾವ
- ತರಗತಿಯ ವಾತಾವರಣ
- ಸಾಮೂಹಿಕ ಅಥವಾ ಗುಂಪು ಚಟುವಟಿಕೆಗಳಿಗೆ ಆದ್ಯತೆ

**ಪಠ್ಯಕ್ರಮ:** ಶಾಲೆಯ ಪಠ್ಯಕ್ರಮ ಲಿಂಗ ಸಮಾನತೆಗೆ ಆದ್ಯತೆ ನೀಡಬೇಕು.

**ಬೋಧನಾ ವಿಧಾನ:** ಗಂಡು ಮಕ್ಕಳಿಗೆ ಆದ್ಯತೆ ನೀಡುವ ಚಟುವಟಿಕೆಗಳು ಬಾಲಕರನ್ನೆ ಅಥವಾ ಬಾಲಕಿಯರನ್ನೆ ಪ್ರಧಾನವಾಗಿಸುವ ಬೋಧನಾ ವಿಧಾನಗಳನ್ನು ಬಳಕೆ ಮಾಡಬಾರದು. ಎಲ್ಲಾ ವಿದ್ಯಾರ್ಥಿಗಳನ್ನು ಸಮಾನವಾಗಿ ಶಾಲಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು. ಒಂದು ಲಿಂಗಕ್ಕೆ ಆದ್ಯತೆ ನೀಡುವ ಕಲಿಕಾ ಚಟುವಟಿಕೆಗಳನ್ನು ನಿಯಂತ್ರಿಸಬೇಕು.

**ಶಿಕ್ಷಕರ ಮನೋಭಾವ:** ಶಿಕ್ಷಕರು ತರಗತಿಯಲ್ಲಿ ಲಿಂಗ ಸಮಾನತೆಯನ್ನು ಅನುಸರಿಸಬೇಕು. ಎಲ್ಲಾ ಮಕ್ಕಳ ಶೈಕ್ಷಣಿಕ ಪ್ರಗತಿಯ ಕಡೆಗೆ ಗಮನಹರಿಸಬೇಕೇ ಹೊರತು ಲಿಂಗ ತಾರತಮ್ಯ ಮನೋಭಾವನೆಯನ್ನು ಹೊಂದಿರಬಾರದು. ತರಗತಿಯಲ್ಲಿ ಸಮಾನ ಕಲಿಕಾ ಅವಕಾಶಗಳನ್ನು ಕೊಟ್ಟಾಗ ಎಲ್ಲಾ ಮಕ್ಕಳು ಕಲಿಯಬಲ್ಲರು ಎಂಬ ಧನಾತ್ಮಕ ಮನೋಭಾವನೆಯಿಂದ ಕೂಡಿರಬೇಕು

**ತರಗತಿಯ ವಾತಾವರಣ:** ಪ್ರತಿ ಶಾಲೆಯಲ್ಲೂ ತರಗತಿಯ ವಾತಾವರಣ ಕಲಿಕೆಗೆ ಪೂರಕವಾಗಿರಬೇಕು. ಆಸನದ ವ್ಯವಸ್ಥೆ, ಭೌತಿಕ ಸೌಲಭ್ಯಗಳು, ಕಲಿಕಾ ಚಟುವಟಿಕೆಗಳು ಲಿಂಗ ಸಮಾನತೆಯನ್ನು ಎತ್ತಿ ಹಿಡಿಯುವಂತಿರತಕ್ಕದ್ದು. ಶಿಕ್ಷಕರು ಪಾಠ ಮಾಡುವಾಗ ಯಾವುದೇ ಲಿಂಗಕ್ಕೆ ಅವಮಾನ ಅಥವಾ ಕೀಳರಿಮೆ ಬರುವಂತಹ ಸನ್ನಿವೇಶವನ್ನು ಸೃಷ್ಟಿ ಮಾಡಬಾರದು.

**ಗುಂಪು ಚಟುವಟಿಕೆಗಳಿಗೆ ಆದ್ಯತೆ:** ಹೆಣ್ಣು ಮತ್ತು ಗಂಡು ಮಕ್ಕಳ ನಡುವಿನ ಲಿಂಗ ತಾರತಮ್ಯವನ್ನು ತೊಡೆದು ಹಾಕುವ ನಿಟ್ಟಿನಲ್ಲಿ ಶಿಕ್ಷಕರು ತರಗತಿಗಳಲ್ಲಿ ಗುಂಪು ಅಥವಾ ಸಾಮೂಹಿಕ ಚಟುವಟಿಕೆಗಳಿಗೆ ಆದ್ಯತೆ ನೀಡತಕ್ಕದ್ದು. ಸಾಮೂಹಿಕ ಕ್ರೀಡೆಗಳು, ಸ್ಪರ್ಧೆಗಳಲ್ಲಿ ಲಿಂಗ ಅಸಮಾನತೆಯನ್ನು ತೋರದೆ ಎಲ್ಲರಿಗೂ ಅವಕಾಶವನ್ನು ಕಲ್ಪಿಸಿಕೊಟ್ಟಾಗ ಮಕ್ಕಳು ಬೆರೆತು ಬಾಳುವ, ಅನ್ಯ ಲಿಂಗವನ್ನು ಗೌರವಿಸುವ ಮನೋಭಾವನೆಯನ್ನು ಬೆಳೆಸಲು ಸಹಕಾರಿಯಾಗುತ್ತದೆ.

**ಮಾರ್ಗದರ್ಶನ:** ಲಿಂಗಾಧರಿತ ಭಿನ್ನತೆಗಳು (ಹೆಣ್ಣು/ ಗಂಡು) ಜೈವಿಕ ಅಂಶವಾಗಿವೆ. ಆದರೆ ಕಾರ್ಯ ಕ್ಷಮತೆಯಲ್ಲಿ ಅಥವಾ ಕಲಿಯುವಿಕೆಯಲ್ಲಿ ಲಿಂಗದ ಆಧಾರದಲ್ಲಿ ಯಾವುದೇ ಭಿನ್ನತೆಗಳನ್ನು ಸೃಷ್ಟಿ ಮಾಡುವುದು ತಪ್ಪು. ವ್ಯಕ್ತಿಗಳು ಯಾವುದೇ ಲಿಂಗಕ್ಕೆ ಸೇರಿರಲಿ ಅವರ ಸಾಮರ್ಥ್ಯ ಮತ್ತು ಆಸಕ್ತಿಯನ್ನು ಗಮನದಲ್ಲಿಟ್ಟು ಸಮಾನ ಅವಕಾಶಗಳನ್ನು ಕಲ್ಪಿಸಿ ಕೊಡುವ ಮಾರ್ಗದರ್ಶನವನ್ನು ತರಗತಿಗಳಲ್ಲಿ ಶಿಕ್ಷಕರು ಕೊಡುವುದು ಸೂಕ್ತ.

**ಕಲಿಕಾರ್ಥಿಗಳಲ್ಲಿ ವೈಯಕ್ತಿಕ ವಿಭಿನ್ನತೆಗಳು**: ವ್ಯಕ್ತಿ ಭಿನ್ನತೆ ಎಂದರೆ ಒಬ್ಬ ವ್ಯಕಿಯನ್ನು ಮತ್ತೊಬ್ಬ ವ್ಯಕ್ತಿಯೊಂದಿಗೆ ಹೋಲಿಸಿದಾಗ ದೈಹಿಕವಾಗಿ, ಮಾನಸಿಕವಾಗಿ, ಭಾವನಾತ್ಮಕವಾಗಿ ಮತ್ತು ಸಾಮಾಜಿಕವಾಗಿ ಕಂಡುಬರುವ ವ್ಯತ್ಯಾಸ. ಜಗತ್ತಿನಲ್ಲಿ ಯಾವುದೇ ಇಬ್ಬರು ವ್ಯಕ್ತಿಗಳು ಒಂದೇ ರೀತಿ ಇರಲು ಸಾಧ್ಯವಿಲ್ಲ. ವ್ಯಕ್ತಿಗಳ ನಡುವೆ ಅವರ ಆಸಕ್ತಿ, ಅಭಿರುಚಿ, ವರ್ತನೆ, ಆಲೋಚನೆ, ಹೊಂದಾಣಿಕೆ, ವ್ಯಕ್ತಿತ್ವ, ಸ್ಮೃತಿ ಮುಂತಾದ ಕ್ಷೇತ್ರಗಳಲ್ಲಿ ವ್ಯತ್ಯಾಸಗಳನ್ನು ಕಾಣುತ್ತೇವೆ.

ಶಾಲೆಗಳಲ್ಲಿ ನಾವು ಕಲಿಕಾರ್ಥಿಗಳಲ್ಲಿ ವ್ಯಕ್ತಿ ಭಿನ್ನತೆಯನ್ನು ಕಾಣಬಹುದು. ಕೆಲವು ಮಕ್ಕಳು ಪ್ರತಿಭಾವಂತರು, ಕೆಲವರು ಕಲಿಕೆಯಲ್ಲಿ ಹಿಂದುಳಿದವರು, ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳಲ್ಲಿ ಮುಂದೆ ಇರುವ ಅಥವಾ ಹಿಂದಿರುವ ಮಕ್ಕಳು, ಬುದ್ಧಿಮಟ್ಟ, ತಾರ್ಕಿಕತೆ, ಕಲಿಕಾ ಸಾಮರ್ಥ್ಯಗಳು, ಸೃಜನಶೀಲತೆಗಳಂತಹ ವಿಭಿನ್ನ ಗುಣಗಳನ್ನು ತೋರಿಸುವ ಮಕ್ಕಳು, ಮಾನಸಿಕ ಮಾತ್ರವಲ್ಲದೆ ದೈಹಿಕ ವ್ಯತ್ಯಾಸ, ಎತ್ತರ, ಗಾತ್ರ, ಬಣ್ಣ ಮೊದಲಾದವುಗಳು ಹಾಗೆಯೇ ಭಾವನಾತ್ಮಕ ವ್ಯತ್ಯಾಸಗಳನ್ನು ಕೂಡ ನೋಡಬಹುದು ಇವುಗಳನ್ನು ವ್ಯಕ್ತಿ ಭಿನ್ನತೆ ಎಂದು ಕರೆಯುತ್ತೇವೆ.

ಒಬ್ಬ ವ್ಯಕ್ತಿಯನ್ನು ಇನ್ನೊಬ್ಬ ವ್ಯಕ್ತಿಯಿಂದ ಪ್ರತ್ಯೇಕಿಸುವಂತಹ ಲಕ್ಷಣಗಳು ಮತ್ತು ತನ್ನ ಮೂಲಕ ಪ್ರತಿಯೊಬ್ಬ ವ್ಯಕ್ತಿಯನ್ನು ಅದ್ವಿತೀಯ ವ್ಯಕ್ತಿಯನ್ನಾಗಿ ಮಾಡುವಂತಹ ಲಕ್ಷಣಗಳನ್ನು ವೈಯಕ್ತಿಕ ಭಿನ್ನತೆಗಳು ಎಂದು ಕರೆಯಬಹುದು.

**ವ್ಯಕ್ತಿ ಭಿನ್ನತೆಯ ಕಾರಣಗಳು**

**ಅನುವಂಶೀಯ ಕಾರಣಗಳು:**ಅನುವಂಶಿಯತೆಯು ಒಂದು ಜೈವಿಕ ಪ್ರಕ್ರಿಯೆಯಾಗಿದ್ದು ಮಾನವನ ವ್ಯಕ್ತಿತ್ವದ ಬೆಳವಣಿಗೆಯಲ್ಲಿ ಗಣನೀಯವಾದ ಪಾತ್ರವಹಿಸುತ್ತದೆ. ಮಗುವು ಹುಟ್ಟಿನಿಂದಲೇ ಕೆಲವು ಜೈವಿಕ ಹಾಗೂ ಮಾನಸಿಕ ಗುಣಲಕ್ಷಣಗಳನ್ನು ತಮ್ಮ ಪೂರ್ವಜರಿಂದ, ತಂದೆ ತಾಯಿಗಳಿಂದ ಪಡೆದುಕೊಂಡು ಬರುವುದನ್ನು ಅನುವಂಶಿಯತೆ ಎನ್ನುವರು.

**ಪರಿಸರದ ಕಾರಣಗಳು:** ವ್ಯಕ್ತಿಯ ಹುಟ್ಟಿನಿಂದ ಮರಣದವರೆಗೆ ಅವನ ಮೇಲೆ ಪ್ರಭಾವ ಬೀರುವ ಎಲ್ಲಾ ರೀತಿಯ ಬಾಹ್ಯ ಅಂಶಗಳು ಪರಿಸರದ ವ್ಯಾಪ್ತಿಯಲ್ಲಿ ಬರುತ್ತದೆ. ಪರಿಸರವೂ ವ್ಯಕ್ತಿಯ ಶಾರೀರಿಕ, ಮಾನಸಿಕ ಸಂವೇಗಾತ್ಮಕ, ಸಾಮಾಜಿಕ ಹಾಗೂ ನೈತಿಕ ಗುಣ ಸ್ವಭಾವಗಳ ಮೇಲೆ ತನ್ನದೇ ಆದ ಪ್ರಭಾವವನ್ನು ಬೀರುತ್ತದೆ. ಮಗುವಿನ ಮನೆಯ ವಾತಾವರಣ ತಂದೆ ತಾಯಿಗಳ ಶಿಕ್ಷಣ ಮಟ್ಟ, ಆರ್ಥಿಕ ಪರಿಸ್ಥಿತಿ, ಶಾಲೆ ಶಿಕ್ಷಕರು, ಸ್ನೇಹಿತರು, ಸಮಾಜ, ಸಮುದಾಯ, ಸಮೂಹ ಮಾಧ್ಯಮಗಳು ಮಗುವಿನ ವ್ಯಕ್ತಿತ್ವವನ್ನು ಪ್ರಭಾವಿಸುತ್ತವೆ. ಹೀಗೆ ಪರಿಸರ ವೈಯಕ್ತಿಕ ವಿಭಿನ್ನತೆಗೆ ಕಾರಣವಾಗುತ್ತದೆ.

**ಲೈಂಗಿಕ ಭಿನ್ನತೆಯ ಕಾರಣಗಳು:** ಲಿಂಗದ ಆಧಾರದಲ್ಲಿ ಸ್ತ್ರೀಯರು ಮತ್ತು ಪುರುಷರಲ್ಲಿ ಕಂಡುಬರುವ ವ್ಯತ್ಯಾಸಗಳನ್ನು ಲೈಂಗಿಕ ಭಿನ್ನತೆ ಎನ್ನುವರು. ದೇಹದೊಳಗಿನ ಜೀವ ರಾಸಾಯನಿಕ ಕ್ರಿಯೆ ಹಾಗೂ ವಿವಿಧ ಹಾರ್ಮೋನುಗಳಿಂದ ಉಂಟಾಗುವ ಭಿನ್ನತೆಗಳಾಗಿವೆ.

**ವಯಸ್ಸಿನ ಅಂತರ:** ಮನುಷ್ಯನ ಜೀವನದ ಪ್ರತಿ ಹಂತಗಳಲ್ಲಿಯೂ ವ್ಯಕ್ತಿ ಭಿನ್ನತೆಯನ್ನು ಕಾಣುತ್ತೇವೆ. ಅದು ಶೈಶವಾವಸ್ಥೆ, ಬಾಲ್ಯಾವಸ್ಥೆ, ತಾರುಣ್ಯಾವಸ್ಥೆ, ಪ್ರೌಢಾವಸ್ಥೆ ಮತ್ತು ಇಳಿ ವಯಸ್ಸಿನಲ್ಲಿ ಸಹಜವಾಗಿ ದೈಹಿಕ, ಸಾಮಾಜಿಕ, ಮಾನಸಿಕ ಹಾಗೂ ಸಂವೇಗಾತ್ಮಕ ಭಿನ್ನತೆಗಳನ್ನು ಕಾಣಬಹುದು.

## ವೈಯಕ್ತಿಕ ಭಿನ್ನತೆಯ ಕ್ಷೇತ್ರಗಳು

**ದೈಹಿಕ ಭಿನ್ನತೆಗಳು:** ದೇಹದ ಎತ್ತರ, ಗಾತ್ರ, ತೂಕ, ಬಣ್ಣ, ರೂಪ, ಕೈಕಾಲುಗಳ ವಿನ್ಯಾಸಗಳಲ್ಲಿ ಭಿನ್ನತೆ ಎಲ್ಲಾ ವ್ಯಕ್ತಿಗಳಲ್ಲೂ ಕಂಡುಬರುತ್ತದೆ.

**ಮಾನಸಿಕ ಭಿನ್ನತೆಗಳು:** ಮಾನವನ ಮಾನಸಿಕ ಸಾಮರ್ಥ್ಯಗಳಾದಂತಹ ಬುದ್ಧಿ ಶಕ್ತಿ, ಗ್ರಹಣ ಶಕ್ತಿ, ವಿಚಾರ ಶಕ್ತಿ, ತಾರ್ಕಿಕ ಸಾಮರ್ಥ್ಯ, ಕಲ್ಪನಾ ಶಕ್ತಿ, ವಿವೇಚನೆ ಸೃಜನಶೀಲತೆ, ಭಾಷಾ ಸಾಮರ್ಥ್ಯ ಮತ್ತು ಕ್ರಿಯಾತ್ಮಕ ಅಭಿವ್ಯಕ್ತಿ ಮೊದಲಾದವುಗಳಲ್ಲಿಯೂ ವ್ಯಕ್ತಿ ಭಿನ್ನತೆಯನ್ನು ಕಾಣುತ್ತೇವೆ.

**ಸಂವೇಗಾತ್ಮಕ ಭಿನ್ನತೆಗಳು:** ಪ್ರೀತಿ, ವಾತ್ಸಲ್ಯ, ಸಹಾನುಭೂತಿ, ಕರುಣೆ, ಸಂತೃಪ್ತಿ, ಕೋಪ, ದ್ವೇಷ, ಅಸೂಯೆ, ಅತೃಪ್ತಿಯ ಭಾವನೆ, ಧರ್ಮ, ದೇವರು, ಆಚಾರ–ವಿಚಾರ, ರೂಢಿ ಸಂಪ್ರದಾಯಗಳಲ್ಲಿ ವ್ಯಕ್ತಿ ಭಿನ್ನತೆಯನ್ನು ಕಾಣಬಹುದು.

**ಶೈಕ್ಷಣಿಕ ಸಾಧನೆಯಲ್ಲಿನ ಭಿನ್ನತೆಗಳು:** ಒಂದೇ ತರಗತಿಯಲ್ಲಿ ಒಂದೇ ವಯೋಮಾನಕ್ಕೆ ಸೇರಿದ ಮಕ್ಕಳಲ್ಲಿ ಅವರ ಸಾಧನೆ ಸಾಮರ್ಥ್ಯಗಳಲ್ಲಿ ಬಹಳಷ್ಟು ವ್ಯತ್ಯಾಸಗಳು ಕಂಡುಬರುತ್ತವೆ. ಮಕ್ಕಳು ಒಂದೇ ಶಾಲೆಯಲ್ಲಿ ಶಿಕ್ಷಣ ಮತ್ತು ಅನುಭವಗಳನ್ನು ಪಡೆದಿದ್ದರೂ ಅವರ ಶೈಕ್ಷಣಿಕ ಸಾಧನೆ ಮತ್ತು ಅವರು ಪಡೆದ ಜ್ಞಾನದಲ್ಲಿ ವ್ಯತ್ಯಾಸಗಳು ಕಂಡುಬರುತ್ತವೆ. ಕೆಲವು ಮಕ್ಕಳು ಪಠ್ಯ ಚಟುವಟಿಕೆಗಳಲ್ಲಿ ಮುಂದಿರಬಹುದು ಮತ್ತೆ ಕೆಲವು ಮಕ್ಕಳು ಪಠ್ಯೇತರ ಚಟುವಟಿಕೆಗಳಲ್ಲಿ ಮುಂದಿರುತ್ತಾರೆ. ಗಣಿತ ಕೆಲವು ಮಕ್ಕಳಿಗೆ ಇಷ್ಟವಾದರೆ ಮತ್ತೆ ಕೆಲವು ಮಕ್ಕಳಿಗೆ ಕಷ್ಟವಾಗಬಹುದು. ಕೆಲವು ಮಕ್ಕಳು ಸಾಹಿತ್ಯ ಮತ್ತು ಭಾಷಾ ಕಲಿಕೆಯಲ್ಲಿ ಒಲವು ತೋರಬಹುದು. ಪರೀಕ್ಷೆಗಳಲ್ಲಿ ಗರಿಷ್ಟ ಹಾಗೂ ಕನಿಷ್ಠ ಅಂಕಗಳನ್ನು ಪಡೆಯುವ ಮಕ್ಕಳನ್ನು ಕಾಣಬಹುದು.

## ಸಾಮಾಜಿಕ ಹಾಗೂ ನೈತಿಕ ವಿಕಾಸದಲ್ಲಾಗುವ ವ್ಯತ್ಯಾಸಗಳು

ಮಾನವ ಸಮಾಜ ಜೀವಿ ಆದರೂ ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ಸಾಮಾಜಿಕ ಸಂಬಂಧಗಳು ಭಿನ್ನವಾಗಿರುತ್ತವೆ. ಕೆಲವರು ಅಂತರ್ಮುಖಿಗಳಾದರೆ ಮತ್ತೆ ಕೆಲವರು ಬಹಿರ್ಮುಖಿಗಳಾಗಿರುತ್ತಾರೆ. ವ್ಯಕ್ತಿಗಳ ನಡುವೆ ಪರಸ್ಪರ ಸಹಕಾರ, ಅಸಹಕಾರ, ಹೊಂದಾಣಿಕೆ, ಅಪಸಮಾಯೋಜನೆ, ವೇಷಭೂಷಣ, ನಡೆ–ನುಡಿ, ನಾಗರಿಕ–ಅನಾಗರಿಕ ವರ್ತನೆಗಳು ಇವೆ ಮೊದಲಾದ ಸಾಮಾಜಿಕ ಅಂಶಗಳಿಗೆ ಸಂಬಂಧಿಸಿ ದಂತಹ ಭಿನ್ನತೆಗಳು ಕಂಡುಬರುತ್ತವೆ. ಕೆಲವು ವ್ಯಕ್ತಿಗಳು ನೈತಿಕ ಮೌಲ್ಯಗಳನ್ನು ಅಳವಡಿಸಿಕೊಂಡು ಅನುಸರಿಸಿದರೆ ಮತ್ತೆ ಕೆಲವರು ಸಮಾಜ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದನ್ನು ನಾವು ನೋಡಬಹುದು.

### ಕಲಿಕೆಯಲ್ಲಿರುವ ವ್ಯತ್ಯಾಸಗಳು

ಒಂದು ತರಗತಿಯಲ್ಲಿ ಓದುತ್ತಿರುವ ಎಲ್ಲಾ ಮಕ್ಕಳಲ್ಲಿ ಕಲಿಕೆಯ ಮಟ್ಟ ಒಂದೇ ರೀತಿ ಇರುವುದಿಲ್ಲ.ಕೆಲವರು ಬೇಗ ಕಲಿತರೆ ಮತ್ತೆ ಕೆಲವರು ನಿಧಾನವಾಗಿ ಕಲಿಯುತ್ತಾರೆ.ಕೆಲವರಲ್ಲಿ ಸ್ಮೃತಿ ಶಕ್ತಿ ಹೆಚ್ಚಾಗಿದ್ದರೆ ಮತ್ತೆ ಕೆಲವರಲ್ಲಿ ಮರೆವು ಹೆಚ್ಚಾಗಿರುತ್ತದೆ.ಮಕ್ಕಳ ಕಲಿಕಾ ಸಾಮರ್ಥ್ಯ, ಅವಧಾನ, ಪ್ರೇರಣೆ, ಪರಿಸರ, ಬುದ್ಧಿಶಕ್ತಿಯಲ್ಲಿ ಭಿನ್ನತೆಯನ್ನು ಕಾಣಬಹುದು.

**ಮನೋಭಾವದಲ್ಲಿ ಭಿನ್ನತೆ:** ಯಾವುದೇ ಒಬ್ಬ ವ್ಯಕ್ತಿ ಒಂದು ಸನ್ನಿವೇಶ ಹಾಗೂ ಒಂದು ವಸ್ತುವಿನ ಬಗ್ಗೆ ಎಲ್ಲರೂ ಒಂದೇ ರೀತಿಯ ಅಭಿಪ್ರಾಯವನ್ನು ಹೊಂದಿರುವುದಿಲ್ಲ

**ವ್ಯಕ್ತಿತ್ವದ ವಿಭಿನ್ನತೆಗಳು:** ವ್ಯಕ್ತಿ ಪರಿಸರದೊಂದಿಗೆ ತನ್ನದೇ ಆದ ವಿಶೇಷತೆಯೊಂದಿಗೆ ಹೊಂದಿಕೊಳ್ಳುವುದರಲ್ಲಿ ಸಹಾಯಕವಾಗಿರುವ ವ್ಯಕ್ತಿಯಲ್ಲಿನ ದೈಹಿಕ ಮಾನಸಿಕ ಅಂಶಗಳ ಸಂಘಟನೆಯೇ ವ್ಯಕ್ತಿತ್ವ. ಈ ವ್ಯಕ್ತಿತ್ವದಲ್ಲಿಯೂ ನಾವು ವಿಭಿನ್ನತೆಯನ್ನು ಕಾಣಬಹುದು ಕೆಲವರು ಸಮಾಜದ ಬಗೆಗೆ ಕಳಕಳಿ ಹೊಂದಿರುವವರಾಗಿದ್ದರೆ ಮತ್ತೆ ಕೆಲವು ಸಮಾಜಘಾತುಕರನ್ನು ನೋಡಬಹುದು.

## ಭಾಷೆಯ ವೈವಿಧ್ಯತೆ, ಜಾತಿ, ಲಿಂಗ, ಸಮುದಾಯ, ಧರ್ಮ, ಇತ್ಯಾದಿಗಳನ್ನು ಆಧರಿಸಿ ಭಿನ್ನತೆಗಳನ್ನು ಅರ್ಥೈಸುವುದು:

ತರಗತಿಯಲ್ಲಿನ ವೈವಿಧ್ಯತೆಯು ವಿದ್ಯಾರ್ಥಿಗಳ ನಡುವಿನ ಸಾಮಾಜಿಕ ಗುರುತುಗಳಲ್ಲಿನ ವ್ಯತ್ಯಾಸಗಳನ್ನು ಸೂಚಿಸುತ್ತದೆ. ಇದು ವಯಸ್ಸು, ಸಾಮಾಜಿಕ ಆರ್ಥಿಕ ಸ್ಥಿತಿ, ಲಿಂಗ ಗುರುತು, ಜಾತಿ, ಜನಾಂಗ, ಅಭಿವ್ಯಕ್ತಿ ದೃಷ್ಟಿಕೋನ, ಅಂಗವಿಕಲತೆ ಮತ್ತು ರಾಷ್ಟ್ರೀಯತೆಯ ವ್ಯತ್ಯಾಸಗಳನ್ನು ಒಳಗೊಂಡಿರಬಹುದು. ಇವರನ್ನು ಗುರುತಿಸಿ ಅವರ ವ್ಯಕ್ತಿತ್ವದ ಭಿನ್ನತೆಯನ್ನು ಆಧರಿಸಿ ಬೋಧನಾ ಕಲಿಕಾ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳಬೇಕಾಗಿದೆ ಮತ್ತು ತಮ್ಮ ವ್ಯತ್ಯಾಸಗಳನ್ನು ಸ್ವೀಕರಿಸಲು ವಿದ್ಯಾರ್ಥಿಗಳಿಗೆ ಕಲಿಸುವುದು ಕೂಡ ಶಿಕ್ಷಕರ ಮುಖ್ಯ ಕರ್ತವ್ಯವಾಗಿದೆ.

**ಭಾಷಾ ವೈವಿಧ್ಯತೆ:** ನಮ್ಮ ದೇಶವು ಬಹುಭಾಷಿಕ ರಾಷ್ಟ್ರವಾಗಿರುವುದರಿಂದ ನಮ್ಮ ತರಗತಿಗಳಲ್ಲಿ ಭಾಷಾ ವೈವಿಧ್ಯತೆಯನ್ನು ನಾವು ಕಾಣಬಹುದು. ಹಲವಾರು ಭಾಷೆಗಳನ್ನಾಡುವ ಮಕ್ಕಳು, ವಿವಿಧ ಪ್ರದೇಶಗಳಿಂದ ವಲಸೆ ಬಂದಿರುವ ಭಿನ್ನ ಮಾತೃಭಾಷೆಯನ್ನು ಹೊಂದಿರುವ ಮಕ್ಕಳು ತರಗತಿ ಸನ್ನಿವೇಶದಲ್ಲಿದ್ದಾಗ ಅವರನ್ನು ಬೋಧನಾ ಕಲಿಕಾ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳ ಬೇಕಾಗಿರುತ್ತದೆ. ತರಗತಿಯಲ್ಲಿನ ಭಾಷಾ ವೈವಿಧ್ಯತೆಯನ್ನು ಸಂಪತ್ತು ಎಂದು ಪರಿಗಣಿಸಬೇಕು ಮತ್ತು ಭಾಷಾ ಭಿನ್ನತೆ ವಿದ್ಯಾರ್ಥಿಗಳ ಕಲಿಕೆಯಲ್ಲಿ ಅಡ್ಡಿಯನ್ನುಂಟು ಮಾಡದಂತೆ ಜಾಗ್ರತೆಯನ್ನು ಶಿಕ್ಷಕರು ವಹಿಸತಕ್ಕದ್ದು.

**ಜಾತಿ:** ಪ್ರತಿಯೊಂದು ತರಗತಿಗಳಲ್ಲಿ ವಿವಿಧ ಜಾತಿ ಜನಾಂಗಗಳಿಗೆ ಸೇರಿದ ಮಕ್ಕಳಿರುತ್ತಾರೆ. ನಮ್ಮ ದೇಶ ಸಾವಿರಾರು ಜಾತಿಗಳನ್ನು ಒಳಗೊಂಡಿರುವ ಜಾತ್ಯತೀತ ರಾಷ್ಟ್ರ ಹಾಗಾಗಿ ಶಾಲಾ ಸನ್ನಿವೇಶಗಳಲ್ಲಿಯೂ ವೈವಿಧ್ಯಮಯವಾದ ಜಾತಿ ಆಧಾರಿತ ವಿದ್ಯಾರ್ಥಿಗಳಿದ್ದು ಅವರ ಸಂಸ್ಕೃತಿ ಆಲೋಚನೆ ರೂಢಿ ಸಂಪ್ರದಾಯಗಳು ಭಿನ್ನವಾಗಿರುತ್ತವೆ ಇದನ್ನು ಶಿಕ್ಷಕರು ಪರಿಗಣಿಸತಕ್ಕದ್ದು. ಎಲ್ಲಾ ವಿದ್ಯಾರ್ಥಿಗಳನ್ನು ಸಮಾನವಾಗಿ ಕಾಣಬೇಕು ತರಗತಿಗಳು ವಿವಿಧ ಧರ್ಮಗಳು ಮತ್ತು ಜಾತಿಗಳ ವಿದ್ಯಾರ್ಥಿಗಳ ನಡುವೆ ಮುಕ್ತ ಸಂವಹನವನ್ನು ಸುಗಮಗೊಳಿಸುವ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕು. ಇವು ವಿದ್ಯಾರ್ಥಿಗಳು ಪರಸ್ಪರ ದೃಷ್ಟಿಕೋನಗಳು ಮತ್ತು ನಂಬಿಕೆಗಳನ್ನು ಅರ್ಥ ಮಾಡಿಕೊಳ್ಳಲು ಮತ್ತು ಪರಸ್ಪರ ಗೌರವ ಹಾಗೂ ತಿಳುವಳಿಕೆಯನ್ನು ಬೆಳೆಸಿಕೊಳ್ಳಲು ಸಹಾಯ ಮಾಡುತ್ತವೆ.

**ಲಿಂಗತ್ವ:** ಲಿಂಗತ್ವವು ಸಾಮಾಜಿಕ ಪ್ರಕಿಯೆಯಾಗಿದ್ದು ಸಮಾಜದಲ್ಲಿ ಗಂಡು ಮತ್ತು ಹೆಣ್ಣನ್ನು ಪ್ರತ್ಯೇಕಿಸಿ ಈ ಎರಡು ವರ್ಗಗಳಿಗೆ ನೀಡುವ ಸಾಮಾಜಿಕ ಪಾತ್ರಗಳ ವಿಶ್ಲೇಷಣೆಯಾಗಿದೆ. ಒಂದು ಸಾಮಾಜಿಕ ಸನ್ನಿವೇಶದಲ್ಲಿ ಪ್ರಾಧಾನ್ಯತೆ ಹೊಂದಿರುವ ಲಿಂಗವೇ ಅಲ್ಲಿನ ಲಿಂಗತ್ವವಾಗಿದೆ. ನಮ್ಮ ದೇಶಕ್ಕೆ ಅನ್ವಯಿಸುವಂತೆ ವಿವಿಧ ರಾಜ್ಯಗಳಲ್ಲಿ ಲಿಂಗತ್ವದ ಪ್ರಾತಿನಿಧ್ಯತೆಯಲ್ಲಿ ವ್ಯತ್ಯಾಸವಿದ್ದು ಅಂತಹ ವಿದ್ಯಾರ್ಥಿಗಳು ಶಾಲಾ ಸನ್ನಿವೇಶದಲ್ಲಿದ್ದಾಗ ಅವರನ್ನು ಗುರುತಿಸಬೇಕಾಗಿರುವುದು ಶಿಕ್ಷಕರ ಕರ್ತವ್ಯವಾಗಿದೆ.

**ಸಮುದಾಯ ಮತ್ತು ಧರ್ಮ:** ಶಾಲಾ ಸನ್ನಿವೇಶದಲ್ಲಿ ವೈವಿಧ್ಯಮಯ ಸಮುದಾಯದ ಮತ್ತು ಧರ್ಮದ ವಿದ್ಯಾರ್ಥಿಗಳಿದ್ದು ಅವರ ರೂಡಿಸಂಪ್ರದಾಯಗಳು, ನಂಬಿಕೆ, ಆಚರಣೆ ಭಿನ್ನವಾಗಿದ್ದು ಅವುಗಳನ್ನು ಅರ್ಥೈಸಿಕೊಳ್ಳಬೇಕಾಗಿದೆ.

## ಲಿಂಗತ್ವ ನೆಲೆಯಲ್ಲಿ ಪಠ್ಯಪುಸ್ತಕಗಳ ಪರಿಶೀಲನೆ

ನಮ್ಮ ತರಗತಿಗಳಲ್ಲಿ ಪಠ್ಯಪುಸ್ತಕಗಳು ಜ್ಞಾನದ ಏಕೈಕ ಮೂಲವೆಂದು ಪರಿಗಣಿಸಲ್ಪಟ್ಟಿವೆ. ಈ ಪಠ್ಯವನ್ನು ರಚಿಸಬೇಕಾದರೆ ವಿದ್ಯಾರ್ಥಿಗಳ ವಯಸ್ಸು, ತರಗತಿ, ಸಾಮರ್ಥ್ಯ, ಗ್ರಹಿಕೆಯ ಮಟ್ಟ, ಸಮಾಜದ ನೀತಿಗಳು, ಸಂವಿಧಾನದ ಆಶಯಗಳನ್ನು ಮತ್ತು ಲಿಂಗ ಸಂವೇದನೆಯನ್ನು ಗಮನದಲ್ಲಿರಿಸಬೇಕಾಗುತ್ತದೆ. ಪಠ್ಯಪುಸ್ತಕಗಳು ಮಾಹಿತಿ ಪ್ರಸಾರವನ್ನು ಮಾಡುವುದಲ್ಲದೆ ನಮ್ಮ ಸಾಮಾಜಿಕ ವಾಸ್ತವಗಳಿಗೂ ಕನ್ನಡಿ ಹಿಡಿಯುತ್ತದೆ. ಹೀಗಾಗಿ ಪಠ್ಯವನ್ನು ರಚಿಸುವಾಗ ಈ ಕೆಳಗಿನ ಅಂಶಗಳನ್ನು ಗಮನದಲ್ಲಿರಿಸುವುದು ಸೂಕ್ತ.

* ಪಠ್ಯ ಪುಸ್ತಕಗಳು ಸಾಮಾಜಿಕ ವಾಸ್ತವವನ್ನು ಬಿಂಬಿಸತಕ್ಕದ್ದು.
* ಪಠ್ಯ ಪುಸ್ತಕದಲ್ಲಿನ ಪಾಠಗಳು, ವಿಷಯ ನಿರೂಪಣೆ, ಚಿತ್ರಗಳು, ಬಳಸುವ ಉದಾಹರಣೆಗಳು ಹಾಗೂ ಅಭ್ಯಾಸ ಕಾರ್ಯಗಳು ಲಿಂಗ ಸಂವೇದನೆಯಿಂದ ಕೂಡಿರತಕ್ಕದ್ದು.
* ಪರಂಪರಾಗತ ಪುರುಷ ಪ್ರಧಾನ ಮೌಲ್ಯಗಳನ್ನು ಎತ್ತಿಹಿಡಿಯದೆ ಸ್ತ್ರೀ ಸಮಾನತೆಯನ್ನು ಬಿಂಬಿಸಬೇಕು.
* ಸಾಮಾಜಿಕ ಬದಲಾವಣೆಗೆ ಎಡೆ ಮಾಡಿಕೊಡುವಂತಿರಬೇಕು.
* ಮಹಿಳೆಯರ ಲಿಂಗತ್ವ ಪಡಿಯಚ್ಚುಗಳನ್ನೆ ಎತ್ತಿ ಹಿಡಿಯದಂತಿರಬೇಕು.
* ಸಾಮಾಜಿಕ ಕಾರ್ಯಗಳಲ್ಲಿ, ದೇಶದ ಅಭಿವೃದ್ಧಿಯಲ್ಲಿ ಸ್ತ್ರೀಯರ ಪಾತ್ರವನ್ನು ಮಕ್ಕಳಿಗೆ ಮನದಟ್ಟು ಮಾಡುವಂತಿರಬೇಕು.
* ಸ್ತ್ರೀಯರ ಸಾಧನೆ ಮತ್ತು ದುಡಿಮೆಯನ್ನು ಗೌರವಿಸುವಂತಹ ಪಾಠಗಳಿರಬೇಕು.
* ಮಕ್ಕಳು ತಮ್ಮ ಲಿಂಗತ್ವ ಪಾತ್ರಗಳನ್ನು ಹೊಸ ದೃಷ್ಟಿಯಿಂದ ನೋಡಲು ಅನುವು ಮಾಡುವಂತಿರಬೇಕು.
* ಮಹಿಳೆಯರ ಬಗೆಗಿನ ಪಡಿಯಚ್ಚುಗಳನ್ನು, ಪೂರ್ವಗ್ರಹಗಳನ್ನು, ಅಪಕಲ್ಪನೆಗಳನ್ನು ಪ್ರಶ್ನಿಸುವ, ವಿಮರ್ಶಾತ್ಮಕವಾಗಿ ವಿವೇಚಿಸುವ ಪಠ್ಯವನ್ನು ಕೊಡತಕ್ಕದ್ದು.
* ಪಠ್ಯ ವಸ್ತುವಿನಲ್ಲಿ ವೈವಿಧ್ಯಮಯ ಧರ್ಮಗಳು, ಆಚಾರ–ವಿಚಾರಗಳನ್ನು ಎಲ್ಲರಿಗೂ ತಿಳಿಸುವುದು.
* ಸಹಧರ್ಮಗಳ ನೀತಿ, ನಿಯಮಗಳನ್ನು ವಿನಿಮಯಿಸಿ ಪರಸ್ಪರ ಗೌರವಿಸುವುದು.
* ಧಾರ್ಮಿಕ ಹಿನ್ನೆಲೆಯಲ್ಲಿ ಸ್ತ್ರಿ ಪುರುಷರ ಸ್ಥಾನಮಾನ, ಆಗಬೇಕಾದಂತಹ ಬದಲಾವಣೆಗಳ ಬಗ್ಗೆ ಚರ್ಚೆ ಮಾಡುವ ಅವಕಾಶ ಕಲ್ಪಿಸುವುದು.
* ಲಿಂಗತ್ವ ಪೂರ್ವಗ್ರಹಗಳು ಪಠ್ಯ ಪುಸ್ತಕಗಳಲ್ಲಿ ಕಂಡುಬಂದಂತೆ ಎಚ್ಚರವಹಿಸಬೇಕು.
* ಶಾಲಾ ಹಂತದಲ್ಲಿ ಹೆಣ್ಣು ಮಕ್ಕಳ ಆತ್ಮಾಭಿಮಾನ ಹಾಗೂ ಧನಾತ್ಮಕ ಸ್ವಬಿಂಬ ರೂಪಿಸಿಕೊಳ್ಳುವಂತಹ ಪಠ್ಯ ವಿಚಾರವನ್ನು ಅಳವಡಿಸಿಕೊಳ್ಳಬೇಕು.
* ಸ್ತ್ರೀಯರ ಆತ್ಮಾಭಿಮಾನಕ್ಕೆ ಧಕ್ಕೆ ತರುವಂತಹ ಯಾವುದೇ ಪೌರಾಣಿಕ, ಐತಿಹಾಸಿಕ ಸ್ತ್ರೀ ಪಾತ್ರಗಳನ್ನು ಪರಿಚಯಿಸದಿರುವುದು ಉತ್ತಮ.
* ಉದ್ಯೋಗ ಕ್ಷೇತ್ರದಲ್ಲಿ ವಿವಿಧ ಜವಾಬ್ದಾರಿಗಳನ್ನು ಹೊತ್ತು ದುಡಿಯುತ್ತಿರುವ ಸ್ತ್ರೀ ಪಾತ್ರಗಳನ್ನು ಪಠ್ಯದಲ್ಲಿ ಪರಿಚಯಿಸತಕ್ಕದ್ದು.
* ಪಠ್ಯದಲ್ಲಿ ಕೊಡುವಂತಹ ನಿದರ್ಶನಗಳು ಲಿಂಗತ್ವ ಸ್ನೇಹಿ ಅಥವಾ ಲಿಂಗತ್ವ ತಟಸ್ಥವಾಗಿರತಕ್ಕದ್ದು.
* ಬಳಸುವ ಭಾಷೆಯಲ್ಲಿ ಲಿಂಗತ್ವ ಪೂರ್ವಗ್ರಹ ಹಾಗೂ ತಾರತಮ್ಯ ಇಲ್ಲದಿರುವಂತೆ ಎಚ್ಚರವಹಿಸಬೇಕು.
* ಪಠ್ಯ ವಿಚಾರ ಹಾಗೂ ಅದಕ್ಕೆ ಸಂಬಂಧಿಸಿದ ಚಿತ್ರಗಳಲ್ಲಿ ಗಂಡು/ಹೆಣ್ಣು ಅಥವಾ ಸ್ತ್ರೀ / ಪುರುಷ ಪಾತ್ರಗಳಿಗೆ ಸಂಬಂಧಪಟ್ಟಂತೆ ಸಮನಾದ ಪ್ರಾತಿನಿಧ್ಯ ನೀಡಬೇಕು.
* ಪಠ್ಯ ಪುಸ್ತಕ ರಚನಾ ಮಂಡಳಿಯ ನೇಮಕದಲ್ಲಿ ಪುರುಷ ಹಾಗೂ ಸ್ತ್ರೀಯರಿಗೆ ಸಮಾನವಾದ ಪ್ರಾತಿನಿಧ್ಯ ದೊರೆಯುವಂತೆ ನೋಡಿಕೊಳ್ಳಬೇಕು.

**ಮೌಲ್ಯಮಾಪನದ ಅರ್ಥ**

* ಮೌಲ್ಯಮಾಪನ ಎಂದರೆ ನೈಜವಾದ ಬೆಲೆ ನಿರ್ಧರಿಸುವುದು ಎಂದರ್ಥ.ಒಂದು ವಸ್ತುವಿನ ಗುಣಮಟ್ಟ ಒಂದು ಕಾರ್ಯದ ಫಲ ವ್ಯಕ್ತಿಯ ಯೋಗ್ಯತೆ ,ವ್ಯಕ್ತಿತ್ವವನ್ನು ನಿರ್ಧರಿಸುವ ಪ್ರಕ್ರಿಯೆಗೆ ಮೌಲ್ಯಮಾಪನ ಎನ್ನುವರು.

*ಪರಿಮಾಣಾತ್ಮಕ ಮತ್ತು ಗುಣಾತ್ಮಕತೆ ನಿರ್ಧರಿಸುವ ಕಾರ್ಯವನ್ನು ಮೌಲ್ಯಮಾಪನ ಎನ್ನುವರು.

## ಮೌಲ್ಯಮಾಪನದ ವ್ಯಾಖ್ಯಾನಗಳು

* 'ಬೋಧನೆಯ ಉದ್ದೇಶಗಳು ಎಷ್ಟರಮಟ್ಟಿಗೆ ಸಾಧಿಸಲ್ಪಟ್ಟಿವೆ ಎನ್ನುವುದನ್ನು ನಿರ್ಧರಿಸುವ ಪ್ರಕ್ರಿಯೆಗೆ ಮೌಲ್ಯಮಾಪನ'– ಎಡ್ವರ್ಡ್ ಫ್ರೀ ಮ್ಯಾನ್

* 'ಮೌಲ್ಯಮಾಪನವು ಒಂದು ನಿರಂತರ ಪ್ರಕ್ರಿಯೆಯಾಗಿದ್ದು ಇದರಿಂದ ಮಾಹಿತಿಗಳನ್ನು ಸಂಗ್ರಹಿಸಿ ವಿಶ್ಲೇಷಿಸಿ ಉತ್ತಮ, ಸರಾಸರಿ, ಕನಿಷ್ಠ ಎಂಬ ಇತ್ಯಾದಿ ನಿರ್ಣಯವನ್ನು ಕೈಗೊಳ್ಳಲು ಸಹಕಾರಿಯಾಗುವುದು'– ಸಿ ವಿ ಗುಡ್

## ಶೈಕ್ಷಣಿಕ ಮೌಲ್ಯಮಾಪನ;

ಮಗುವಿನ ಭೌತಿಕ, ಮಾನಸಿಕ ಭಾವನಾತ್ಮಕ ,ಸಾಮಾಜಿಕ, ಆಧ್ಯಾತ್ಮಿಕ ಅಂಶಗಳನ್ನು ವಿವಿಧ ತಂತ್ರ ಹಾಗೂ ಸಾಧನಗಳ ಮೂಲಕ ಪರಿಮಾಣಾತ್ಮಕ ಮತ್ತು ಗುಣಾತ್ಮಕ ಮೌಲ್ಯವನ್ನು ವೈಜ್ಞಾನಿಕವಾಗಿ ನಿರ್ಧರಿಸುವ ಪ್ರಕ್ರಿಯೆ ಶೈಕ್ಷಣಿಕ ಮೌಲ್ಯಮಾಪನ.

## ಶೈಕ್ಷಣಿಕ ಮೌಲ್ಯಮಾಪನದ ಕಾರ್ಯಗಳು

1. ಇದು ಶಿಕ್ಷಣದ ಗುರಿ ಮತ್ತು ಉದ್ದೇಶಗಳನ್ನು ಪ್ರಸ್ತುತ ಸಮಾಜಕ್ಕೆ ಅನುಗುಣವಾಗಿ ನಿರ್ಧರಿಸುವ ಕಾರ್ಯ ಮಾಡುತ್ತದೆ
2. ಶೈಕ್ಷಣಿಕ ಮೌಲ್ಯಮಾಪನವು ನಿರ್ಧರಿಸಿದ ಗುರಿ ಮತ್ತು ಉದ್ದೇಶಗಳನ್ನು ಈಡೇರಿಸಲು ಸಹಕಾರಿಯಾದ ಪಠ್ಯಕ್ರಮವನ್ನು ನಿರ್ಧರಿಸುವ ಕಾರ್ಯ ಮಾಡುವುದು.
3. ಶೈಕ್ಷಣಿಕ ಮೌಲ್ಯಮಾಪನವು ನಿರ್ಧರಿಸಿದ ಗುರಿ ಮತ್ತು ಉದ್ದೇಶಗಳು ಸಹಕಾರಿಯಾದ ಹಾಗೂ ಪಠ್ಯಕ್ರಮವನ್ನು ಸುಲಭವಾಗಿ ಅರ್ಥೈಸಿಕೊಳ್ಳುವ ಕಲಿಕಾ ಚಟುವಟಿಕೆಗಳನ್ನು ನಿರ್ಧರಿಸುವ ಕಾರ್ಯ ಮಾಡುವುದು
4 ನಿರ್ಧರಿಸಿದ ಗುರಿ ಉದ್ದೇಶಗಳು ಎಷ್ಟರಮಟ್ಟಿಗೆ ಈಡೇರಿವೆ ಎಂಬುದನ್ನು ಪತ್ತೆ ಮಾಡುವ ಕಾರ್ಯವನ್ನು ಮಾಡುವುದು
5.ನಿರ್ಧರಿಸಿದ ಕಲಿಕಾ ವಿಧಾನಗಳನ್ನು ಎಷ್ಟರಮಟ್ಟಿಗೆ ಸಮರ್ಪಕವಾಗಿದೆ ಎಂಬುದನ್ನ ಪತ್ತೆ ಮಾಡುವ ಕಾರ್ಯ ಮಾಡುವುದು

## ಮೌಲ್ಯಮಾಪನದ ಮಹತ್ವ

1. ವಿದ್ಯಾರ್ಥಿಗಳ ಸರ್ವತೋಮುಖ ವಿಕಾಸದ ಸಂಪೂರ್ಣ ಚಿತ್ರಣವನ್ನು ಒದಗಿಸುತ್ತದೆ
2. ಶಾಲೆಯ ಪ್ರಗತಿಯ ವೇಗ ಹಾಗೂ ಚಲನೆಯ ದಿಕ್ಕನ್ನು ತಿಳಿಸುತ್ತದೆ
3. ಕಲಿಕೆಯ ನ್ಯೂನ್ಯತೆಗಳನ್ನು ಗುರುತಿಸಿ ಪರಿಹಾರ ಬೋಧನೆ ನೀಡಲು ಸಹಕಾರಿಯಾಗಿದೆ.
4. ವಿದ್ಯಾರ್ಥಿಗಳ ಬುದ್ಧಿಶಕ್ತಿ ಮತ್ತು ಸಾಮರ್ಥ್ಯಗಳಿಗೆ ಅನುಗುಣವಾಗಿ ವಿವಿಧ ರೀತಿಯಲ್ಲಿ ವರ್ಗೀಕರಣ ಮಾಡಲು ಮತ್ತು ಮುಂದಿನ ತರಗತಿಗೆ ತೇರ್ಗಡೆ ಮಾಡಲು ಸಹಾಯಕವಾಗಿದೆ.
5. ಕಲಿಕೆ ಬೋಧನೆಯ ಸಮರ್ಪಕತೆಯನ್ನು ತಿಳಿಸುತ್ತದೆ
6. ಪೋಷಕರಿಗೆ ಹಾಗೂ ಶಾಲಾ ಮುಖ್ಯಸ್ಥರಿಗೆ ವರದಿ ನೀಡಲು ಸಹಕಾರಿಯಾಗಿದೆ
7. ಶೈಕ್ಷಣಿಕ ಗುರಿಗಳನ್ನು ಸಕಾಲದಲ್ಲಿ ಸಾದಿಸುವಲ್ಲಿ ನೆರವನ್ನು ನೀಡುತ್ತದೆ
8. ಶೈಕ್ಷಣಿಕ ಕ್ಷೇತ್ರದಲ್ಲಿನ ನೂತನ ಸಂಶೋಧನೆಗಳಿಗೆ ಅವಕಾಶ ಕಲ್ಪಿಸಿಕೊಡುತ್ತದೆ
9. ಪಠ್ಯಕ್ರಮ ಪುನರ್ ರಚನೆಗೆ ಹಾಗೂ ಶೈಕ್ಷಣಿಕ ಸಮಸ್ಯೆಗಳ ಸುಧಾರಣೆಗೆ ಅವಕಾಶಗಳನ್ನು ಕಲ್ಪಿಸುತ್ತದೆ

## ಮೌಲ್ಯಮಾಪನದ ವಿಧಗಳು;

1. ನಿರಂತರ ಮೌಲ್ಯಮಾಪನ
2. ವ್ಯಾಪಕ ಮೌಲ್ಯಮಾಪನ
3. ರೂಪಣ ಮೌಲ್ಯಮಾಪನ
4. ಸಂಕಲನಾತ್ಮಕ ಮೌಲ್ಯಮಾಪನ

## ನಿರಂತರ ಮೌಲ್ಯಮಾಪನ;

ವಿದ್ಯಾರ್ಥಿಗಳ ಕಲಿಕೆಯನ್ನು ನಿರಂತರವಾಗಿ ಕಲಿಕಾ ಪ್ರಕ್ರಿಯೆಯ ಜೊತೆಗೆ ಮೌಲ್ಯಮಾಪನ ಮಾಡುವುದಕ್ಕೆ ನಿರಂತರ ಮೌಲ್ಯಮಾಪನ ಎಂದು ಕರೆಯುವರು.

**ವ್ಯಾಪಕ ಮೌಲ್ಯಮಾಪನ;**

* ಶಿಕ್ಷಣದ ಗುರಿಗಳಿಗೆ ಅನುಗುಣವಾಗಿ ವ್ಯಕ್ತಿತ್ವ ವಿಕಾಸ ಹಾಗೂ ಸರ್ವತೋಮುಖ ಬೆಳವಣಿಗೆಯ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ಕಲಿಕಾ ಸಾಧನೆ ಮಟ್ಟವನ್ನು ಪಠ್ಯ ಮತ್ತು ಸಹಪಠ್ಯ ವಿಷಯಗಳಲ್ಲಿನ ಮನೋಭಾವ ಮತ್ತು ಮೌಲ್ಯಗಳ ಹಿನ್ನೆಲೆಯಲ್ಲಿ ವ್ಯಕ್ತಿತ್ವದ ವಿವಿಧ ಅಂಶಗಳನ್ನು ಮೌಲ್ಯಮಾಪನ ಮಾಡುವುದೇ ವ್ಯಾಪಕ ಮೌಲ್ಯಮಾಪನ.

## ರೂಪಣಾತ್ಮಕ ಮೌಲ್ಯಮಾಪನ;

**ವರ್ಷವಿಡೀ ನಿರಂತರವಾಗಿ** ಕಿರು ಪರೀಕ್ಷೆಗಳ ಮೂಲಕ ಕಲಿಕೆಯ ಸಾಧನೆ ಗುರುತಿಸಿ ಪ್ರಗತಿ ಎಡೆಗೆ ಸಾಗುವಂತೆ ಮಾಡುವ ಮೌಲ್ಯಮಾಪನವೇ ರೂಪಣ ಮೌಲ್ಯಮಾಪನ.

## ಸಂಕಲನಾತ್ಮಕ ಮೌಲ್ಯಮಾಪನ;

ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಯನ್ನು ವರ್ಷದ ಕೊನೆಯಲ್ಲಿ ಮೌಲ್ಯಮಾಪನ ಮಾಡುವುದನ್ನು ಸಂಕಲನಾತ್ಮಕ ಮೌಲ್ಯಮಾಪನ ಎನ್ನುವರು.

## ನಿರಂತರ ಮತ್ತು ಸಮಗ್ರ ಮೌಲ್ಯಮಾಪನ (CCE) ಅರ್ಥ.

ವಿದ್ಯಾರ್ಥಿಯ ಪಠ್ಯ ಹಾಗೂ ಸಹಪಠ್ಯ ಚಟುವಟಿಕೆಗಳಲ್ಲಿನ ಸಾಧನೆ ಶಾಲಾ ಸನ್ನಿವೇಶದಲ್ಲಿ ವಿವಿಧ ಪಾತ್ರ ನಿರ್ವಹಣೆ, ಪಾಲ್ಗೊಳ್ಳುವಿಕೆ ಮತ್ತು ಪ್ರಗತಿಯನ್ನು ವಿವಿಧ ತಂತ್ರಗಳ ಮೂಲಕ ಸಮಗ್ರವಾಗಿ ದಾಖಲಿಸಿಕೊಂಡು ವಿಶ್ಲೇಷಿಸಿ ಪಡೆದ ಒಳನೋಟಗಳಿಂದ ಮಗುವಿನ ಸರ್ವಾಂಗೀಣ ಅಭಿವೃದ್ಧಿ ಅನುಕೂಲ ಪ್ರಕ್ರಿಯೆಗೆ ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಎನ್ನಬಹುದು.

## ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನದ ಪ್ರಾಮುಖ್ಯತೆ;

1. ಆಲೋಚನಾ ಪ್ರಕ್ರಿಯೆಯನ್ನು ಹೆಚ್ಚಿಸಲು ಸಹಕಾರಿಯಾಗಿದೆ.
2. ಬೋಧನಾ ಕಲಿಕಾ ತಂತ್ರಗಳನ್ನು ಸುಧಾರಿಸಲು ನೆರವಾಗುತ್ತದೆ
3. ವಿದ್ಯಾರ್ಥಿಗಳ ಕಲಿಕೆಯ ಮಟ್ಟವನ್ನು ಅರ್ಥೈಸಿಕೊಳ್ಳಲು ಸಹಕರಿಸುತ್ತದೆ.
4. ವಿದ್ಯಾರ್ಥಿಗಳ ಪ್ರಗತಿಯನ್ನು ಅರ್ಥೈಸಿಕೊಳ್ಳುವ ಸಲುವಾಗಿ ಸಾಧನ ಸಲಕರಣೆಗಳನ್ನು ರಚಿಸಿಕೊಳ್ಳಲು ಮತ್ತು ಅದನ್ನು ಪರಿಷ್ಕೃತಗೊಳಿಸಲು ದಾರಿ ತೋರಿಸುತ್ತದ.
5. ಶಿಕ್ಷಣ ವ್ಯವಸ್ಥೆಯಲ್ಲಿ ಅಳವಡಿಸಿಕೊಳ್ಳ ಬೇಕಾದ ವಿಧಿ ವಿಧಾನಗಳನ್ನು ಮತ್ತು ಅಗತ್ಯ ನೀತಿ ನಿರೂಪಣೆಗಳನ್ನು ರಚಿಸಿ ಅಳವಡಿಸಿಕೊಳ್ಳಲು ಅವಕಾಶ ಕಲ್ಪಿಸಿ ಕೊಡುತ್ತದೆ

6 ಅಪೇಕ್ಷಿತ ಶಾಲಾ ಸನ್ನಿವೇಶದ ನಿರ್ಮಾಣದ ಮೂಲಕ ಶಾಲೆಯು ಸಮಗ್ರ ಅಭಿವೃದ್ಧಿಯತ್ತ ಮುನ್ನಡೆಯಲು ದಾರಿ ತೋರುತ್ತದೆ

7. ಗುಣಮಟ್ಟದ ಶಿಕ್ಷಣದ ಅಭಿವೃದಿಯನ್ನು ಕಾಲಕಾಲಕ್ಕೆ ಖಾತ್ರಿಪಡಿಸಿಕೊಳ್ಳಲು ಸಹಕಾರಿಯಾಗಿದೆ

8.ಬೋಧನೆ ಕಲಿಕೆ ಪ್ರಕ್ರಿಯೆಯ ಅವಿಭಾಜ್ಯ ಅಂಗವಾಗಿ ಮೌಲ್ಯಮಾಪನ ಮಾಡಲು ನೆರವಾಗುತ್ತದೆ.

## ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನದ ಉದ್ದೇಶಗಳು;

1. ವಿದ್ಯಾರ್ಥಿಯ ಸಾಧನೆಯನ್ನು ಸಮಗ್ರವಾಗಿ ಅವಲೋಕನಕ್ಕೆ ಒಳಪಡಿಸುವುದು
2. ವಿದ್ಯಾರ್ಥಿಯ ನಿರೀಕ್ಷಿತ ಮತ್ತು ಗಳಿಸಿದ ಕಲಿಕೆಯನ್ನು ವಿಶ್ಲೇಷಿಸುವುದು
3. ಪ್ರತಿ ಸಾಮರ್ಥ್ಯದಲ್ಲಿಯೂ ವಿದ್ಯಾರ್ಥಿಯ ಸಾಧನೆಯನ್ನು ದಾಖಲಿಸಿಕೊಳ್ಳುವುದು
4. ಕಲಿಕೆಯನ್ನು ಖಾತ್ರಿಪಡಿಸಿಕೊಳ್ಳಲು ಸಮಯ ಸಂದರ್ಭದಲ್ಲಿ ತಕ್ಕಂತೆ ಬೇಕಾಗುವ ಹಿಮ್ಮಾಹಿತಿಯನ್ನು ಪಡೆದುಕೊಳ್ಳುವುದು
5. ವಿದ್ಯಾರ್ಥಿಗಳಲ್ಲಿ ಪರೀಕ್ಷೆ ಎಂಬ ಭಯ ಮತ್ತು ಆತಂಕವನ್ನು ಹೋಗಲಾಡಿಸುವುದು
6. ಕಲಿಕೆಯನ್ನು ಸಂತಸ ದಾಯಕ ಮತ್ತು ಶಿಶು ಸ್ನೇಹಿತ ವಿಧಾನಗಳನ್ನು ಅನುಸರಿಸಿ ಮಕ್ಕಳ ಕಲಿಕೆಯನ್ನು ಅರ್ಥಮಾಡಿಕೊಳ್ಳುವುದು.
7. ಸಹಪಠ್ಯ ಕ್ಷೇತ್ರದಲ್ಲಿ ಉಂಟಾದ ಸಾಧನೆ ಗಳನ್ನು ವಿಶ್ಲೇಷಿಸಿ ದಾಖಲಿಸಿಕೊಳ್ಳುವುದು
8. ವಿವಿಧ ಕ್ಷೇತ್ರಗಳಲ್ಲಿನ ವಿದ್ಯಾರ್ಥಿಯ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದ ಸಮಗ್ರ ವೈಯಕ್ತಿಕ ದಾಖಲೆಗಳನ್ನು ಇಡುವುದು
9. ಮಗುವಿನ ಹಾಜರಾತಿ, ವೈಯಕ್ತಿಕ ಸುಚಿತ, ಕ್ರಮಬದ್ಧತೆ, ಜವಾಬ್ದಾರಿ, ಪ್ರಜಾಸತ್ತಾತ್ಮಕ, ಪರಿಸರ ಸಂರಕ್ಷಣಾ ಕಾಳಜಿ, ಕರ್ತವ್ಯ ಪ್ರಜ್ಞೆ ,ಸ್ವಯಂ ನಿಯಂತ್ರಣ, ಭಾಗವಹಿಸುವಿಕೆ ಸಹಕಾರ ಇತ್ಯಾದಿಗಳನ್ನು ಮೌಲ್ಯಮಾಪನ ವರದಿಯೊಳಗೆ ತರುವುದು.
10. ಮಕ್ಕಳ ಪ್ರಗತಿಯ ಬಗ್ಗೆ ಪೋಷಕರು ಮತ್ತು ಸಮುದಾಯದ ಸದಸ್ಯರಲ್ಲಿ ಆತ್ಮವಿಶ್ವಾಸ ಮೂಡಿಸುವಂತೆ ಹಿಮ್ಮಾಹಿತಿಯನ್ನು ನೀಡುವುದು
11. ಮೌಲ್ಯಮಾಪನ ಪ್ರಕ್ರಿಯೆಯಿಂದ ಹೊರಬರುವ ಫಲಿತಾಂಶಗಳು ಧನಾತ್ಮಕ ಬದಲಾವಣೆಗೆ ಹಾಗೂ ಬೆಳವಣಿಗೆಗೆ ಪೂರಕವಾಗಿರುವಂತೆ ನೋಡಿಕೊಳ್ಳುವುದು
12. ಸ್ವ ಮೌಲ್ಯಮಾಪನ ಮಾಡಿಕೊಳ್ಳುವ ಸಾಮರ್ಥ್ಯ ವನ್ನು ಅಭಿವೃದ್ಧಿಗೊಳಿಸುವುದು.

## ಕಲಿಕೆಗಾಗಿ ಮೌಲ್ಯಮಾಪನ  ಕಲಿಕೆಯಾಗಿ ಮೌಲ್ಯಮಾಪನದ ವ್ಯತ್ಯಾಸ

ವಿದ್ಯಾರ್ಥಿಗಳಲ್ಲಿ ಕಲಿಕೆಯನ್ನು ತರುವಲ್ಲಿ ನಿರಂತರವಾಗಿ ಮೌಲ್ಯಮಾಪನವನ್ನು ವರ್ಷವಿಡಿ ಅಂದರೆ ತರಗತಿಯ ಪ್ರಾರಂಭದಿಂದ ತರಗತಿಯ ಕೊನೆಯವರೆಗೂ ಮೌಲ್ಯಮಾಪನ ನಡೆಸುವುದು ಅಂದರೆ ತರಗತಿಯ ಬೋಧನೆಯ ಅವಧಿಯಲ್ಲಿ , ಆಟದ ಮೈದಾನದಲ್ಲಿ , ವಿರಾಮದ ಅವಧಿಯಲ್ಲಿ ,ಪ್ರಾರ್ಥನಾ ಅವಧಿಯಲ್ಲಿ ಇತ್ಯಾದಿ ಶಾಲೆಯ ಎಲ್ಲಾ ಸಂದರ್ಭದಲ್ಲಿ ನಡೆಯುವ ಚಟುವಟಿಕೆಗಳನ್ನು ಮೌಲ್ಯಮಾಪನ  ಮಾಡುವುದನ್ನು ಕಲಿಕೆಗಾಗಿ ಮೌಲ್ಯಮಾಪನ ಎನ್ನುವರು.

ಕಲಿಕೆಯ ಮೌಲ್ಯಮಾಪನ ಎಂದರೆ ವಿದ್ಯಾರ್ಥಿ ಗಳ ಒಂದು ಶೈಕ್ಷಣಿಕ ವರ್ಷದಲ್ಲಿ ನಡೆದ ವಿದ್ಯಾರ್ಥಿಗಳ ಸಾಧನೆ ಅಥವಾ ದೌರ್ಬಲ್ಯವನ್ನು ಪತ್ತೆ ಹಚ್ಚಿ ಮೌಲೀಕರಿಸಿ ಶ್ರೇಣಿಗಳನ್ನು ನೀಡುವುದರ ಮೂಲಕ ನಿರ್ಧರಿಸುವುದಾಗಿರುತ್ತದ.

**ಪರೀಕ್ಷೆಯ ಅರ್ಥ;**

ವಿದ್ಯಾರ್ಥಿಯ ಕಲಿಕಾ ಪ್ರಮಾಣವನ್ನು ಅಥವಾ ಮಟ್ಟವನ್ನು ಪರೀಕ್ಷಿಸಲು ಮಾಡುವ ಪ್ರಕ್ರಿಯೆ ಪರೀಕ್ಷೆ.

**ಉತ್ತಮ ಪರೀಕ್ಷೆಯ ಲಕ್ಷಣಗಳು;**

* ವಿಶ್ವಾಸ ನಿಯತೆ
* ಸಮಂಜಸತೆ
* ವಸ್ತುನಿಷ್ಠತೆ
* ಪ್ರಾಯೋಗಿಕತೆ
* ವ್ಯಾಪಕತೆ

**ಸಾಧನ ಪರೀಕ್ಷೆಯ ಅರ್ಥ**

ಯಾವುದೇ ಒಂದು ನಿರ್ದಿಷ್ಟ ವಿಷಯದಲ್ಲಿ ವಿದ್ಯಾರ್ಥಿಗಳು ಪಡೆದುಕೊಂಡಂತಹ ಜ್ಞಾನವನ್ನು ಅಳೆಯುವಂತಹ ಪರೀಕ್ಷೆಗಳಿಗೆ ಸಾಧನ ಪರೀಕ್ಷೆಗಳು ಎಂದು ಕರೆಯುತ್ತಾರೆ.

**ಸಾಧನಾ ಪರೀಕ್ಷೆಯ ಪ್ರಾಮುಖ್ಯತೆಗಳು;**

1. ವಿದ್ಯಾರ್ಥಿಗಳ ಕಲಿಕಾ ಮಟ್ಟವನ್ನು ತಿಳಿದುಕೊಳ್ಳಲು ಸಹಾಯ ಮಾಡುತ್ತವೆ
2. ವಿದ್ಯಾರ್ಥಿಗಳನ್ನು ವಿವಿಧ ವರ್ಗಗಳಲ್ಲಿ ವಿಂಗಡಿಸಲು ನೆರವಾಗುತ್ತದೆ.
3. ವಿದ್ಯಾರ್ಥಿಗಳ ಸಾಮರ್ಥ್ಯದ ಮೇಲೆ ಮಾರ್ಗದರ್ಶನ ಮಾಡಲು ಅವಶ್ಯಕತೆಯನ್ನು ತಿಳಿಸುತ್ತದೆ.
4. ವಿದ್ಯಾರ್ಥಿಗಳಿಗೆ ಹಾಗೂ ಶಿಕ್ಷಕರಿಗೆ ಸ್ವ ಮೌಲ್ಯಮಾಪನ ಮಾಡಿಕೊಳ್ಳಲು ಸಹಾಯಕವಾಗಿದೆ
5. ಶಿಕ್ಷಕನ ಬೋಧನೆಯ ಸಫಲತೆ ಹಾಗೂ ವಿಫಲತೆಗಳನ್ನು ತಿಳಿದುಕೊಳ್ಳಲು ನೆರವಾಗುತ್ತದೆ.

**ಸಾಧನ ಪರೀಕ್ಷೆಯ ವಿಧಗಳು**

1. ಪ್ರಮಾಣಿಕೃತ ಪರೀಕ್ಷೆ – ಒಂದು ನಿರ್ದಿಷ್ಟ ಕ್ಷೇತ್ರದ ಕಲಿಕಾ ಫಲವನ್ನು ಪರೀಕ್ಷಿಸಲು ವೈಜ್ಞಾನಿಕವಾಗಿ ತಜ್ಞರಿಂದ ತಯಾರಿಸಿದ ಪರೀಕ್ಷೆ.
2. ಶಿಕ್ಷಕ ನಿರ್ಮಿತ ಪರೀಕ್ಷೆಗಳು_ಶಿಕ್ಷಕನು ತನ್ನ ತರಗತಿಯ ವಿದ್ಯಾರ್ಥಿಗಳ ಮಾನಸಿಕ ಮಟ್ಟ ಹಾಗೂ ವಿಷಯದ ಬೋಧನಾ ಉದ್ದೇಶ ಎಷ್ಟರಮಟ್ಟಿಗೆ ಈಡೇರಿದೆ ಎಂದು ತಿಳಿಯಲು ಮಾಡುವ ಪರೀಕ್ಷೆ.

**ಶಿಕ್ಷಕ ನಿರ್ಮಿತ ಪರೀಕ್ಷೆಗಳ ವಿಧಗಳು;**

* ವಿಷಯನಿಷ್ಠ ಪರೀಕ್ಷೆಯ ಪ್ರಶ್ನೆಗಳು
* ಲಘು ಮಾದರಿ ಪ್ರಶ್ನೆಗಳು
* ಪ್ರಬಂಧ ಮಾದರಿ ಪ್ರಶ್ನೆಗಳು
* ವಸ್ತುನಿಷ್ಠ ಪರೀಕ್ಷೆಯ ಪ್ರಶ್ನೆಗಳು–

- ಬಹು ಅಂಶ ಆಯ್ಕೆ
- ಸರಿ ಅಥವಾ ತಪ್ಪು
- ಹೊಂದಿಸಿ ಬರೆಯಿರಿ
- ಬಿಟ್ಟ ಸ್ಥಳ ತುಂಬಿರಿ
- ಸಂಬಂಧ ಸೂಚಕ
- ಗುಂಪಿಗೆ ಸೇರದ ಪದ
- ಕ್ರಮ ಜೋಡಣೆ
- ವರ್ಗೀಕರಣ

**ಪ್ರಶ್ನೆಯ ಅರ್ಥ;** ಕಲಿಕಾರ್ಥಿಯ ಸಾಧನೆ ಮಾಪನ ಮಾಡಲು ಮತ್ತು ತರಗತಿಯಲ್ಲಿ ಕಲಿಕೆ ಹಾಗೂ ವಿಮರ್ಶಾತ್ಮಕ ಆಲೋಚನೆಯನ್ನು ಉತ್ತೇಜಿಸಲು ಕಲಿಯುವವರ ಮಟ್ಟವನ್ನು ಅಳತೆ ಮಾಡಲು ಉಪಯೋಗಿಸುವ ಸೂಕ್ತವಾದ ತಂತ್ರ ಎಂದರೆ ಪ್ರಶ್ನೆಗಳು

**ಪ್ರಶ್ನೆಗಳ ಉದ್ದೇಶಗಳು ಮತ್ತು ರೀತಿ;**

1. ಪೂರ್ವ ಜ್ಞಾನವನ್ನು ಪರೀಕ್ಷಿಸುವ ಪ್ರಶ್ನೆಗಳು
2. ಪಾಠ ಬೆಳವಣಿಗೆಯ ಪ್ರಶ್ನೆಗಳು
3. ಮಕ್ಕಳು ಕಲಿಕೆಯಲ್ಲಿ ಭಾಗವಹಿಸುವಂತೆ ಮಾಡುವಂತಹ ಪ್ರಶ್ನೆಗಳು
4. ಕಲಿಕಾ ಮಟ್ಟವನ್ನು ಅಳೆಯುವ ಪ್ರಶ್ನೆಗಳು
5. ವಿವೇಚನೆ ಉಂಟು ಮಾಡುವಂತಹ ಪ್ರಶ್ನೆಗಳು
6. ಪುನರಾವರ್ತನೆಯ ಪ್ರಶ್ನೆಗಳು
7. ವಿಮರ್ಶಾತ್ಮಕ ಪ್ರಶ್ನೆಗಳು.
8. ಕಲಿಕೆಯಲ್ಲಿ ಆಳಶೋಧಾತ್ಮಕ ಪ್ರಶ್ನೆಗಳು
9. ಪುನರಾವರ್ತನೆಯ ಪ್ರಶ್ನೆಗಳು
10. ಕಲಿಕೆಯನ್ನು ಉತ್ತೇಜಿಸುವಂತಹ ಪ್ರಶ್ನೆಗಳು
11. ಗೃಹ ಪಾಠದ ಪ್ರಶ್ನೆಗಳು.

**ಪ್ರಶ್ನೆಗಳ ಉತ್ತಮ ಗುಣಲಕ್ಷಣಗಳು**

1. ಪ್ರಶ್ನೆಗಳು ಸ್ಪಷ್ಟವಾಗಿರಬೇಕು.
2. ಪ್ರಶ್ನೆಗಳು ಸರಳವಾಗಿಯೂ ಸುಲಭ ವಾಗಿಯೂ ಎಲ್ಲರಿಗೂ ತಿಳಿಯುವಂತಿರಬೇಕು
3. ಪ್ರಶ್ನೆಗಳ ರಚನೆಯು ವ್ಯಾಕರಣಬದ್ಧವಾಗಿರಬೇಕು
4. ಪ್ರಶ್ನೆಗಳು ಆದಷ್ಟು ನಿರ್ದಿಷ್ಟತೆಯನ್ನು ಹೊಂದಿರಬೇಕು
5. ಪ್ರಶ್ನೆಗಳು ಸಂಕ್ಷಿಪ್ತವಾಗಿರಬೇಕು.

**ಅಂತರ್ಗತ ಶಿಕ್ಷಣದ ಪರಿಕಲ್ಪನೆ ಮತ್ತು ವಿಶೇಷ ಅಗತ್ಯತೆಯುಳ್ಳ ಮಕ್ಕಳನ್ನು ಅರ್ಥೈಸಿಕೊಳ್ಳುವುದು.** ಅವಕಾಶ ವಂಚಿತ ಹಾಗೂ ಅನಾನುಕೂಲಕರ ಪರಿಸ್ಥಿತಿಗಳನ್ನೊಳಗೊಂಡಂತೆ ವಿವಿಧ ಹಿನ್ನೆಲೆಗಳ ಕಲಿಕಾರ್ಥಿಗಳ ಅಗತ್ಯತೆಗಳನ್ನು ಪೂರೈಸುವುದು. ಕಲಿಕಾ ನ್ಯೂನ್ಯತೆಗಳನ್ನೊಂದಿರುವ ಮಕ್ಕಳ ಅಗತ್ಯತೆಗಳನ್ನು ಪೂರೈಸುವುದು. ಪ್ರತಿಭಾವಂತ, ಸೃಜನಾತ್ಮಕ ಹಾಗೂ ವಿಶೇಷ ಪರಿಣತಿಯುಳ್ಳ ಕಲಿಕಾರ್ಥಿಗಳ ಅಗತ್ಯತೆಗಳನ್ನು ಪೂರೈಸುವುದು.

## ಬಿ) ಅಂತರ್ಗತ ಶಿಕ್ಷಣದ ಪರಿಕಲ್ಪನೆ ಮತ್ತು ವಿಶೇಷ ಅಗತ್ಯತೆಯುಳ್ಳ ಮಕ್ಕಳನ್ನು ಅರ್ಥೈಸಿಕೊಳ್ಳುವುದು:

### ಸಮನ್ವಯ ಶಿಕ್ಷಣ

**ಅರ್ಥ:** "ಒಂದೇ ತರಗತಿಯಲ್ಲಿ ಸಾಧಾರಣ ಮತ್ತು ಅಸಾಧಾರಣ ಮಕ್ಕಳಿಗೆ ಏಕಕಾಲದಲ್ಲಿ ನೀಡುವಂತಹ ಶಿಕ್ಷಣಕ್ಕೆ ಸಮನ್ವಯ ಶಿಕ್ಷಣ ಎಂದು ಕರೆಯುತ್ತಾರೆ".

"ವಿಭಿನ್ನ ಸಾಮರ್ಥ್ಯವಿರುವ ವಿದ್ಯಾರ್ಥಿಗಳಿಗೆ ಅವರದೇ ಶೈಲಿಯಲ್ಲಿ ನೀಡುವ ಶಿಕ್ಷಣವಾಗಿದೆ".

ನ್ಯೂನ್ಯತೆಯುಳ್ಳ ಮಕ್ಕಳಿಗೆ ಶಾಲಾ ತರಗತಿಯಲ್ಲಿ ಸಾಮಾನ್ಯ ಶಿಕ್ಷಕ ಶಿಕ್ಷಕಿಯರಿಂದ ಸಾಮಾನ್ಯ ಮಕ್ಕಳೊಂದಿಗೆ ಶೈಕ್ಷಣಿಕ ಅವಕಾಶ ಕಲ್ಪಿಸಿ ಕೊಡುವ ಉದ್ದೇಶವನ್ನು ಹೊಂದಿರುವುದೇ ಸಮನ್ವಯ ಶಿಕ್ಷಣವಾಗಿದೆ. ನ್ಯೂನತೆಯುಳ್ಳ ವ್ಯಕ್ತಿಗಳ ಹಕ್ಕು ಕಾಯ್ದೆ–2016 ರ ಉದ್ದೇಶದ ಪ್ರಕಾರ 6 ರಿಂದ 18 ವಯೋಮಾನದ ನ್ಯೂನ್ಯತೆಯುಳ್ಳ ಎಲ್ಲಾ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡಬೇಕಾಗಿರುವುದು ಕೇಂದ್ರ ಹಾಗೂ ರಾಜ್ಯ ಸರ್ಕಾರದ ಆದ್ಯ ಜವಾಬ್ದಾರಿಯಾಗಿದೆ.

ಸಾಮಾನ್ಯ ಶಾಲೆ ಅಥವಾ ವರ್ಗ ಕೋಣೆಯಲ್ಲಿ ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಸಾಮಾನ್ಯ ಮಕ್ಕಳೊಂದಿಗೆ ಶಿಕ್ಷಣವನ್ನು ಒದಗಿಸುವುದೇ ಸಮನ್ವಯ ಶಿಕ್ಷಣ.

- ಸಮನ್ವಯ ಶಿಕ್ಷಣದಲ್ಲಿ ಸರ್ವರಿಗೂ ಸಮಾನ ಅವಕಾಶಗಳಿಗೆ ಆದ್ಯತೆ ಇದೆ
- ಸಮನ್ವಯರಿಗೆ ವಿಷಯ ವಸ್ತುವನ್ನು ಅರ್ಥೈಸಲು ಪ್ರಯತ್ನಿಸುವುದು
- ಇಲ್ಲಿ ಸಂಯೋಜಿತ ವ್ಯವಸ್ಥೆಯಲ್ಲಿ ಕಲಿಕೆ ಸಾಗುವುದು

## ಸಮನ್ವಯ ಶಿಕ್ಷಣದ ಲಕ್ಷಣಗಳು

- ವರ್ತನೆಯಲ್ಲಿ ವೈವಿಧ್ಯತೆ
- ಸಮಾಜದಲ್ಲಿ ಸಹಬಾಳ್ವೆ
- ಸಹಕಾರ ಮನೋಭಾವ
- ಸಮಾನತೆಯ ಪರಿಕಲ್ಪನೆ

## ಸಮಗ್ರ ಶಿಕ್ಷಣ:

ಸಮಗ್ರ ಶಿಕ್ಷಣ ಪರಿಕಲ್ಪನೆಯು 1986 ರಾಷ್ಟ್ರೀಯ ಶಿಕ್ಷಣ ನೀತಿಯ ಮೂಲಕ ಬೆಳಕಿಗೆ ಬಂದಿತು. ಸಾಮಾನ್ಯ ಮಕ್ಕಳು ಮತ್ತು ವಿಕಲಚೇತನ ಮಕ್ಕಳ ನಡುವೆ ಆರೋಗ್ಯಕರವಾದ ಸಾಮಾಜಿಕ ಬಾಂಧವ್ಯ ಇರಬೇಕೆಂಬುದು ಈ ಶಿಕ್ಷಣದ ಪರಿಕಲ್ಪನೆಯಾಗಿದೆ.
"ಯಾವುದೇ ವಿಶೇಷ ಸೌಲಭ್ಯವಿಲ್ಲದೆ ಅಸಮರ್ಥ ಮಕ್ಕಳನ್ನು ಸಾಮಾನ್ಯ ಮಕ್ಕಳೊಂದಿಗೆ ಕಲಿಯಲು ಅವಕಾಶ ನೀಡುವುದೇ ಸಮಗ್ರ ಶಿಕ್ಷಣ.

- ಶಾಲೆಗೆ ದಾಖಲಾದ ಅಸಮರ್ಥ ಮಕ್ಕಳ ಕಲಿಕೆಗೆ ಅವಕಾಶ ನೀಡುವುದಾಗಿದೆ
- ವಿಶೇಷ ಯೋಜನೆಗಳ ಮೂಲಕ ಎರಡು ಬಗೆಯ ಮಕ್ಕಳಿಗೆ ಕಲಿಯಲು ಅವಕಾಶ ಮಾಡಿಕೊಡಲಾಗುವುದು
- ಸಮಗ್ರ ಶಿಕ್ಷಣವು ಮನೋವೈಜ್ಞಾನಿಕವಾಗಿ ಅವಶ್ಯಕವಾಗಿದೆ

## ವಿಶೇಷ ಮಕ್ಕಳು:

**ಅರ್ಥ:** ವಿಶೇಷ ಮಕ್ಕಳು ಸಾಮಾನ್ಯ ಮಕ್ಕಳಿಗಿಂತ ಬೌದ್ಧಿಕ, ದೈಹಿಕ, ಮತ್ತು ಸಾಮಾಜಿಕ ಗುಣಲಕ್ಷಣಗಳಲ್ಲಿ ಭಿನ್ನವಾಗಿರುತ್ತಾರೆ. ವಿಶಿಷ್ಟ ಮಕ್ಕಳು ವಿಶಿಷ್ಟ ಗುಣಗಳನ್ನು ಹೊಂದಿರುವವರು ಮತ್ತು ಇತರರಿಗಿಂತ ಭಿನ್ನರಾಗಿರುತ್ತಾರೆ.

### ವಿಶೇಷ ಶಿಕ್ಷಣ:

ಉಚಿತ ಮತ್ತು ಕಡ್ಡಾಯ ಶಿಕ್ಷಣದ ಅಡಿಯಲ್ಲಿ ವಿಶೇಷ ಶಿಕ್ಷಣವು ಒಂದಾಗಿದೆ.ಯಾರಿಗೆ ಕೇಳಲು, ನೋಡಲು, ಕಲಿಯಲು ಹೆಚ್ಚಿನ ಕಷ್ಟವಾಗುತ್ತದೆಯೋ ಅಂಥವರಿಗೆ ತಕ್ಕಂತೆ ಶಿಕ್ಷಣದಲ್ಲಿ ಮಾರ್ಪಾಡುಗಳನ್ನು ಮಾಡಿ ವ್ಯವಸ್ಥೆ ಮಾಡುವಂತಹ ಕಾರ್ಯರೂಪವೇ ವಿಶೇಷ ಶಿಕ್ಷಣ.
ರಾಷ್ಟ್ರೀಯ ಶಿಕ್ಷಣ ನೀತಿಯು ದೌರ್ಬಲ್ಯವಿರುವ ಮಕ್ಕಳಿಗೆ ವಿಶೇಷ ಶಿಕ್ಷಣದ ಅವಶ್ಯಕತೆಯು ಸಾಮಾನ್ಯ ಶಾಲೆಗಳಲ್ಲಿ ದೊರೆಯುವುದಿಲ್ಲವೋ ಅಂತವರಿಗೆ ಪ್ರತ್ಯೇಕ ಶಾಲೆಗಳಲ್ಲಿ ವಿಶೇಷ ಶಿಕ್ಷಣ ನೀಡಬೇಕೆಂದು ನಿರ್ಧರಿಸಿದೆ.

- ಮಕ್ಕಳ ದುರ್ಬಲತೆಗೆ ಅನುಗುಣವಾಗಿ ಕೊಡುವ ಶಿಕ್ಷಣ ವ್ಯವಸ್ಥೆಯಾಗಿದೆ
- ಇಲ್ಲಿ ವಿಶೇಷ ತರಬೇತಿ ಹೊಂದಿದ ಶಿಕ್ಷಕರು ಕಾರ್ಯ ನಿರ್ವಹಿಸುತ್ತಾರೆ
- ವಿಶೇಷ ಮಕ್ಕಳ ಸಮಸ್ಯೆಗಳನ್ನು ನಿವಾರಣೆ ಮಾಡಲಾಗುತ್ತದೆ
- ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿದವರಿಗೆ ಇಲ್ಲಿ ಸಹಾಯ ಮಾಡಲಾಗುವುದು

ವಿದ್ಯಾರ್ಥಿಗಳು ತಮ್ಮ ಮಿತವಾದ ಸಾಮರ್ಥ್ಯಗಳಿಂದ ಅಥವಾ ಇತರೆ ಸನ್ನಿವೇಶಗಳಿಂದ ಶೈಕ್ಷಣಿಕ ನ್ಯೂನತೆ ಹೊಂದಿರುತ್ತಾರೆ. ಇವರಿಗೆ ಸಾಮಾನ್ಯ ಶಾಲೆಗಳಲ್ಲಿ ನೀಡುವ ಶಿಕ್ಷಣದ ಬದಲಿಗೆ ಸಂಪೂರ್ಣವಾಗಿ ಅಥವಾ ಭಾಗಶಃ ವಿಶೇಷ ಶಿಕ್ಷಣದ ಅಗತ್ಯ ಇರುತ್ತದೆ.

## ವಿಶೇಷ ಶಿಕ್ಷಣದ ಸೇವೆಗೆ ಅಗತ್ಯವಾದ ಪ್ರಮುಖ ಅಂಶಗಳು:

- ತರಬೇತಿ ಹೊಂದಿದ ವ್ಯಕ್ತಿಗಳು
- ವಿಶೇಷ ಪಠ್ಯಕ್ರಮ
- ವಿಶೇಷ ಸೌಲಭ್ಯಗಳು

## ವಿಶೇಷ ಶಿಕ್ಷಣದ ಪ್ರಾಮುಖ್ಯತೆ:

- ವಿಶೇಷ ಶಿಕ್ಷಣ ವಿಭಿನ್ನ ತರಬೇತಿ ಒದಗಿಸುತ್ತದೆ
- ವಿಶೇಷ ಮಕ್ಕಳ ಸಮಸ್ಯೆಗಳಿಗೆ ಸರಿಯಾದ ಮಾರ್ಗ ಸೂಚಿಸುತ್ತದೆ
- ವಿಶೇಷ ಮಕ್ಕಳ ಅಗತ್ಯತೆಗಳು ಮತ್ತು ಸಮಸ್ಯೆಗಳ ಒಳನೋಟ ನೀಡುತ್ತದೆ
- ಹಲವಾರು ಚಟುವಟಿಕೆಗಳಲ್ಲಿ ಭಾಗವಹಿಸಲು ಸಹಕಾರಿಯಾಗಿದೆ
- ವಿಶಿಷ್ಟ ಮಕ್ಕಳಲ್ಲಿ ನೈಜತೆಯ ಪರಿಕಲ್ಪನೆಯನ್ನು ಮೂಡಿಸುತ್ತದೆ
- ಸೂಕ್ತ ವೃತ್ತಿಗಳನ್ನು ಆಯ್ಕೆ ಮಾಡಿಕೊಳ್ಳಲು ಸಹಕಾರಿಯಾಗಿದೆ

## ವಿಶೇಷ ಶಿಕ್ಷಣದ ಉದ್ದೇಶಗಳು:

- ವಿಶಿಷ್ಟ ಮಕ್ಕಳ ಸಾಮಾಜಿಕ ಮತ್ತು ವೈಯಕ್ತಿಕ ಹೊಂದಾಣಿಕೆ ಸಾಧಿಸುವುದು
- ಶೈಕ್ಷಣಿಕ ಸಾಧನೆಗಳನ್ನು ಉತ್ತಮಗೊಳಿಸುವುದು

- ವಿಶಿಷ್ಟ ಮಕ್ಕಳ ಅಗತ್ಯತೆಗಳನ್ನು ಪೂರೈಸಿಕೊಳ್ಳಲು ನೆರವಾಗುವುದು
- ಸಮುದಾಯದೊಂದಿಗೆ ಸಮನ್ವಯಗೊಳಿಸುವುದು
- ಸಾರ್ವತ್ರಿಕ ಶಿಕ್ಷಣದ ಗುರಿಯನ್ನು ಸಾಧಿಸುವುದು
- ಮಾನವ ಸಂಪನ್ಮೂಲವನ್ನು ಅಭಿವೃದ್ಧಿಗೊಳಿಸುವುದು.

**ವಿಧಗಳು:**

**ದೈಹಿಕ ಸವಾಲುಳ್ಳ ಮಕ್ಕಳು**

- ಮೂಳೆ ಕೀಲುಗಳಿಗೆ ಸಂಬಂಧಿಸಿದ ಸವಾಲುಳ್ಳ ಮಕ್ಕಳು
- ದೃಷ್ಟಿ ಸವಾಲುಳ್ಳ ಮಕ್ಕಳು
- ಶ್ರವಣ ಸವಾಲುಳ್ಳ ಮಕ್ಕಳು
- ವಾಕ್ ಸವಾಲುಳ್ಳ ಮಕ್ಕಳು

**2. ಬೌದ್ಧಿಕ ಸವಾಲುಳ್ಳ ಮಕ್ಕಳು**

- ಪ್ರತಿಭಾನ್ವಿತ ಮಕ್ಕಳು
- ಮಂದಗತಿಯಲ್ಲಿ ಕಲಿಯುವವರು
- ಮಾನಸಿಕ ಸವಾಲುಳ್ಳ ಮಕ್ಕಳು
- ಸೃಜನಶೀಲರು
- ಅಪೂರ್ಣ ಸಾಧಕರು

**3. ಸಂವೇಗಾತ್ಮಕ ಸವಾಲುಳ್ಳ ಮಕ್ಕಳು**

- ಸಂವೇಗಾತ್ಮಕವಾಗಿ ವಿಚಲಿತರಾದ ಮಕ್ಕಳು

**4. ಸಾಮಾಜಿಕ ಸವಾಲುಳ್ಳ ಮಕ್ಕಳು**

- ಸಾಮಾಜಿಕ ಅಪಸಮಾಯೋಜಿತರು
- ಬಾಲಾಪರಾಧಿಗಳು

**5. ಶೈಕ್ಷಣಿಕ ಸವಾಲುಳ್ಳ ಮಕ್ಕಳು**

- ಕಲಿಕೆಯ ಸವಾಲುಳ್ಳ ಮಕ್ಕಳು
- ಭಾಷಾ ದೌರ್ಬಲ್ಯವುಳ್ಳ ಮಕ್ಕಳು

**ವಿಕಾಸಾತ್ಮಕ ವೈಫಲ್ಯತೆ:**

- ಆಟಿಸಂ
- ಸೆರೆಬ್ರಲ್ ಪಾಲ್ಸಿ
- ಅವಧಾನ ಕೊರತೆಯ ಹೈಪರ್ ಆಕ್ಟಿವಿಟಿ ಡಿಸ್‌ಆರ್ಡರ್(ADHD)
- ಡೌನ್ ಸಿಂಡ್ರೋಮ್

**ವಿಭಿನ್ನ ಹಿನ್ನೆಲೆ ಹೊಂದಿರುವ ಸಮಸ್ಯಾತ್ಮಕ ಮಕ್ಕಳು:**

ವಿಭಿನ್ನ ಅಂಗವಿಕಲ ಮಕ್ಕಳು ಎಂದರೆ ಮಕ್ಕಳು ಹೊಂದಿರುವ ನ್ಯೂನತೆಯ ಪರಿಣಾಮವಾಗಿ ಸಾಮಾನ್ಯ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದರಲ್ಲಿ ಅಡ್ಡಿಯನ್ನುಂಟು ಮಾಡುವುದು.

**ಸಮಸ್ಯೆಗಳು**

- ಮಗುವಿನ ಸಾಮಾನ್ಯ ಬೆಳವಣಿಗೆ ಮತ್ತು ವಿಕಾಸ ಪರಿಪೂರ್ಣವಾಗಿರುವುದಿಲ್ಲ
- ನ್ಯೂನತೆಗಳು ಅಪಸಾಮಾನ್ಯ ವರ್ತನೆಗೆ ಕಾರಣವಾಗುತ್ತದೆ

- ಅಪೇಕ್ಷಿತ ಸಾಮಾನ್ಯ ಚಟುವಟಿಕೆಗಳಲ್ಲಿ ಅವರು ಪಾಲ್ಗೊಳ್ಳಲಾರರು
- ವೈವಿಧ್ಯಮಯ ಗುಣಗಳನ್ನು ಹೊಂದಿರುತ್ತಾರೆ
- ಗುಂಪು ಚರ್ಚೆಯಿಂದ ಹೊರಗಿರಲು ಪ್ರಯತ್ನಿಸುತ್ತಾರೆ
- ಕೀಳರಿಮೆ, ನಾಚಿಕೆ ಸ್ವಭಾವ, ಒಂಟಿಯಾಗಿರಲು ಇಚ್ಛಿಸುತ್ತಾರೆ
- ಆತ್ಮವಿಶ್ವಾಸದ ಕೊರತೆ ಮತ್ತು ಪರಿಕಲ್ಪನೆ ಇಲ್ಲದಿರುವುದು

## 1) ದೈಹಿಕ ಸವಾಲುಳ್ಳ ಮಕ್ಕಳು / ವಿಕಲ ಚೇತನರು:

**ಅ) ಅರ್ಥ:** ವಿಕಲಚೇತನರು / ದೈಹಿಕ ಸವಾಲುಳ್ಳ ಮಕ್ಕಳು ಎಂದರೆ, 'ಮೂಳೆಗಳು ಮತ್ತು ಕೀಲುಗಳ ಗಾತ್ರ ಮತ್ತು ರಚನೆಯಲ್ಲಿ ದೋಷಗಳಿದ್ದು ,ಸ್ನಾಯುಶಕ್ತಿ ಸಮನ್ವಯ ಮತ್ತು ನಿಯಂತ್ರಣದಲ್ಲಿ ಸಾಮಾನ್ಯ ಮಕ್ಕಳಿಗಿಂತ ಭಿನ್ನವಾಗಿರುವ ಮಕ್ಕಳು'.

**ಗುರುತಿಸುವಿಕೆ:**

- ಮೂಳೆ ಕೀಲುಗಳ ಸಮಸ್ಯೆಗಳಿಂದ ದೈಹಿಕ ನ್ಯೂನತೆ
- ಅಭಿಪ್ರೇರಣೆ ಕೊರತೆ
- ಅನ್ವೇಷಣಾ ಚಟುವಟಿಕೆಗಳಲ್ಲಿ ತೊಡಗದಿರುವುದು
- ಸ್ನಾಯು ಮತ್ತು ಅಂಗಗಳ ನಿಷ್ಕ್ರಿಯತೆ
- ಹೆಚ್ಚಾಗಿ ವಯಸ್ಕರನ್ನು ಅವಲಂಬಿಸುವುದು

**ವರ್ಗೀಕರಣ:**

- ಚಲನಶೀಲತೆ ಮತ್ತು ದೈಹಿಕ ದುರ್ಬಲತೆ
- ಬೆನ್ನುಹುರಿಯ ಅಶಕ್ತತೆ
- ಮೆದುಳಿನ ಅಶಕ್ತತೆ
- ದೃಷ್ಟಿಯ ಅಶಕ್ತತೆ
- ಶ್ರವಣದ ಅಶಕ್ತತೆ

**ಲಕ್ಷಣಗಳು:**

- ಕೈಕಾಲುಗಳು ಮತ್ತು ಸ್ನಾಯುಗಳು ಅನೈಚ್ಛಿಕವಾಗಿ ಕುಗ್ಗುತ್ತವೆ
- ಕೈಕಾಲುಗಳ, ಬೆರಳುಗಳ ಚಲನೆಯ ಮೇಲೆ ಐಚ್ಛಿಕ ನಿಯಂತ್ರಣವಿರುವುದಿಲ್ಲ
- ಸಂಪೂರ್ಣ ಶರೀರದ ಮೇಲೆ ನಿಯಂತ್ರಣವಿಲ್ಲದಿರುವುದು
- ನಿರಂತರ ಸ್ನಾಯು ಸೆಳೆತ
- ಬೆನ್ನೆಲುಬು ಒಂದು ಪಾರ್ಶ್ವ ಬಾಗಿರುವುದು
- ಹುಟ್ಟಿನಿಂದಲೇ ಕೈಕಾಲುಗಳು ಊನವಾಗಿರುವುದು
- ನಿಲ್ಲುವ ಮತ್ತು ಕೂರುವ ವಿನ್ಯಾಸದಲ್ಲಿ ಭಿನ್ನತೆ
- ಬೆರಳುಗಳು, ಕೈಕಾಲುಗಳು ಮತ್ತು ಕತ್ತಿನಲ್ಲಿನ ವಿರೂಪ
- ಎಸೆಯುವುದು ಮತ್ತು ಹಿಡಿಯುವುದರಲ್ಲಿ ಭಿನ್ನತೆ

**ಆ) ದೃಷ್ಟಿ ಸವಾಲುಳ್ಳ ಮಕ್ಕಳು:**

**ಅರ್ಥ:** ಯಾವ ವ್ಯಕ್ತಿಗೆ ಬೆಳಕಿನಲ್ಲಿ ವಸ್ತುಗಳನ್ನು ಸ್ಪಷ್ಟವಾಗಿ ನೋಡಲು, ಗುರುತಿಸಲು ಸಾಧ್ಯವಾಗುವುದಿಲ್ಲವೋ ಅಂತಹ ವ್ಯಕ್ತಿಗಳನ್ನು ದೃಷ್ಟಿ ಸವಾಲುಳ್ಳ ಮಕ್ಕಳು ಎಂದು ಕರೆಯುವರು.

**ಗುರುತಿಸುವಿಕೆ:**

- ಕಣ್ಣಿನ ರಚನೆ ಸಾಮಾನ್ಯರಿಗಿಂತ ವಿಭಿನ್ನವಾಗಿರುವುದು
- ಕಣ್ಣು ಗುಡ್ಡೆಯು ಒಂದು ಅಂಚಿನಲ್ಲಿರುವಂತೆ ಕಾಣುವುದು

- ಕಣ್ಣಿಗೆ ಪೊರೆ ಬಂದಿರುವುದು
- ಕಣ್ಣು ಗುಡ್ಡೆಯು ನಿರಂತರವಾಗಿ ತಿರುಗುವಂತೆ ಕಾಣುವುದು.
- ಪದೇ ಪದೇ ಕಣ್ಣುಗಳನ್ನು ಉಜ್ಜುತ್ತಿರುವುದು
- ಅತಿಯಾಗಿ ರೆಪ್ಪೆ ಮಿಟುಕಿಸುವುದು

**ವರ್ಗೀಕರಣ:**

ಅಂಧರು, ಸಮೀಪ ದೃಷ್ಟಿ ದೋಷವುಳ್ಳವರು, ದೂರ ದೃಷ್ಟಿಯುಳ್ಳವರು, ವರ್ಣಾಂಧತೆ, ರಾತ್ರಿ ಕುರುಡು, ಕೋಶಪೊರೆ ಆಧಾರಿತ ದೋಷವುಳ್ಳವರು, ಪಾರ್ಶ್ವ ದೃಷ್ಟಿ ದೋಷವುಳ್ಳವರು.

**ಲಕ್ಷಣಗಳು:**

- ವಸ್ತುಗಳನ್ನು, ಪುಸ್ತಕಗಳನ್ನು ಕಣ್ಣುಗಳಿಗೆ ಅತಿ ಸಮೀಪದಲ್ಲಿ ಹಿಡಿದುಕೊಂಡು ವೀಕ್ಷಿಸುವುದು
- ಇತರರ ಮುಖದಲ್ಲಿ ಕಾಣುವ ಅಭಿವ್ಯಕ್ತಿಗಳಿಗೆ ಸರಿಯಾಗಿ ಪ್ರತಿಕ್ರಿಯೆ ತೋರದಿರುವುದು
- ತಲೆ ನೋವು ಅಥವಾ ಕಣ್ಣುಗಳ ಸೋಂಕು ತಗಲುವುದು
- ಕಪ್ಪು ಹಲಗೆಯ ಮೇಲಿನ ಬರಹವನ್ನು ನೋಡಿ ಬರೆಯಲು ಮತ್ತು ಓದಲು ಕಷ್ಟಪಡುವುದು
- ಇತರೆ ಇಂದ್ರಿಯಗಳ ಮೇಲೆ ಹೆಚ್ಚಾಗಿ ಅವಲಂಬಿಸುವುದು
- ಮಿತವಾದ ಪರಿಧಿಯ ದೃಷ್ಟಿ
- ಬಣ್ಣಗಳ ವ್ಯತ್ಯಾಸ ತಿಳಿಯಲು ಅಸಮರ್ಥತೆ
- ಕಣ್ಣು ಮತ್ತು ಕೈಗಳ ನಡುವೆ ಸಮನ್ವಯವಿಲ್ಲದಿರುವುದು

### ಇ.) ಶ್ರವಣ ಸವಾಲುಳ್ಳ ಮಕ್ಕಳು:

**ಅರ್ಥ:** ಶ್ರವಣ ದೋಷವುಳ್ಳವರಲ್ಲಿ ಕಿವುಡರು ಮತ್ತು ದೋಷಪೂರ್ಣ ಆಲಿಸುವಿಕೆ ಉಳ್ಳವರೆಂಬ ಎರಡು ವಿಧಗಳನ್ನು ಕಾಣಬಹುದು ದೋಷಪೂರ್ಣ ಆಲಿಸುವಿಕೆ ಅಲ್ಪ ಪ್ರಮಾಣದ ಶ್ರವಣದೋಷವಾಗಿದೆ. ಸಾಮಾನ್ಯವಾಗಿ 35 ರಿಂದ 69 ಡೆಸಿಬಲ್‌ಗಳಷ್ಟು ಶ್ರವಣ ಸಾಮರ್ಥ್ಯದ ಕೊರತೆಯಿದ್ದು ಶ್ರವಣ ಸಾಧನದ ಸಹಾಯದಿಂದಾಗಲಿ ಅಥವಾ ಕಿವಿಗಳ ಮೂಲಕವಾಗಿ ಗ್ರಹಿಸಲು ಕಠಿಣವಾದರೂ ಆಲಿಸಲು ಸಾಧ್ಯವಿರುವ ಮಕ್ಕಳನ್ನು ದೋಷ ಪೂರ್ಣ ಆಲಿಸುವಿಕೆಯ ಮಕ್ಕಳು ಎಂದು ಕರೆಯುವರು.

ಸಾಮಾನ್ಯವಾಗಿ 70 ಡೆಸಿಬಲ್ ಅಥವಾ ಅದಕ್ಕಿಂತ ಹೆಚ್ಚಿನ ಶ್ರವಣ ಸಾಮರ್ಥ್ಯದ ಕೊರತೆ ಇದ್ದು, ಶ್ರವಣಸಾಧನದ ಸಹಾಯದಿಂದಾಗಲಿ ಅಥವಾ ಕಿವಿಗಳ ಮೂಲಕವಾಗಲಿ ಇತರರ ಮಾತುಗಳನ್ನು ಕೇಳಿ ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲದ ಮಗುವನ್ನು ಕಿವುಡನೆಂದು ಕರೆಯುವರು.

**ಗುರುತಿಸುವಿಕೆ:**

- ಸದಾ ಕಿವಿ ನೋವು ಎಂದು ಹೇಳುವುದು
- ಕಿವಿ ಸೋರಿಕೆಯಿಂದ ನರಳುತ್ತಿರುವುದು
- ಮಾತನಾಡುವಾಗ ಕೆಲವು ಮಾತಿನ ಶಬ್ದಗಳನ್ನು ಬಿಟ್ಟು ಬಿಡುವುದು
- ಮಾತನಾಡುವಾಗ ಮುಖವನ್ನು ಅಥವಾ ತುಟಿಗಳ ಚಲನೆಯನ್ನು ಗಮನಿಸುವುದು
- ಅತಿ ಗಟ್ಟಿಯಾಗಿ ಮಾತನಾಡುವುದು
- ಶಿಕ್ಷಕರು ಕೊಡುವ ಸೂಚನೆಗಳು ಅರ್ಥವಾಗದಿರುವುದು
- ವೈದ್ಯಕೀಯ ತಪಾಸಣೆಯ ಮೂಲಕ ಗುರುತಿಸಬಹುದು

**ವರ್ಗೀಕರಣ:**

- ಅಲ್ಪ ಪ್ರಮಾಣದ ಶ್ರವಣ ಸಾಮರ್ಥ್ಯದ ಕೊರತೆ (27 ರಿಂದ 40 ಡೆಸಿಬಲ್)
- ಮಿತವಾದ ಶ್ರವಣ ಸಾಮರ್ಥ್ಯದ ಕೊರತೆ (41 ರಿಂದ 55 ಡೆಸಿಬಲ್)
- ಮಧ್ಯಮ ಪ್ರಮಾಣದ ಶ್ರವಣ ಸಾಮರ್ಥ್ಯದ ಕೊರತೆ (56 ರಿಂದ 70 ಡೆಸಿಬಲ್)
- ತೀವ್ರ ಪ್ರಮಾಣದ ಶ್ರವಣ ಸಾಮರ್ಥ್ಯದ ಕೊರತೆ (71 ರಿಂದ 90 ಡೆಸಿಬಲ್)
- ಅಗಾಧವಾದ ಶ್ರವಣ ಸಾಮರ್ಥ್ಯದ ಕೊರತೆ (91 ಡೆಸಿಬಲ್ ಮತ್ತು ಹೆಚ್ಚು)

**ಲಕ್ಷಣಗಳು:**

- ತರಗತಿಯಲ್ಲಿ ಅವಧಾನ ಇಲ್ಲದಂತೆ ತೋರುವುದು.
- ಪ್ರಶ್ನೆಗಳು ಅರ್ಥವಾಗುವುದಿಲ್ಲವಾದ್ದರಿಂದ ಅಸಮರ್ಪಕ ಮತ್ತು ಅಸಂಬದ್ಧ ಉತ್ತರಗಳನ್ನು ನೀಡುವುದು
- ತರಗತಿಯಲ್ಲಿ ನಡೆಯುವ ಚರ್ಚೆಯಲ್ಲಿ ಭಾಗವಹಿಸದಿರುವುದು
- ಆಲಿಸುವುದಕ್ಕಾಗಿ ಮುಂದೆ ಬಾಗುವುದು
- ಶಬ್ದದ ದಿಕ್ಕನ್ನು ಗುರುತಿಸಲು ಕಠಿಣವಾಗುವುದು
- ಕಿವಿ ಸೋರುವುದು ಮತ್ತು ಕಿವಿ ನೋವು ಸಾಮಾನ್ಯವಾಗಿರುತ್ತದೆ.
- ಸೀಮಿತ ಪದ ಸಂಪತ್ತು

## ಈ) ಮಾತುಗಾರಿಕೆ ಸವಾಲುಳ್ಳ ಮಕ್ಕಳು:

**ಅರ್ಥ:** ಯಾವ ಮಕ್ಕಳು ತಮ್ಮ ವಯೋಮಾನಕ್ಕೆ ಅನುಗುಣವಾಗಿ ತಮ್ಮ ಅಭಿಪ್ರಾಯಗಳನ್ನು ಮತ್ತು ಆಲೋಚನೆಗಳನ್ನು ಸ್ವಾಭಾವಿಕವಾಗಿ ವ್ಯಕ್ತಪಡಿಸಲು ತಡವರಿಸುತ್ತಾರೋ ಅಥವಾ ಪದಗಳನ್ನು ಉಚ್ಚಾರ ಮಾಡಲು ಸಾಧ್ಯವಾಗುವುದಿಲ್ಲವೋ ಅಂತಹ ಮಕ್ಕಳನ್ನು ಮಾತುಗಾರಿಕೆ ಸವಾಲುಳ್ಳ ಮಕ್ಕಳು ಎಂದು ಕರೆಯಬಹುದು.

**ಗುರುತಿಸುವಿಕೆ:**

- ತರಗತಿಯಲ್ಲಿ ಮಾತು ಕಡಿಮೆ ಆಡುವುದು
- ಎಲ್ಲಾ ಮಕ್ಕಳೊಂದಿಗೆ ಬೆರೆಯದಿರುವುದು
- ಕೇಳಿದ ಪ್ರಶ್ನೆಗಳಿಗೆ ಉತ್ತರ ಗೊತ್ತಿದ್ದರೂ ಹೇಳದಿರುವುದು
- ಉಚ್ಚಾರಣೆ ದೋಷಗಳನ್ನು ಮಾಡುವುದು
- ಉಗ್ಗುವಿಕೆ ಮತ್ತು ತೊದಲುವಿಕೆ

**ವರ್ಗೀಕರಣ:**

- ಉಚ್ಚಾರಕ್ಕೆ ಸಂಬಂಧಿಸಿದ ದೋಷವುಳ್ಳ ಮಕ್ಕಳು
- ಭಾಷೆಯ ಅಪೂರ್ಣ ಕಲಿಕೆಗೆ ಸಂಬಂಧಿಸಿದ ದೋಷವುಳ್ಳ ಮಕ್ಕಳು
- ಉಗ್ಗುವಿಕೆ ಮತ್ತು ತೊದಲುವಿಕೆಯ ದೋಷಗಳುಳ್ಳ ಮಕ್ಕಳು
- ಶಾರೀರಿಕ ದೋಷವುಳ್ಳ ಮಕ್ಕಳು
- ಧ್ವನ್ಯಂಗಗಳಿಗೆ ಸಂಬಂಧಿಸಿದ ದೋಷಗಳುಳ್ಳ ಮಕ್ಕಳು
- ಮೂಕ ಮಕ್ಕಳು
- ಪರಿಸರ ಸಂಬಂಧಿ ದೋಷಗಳುಳ್ಳ ಮಕ್ಕಳು

**ಲಕ್ಷಣಗಳು:**

- ಅಸ್ಪಷ್ಟ ಪದಗಳ ಉಚ್ಚಾರ
- ತನ್ನ ಕೆಲವೇ ಸ್ನೇಹಿತರೊಂದಿಗೆ ಮಾತ್ರ ಬೆರೆಯುವುದು
- ಸಾಮಾನ್ಯವಾಗಿ ಶಾಲಾ ಸನ್ನಿವೇಶದಲ್ಲಿ ಭಾಗಿಯಾಗುವಿಕೆ ಕಡಿಮೆ
- ಮೆಲ್ಲನೆ ಮಾತನಾಡುವುದು ಅಥವಾ ಅಭಿಪ್ರಾಯ ವ್ಯಕ್ತಪಡಿಸುವುದು
- ಹೆಚ್ಚಾಗಿ ಆಂಗಿಕ ಭಾಷೆಯನ್ನು ಬಳಸುವುದು.
- ಪದ ಅಥವಾ ವಾಕ್ಯಗಳನ್ನು ಹೇಳುವಾಗ ಉಗ್ಗುವಿಕೆ ಅಥವಾ ತೊದಲುವಿಕೆ

## 2. ಬೌದ್ಧಿಕ ಸವಾಲುಳ್ಳ ಮಕ್ಕಳು:

**ಅರ್ಥ:** ಯಾವ ಮಕ್ಕಳು ಬೌದ್ಧಿಕ ಕಾರ್ಯನಿರ್ವಹಣೆಯಲ್ಲಿ ಸಾಧಾರಣ ಮಟ್ಟಕ್ಕಿಂತ ತುಂಬಾ ಕೆಳಗಿರುತ್ತಾರೋ ಅಂತಹ ಮಕ್ಕಳನ್ನು ಬೌದ್ಧಿಕ ಸವಾಲುಳ್ಳ ಮಕ್ಕಳು ಎಂದು ಕರೆಯುವರು.

### ಅ. ಪ್ರತಿಭಾನ್ವಿತ ಮಕ್ಕಳು

ಹೆಚ್ಚಿನ ಬೌದ್ಧಿಕ ಸಾಮರ್ಥ್ಯ, ವಿಶೇಷ ಸಾಮರ್ಥ್ಯಗಳು ಮತ್ತು ಪ್ರತಿಭೆಗಳನ್ನು ಹೊಂದಿರುವ ಮಕ್ಕಳನ್ನು ಪ್ರತಿಭಾವಂತ ಮಕ್ಕಳು ಎನ್ನುವರು. ಪ್ರತಿಭಾವಂತ ಮಕ್ಕಳೆಂದರೆ ಬುದ್ಧಿಶಕ್ತಿಯ ಸೂಚ್ಯಾಂಕ 140 ಮತ್ತು ಅದಕ್ಕಿಂತ ಹೆಚ್ಚು ಬುದ್ಧಿಶಕ್ತಿ ಹೊಂದಿರುವವರು ಎಂದು ಅರ್ಥೈಸಬಹುದು.

## ಲಕ್ಷಣಗಳು:

### ದೈಹಿಕ ಗುಣಲಕ್ಷಣಗಳು

- ಉತ್ತಮ ದೈಹಿಕ ಮತ್ತು ಸಾಮಾನ್ಯ ಆರೋಗ್ಯ ಹೊಂದಿರುತ್ತಾರೆ
- ಉತ್ತಮ ಸಮನ್ವಯ ಹಾಗೂ ಸ್ನಾಯು ನಿಯಂತ್ರಣ ಹೊಂದಿರುತ್ತಾರೆ
- ತಕ್ಷಣ ಪ್ರತಿಕ್ರಿಯಿಸುತ್ತಾರೆ ಮತ್ತು ಶೀಘ್ರವಾಗಿ ಬೆಳೆಯುತ್ತಾರೆ

## ಬೌದ್ಧಿಕ ಲಕ್ಷಣಗಳು

- ಅತಿ ಹೆಚ್ಚಿನ ಬುದ್ಧಿಶಕ್ತಿಯನ್ನು ಹೊಂದಿರುತ್ತಾರೆ
- ವೇಗವಾಗಿ ಕಲಿಯುವ ಮತ್ತು ಗ್ರಹಿಸುವ ಸಾಮರ್ಥ್ಯ
- ಹೆಚ್ಚಿನ ಪದ ಸಂಪತ್ತು ಮತ್ತು ಉತ್ತಮ ಕಲಿಕಾ ಸಾಮರ್ಥ್ಯ
- ದೀರ್ಘಕಾಲ ಅವಧಾನ ಕೇಂದ್ರೀಕರಿಸುವ ಸಾಮರ್ಥ್ಯ
- ವಿಭಿನ್ನ ಮುಖ ಚಿಂತನಾ ಸಾಮರ್ಥ್ಯ
- ಸೂಕ್ಷ್ಮ ಹಾಗೂ ನಿಖರವಾದ ವೀಕ್ಷಣಾ ಸಾಮರ್ಥ್ಯ
- ವೈವಿಧ್ಯಮಯ ಆಸಕ್ತಿಗಳು

## ವ್ಯಕ್ತಿತ್ವದ ಗುಣಲಕ್ಷಣಗಳು

- ಅನ್ವೇಷಿಸುವ ಹಾಗೂ ಸೃಷ್ಟಿಸುವ ಅದಮ್ಯ ಬಯಕೆ
- ಪ್ರಶ್ನಿಸುವುದನ್ನು ಇಚ್ಛಿಸುತ್ತಾರೆ
- ಉತ್ತಮ ಯೋಜನಾ ಸಾಮರ್ಥ್ಯ
- ಭಾವನಾತ್ಮಕವಾಗಿ ಪರಿಪಕ್ವರು ಮತ್ತು ಕ್ರಿಯಾಶೀಲರು
- ಸೃಜನಶೀಲರು ಮತ್ತು ಉತ್ತಮ ಚಾರಿತ್ರ್ಯವನ್ನು ಹೊಂದಿರುವರು

## ಆ. ಮಂದಗತಿಯಲ್ಲಿ ಕಲಿಯುವವರು:

**ಅರ್ಥ:** ಶೈಕ್ಷಣಿಕವಾಗಿ ಹಿಂದುಳಿದ ಮಕ್ಕಳನ್ನು ಮಂದಗತಿಯಲ್ಲಿ ಕಲಿಯುವವರು ಅಥವಾ ನಿಧಾನ ಗತಿಯಲ್ಲಿ ಕಲಿಯುವವರು ಎನ್ನುತ್ತಾರೆ. ಯಾರು ತಮ್ಮ ಸ್ವಾಭಾವಿಕ ಸಾಮರ್ಥ್ಯಗಳಿಗಿಂತ ಕೆಳಮಟ್ಟದ ಶೈಕ್ಷಣಿಕ ಸಾಧನೆ ಮಾಡುತ್ತಾರೋ ಅವರನ್ನು ಕಲಿಕೆಯಲ್ಲಿ ಹಿಂದುಳಿದವರು ಎನ್ನುವರು.

## ಲಕ್ಷಣಗಳು:

### ದೈಹಿಕ ಲಕ್ಷಣಗಳು

- ನಿಧಾನವಾದ ಸಂವೇದನಾ ಗತಿ ವಿಕಾಸ
- ದೃಷ್ಟಿ ದೋಷ ಮಾತಿನ ಹಾಗೂ ಶ್ರವಣದೋಷ
- ಕನಿಷ್ಠ ಮಟ್ಟದ ಗತಿ ಕೌಶಲ ಮತ್ತು ಸ್ನಾಯುಗಳ ಸಮನ್ವಯದ ಕೊರತೆ

### ಬೌದ್ಧಿಕ ಲಕ್ಷಣಗಳು

- ಕಡಿಮೆ ಬುದ್ಧಿ ಶಕ್ತಿ ಮತ್ತು ಬುದ್ಧಿ ಶಕ್ತಿಯ ಸೂಚ್ಯಾಂಕ
- ಅಮೂರ್ತ ಚಿಂತನೆಯ ಕೊರತೆ ಮತ್ತು ತಾರ್ಕಿಕ ಸಾಮರ್ಥ್ಯದ ಕೊರತೆ
- ಕೆಳಮಟ್ಟದ ಜ್ಞಾಪನಾ ಶಕ್ತಿ, ಸೃಜನಶೀಲತೆ ಮತ್ತು ವಿಮರ್ಶಾತ್ಮಕ ಚಿಂತನೆ
- ಸಾಮಾನ್ಯ ಜ್ಞಾನ ಮತ್ತು ತೀರ್ಮಾನ ಕೈಗೊಳ್ಳುವ ಶಕ್ತಿಯ ಕೊರತೆ

**ಶೈಕ್ಷಣಿಕ ಲಕ್ಷಣಗಳು**

- ಕನಿಷ್ಠ ಮಟ್ಟದ ಭಾಷಾ ಸಾಮರ್ಥ್ಯ
- ಕಲಿಕೆಯ ಬಗ್ಗೆ ಋಣಾತ್ಮಕ ಧೋರಣೆ
- ಕಲ್ಪನಾ ಸಾಮರ್ಥ್ಯದ ಕೊರತೆ
- ಅಸಮರ್ಪಕ ವ್ಯಾಸಂಗದ ಹಾಗೂ ವಿಚಾರಣೆ ಕೌಶಲಗಳು

**ಸಾಮಾಜಿಕ ಲಕ್ಷಣಗಳು**

- ಅನಪೇಕ್ಷಿತ ಸಾಮಾಜಿಕ ಗುಣಗಳು ಕಂಡುಬರುತ್ತವೆ
- ಸಮ ವಯಸ್ಕರು ಇವರನ್ನು ಅಲ್ಪರೆಂದು ಭಾವಿಸಿ ತಿರಸ್ಕರಿಸುತ್ತಾರೆ

## ಇ. ಮಾನಸಿಕ ಸವಾಲುಳ್ಳ ಮಕ್ಕಳು:

**ಅರ್ಥ:** ಮಾನಸಿಕ ಸವಾಲುಳ್ಳ ಮಕ್ಕಳೆಂದರೆ ಬೌದ್ಧಿಕ ಕಾರ್ಯ ನಿರ್ವಹಣೆಯಲ್ಲಿ ಇವರು ಸಾಧಾರಣ ಮಟ್ಟಕ್ಕಿಂತ ತುಂಬಾ ಕೆಳಗಿರುತ್ತಾರೆ. ಮಾನಸಿಕ ನ್ಯೂನತೆಗೆ ಬುದ್ಧಿಶಕ್ತಿ ಕಡಿಮೆ ಇರುವುದೇ ಒಂದು ಪ್ರಮುಖ ಅಂಶವೆಂದು ಪರಿಗಣಿಸಲಾಗಿದೆ.

**ವರ್ಗೀಕರಣ:**

- ಶಿಕ್ಷಣಾರ್ಹ ಮಾನಸಿಕ ಸವಾಲುಳ್ಳ ಮಕ್ಕಳ ಬುದ್ಧಿಶಕ್ತಿಯ ಸೂಚ್ಯಾಂಕ (51–75)
- ತರಬೇತಿ ಪಡೆಯಬಲ್ಲ ಮಾನಸಿಕ ಸವಾಲುಳ್ಳ ಮಕ್ಕಳ ಬುದ್ಧಿಶಕ್ತಿಯ ಸೂಚ್ಯಾಂಕ (26–50)
- ಆಶ್ರಿತ ಅಥವಾ ತರಬೇತಿ ನೀಡಲಾಗದ ಮಾನಸಿಕ ಸವಾಲುಳ್ಳ ಮಕ್ಕಳ ಬುದ್ಧಿಶಕ್ತಿಯ ಸೂಚ್ಯಾಂಕ (25ಕ್ಕಿಂತ ಕಡಿಮೆ)

**ಲಕ್ಷಣಗಳು:**

- ಮೆದುಳಿನ ಅಪೂರ್ಣ ವಿಕಾಸ, ಚಂಚಲ ಸ್ವಭಾವ ಏಕಾಗ್ರತೆ ಮತ್ತು ಸಮನ್ವಯದ ಕೊರತೆ
- ಮಿತವಾದ ಸ್ಮರಣ ಶಕಿ, ಜ್ಞಾಪಕ ಶಕ್ತಿ, ಕಲ್ಪನಾ ಶಕ್ತಿ ಮತ್ತು ಆಲೋಚನಾ ಶಕ್ತಿ
- ಕನಿಷ್ಠ ಮಟ್ಟದ ಸ್ವ ಪರಿಕಲ್ಪನೆ ಮತ್ತು ಸೃಜನಶೀಲತೆ
- ಆಸಕ್ತಿ, ಅವಧಾನ ಮತ್ತು ಅಮೂರ್ತ ಆಲೋಚನಾ ಸಾಮರ್ಥ್ಯದ ಕೊರತೆ
- ಕಲಿಕೆಯಲ್ಲಿ ಸಾಮಾನ್ಯ ಪ್ರಗತಿಯನ್ನು ಕಾಣಲಾರರು
- ಸ್ವ ನಿಯಂತ್ರಣ, ಸ್ವಾವಲಂಬನೆಯ ಕೊರತೆ ಮತ್ತು ಸ್ವಾತಂತ್ರ್ಯ ಜೀವನವನ್ನು ಸಾಗಿಸಲು ಸಾಧ್ಯವಿಲ್ಲ
- ಮಿತವಾದ ಶಬ್ದ ಸಂಪತ್ತು ಮತ್ತು ಸಂಪರ್ಕ ಸಾಮರ್ಥ್ಯದ ಕೊರತೆ
- ನಿಧಾನವಾದ ಸಂವೇದನಾ ಗತಿ ವಿಕಾಸ
- ಕನಿಷ್ಠ ಮಟ್ಟದ ಸ್ನಾಯು ಸಂಯೋಜನೆ ಮತ್ತು ಗತಿ ಕೌಶಲಗಳು
- ಭಾವನೆಗಳನ್ನು ಸಮರ್ಪಕವಾಗಿ ವ್ಯಕ್ತಪಡಿಸಲಾರರು
- ಅಗತ್ಯವಾದ ಬೌದ್ಧಿಕ ಸಾಮರ್ಥ್ಯದ ಕೊರತೆ, ವ್ಯಕ್ತಿತ್ವ ಅವ್ಯವಸ್ಥಿತವಾಗಿರುತ್ತದೆ ಮತ್ತು ಆಕರ್ಷಕವಾಗಿರುವುದಿಲ್ಲ.

## ಅಪೂರ್ಣ ಸಾಧಕರು:

**ಅರ್ಥ:** ಒಬ್ಬ ವಿದ್ಯಾರ್ಥಿಯ ಶೈಕ್ಷಣಿಕ ಸಾಮರ್ಥ್ಯ ಅವನ ಮಾನಸಿಕ ಸಾಮರ್ಥ್ಯ ಕ್ಕಿಂತ ತುಂಬಾ ಕಡಿಮೆ ಮಟ್ಟದಲ್ಲಿದ್ದರೆ ಅವನನ್ನು ಅಪೂರ್ಣ ಸಾಧಕ ಎನ್ನುವರು. ಅಪೂರ್ಣ ಸಾಧಕರ ಶೈಕ್ಷಣಿಕ ಮಟ್ಟವು ತನ್ನ ಸಹಪಾಠಿಗಳಿಗಿಂತ ಬಹಳ ಕೆಳಮಟ್ಟದಲ್ಲಿರುತ್ತದೆ.

**ಲಕ್ಷಣಗಳು:**

- ಅಲ್ಪ ತೃಪ್ತರು ಮತ್ತು ಸನ್ನಿವೇಶದಿಂದ ಹೊರ ಹೋಗುವ ಪ್ರವೃತ್ತಿಯವರು
- ಕಡಿಮೆ ಮಟ್ಟದ ಭಾವನಾತ್ಮಕ ಸ್ಥಿರತೆ, ನಾಚಿಕೆ ಸ್ವಭಾವ ಮತ್ತು ಕೀಳರಿಮೆಯ ಮನೋಭಾವ
- ಆತ್ಮವಿಶ್ವಾಸದ ಕೊರತೆ, ನಿರಾಶವಾದಿ ಮತ್ತು ಸದಾ ಚಿಂತಾಕ್ರಾಂತನಾಗಿರುವುದು
- ಅಧ್ಯಯನದಲ್ಲಿ ಕಡಿಮೆಯಾಸಕ್ತಿ, ಅವಿಧೇಯರು ಮತ್ತು ಅನಗತ್ಯವಾಗಿ ಸಮಯ ಕಳೆಯುವರು

- ಉತ್ತಮ ಓದುವ ಕೌಶಲಗಳ ಕೊರತೆ ಮತ್ತು ಶಾಲಾ ಸಂಬಂಧಿತ ಚಟುವಟಿಕೆಗಳಲ್ಲಿ ಆಸಕ್ತಿಯ ಕೊರತೆ
- ಸೂಕ್ತ ಜ್ಞಾನಾತ್ಮಕ ವಾತಾವರಣದ ಕೊರತೆ ಮತ್ತು ಕೆಳಮಟ್ಟದ ಶೈಕ್ಷಣಿಕ ಸಾಧನೆ

## ಸೃಜನಾತ್ಮಕ ಮತ್ತು ವಿಶೇಷ ಪರಿಣಿತಿಯುಳ್ಳ ಮಕ್ಕಳು:

**ಅರ್ಥ:** "ಸನ್ನಿವೇಶದಲ್ಲಿ ಇರುವ ಕೊರತೆಯನ್ನು ಸುಲಭವಾಗಿ ಗ್ರಹಿಸಿ, ಅದರ ಸ್ವರೂಪವನ್ನು ಸ್ಪಷ್ಟವಾಗಿ ಅರಿತು, ಅದರ ಬಗ್ಗೆ ಆಧಾರಕಲ್ಪಿಸಿ, ರೂಪಿಸಿ ಪರೀಕ್ಷಿಸುವ ಸಂದರ್ಭಕ್ಕೆ ಅನುಗುಣವಾಗಿ ಆಧಾರ ಪರಿಕಲ್ಪನೆಯನ್ನು ಸರಿಯಾದ ರೀತಿಯಲ್ಲಿ ಬದಲಿಸಿ, ಪರೀಕ್ಷಿಸುವ ಫಲಿತಾಂಶವನ್ನು ಯಶಸ್ವಿಯಾಗಿ ಇತರರಿಗೆ ತಿಳಿಯಪಡಿಸುವ ಸಾಮರ್ಥ್ಯವಿರುವ ಮಕ್ಕಳನ್ನು ಸೃಜನಾತ್ಮಕ ಮತ್ತು ವಿಶೇಷ ಪರಿಣಿತಿಯುಳ್ಳ ಮಕ್ಕಳು ಎಂದು ಕರೆಯುತ್ತೇವೆ".

ಸೃಜನಾತ್ಮಕ ಮತ್ತು ವಿಶೇಷ ಪರಿಣಿತಿಯುಳ್ಳ ಮಕ್ಕಳು ಹೊಸ ಕ್ಷೇತ್ರಗಳನ್ನು ಅನ್ವೇಶಿಸುವವರು, ಹೊಸ ವೀಕ್ಷಣೆ ಮಾಡುವರು, ಹೊಸ ಊಹೆಗಳನ್ನು ಮಾಡುವರು ಮತ್ತು ಹೊಸ ತೀರ್ಮಾನಗಳನ್ನು ಕೈಗೊಳ್ಳುವ ವ್ಯಕ್ತಿಯಾಗಿರುತ್ತಾನೆ.

**ಲಕ್ಷಣಗಳು:**

- ಸ್ವಯಂ ಪ್ರೇರಣೆ, ನಾವಿನ್ಯತೆ, ಸಮಾಯೋಜನೆಯಂತಹ ಲಕ್ಷಣಗಳನ್ನು ಮೈಗೂಡಿಸಿಕೊಂಡಿರುತ್ತಾರೆ
- ತನ್ನ ನಂಬಿಕೆ ಮತ್ತು ಮೌಲ್ಯಗಳಲ್ಲಿ ದೃಢ ವಿಶ್ವಾಸವನ್ನು ಹೊಂದಿರುತ್ತಾರೆ
- ಸಮಸ್ಯೆಗಳಲ್ಲಿ ತಲ್ಲೀನನಾಗಿರುತ್ತಾರೆ ಮತ್ತು ಸಮಸ್ಯೆ ಪರಿಹರಿಸುವಾಗ ಒಳನೋಟ ಪಡೆಯುತ್ತಾರೆ
- ನಿರ್ಣಾಯಕ ವಿಷಯಗಳಲ್ಲಿ ಸ್ವತಂತ್ರ ತೀರ್ಮಾನ ಕೈಗೊಳ್ಳಬಲ್ಲರು.
- ರಚನಾತ್ಮಕ ಟೀಕೆ ಮಾಡುವವರಾಗಿರುತ್ತಾರೆ.
- ವಿಭಿನ್ನ ಮುಖ ಚಿಂತನಾ ಸಾಮರ್ಥ್ಯ ಹೊಂದಿರುವವರು.
- ಹೊಸ ಆಲೋಚನೆಗಳು ಮತ್ತು ಚಿಂತನೆಗಳನ್ನು ಹೊಂದಿರುತ್ತಾರೆ

**ಕಲಿಕೆಯ ಸವಾಲುಳ್ಳ ಮಕ್ಕಳು:**

ಕಲಿಕೆಯಲ್ಲಿ ಸೀಮಿತ ಸಾಮರ್ಥ್ಯವುಳ್ಳ ಮಕ್ಕಳನ್ನು ಕಲಿಕೆಯ ಸವಾಲುಗಳುಳ್ಳ ಮಕ್ಕಳೆನ್ನುವರು. ನಿರ್ದಿಷ್ಟ ಕಲಿಕೆಯ ಸಮಸ್ಯೆಗಳು ಸಾಮಾನ್ಯವಾಗಿ ಓದು, ಬರಹ ಮತ್ತು ಗಣಿತ ಕಲಿಕೆಯ ಸಮಸ್ಯೆಗಳಾಗಿರುತ್ತದೆ.

ಕಲಿಕಾ ಸವಾಲುಗಳುಳ್ಳ ಮಗು ಮಾತನ್ನು ಗ್ರಹಿಸುವಲ್ಲಿ, ಮಾತನಾಡುವಲ್ಲಿ, ಓದುವಲ್ಲಿ, ಬರೆಯುವಲ್ಲಿ, ಕಾಗುಣಿತದ ಬಳಕೆಯಲ್ಲಿ ಮತ್ತು ಅಂಕಗಣಿತದ ಬಳಕೆಯಲ್ಲಿ ಸಾಕಷ್ಟು ಕಠಿಣತೆಯನ್ನು ಎದುರಿಸುತ್ತಾನೆ.

**ವರ್ಗೀಕರಣ:**

- ಓದಿನ ದೌರ್ಬಲ್ಯ ಉಳ್ಳವರು
- ಬರವಣಿಗೆ ದೌರ್ಬಲ್ಯ ಉಳ್ಳವರು
- ಅಂಕಗಣಿತ ದೌರ್ಬಲ್ಯ ಉಳ್ಳವರು

**ಲಕ್ಷಣಗಳು:**

- ಶಾಲಾ ವಿಷಯಗಳನ್ನು / ಪಠ್ಯವನ್ನು ಕಲಿಯುವುದರಲ್ಲಿ ಕಠಿಣತೆ
- ಗಡಿಯಾರ ನೋಡಿ ಸಮಯ ಹೇಳುವಲ್ಲಿ, ದಿನಗಳು, ತಿಂಗಳುಗಳು ಮತ್ತು ಋತುಗಳ ಅನುಕ್ರಮವನ್ನು ನೆನಪಿಟ್ಟುಕೊಳ್ಳಲು ಕಷ್ಟವಾಗುವುದು.
- ಬರವಣಿಗೆಯಲ್ಲಿ ನಿರ್ದಿಷ್ಟ ದೋಷಗಳು ಕಂಡುಬರುತ್ತವೆ
- ಸಮವಯಸ್ಕರಿಗಿಂತ ತುಂಬಾ ನಿಧಾನವಾಗಿ ಓದುತ್ತಾರೆ
- ಸಮವಯಸ್ಕರು ಅನುಸರಿಸುವಂತಹ ಮೌಖಿಕ ಮತ್ತು ಲಿಖಿತ ನಿರ್ದೇಶನಗಳನ್ನು ಸರಿಯಾಗಿ ಅರ್ಥೈಸುವುದಿಲ್ಲ
- ಸಾಧನೆಯ ಮಟ್ಟದಲ್ಲಿ ಅಸಂಬದ್ಧತೆ ಕಂಡುಬರುತ್ತದೆ.
- ಅಂಕಗಣಿತದ ವಿಷಯದಲ್ಲಿ ತೊಂದರೆ ಅನುಭವಿಸುತ್ತಾರೆ
- ಭಾಷಾ ವಿಕಾಸ ತುಂಬಾ ನಿಧಾನವಾಗಿರುತ್ತದೆ

- ಸಾಮಾಜಿಕ ಅಪರಿಪಕ್ವರು, ಅಜಾಗರೂಕತೆ, ಬೇಜವಾಬ್ದಾರಿತನ ಮತ್ತು ಪ್ರಾರಂಭಿಸಿದ ಕೆಲಸವನ್ನು ಪೂರ್ಣಗೊಳಿಸದಿರುವುದು.
- ನಿರ್ದಿಷ್ಟ ದಿಕ್ಕುಗಳನ್ನು ನೆನಪಿಟ್ಟುಕೊಳ್ಳಲು ಕಷ್ಟ ಪಡುತ್ತಾರೆ.

## ವಂಚಿತ ಮತ್ತು ಅನಾನುಕೂಲಕರ ಪರಿಸ್ಥಿತಿಯ ವಿದ್ಯಾರ್ಥಿಗಳು:

**ಅರ್ಥ:** ಸಮಾಜದಲ್ಲಿ ಸೌಲಭ್ಯ ವಂಚಿತ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಸ್ಥಾನಮಾನಗಳನ್ನು ತಲುಪಲಾಗದ ಮತ್ತು ಎಲ್ಲಾ ರೀತಿಯ ಕಷ್ಟ, ದೌರ್ಜನ್ಯ, ತುಳಿತಕ್ಕೆ ಒಳಗಾದ ಜೀವನವನ್ನು ನಡೆಸುತ್ತಿರುವ ಗುಂಪುಗಳಿಗೆ ವಂಚಿತ ಮತ್ತು ಅನಾನುಕೂಲ ಗುಂಪುಗಳು ಎಂದು ಕರೆಯುವರು.

### ವರ್ಗೀಕರಣ:

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗದವರು, ಅಲ್ಪಸಂಖ್ಯಾತರು, ಹೆಣ್ಣು ಮಕ್ಕಳು, ನಿರ್ಗತಿಕರು, ನಿರಾಶ್ರಿತರು ಮತ್ತು ವಿಶೇಷ ಅಗತ್ಯವುಳ್ಳ ಮಕ್ಕಳು.

## ಭಾಷಾ ದೌರ್ಬಲ್ಯವುಳ್ಳ ಮಕ್ಕಳು:

ಪದ, ವಾಕ್ಯ ಮತ್ತು ವಿಶೇಷ ಅಕ್ಷರಗಳನ್ನು ಅರ್ಥಪೂರ್ಣವಾಗಿ ಉಚ್ಚರಿಸಲಾಗದೆ ಇರುವ ಮಕ್ಕಳನ್ನು ಭಾಷಾ ದೌರ್ಬಲ್ಯವುಳ್ಳ ಮಕ್ಕಳೆಂದು ಕರೆಯುತ್ತಾರೆ. ಮಾತನಾಡುವಾಗ ಉಗ್ಗುವುದು ತೊದಲುವುದು ಅಕ್ಷರಗಳನ್ನು ನುಂಗುವುದು ಅಕ್ಷರಗಳ ಪುನರಾವರ್ತನೆ, ಒಂದು ಅಕ್ಷರಕ್ಕೆ ಬದಲಾಗಿ ಮತ್ತೊಂದು ಅಕ್ಷರ ಉಚ್ಚರಿಸುವುದು ಇವು ಭಾಷಾ ದೌರ್ಬಲ್ಯವುಳ್ಳ ಮಕ್ಕಳ ಲಕ್ಷಣವಾಗಿದೆ.

ವಾನ್‌ರಿಪ್ಪನ್‌ರವರ ಪ್ರಕಾರ "ಸ್ಪಷ್ಟವಾಗಿ ಮಾತನಾಡುವವರ ಮಾತಿನ ಸ್ವರೂಪಕ್ಕಿಂತ ಭಿನ್ನರಾಗಿದ್ದು ಸಂವಹನದಲ್ಲಿ ತೊಡಕುಂಟು ಮಾಡುವ ಇತರರನ್ನು ಗಮನ ಸೆಳೆಯುವಲ್ಲಿ ಅಪಹೊಂದಾಣಿಕೆಗೆ ಒಳಪಡುವಂತಿದ್ದರೆ ಅವರನ್ನು ಭಾಷಾ ದೌರ್ಬಲ್ಯವುಳ್ಳ ಮಕ್ಕಳೆಂದು ಕರೆಯುತ್ತಾರೆ".

# ಇ)ಕಲಿಕೆ ಮತ್ತು ಬೋಧನಾ ಶಾಸ್ತ್ರ :

## ಕಲಿಕೆಯ ಅರ್ಥ;

ಪ್ರತಿಯೊಂದು ಜೀವಿಯು ತನ್ನ ಜೀವಿತಾವಧಿಯಲ್ಲಿ ಅನೇಕ ಸಾಮರ್ಥ್ಯಗಳನ್ನು ,ಪ್ರವೃತ್ತಿಗಳನ್ನು, ಕೌಶಲ್ಯಗಳನ್ನು ,ವಿಷಯಗಳನ್ನು ತನ್ನದಾಗಿಸಿಕೊಳ್ಳುತ್ತದೆ. ಅದನ್ನು ನಾವು ಸಾಮಾನ್ಯ ಪದದಲ್ಲಿ ಕಲಿಕೆ ಉಂಟಾಗಿದೆ ಎಂದು ಕರೆಯುತ್ತೇವೆ. ಅನುಭವದ ಪರಿಣಾಮವಾಗಿ ಅಥವಾ ಅಭ್ಯಾಸ ಮಾಡಿದ್ದರಿಂದಾಗಿ ವರ್ತನೆಯಲ್ಲಿ ಆಗುವ ಶಾಶ್ವತವಾದ ಬದಲಾವಣೆಯನ್ನು ಕಲಿಕೆ ಎನ್ನುವರು. ಜೀವಿಯು ಅನುಭವದಿಂದ ಅಥವಾ ತರಬೇತಿಯಿಂದ ಪೂರ್ವದ ವರ್ತನೆಯನ್ನು ಮಾರ್ಪಡಿಸಿಕೊಳ್ಳುವುದನ್ನೇ ಕಲಿಕೆ ಎನ್ನುವರು. ನಮ್ಮಲ್ಲಿ ಸಹಜವಾಗಿ ಬಂದ ಸಾಮರ್ಥ್ಯಗಳನ್ನು ಅಥವಾ ಈಗಾಗಲೇ ಕಲಿತ ವಿಷಯವನ್ನು ಇನ್ನೂ ಹೆಚ್ಚು ಉತ್ತಮಪಡಿಸಿಕೊಂಡರೆ ಅದು ಕಲಿಯುವಿಕೆ.

### ಕಲಿಕೆಯ ವ್ಯಾಖ್ಯಾನಗಳು

* ಗೇಟ್ಸ್ ಪ್ರಕಾರ – ತರಬೇತಿ ಹಾಗೂ ಅನುಭವಗಳಿಂದ ವರ್ತನೆಯ ಬದಲಾವಣೆಯೇ ಕಲಿಕೆ.
* ಥಾರಂಡೈಕ್ ಪ್ರಕಾರ– ಪ್ರಚೋದನೆ ಮತ್ತು ಪ್ರಕ್ರಿಯೆಗಳ ಸಂಬಂಧವೇ ಕಲಿಕೆ.
* ಸ್ಕಿನ್ನರ್ ಪ್ರಕಾರ– ಜ್ಞಾನಾರ್ಜನೆ ಹಾಗೂ ಧಾರಣ ಶಕ್ತಿಗೆ ಸಂಬಂಧಿಸಿದೆ ಕಲಿಕೆ.
* ಪೀಲ್ ಪ್ರಕಾರ– ಪರಿಸರದ ಬದಲಾವಣೆಗೆ ತಕ್ಕಂತೆ ವ್ಯಕ್ತಿಯಲ್ಲಿ ಉಂಟಾಗುವ ಪರಿವರ್ತನೆಯ ಕಲಿಕೆಯಾಗಿದೆ.

### ಕಲಿಕೆಯ ಸ್ವರೂಪ /ಲಕ್ಷಣಗಳು

1 ಕಲಿಕೆಯು ಸಾರ್ವತ್ರಿಕ ಹಾಗೂ ನಿರಂತರವಾದ ಪ್ರಕ್ರಿಯೆಯಾಗಿದೆ.

2.ಕಲಿಕೆಯು ಒಂದು ಪ್ರಕಾರದ ಬೌದ್ಧಿಕ ಬೆಳವಣಿಗೆ ಹಾಗೂ ಸಾಧನೆಯ ಒಂದು ಪ್ರಕ್ರಿಯೆಯಾಗಿದೆ.

3.ಪ್ರಗತಿ ಹಾಗೂ ವಿಕಾಸ ಕಲುವಿಕೆಯ ಮುಖಾಂತರವೇ ಮಾನವನಲ್ಲಿ ಆಗುತ್ತದೆ

4.ಕಲಿಯುವಿಕೆಯು ಹೊಂದಾಣಿಕೆ ಮತ್ತು ವರ್ತನೆಯಲ್ಲಿ ಆಗುವ ಬದಲಾವಣೆಯು ಆಗಿದೆ.

5. ಕಲಿಯುವಿಕೆಯು ವರ್ತನೆಯ ಸತತವಾದ ಮಾರ್ಪಾಡನ್ನು ಮಾಡುತ್ತದೆ.

6 ಕಲಿಕೆಯು ಧನಾತ್ಮಕವಾಗಿ ಅಥವಾ ಋಣಾತ್ಮಕವಾಗಿಯೂ ಇರುತ್ತದೆ.

7.ಕಲಿಕೆಯು ಆಂತರಿಕ ಹಾಗೂ ಬಾಹ್ಯ ಪ್ರೇರಣೆಯಿಂದ ಉಂಟಾಗುತ್ತದೆ.

8.ಕಲಿಕೆಯು ಶಾಶ್ವತವಾದುದು ಹಾಗೂ ಅನ್ವಯಿಸಬಹುದಾದದ್ದು ಆಗಿದೆ.

9.ಕಲಿಕೆ ಅನುಭವ ಅಥವಾ ತರಬೇತಿಯಿಂದ ಉಂಟಾಗುತ್ತದೆ.

10.ಕಲಿಕೆಯಿಂದ ಜೀವಿಗಳ ಸಾಮರ್ಥ್ಯ ಹೆಚ್ಚಾಗುತ್ತದೆ.

11.ಕಲಿಕೆಯೊಂದು ಪಕ್ವತೆಯಾಗಿದೆ ಅದು ಮಾನಸಿಕ, ಬೌದ್ಧಿಕ ,ಸಾಮಾಜಿಕ ಸಂವೇಗಾತ್ಮಕ, ಪಕ್ವತೆಯಿಂದಾಗಿರಬಹುದು.

12.ಬೆಳವಣಿಗೆಯ ವಿವಿಧ ಹಂತಗಳಿಗನುಸಾರವಾಗಿ ಕಲಿಕೆಯಲ್ಲಿ ವ್ಯತ್ಯಾಸವನ್ನು ಕಾಣುತ್ತೇವೆ.

13.ಕಲಿಕೆಯು ಎಲ್ಲಾ ಜೀವಿಗಳಲ್ಲಿ ಕಾಣುವ ಸಹಜ ಗುಣವಾಗಿದೆ

14.ಕೆಲವು ಸಲ ಕೇಂದ್ರ ನರಮಂಡಲದಲ್ಲಿ ಆದ ಬದಲಾವಣೆಗೆ ಕಲಿಕೆ ಎಂದು ಕರೆಯಲಾಗಿದೆ.

15.ನಿರ್ದಿಷ್ಟ ಗುರಿ ಸ್ಪಷ್ಟ ಉದ್ದೇಶ ಕಲಿಕೆಯನ್ನು ಹೆಚ್ಚಿಸುತ್ತದೆ ಕಲಿಕೆಗೆ ನಿರ್ದಿಷ್ಟ ಉದ್ದೇಶ ಇರದಿದ್ದರೆ ಯಾವ ಬದಲಾವಣೆಯನ್ನು ತರುವುದಿಲ್ಲ.

**ಕಲಿಕೆಯ ವಿಧಗಳು;**

1. ಕ್ರಿಯಾಗತ ಕಲಿಕೆ( ಸ್ನಾಯುಗಳು ಪ್ರಧಾನ);

ಜೀವಿಯಲ್ಲಿ ತನ್ನ ಅವಯವ ಅಥವಾ ಸ್ನಾಯುಗಳ ಸಹಾಯದಿಂದ ಉಂಟಾಗುವ ಕಲಿಕೆಯನ್ನು ಕ್ರಿಯಾ ಗತ ಕಲಿಕೆ ಎನ್ನುವರು. ಕ್ರಿಯಾಗತ ಕಲಿಕೆಯಲ್ಲಿ ಮೆದುಳು ಸಹಾಯ ಮಾಡಿದರು ಪ್ರಮುಖ ಪಾತ್ರ ವಹಿಸುವವು ಸ್ನಾಯುಗಳೆ.

2. ಮನೋಗತ ಕಲಿಕೆ( ಮಿದುಳು ಪಂಚೇಂದ್ರಿಯಗಳು ಪ್ರಧಾನ)

ಜೀವಿಯಲ್ಲಿ ಉಂಟಾದ ಕಲಿಕೆಯು ಮೆದುಳು ಹಾಗೂ ಪಂಚೇಂದ್ರಿಯಗಳ ಸಹಾಯದಿಂದ ಪಡೆದ ಜ್ಞಾನದಿಂದಾದರೆ ಅಂತಹ ಕಲಿಕೆಯನ್ನು ಮನೋಗತ ಕಲಿಕೆ ಎನ್ನುವರು.

**ಕಲಿಕೆಯ ಪ್ರಕಾರಗಳು;**

1. ಅಭಿಜಾತ ಅನುಬಂಧ ಕಲಿಕೆ
2. ಚಲನ ಕಲಿಕೆ
3. ಪ್ರತ್ಯೇಕತ ಕಲಿಕೆ
4. ಶಾಬ್ದಿಕ ಕಲಿಕೆ
5. ಪರಿಕಲ್ಪನಾ ಕಲಿಕೆ
6. ಸಮಸ್ಯೆ ನಿವಾರಣ ಕಲಿಕೆ
7. ಪ್ರಯತ್ನ ಮತ್ತು ಪ್ರಮಾದ ಕಲಿಕೆ
8. ಅನುಕರಣ ಕಲಿಕೆ

## ಕಲಿಕಾ ಸಿದ್ಧಾಂತಗಳು

ಕಲಿಕಾ ಸಿದ್ಧಾಂತಗಳನ್ನು ಪ್ರಮುಖವಾಗಿ ಎರಡು ಗುಂಪುಗಳನ್ನಾಗಿ ವಿಂಗಡಿಸಿದ್ದಾರೆ ಸಿದ್ದಾಂತಗಳಲ್ಲಿ ಕಲಿಕೆಯು ಯಾವ ಒಂದು ಕ್ಷೇತ್ರವನ್ನು ಹೆಚ್ಚು ಬೆಂಬಲಿಸಿದ್ದಾರೆ ಎಂಬ ಅಂಶದ ಆಧಾರದ ಮೇಲೆ ಈ ವರ್ಗೀಕರಣವನ್ನು ಮಾಡಲಾಗಿದೆ.

**1.ಸಹಚಾರ್ಯ ಸಿದ್ಧಾಂತಗಳು**;

ಈ ಸಿದ್ಧಾಂತಗಳು ಪ್ರಚೋದನ –ಅನುಕ್ರಿಯಾ ಸಿದ್ದಾಂತಗಳೆಂದು ಅಥವಾ ವರ್ತನ ಸಿದ್ದಾಂತಗಳೆಂದು ಮತ್ತು ಅನುಬಂಧನ ಸಿದ್ಧಾಂತಗಳೆಂದು ಹೀಗೆ ವಿವಿಧ ಹೆಸರಿನಿಂದ ಕರೆಯಲಾಗುವುದು.

2. **ಕ್ಷೇತ್ರ ಸಿದ್ಧಾಂತಗಳು;**

ಇವುಗಳನ್ನು ಸಂಜ್ಞಾನಾತ್ಮಕ ಸಿದ್ಧಾಂತಗಳೆಂದು ಅಥವಾ ಸಮಗ್ರ ಕೃತಿಯ ಸಿದ್ಧಾಂತಗಳೆಂದು ಕರೆಯುತ್ತಾರೆ.

## ಮಕ್ಕಳು ಹೇಗೆ ಯೋಚಿಸುತ್ತಾರೆ ಮತ್ತು ಕಲಿಯುತ್ತಾರೆ

ಆಲೋಚನೆ ಅಥವಾ ಚಿಂತನೆ ಒಂದು ಬಹುಮುಖ್ಯ ಮಾನಸಿಕ ಪ್ರಕ್ರಿಯೆ. ಇದು ಕಲಿಕಾ ಪ್ರಕ್ರಿಯೆ, ಪರಿಸರದಿಂದ ಮಾಹಿತಿ ಸಂಗ್ರಹಣೆ, ಪರಿಕಲ್ಪನೆಗಳ ಅರ್ಥಗ್ರಹಿಕೆ, ಕಲೆ ಹಾಕಿದ ಮಾಹಿತಿಯನ್ನು ಸರಿಯಾದ ರೀತಿಯಲ್ಲಿ ಮಾನಸಿಕವಾಗಿ ಸಂಘಟಿಸಿ, ನೆನಪಿನಲ್ಲಿಟ್ಟುಕೊಂಡು ನಮಗೆ ಬೇಕಾದಾಗ ಪುನಃ ಸ್ಮರಿಸಲು, ಸಮಸ್ಯೆಯ ಗ್ರಹಿಕೆ ಮತ್ತು ಪರಿಹಾರ ನಿರ್ಧಾರ ತೆಗೆದುಕೊಳ್ಳುವಿಕೆ, ಅವಧಾನ ಎಲ್ಲವನ್ನು ಒಳಗೊಂಡಿದೆ.

ಈ ಚಿಂತನೆಯು ಪ್ರಜ್ಞಾ ಪೂರ್ವಕವಾಗಿ ಉತ್ಪಾದಿಸುವ ಮತ್ತು ಕುಶಲತೆಯಿಂದ ಕೆಲಸ ಕಾರ್ಯಗಳನ್ನು ನಿರ್ವಹಿಸುವ ಪ್ರಕ್ರಿಯೆಯಾಗಿದೆ. ಮಕ್ಕಳು ತಮ್ಮ ಸುತ್ತಮುತ್ತಲಿನ ಪರಿಸರವನ್ನು ಅನ್ವೇಷಿಸುವಾಗ ಮತ್ತು ಕಲಿಯುವಾಗ ಸ್ವಾಭಾವಿಕವಾಗಿ ಚಿಂತನೆ ಸಂಭವಿಸುತ್ತದೆ.ಮಕ್ಕಳು ತಾವು ನೋಡುವ ಹಾಗೂ ಮಾಡುವ ಪ್ರತಿ ಕಾರ್ಯಗಳಿಂದಲೂ ಕಲಿಯುತ್ತಾರೆ. ಅವರು ಶಾಲೆಗೆ ಸೇರುವ ಮೊದಲು ತಮ್ಮ ಮನೆಯ ಮತ್ತು ಸುತ್ತಮುತ್ತಲಿನ ಪರಿಸರದಿಂದ ಬಹಳಷ್ಟು ವಿಷಯಗಳನ್ನು ಕಲಿಯುತ್ತಾರೆ. ಮಕ್ಕಳು ಜನಿಸಿದಾಗಿನಿಂದ ಅವರ ಸುತ್ತಮುತ್ತಲಿನ ಪ್ರಪಂಚದೊಂದಿಗೆ ಸಂವಹನ ಪ್ರಾರಂಭವಾಗುತ್ತದೆ. ಅವರು ವಿಷಯಗಳನ್ನು ಗ್ರಹಿಸುತ್ತಾರೆ ಮತ್ತು ಕ್ರಮೇಣವಾಗಿ ಅರ್ಥಮಾಡಿಕೊಳ್ಳುತ್ತಾರೆ. ಸ್ಪರ್ಶ, ದೃಷ್ಠಿ, ರುಚಿ, ವಾಸನೆ ಮತ್ತು ಶಬ್ದ ಇಂದ್ರಿಯಗಳ ಮೂಲಕ ಪರಿಸರವನ್ನು ಅನ್ವೇಷಿಸುತ್ತಾರೆ. ಹೀಗೆ ಮಕ್ಕಳಲ್ಲಿ ನಿಧಾನವಾಗಿ ಆಲೋಚನೆ ಅಥವಾ ಚಿಂತನೆ ಅಭಿವೃದ್ಧಿಗೊಳ್ಳುತ್ತದೆ.

ಸ್ವಿಸ್ ಮನೋವಿಜ್ಞಾನಿ ಜೀನ್ ಪಿಯಾಜೆ ಮಕ್ಕಳು ಬೆಳವಣಿಗೆಯ ಹಂತದಲ್ಲಿ ಆಲೋಚಿಸುವ ಕೌಶಲಗಳನ್ನು ಹೇಗೆ ಬೆಳೆಸಿಕೊಳ್ಳುತ್ತಾರೆ ಎಂಬುದರ ಕುರಿತು ಪ್ರಸಿದ್ಧ ಸಂಜ್ಞಾನಾತ್ಮಕ ಸಿದ್ಧಾಂತವನ್ನು ಪ್ರತಿಪಾದಿಸಿದ್ದಾರೆ. ಇವರು ಜ್ಞಾನಾತ್ಮಕ **ವಿಕಾಸವನ್ನು 4 ಹಂತಗಳಲ್ಲಿ ವಿವರಿಸಿದ್ದಾರೆ.**

ಸಂವೇದನಾಗತಿಯ ಹಂತ ( 0 ರಿಂದ 2 ವರ್ಷ)
ಪೂರ್ವ ಸಂಕ್ರಿಯಾತ್ಮಕ ಹಂತ ( 2 ರಿಂದ 7 ವರ್ಷ)
ಮೂರ್ತ ಕಾರ್ಯಗಳ ಹಂತ ( 7 ರಿಂದ 11)
ಔಪಚಾರಿಕ ಸಂಕ್ರಿಯಾತ್ಮಕ ಹಂತ ( 12 ರಿಂದ ಮೇಲ್ಪಟ್ಟು)

### ಸಂವೇದನಾಗತಿಯ ಹಂತ :

ಇದು ಹುಟ್ಟಿನಿಂದ ಎರಡು ವರ್ಷಗಳ ಅವಧಿ. ಈ ಹಂತದಲ್ಲಿ ಮಗುವಿನ ಪ್ರಾಥಮಿಕ ಕಲಿಕೆ ವಿಧಾನವು ಪಂಚೇಂದ್ರಿಯಗಳ ಮೂಲಕ ಸಂಭವಿಸುತ್ತದೆ. ಮಗುವು ಜನಿಸಿದಾಗಲೇ ಅದರ ಮಾನಸಿಕ ಬೆಳವಣಿಗೆ ಆರಂಭಗೊಳ್ಳುತ್ತದೆ. ನರಮಂಡಲ ಮತ್ತು ಸಂವೇದನಾ ಕ್ರಿಯೆಗಳು ಕಾರ್ಯಾಚರಣೆಯಲ್ಲಿರುತ್ತವೆ. ಮಗು ಪರಿಸರವನ್ನು ಅನ್ವೇಷಿಸಲು ಮತ್ತು ಅನುಭವಿಸಲು ಕಲಿಯುತ್ತದೆ. ವಸ್ತುಗಳನ್ನು ಸ್ಪರ್ಶಿಸುತ್ತದೆ, ಹಿಡಿದುಕೊಳ್ಳುತ್ತದೆ, ನೋಡುತ್ತದೆ, ಕೇಳುತ್ತದೆ, ತೆವಳುವಿಕೆ, ಕೂರುವುದು, ನಡಿಗೆಯಂತಹ ಕ್ರಿಯೆಗಳನ್ನು ಕಲಿಯುತ್ತದೆ. ಹೀಗೆ ನೋಡುವ, ಕೇಳುವ ಮಾಡುವ ಮುಖಾಂತರ ತನ್ನ ಸುತ್ತಲಿನ ಪರಿಸರವನ್ನು ಅನ್ವೇಷಿಸುತ್ತದೆ. ಮಗುವು ತನ್ನ ಪರಿಸರದಲ್ಲಿನ ವಸ್ತುಗಳಿಂದ ಹಾಗೂ ಘಟನೆಗಳಿಂದ ಪಡೆದ ಅನುಭವಗಳನ್ನು ಆಂತರಿಕವಾಗಿ ಪ್ರತಿನಿಧಿಸತೊಡಗುತ್ತದೆ. ಅಂದರೆ ಮಗುವು ಪ್ರಾತಿನಿಧ್ಯದ ಮೂಲಕ ವಸ್ತು ಮತ್ತು ಘಟನೆಗಳನ್ನು ಮಾನಸಿಕವಾಗಿ ನಿರ್ವಹಿಸತೊಡಗುತ್ತದೆ. ಹೀಗೆ ಮಗುವಿನಲ್ಲಿ ಪ್ರಾಥಮಿಕ ಹಂತದಲ್ಲಿ ಆಲೋಚನೆ ಹಾಗೂ ಕಲಿಕೆ ಉಂಟಾಗುತ್ತದೆ.

### ಪೂರ್ವ ಸಂಕ್ರಿಯಾತ್ಮಕ ಹಂತ ಅಥವಾ ಕಾರ್ಯ ಪೂರ್ವ ಹಂತ ( 2 ರಿಂದ 7 ವರ್ಷ)

ಈ ಹಂತದಲ್ಲಿ ಮಗುವು ವಸ್ತುಗಳನ್ನು, ಘಟನೆಗಳನ್ನು ಮತ್ತು ಆಲೋಚನೆಗಳನ್ನು ಆಂತರಿಕವಾಗಿ ಪ್ರತಿನಿಧಿಸುತ್ತದೆ. ಅದರ ಆಲೋಚನೆಯು ತರ್ಕ ಪೂರ್ವ ಅಥವಾ ಭಾಗಶಃ ತಾರ್ಕಿಕವಾಗಿರುತ್ತದೆ. ಆಲೋಚನೆಯು ಪ್ರತ್ಯಾಕ್ಷಾನುಭವದಿಂದ ಅತಿಕ್ರಮಿಸಲ್ಪಟ್ಟಿರುತ್ತದೆ. ಈ ಹಂತದಲ್ಲಿ ಮಗುವು ಮಾಹಿತಿಯನ್ನು ಸಂಗ್ರಹಿಸುವಲ್ಲಿ ಅಥವಾ ಕಲಿಕೆಯಲ್ಲಿ ನಿರಂತರವಾಗಿರುತ್ತದೆ. ಸಮಸ್ಯೆಗಳನ್ನು ಪರಿಹರಿಸಲು ಪ್ರಾರಂಭಿಸುತ್ತದೆ. ನಿರ್ದಿಷ್ಟವಾಗಿ ಯೋಚಿಸುತ್ತದೆ ಮತ್ತು ಪರಿಕಲ್ಪನೆಯ ಸಾಮಾನ್ಯೀಕರಣ ಕಷ್ಟವಾಗುತ್ತದೆ. ಪ್ರಶ್ನೆಗಳನ್ನು ಕೇಳುವ ಮೂಲಕ ತನ್ನ ಕುತೂಹಲ ತಣಿಸಲು ಪ್ರಯತ್ನಿಸುತ್ತದೆ. ಭಾಷಾ ಬೆಳವಣಿಗೆ ಶೀಘ್ರಗತಿಯಲ್ಲಿ ಆಗುತ್ತದೆ.

### ಮೂರ್ತ ಕಾರ್ಯಗಳ ಹಂತ ( 7 ರಿಂದ 11 ವರ್ಷ)

ಇದು ಮಗುವಿನ 7 ರಿಂದ 11 ವರ್ಷದ ಅವಧಿಯಾಗಿದೆ. ಮಗುವು ಈ ಅವಧಿಯಲ್ಲಿ ತರ್ಕಬದ್ಧವಾದ ಆಲೋಚನೆಯನ್ನು ಮಾಡಲು ಪ್ರಾರಂಭಿಸುತ್ತದೆ ಆದರೆ ಅದು ಮೂರ್ತ ಅನುಭವಗಳಿಗೆ ಮಾತ್ರ ಸೀಮಿತವಾಗಿರುತ್ತದೆ. ಮಗು ಬರೆಯುವುದನ್ನು ಕಲಿಯುವುದಲ್ಲದೆ ಪದಗಳನ್ನು ಸಂಖ್ಯೆಗಳನ್ನು ಬಳಸುತ್ತದೆ. ವರ್ಗೀಕರಿಸುವುದನ್ನು ಮಾಹಿತಿಯನ್ನು ಸಂಘಟಿಸುವುದನ್ನು ಕಲಿಯುತ್ತದೆ. ತನ್ನ ಅನುಭವಗಳನ್ನು ಸಮಗ್ರ ಸಂಘಟನೆಗೆ ಒಳಪಡಿಸುತ್ತದೆ. ಮೂರ್ತ ಸಮಸ್ಯೆಗಳಿಗೆ ಮೂರ್ತ ಕ್ರಿಯೆಗಳನ್ನು ನಡೆಸಿ ತರ್ಕಬದ್ಧವಾಗಿ ಆಲೋಚಿಸಿ ಪರಿಹಾರ ಕಂಡುಹಿಡಿಯುತ್ತದೆ.

### ಔಪಚಾರಿಕ ಸಂಕ್ರಿಯಾತ್ಮಕ ಹಂತ ( 11 ರಿಂದ 15 ವರ್ಷ)

ಮಕ್ಕಳು ಈ ಹಂತದಲ್ಲಿ ಅಮೂರ್ತ ಆಲೋಚನೆಯನ್ನು ಮಾಡುವಂತಹ ಸಾಮರ್ಥ್ಯವನ್ನು ಹೊಂದುತ್ತಾರೆ. ಭಾಷಾ ರೂಪದಲ್ಲಿ ಸಂಕೇತ ರೂಪದಲ್ಲಿ ಸಿದ್ಧಾಂತಗಳನ್ನು ಮಂಡಿಸುತ್ತಾರೆ. ತೀರ್ಮಾನಗಳನ್ನು ತೆಗೆದುಕೊಳ್ಳಬಲ್ಲವರಾಗಿದ್ದು, ವಿಮರ್ಶಿಸುವ, ಮೌಲ್ಯೀಕರಿಸುವ ಸಾಮರ್ಥ್ಯಗಳೂ ಕಂಡುಬರುತ್ತವೆ.

ಜ್ಞಾನಾತ್ಮಕ ವಿಕಸನದ ಪ್ರತಿ ಹಂತವು ಮಗುವಿನ ಪರಿಸರದೊಂದಿಗಿನ ನಿರ್ವಹಣೆಯನ್ನು ಹೆಚ್ಚು ಪರಿಣಾಮಕಾರಿಗೊಳಿಸುತ್ತದೆ. ಸಂರಚನೆಯಲ್ಲಿನ ಪ್ರತಿಯೊಂದು ಹೊಸ ಬದಲಾವಣೆಯು ಮಗುವಿನ ಆಲೋಚನಾ ಸಾಮರ್ಥ್ಯದಲ್ಲಿ ಗುಣಾತ್ಮಕವಾದ ಬದಲಾವಣೆಯನ್ನುಂಟು ಮಾಡುತ್ತದೆ.

ಕಲಿಯುವಿಕೆ ಶೈಕ್ಷಣಿಕ ಪ್ರಕ್ರಿಯೆಯಲ್ಲಿ ಒಂದು. ಕೇವಲ ಓದುಬರಹ ಕಲಿಯುವುದು ಮಾತ್ರ ಕಲಿಕೆಯಲ್ಲ. ಯಾವುದಾದರೂ ಹೊಸ ವಿಷಯವನ್ನು ತನ್ನದಾಗಿಸಿಕೊಳ್ಳುವ ಪ್ರಕ್ರಿಯೆಯೇ ಕಲಿಕೆ. ಶಿಕ್ಷಣವೆಂಬುದು ಅನುಭವಗಳ ಮೂಲಕ ವರ್ತನೆಯಲ್ಲಿ ಪರಿವರ್ತನೆ. ಈ ವರ್ತನೆಯ ಪರಿವರ್ತನೆಯೇ ಕಲಿಕೆ. ವ್ಯಕ್ತಿಯ ಹುಟ್ಟಿನಿಂದ ಸಾಯುವವರೆಗೆ ಈ ಮಾರ್ಪಾಡು ಎಲ್ಲಾ ಕಾಲಗಳಲ್ಲಿಯೂ ನಡೆಯುತ್ತದೆ.

ವ್ಯಕ್ತಿಯ ಜೀವನದಲ್ಲಿ ಕಲಿಕೆಯ ಸನ್ನಿವೇಶಗಳು ಸಾಮಾನ್ಯ ಹಾಗೂ ಸ್ವಾಭಾವಿಕ.ಕ್ಷಣ ಕ್ಷಣಕ್ಕೂ ವ್ಯಕ್ತಿಯು ಏನನ್ನಾದರೂ ಕಲಿಯುತ್ತಲೇ ಇರುತ್ತಾನೆ. ಇದನ್ನೆ **ಕಲಿಕೆ** ಎನ್ನುತ್ತೇವೆ. ಈ ಪ್ರಕ್ರಿಯೆಯಲ್ಲಿ ಪ್ರತಿಯೊಬ್ಬ ವ್ಯಕ್ತಿ ಕೆಲವು ಆಂತರಿಕವಾದ ಬದಲಾವಣೆಗಳನ್ನು ಮಾಡಿಕೊಳ್ಳುವುದು ಅನಿವಾರ್ಯವಾಗಿದೆ.

ಕಲಿಕಾರ್ಥಿಗಳು ತಮ್ಮದೇ ಆದ ಕಲಿಕಾ ಶೈಲಿ ಮತ್ತು ಕಲಿಕಾ ಗತಿಯನ್ನು ಹೊಂದಿರುತ್ತಾರೆ. ಕೆಲವರು ನೋಡಿ ಕಲಿತರೆ, ಕೆಲವರು ಕೇಳುತ್ತಾರೆ. ಕೆಲವರು ಓದುವುದರಿಂದ ಮತ್ತೆ ಕೆಲವರು ಮಾಡಿ ಕಲಿಯುತ್ತಾರೆ. ಮಕ್ಕಳು ಆಟದ ಮೂಲಕವೂ ಕಲಿಯುತ್ತಾರೆ. ಪ್ರತಿಯೊಬ್ಬರು ಕಲಿಕೆಯನ್ನು ಪ್ರಕ್ರಿಯೆ ಅಥವಾ ಉತ್ಪನ್ನವಾಗಿ ನೋಡುವುದು ಭಿನ್ನವಾಗಿರುತ್ತದೆ. ವಿದ್ಯಾರ್ಥಿಗಳಲ್ಲಿ ಕಲಿಕೆಯು ಅವರ ಕಲಿಕಾ ಶೈಲಿಯೊಂದಿಗೆ ಸರಿಹೊಂದುವಂತೆ ಬೊಧಿಸಿದಾಗ ಮಾತ್ರ ಕಲಿಕೆಯು ಉತ್ತಮವಾಗಿರುತ್ತದೆ ಎಂಬುದು ಶಿಕ್ಷಣ ತಜ್ಞರ ಅಭಿಮತ.

## ಕಲಿಕಾ ಶೈಲಿಗಳು

**ಕಲಿಕಾ ಶೈಲಿಗಳಲ್ಲಿ ಹಲವು ವಿಧಧ ಮಾದರಿಗಳಿವೆ.** ಆದರೆ ಕಲಿಕಾರ್ಥಿಗಳಲ್ಲಿ ಇರುವ ವಿವಿಧ ಕಲಿಕಾ ಶೈಲಿಯನ್ನು ತಿಳಿಯುವುದು ಅವಶ್ಯವಾಗಿದೆ. ನಮ್ಮ ಗ್ರಹಿಕೆಗಾಗಿ ಬಹಳ ಪ್ರಸಿದ್ಧವಾದ ಮತ್ತು ವ್ಯಾಪಕವಾಗಿ ಬಳಕೆಯಲ್ಲಿರುವ ನೀಲ್ ಫ್ಲೆಮಿಂಗ್ಸ್‌ರವರ ವಿಎಆರ್‌ಕೆ / VARK ಮಾದರಿಯ ಬಗ್ಗೆ ಇಲ್ಲಿ ಚರ್ಚಿಸಲಾಗಿದೆ. ಈ ಮಾದರಿಯ ಪ್ರಕಾರ ಕಲಿಕಾರ್ಥಿಗಳು ಈ ನಾಲ್ಕು ಶೈಲಿಗಳಲ್ಲಿ ಯಾವುದಾದರೂ ಒಂದು ಶೈಲಿಯನ್ನು ಪ್ರಧಾನವಾಗಿ ಬಳಸಿಕೊಂಡು ಕಲಿಯುತ್ತಾರೆ. ಇದರ ಅರ್ಥವು ಇತರೇ ಶೈಲಿಗಳು ಅಥವಾ ಮಾಧ್ಯಮವು ಪ್ರಭಾವ ಬೀರದು ಎಂದಲ್ಲ. ಆದರೆ ಅವುಗಳ ಪ್ರಬಾವವು ಪ್ರಧಾನವಾಗಿರುವುದಿಲ್ಲ. ಆ ನಾಲ್ಕು ಕಲಿಕಾ ಶೈಲಿಗಳು ಯಾವುವುವೆಂದರೆ,

- **ವೀಕ್ಷಣಾ ಕಲಿಕಾರ್ಥಿಗಳು** (Visual learners)
- **ಆಲಿಕೆಯ ಕಲಿಕಾರ್ಥಿಗಳು** (Auditory learners)
- **ಓದು ಮತ್ತು ಬರಹದ ಕಲಿಕಾರ್ಥಿಗಳು** (Reading and writing learners)
- **ಸ್ಪರ್ಶದ ಕಲಿಕಾರ್ಥಿಗಳು** (Kinaesthetic learners)

**ಮೊದಲನೇ ವಿಧಧ ಕಲಿಕಾರ್ಥಿಗಳು–** ಫ್ಲೆಮಿಂಗ್ಸ್‌ರವರ ಪ್ರಕಾರ ವೀಕ್ಷಣಾ ಕಲಿಕಾರ್ಥಿಗಳು, ಕಲಿಯುವಾಗ ದೃಶ್ಯಾವಳಿಗಳನ್ನು ಒಳಗೊಂಡ ಕಲಿಕಾ ಸಾಮಗ್ರಿಗಳನ್ನು ನೋಡಿ ತಿಳಿಯುವುದಕ್ಕೆ ಆದ್ಯತೆ ನೀಡುವರು.ಪ್ರದರ್ಶಿಸಿದ ಕಲಿಕಾ ಸಾಮಾಗ್ರಿಗಳನ್ನು ಸ್ಪಷ್ಟವಾಗಿ ನೋಡಿದಾಗ ಅವರಲ್ಲಿ ಉತ್ತಮವಾದ ಕಲಿಕೆ ಉಂಟಾಗುತ್ತದೆ. ಆದ್ದರಿಂದ ಶಿಕ್ಷಕರು ತಮ್ಮ ಬೋಧನೆಯಲ್ಲಿ ದೃಶ್ಯ ಮಾಧ್ಯಮದ ಕಲಿಕಾ ಸಾಮಗ್ರಿಗಳನ್ನು ಬಳಸುವುದು ಅವಶ್ಯವಾಗಿದೆ. ಸಂಶೋಧನೆಗಳ ಪ್ರಕಾರ ಒಟ್ಟಾರೆ ಜನಸಂಖ್ಯೆಯಲ್ಲಿ ಶೇ.70 ರಷ್ಟು ಕಲಿಕಾರ್ಥಿಗಳು ವೀಕ್ಷಣೆ ಮೂಲಕ ಕಲಿಯುವವರೇ ಆಗಿದ್ದಾರೆ.

**ಎರಡನೇ ವಿಧಧ ಕಲಿಕಾರ್ಥಿಗಳು** – ಆಲಿಸುತ್ತಾ ಕಲಿಯುವವರು, ಇವರು ನೋಡುವುದಕ್ಕಿಂತ ಕೇಳಿಸಿಕೊಳ್ಳುವುದಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡುವರು. ಉಪನ್ಯಾಸ, ಚರ್ಚೆಗಳು, ಧ್ವನಿಸುರುಳಿಗಳು ಇನ್ನೂ ಮುಂತಾದ ಸನ್ನಿವೇಶಗಳಲ್ಲಿ ಆಲಿಸುವ ಮೂಲಕ ಉತ್ತಮವಾಗಿ ಕಲಿಯುವರು. ಹಲವು ಸಂದರ್ಭಗಳಲ್ಲಿ ಇವರು ಶಿಕ್ಷಕರನ್ನು ನೋಡುತ್ತಿರಲಿಲ್ಲವಾದರೂ ಸಕ್ರಿಯವಾಗಿ ಶಿಕ್ಷಕರ ಉಪನ್ಯಾಸವನ್ನು ಆಲಿಸುತ್ತಿರುತ್ತಾರೆ. ಕಲಿಕಾ ಚಟುವಟಿಕೆಯ ಸನ್ನಿವೇಶಗಳಲ್ಲಿ ಸ್ಪಷ್ಟವಾಗಿ ಆಲಿಸುವುದರ ಮೂಲಕ ಉತ್ತಮವಾಗಿ ಕಲಿಯುತ್ತಾರೆ.

**ಮೂರನೇ ವಿಧಧ ಕಲಿಕಾರ್ಥಿಗಳು** – ಓದು ಮತ್ತು ಬರಹದ ಶೈಲಿಯ ಕಲಿಕಾರ್ಥಿಗಳು ಈ ವಿಧಧ ಕಲಿಕಾರ್ಥಿಗಳು ಕಲಿಕೆಯ ವಿಷಯವನ್ನು ಓದಿ ಮತ್ತು ಬರೆಯುವುದಕ್ಕೆ ಪ್ರಾಧಾನ್ಯತೆ ನೀಡುವ ಮೂಲಕ ಕಲಿಯುತ್ತಾರೆ. ಹಾಗೂ ಈ ವಿಧದಲ್ಲಿ ಅವರ ಕಲಿಕೆ ಉತ್ತಮವಾಗಿರುತ್ತದೆ. ಇದರ ನಿಹಿತಾರ್ಥವು ಶಿಕ್ಷಕರು ಕಲಿಕಾರ್ಥಿಗಳಿಗೆ ಓದುವುದು ಮತ್ತು ಬರೆಯುವುದಕ್ಕೆ ತೊಡಗಿಸಿಕೊಳ್ಳುವುದಕ್ಕೆ ಅವಕಾಶಗಳನ್ನು ತಮ್ಮ ಬೋಧನಾವಧಿಯಲ್ಲಿ ಒದಗಿಸುವುದು ಅವಶ್ಯಕವಾಗಿದೆ.

**ನಾಲ್ಕನೇ ವಿಧದ ಕಲಿಕಾರ್ಥಿಗಳು –** ಸ್ಪರ್ಶದ ಮೂಲಕ ಕಲಿಕಾ ಚಟುವಟಿಕೆಯನ್ನು ಮಾಡುತ್ತಾ, ಸ್ಪರ್ಶಿಸುತ್ತಾ, ಚಲಿಸುತ್ತಾ, ಪ್ರಯೋಗವನ್ನು ಮಾಡುತ್ತಾ, ಕೈಚಳಕವನ್ನು ತೋರುತ್ತಾ ಕಲಿಯುವುದಕ್ಕೆ ಆದ್ಯತೆ ನೀಡುವರು. ಕಲಿಕಾ ಚಟುವಟಿಕೆಯಲ್ಲಿ ತಮ್ಮನ್ನು ತಾವೂ ಸಕ್ರಿಯವಾಗಿ ತೊಡಗಿಸಿಕೊಳ್ಳುತ್ತಾ ಪ್ರತ್ಯಕ್ಷವಾದ ಅನುಭವವನ್ನು ಹೊಂದುವರು. ಇದರ ನಿಹಿತಾರ್ಥವು ಶಿಕ್ಷಕರು **"ಮಾಡುತ್ತಾ ಕಲಿ"** ತತ್ವಕ್ಕೆ ಅನುಗುಣವಾಗಿ ಕಲಿಕಾ ಸನ್ನಿವೇಶಗಳನ್ನು ಒದಗಿಸುತ್ತಾ ವಿದ್ಯಾರ್ಥಿಗಳು ಪ್ರತ್ಯಕ್ಷ ಅನುಭವವನ್ನು ಹೊಂದಲು ಅನುವು ಮಾಡಿಕೊಡುವುದು ಅವಶ್ಯಕವಾಗಿದೆ. ಮೂರನೇ ಮತ್ತು ನಾಲ್ಕನೇ ವಿಧದ ಕಲಿಕಾ ಶೈಲಿಯಲ್ಲಿ ಕಲಿಕಾರ್ಥಿಗಳ ಶೇಕಡಾವಾರು ಪ್ರಮಾಣವು ಅತ್ಯಲ್ಪವಾಗಿದೆ

ಈ ಸಂದರ್ಭದಲ್ಲಿ ಶಿಕ್ಷಕರ ಜವಾಬ್ದಾರಿಯು ಹೆಚ್ಚಿನದ್ದಾಗಿದೆ. ಶಿಕ್ಷಕ/ಕಿ ಕಲಿಕಾರ್ಥಿಗಳ ಕಲಿಕಾ ಶೈಲಿಯನ್ನು ತಿಳಿಯುತ್ತಾ ಅವರಿಗೆ ಸೂಕ್ತವಾದ ಕಲಿಕಾ ಅವಕಾಶಗಳನ್ನು ಕಲ್ಪಿಸುವುದರ ಬಗ್ಗೆ ಯೋಜನೆಯನ್ನು ತಯಾರಿಸುವುದು ಅವಶ್ಯವಾಗಿದೆ. ಕಲಿಕಾ ಶೈಲಿಗೆ ಅನುಗುಣವಾಗಿ ಇರುವ ಕಲಿಕಾರ್ಥಿಗಳ ಸಂಯೋಗದ ಬಗ್ಗೆ ತಿಳಿಯುವುದು. ಸಹ ಶಿಕ್ಷಕರ ಮತ್ತೊಂದು ಪ್ರಮುಖವಾದ

ಜವಾಬ್ದಾರಿಯಾಗಿದೆ. ಇವುಗಳೆಲ್ಲದರ ಆಧಾರದ ಮೇಲೆ ಸೂಕ್ತವಾದ ಕಲಿಕಾ ಸನ್ನಿವೇಶಗಳನ್ನು ನಿರ್ಮಿಸುವುದು ಅವಶ್ಯಕವಾಗಿದೆ. ಈ ಎಲ್ಲವೂ ತರಗತಿಯ ಸಂಘಟನೆ ಅಥವಾ ಪ್ರತ್ಯೇಕವಾಗಿ ಕಲಿಕಾ ಚಟುವಟಿಕೆಯಲ್ಲಿ ತೊಡಗಿಸುವುದು ಅಥವಾ ವೈಯಕ್ತಿಕವಾದ ಕಲಿಕಾ ಚಟುವಟಿಕೆಗಳ ಬಗ್ಗೆ ಯೋಜನೆಯನ್ನು ತಯಾರಿಸುವುದೇ ಆಗಿದೆ. ಆದ್ದರಿಂದ ಶಿಕ್ಷಕರು ಸಂವೇದನಾಶೀಲರಾಗಿ ಕಲಿಕಾರ್ಥಿಗಳ ಕಲಿಕಾ ಶೈಲಿಯನ್ನು ತಿಳಿದು, ಅದನ್ನು ಅವರಿಗೆ ತಿಳಿಸುತ್ತಾ, ಅವುಗಳನ್ನೇ ಹೆಚ್ಚಾಗಿ ಕಲಿಯುವ ಸಂದರ್ಭಗಳಲ್ಲಿ ಬಳಸುವುದಕ್ಕೆ ಉತ್ತೇಜಿಸುವುದರಿಂದ ಅವರಲ್ಲಿ ಉತ್ತಮವಾದ ಕಲಿಕೆಯನ್ನು ಕಾಣಬಹುದಾಗಿದೆ. ಈ ಎಲ್ಲಾ ಕ್ರಿಯೆಗಳು ಕಲಿಕಾರ್ಥಿಗಳು ತಮ್ಮನ್ನು ತಾವೂ ಅರಿಯಲು ಮತ್ತು ಕಲಿಕಾ ಶೈಲಿಯನ್ನು ತಿಳಿಯಲು ಸಾಧ್ಯವಾಗುತ್ತದೆ.

**ಥಾರ್ನ್ ಡೈಕ್: ಪ್ರಯತ್ನ ಪ್ರಮಾದ ಕಲಿಕೆ**

ಶೈಕ್ಷಣಿಕ ಮನಶಾಸ್ತ್ರದ ಜನಕನಾದ **ಥಾರ್ನ್ ಡೈಕ್** ನು ಪ್ರತಿಪಾದಿಸಿದ ಸಿದ್ಧಾಂತವನ್ನು ಪ್ರಯತ್ನ ಪ್ರಮಾದ ಕಲಿಕೆ ಎನ್ನುತ್ತಾರೆ. ಈ ಸಿದ್ಧಾಂತವನ್ನು **ಸಂಬಂಧ ತತ್ವ ಸಿದ್ಧಾಂತ** ಎಂದು ಸಹ ಕರೆಯುತ್ತಾರೆ. **ಥಾರ್ನ್ ಡೈಕ್** ರವರ ಪ್ರಕಾರ ಪ್ರಚೋದನೆ ಮತ್ತು ಪ್ರಕ್ರಿಯೆಗಳ ನಡುವಿನ ಸಂಬಂಧವೇ ಕಲಿಕೆ. ಕಲಿಕೆ ಉಂಟಾಗಬೇಕಾದರೆ ಪ್ರಚೋದನೆ ಇರಬೇಕು. ಪ್ರಚೋದನೆಗೆ ಸೂಕ್ತ ಪ್ರತಿಕ್ರಿಯೆ ವ್ಯಕ್ತವಾದಾಗ, ಪ್ರತಿಕ್ರಿಯೆ ಮತ್ತು ಪ್ರಚೋದನೆಗಳ ನಡುವೆ ಬಂಧವೇರ್ಪಡುತ್ತದೆ, ಆಗ ಜೀವಿಯಲ್ಲಿ ಕಲಿಕೆ ಉಂಟಾಗುತ್ತದೆ. ಪ್ರಚೋದನೆ ಮತ್ತು ಪ್ರತಿಕ್ರಿಯೆ ನಡುವೆ ಬಂಧವೇರ್ಪಡುವವರೆಗೂ ದೋಷ ಉಂಟಾಗುತ್ತಿರುತ್ತದೆ. ಬಂದವೇರ್ಪಟ್ಟ ನಂತರ ಜೀವಿಯು ಆ ಪ್ರಚೋದನೆಗೆ ತಕ್ಷಣ ಪ್ರಕ್ರಿಯೆ ವ್ಯಕ್ತಪಡಿಸುವುದು, ಬಂಧವು ಬಲವಾದಷ್ಟು ಕಲಿಕೆ ದೃಢವಾಗುತ್ತದೆ.

**S (ಪ್ರಚೋದನೆ)** ಬಂಧ **R (ಪ್ರತಿಕ್ರಿಯೆ )**

**ಥಾರ್ನ್‌ಡೈಕ್ ಸಿದ್ದಾಂತದ ಕಲಿಕಾ ನಿಯಮಗಳು**

ಸಿದ್ದತೆಯ ನಿಯಮ
ಅಭ್ಯಾಸದ ನಿಯಮ
ಪರಿಣಾಮದ ನಿಯಮ

1. **ಸಿದ್ದತೆಯನಿಯಮ:** ವಿದ್ಯಾರ್ಥಿಯು ಕಲಿಯಲು ಸಿದ್ಧವಾದಾಗ ಮಾತ್ರ ಕಲಿಕೆಯು ನಡೆಯುತ್ತದೆ.
2. **ಅಭ್ಯಾಸದ ನಿಯಮ:** ಒಬ್ಬ ವ್ಯಕ್ತಿಯು ಏನನ್ನಾದರೂ ಹೆಚ್ಚು ಅಭ್ಯಾಸ ಮಾಡುತ್ತಾನೆ. ಅವನು/ ಅವಳು ಆ ಜ್ಞಾನವನ್ನು ಉಳಿಸಿಕೊಳ್ಳಲು ಸಾಧ್ಯವಾಗುತ್ತದೆ.
3. **ಪರಿಣಾಮದ ನಿಯಮ:** ಕಲಿಕೆಯು ಅಹಲಾದಕರ ಅಥವಾ ತೃಪ್ತಿಕರ ಭಾವನೆಯೊಂದಿಗೆ ಸಂಬಂಧ ಹೊಂದಿದಾಗ ಬಲಗೊಳ್ಳುತ್ತದೆ.

**2. ಪೆಟ್ರೊವಿಜ್ ಪಾವ್ಲೋವ್: ಶಾಸ್ತ್ರೀಯ / ಸಾಂಪ್ರದಾಯಿಕ ಅನುಬಂಧನ ಕಲಿಕೆ:**

ಸ್ವಾಭಾವಿಕ ಅನುಕ್ರಿಯೆಯನ್ನು ಮಾರ್ಪಡಿಸುವಿಕೆಯನ್ನು ಅನುಬಂಧನ ಎನ್ನುವರು. ಸ್ವಾಭಾವಿಕ ಉದ್ದೀಪಕ್ಕೆ ಸ್ವಾಭಾವಿಕ ಅನುಕ್ರಿಯೆ ಬರುವುದು ಸಹಜ. ಇದರಲ್ಲಿ ಸಾಂಪ್ರದಾಯಿಕ ಹಾಗೂ ಕ್ರಿಯಾಜನ್ಯ ಅನುಬಂಧನ ಕಲಿಕೆಗಳನ್ನು ಕಾಣುತ್ತೇವೆ. ಸಾಂಪ್ರದಾಯಿಕ ಅನುಬಂಧನ ಕಲಿಕೆಗಳನ್ನು 20ನೇ ಶತಮಾನದಲ್ಲಿ ಪ್ರತಿಪಾದಿಸಿದವರು ರಷ್ಯಾದ ಶಾರೀರಿಕ ತಜ್ಞ ಇವಾನ್ **ಪೆಟ್ರೊವಿಜ್ ಪಾವ್ಲೋವ್**. ಸಾಂಪ್ರದಾಯಿಕ ಅನುಬಂಧನ ಕಲಿಕೆ ಬಹಳ ಸುಲಭವಾದದು. ನಮ್ಮ ದಿನನಿತ್ಯ ಜೀವನದ ಸನ್ನಿವೇಶದಲ್ಲಿ ಹಲವಾರು ವರ್ತನೆಗಳು ಸಾಂಪ್ರದಾಯಿಕ ಅನುಬಂಧನ ಮಾದರಿಯಲ್ಲಿ ಅನುಬಂಧಿತವಾಗುತ್ತವೆ.

**ಸಾಂಪ್ರದಾಯಿಕ ಅನುಬಂಧನ ಕಲಿಕಾ ಮಾದರಿ:**

ಅನುಬಂಧಿತವಲ್ಲದ ಉದ್ದೀಪಕ → ಅನುಬಂಧತವಲ್ಲದ ಅನುಕ್ರಿಯೆ

UCS (ಆಹಾರ) → UCR (ಜೊಲ್ಲು ಸುರಿಸುವಿಕೆ)

ಅನುಬಂಧಿತ ಉದ್ದೀಪಕ + ಅನುಬಂಧಿತವಲ್ಲದ ಉದ್ದೀಪಕ → ಅನುಬಂಧತವಲ್ಲದ ಅನುಕ್ರಿಯೆ

CS + UCS (ಗಂಟೆಯ ಶಬ್ದ + ಆಹಾರ) → UCR (ಜೊಲ್ಲು ಸ್ರವಿಸುವಿಕೆ)

ಅನುಬಂಧಿತ ಉದ್ದೀಪಕ → ಅನುಬಂಧಿತ ಅನುಕ್ರಿಯೆ

CS (ಗಂಟೆಯ ಶಬ್ದ) → CR (ಜೊಲ್ಲು ಸ್ರವಿಸುವಿಕೆ)

ಸಾಂಪ್ರದಾಯಿಕ ಅನುಬಂಧನ ಕಲಿಕೆಯಲ್ಲಿ ಕಂಡುಬರುವ ಕೆಲವು ಪ್ರಕ್ರಿಯೆಗಳು :

- CS ಮತ್ತು UCSಗಳ ಮಧ್ಯೆ ಸಮಯದ ಅಂತರ
- ಏಕಕಾಲಿಕ ಅನುಬಂಧನ

- ಪ್ರಾಯೋಗಿಕ ಅಳಿವು
- ಸ್ವತಃ ಸ್ಫೂರ್ತ ಚೇತರಿಕೆ
- ಪ್ರತಿಬಂಧನ
- ಸಾರ್ವತ್ರೀಕರಣ

**ಬಂಡೂರ: ವೀಕ್ಷಣಾ ಕಲಿಕೆ:**

ಅಲ್ಬರ್ಟ ಬಂಡೂರ ರವರು ಸಾಮಾಜಿಕ ಕಲಿಕೆಯ ಸಿದ್ಧಾಂತವನ್ನು ಪ್ರತಿಪಾಸಿದವರು. ಯಾವುದೇ ಒಂದು ಪ್ರಾಣಿಯ ವರ್ತನೆಯಲ್ಲಿ ಇನ್ನೊಂದು ಪ್ರಾಣಿಯ ವರ್ತನೆಯಾಗಿದೆ. ಮಕ್ಕಳಲ್ಲಿ ವೀಕ್ಷಣಾ ಕಲಿಕೆಯ ಪ್ರಭಾವವನ್ನು ಸುಲಭವಾಗಿ ಗುರುತಿಸಬಹುದು. ಸಾಮಾಜಿಕ ಉದ್ದೀಪನ ಮತ್ತು ಅನುಕರಣೀಯ ಅನುಕ್ರಿಯೆಯನ್ನು ಮಕ್ಕಳು ಮಾತನಾಡುವುದು ಮತ್ತು ನಡೆಯುವುದರ ಕಲಿಕೆಯಲ್ಲಿ ಕಾಣುತ್ತೇವೆ. ಸಾಮಾಜಿಕ ವರ್ತನೆಗಳಾದ ಶುಭಾಹಾರೈಕೆ, ವಂದನೆ ಸಲ್ಲಿಸುವಿಕೆ, ಮೆಚ್ಚುಗೆ ವ್ಯಕ್ತ ಪಡಿಸುವುದು, ಸಂತೋಷದ ಅಭಿವ್ಯಕ್ತತೆ, ಊಟ ಮಾಡುವುದು, ಉಡುಪು ಧರಿಸುವುದು ಮುಂತಾದವುಗಳು ಬಹುಮಟ್ಟಿಗೆ ಅನುಕರಣೆಯ ಮೂಲಕ ಕಲಿತ ವರ್ತನೆಗಳಾಗಿವೆ. ಬಂಡೂರನ ಸಾಮಾಜಿಕ ಕಲಿಕೆಯ ತತ್ವವನ್ನು "ಮಾದರಿ ನಿರ್ಮಾಣ ತತ್ವ" ವೆಂದೂ ಸಹ ಕರೆಯುತ್ತಾರೆ. ಸಾಮಾಜಿಕ ಕಲಿಕಾ ಸಿದ್ಧಾಂತದ ಬೋಗೋ ಗೊಂಬೆಯ ಪ್ರಯೋಗದ ಮೂಲಕ ವೀಕ್ಷಣ ಕಲಿಕೆಯ ಪರಿಕಲ್ಪನೆಯನ್ನು 1961 ರಲ್ಲಿ ಪರಿಚಯಿಸಿದ್ದಾರೆ. ಇವರ ಸಿದ್ಧಾಂತ ಸಾಮಾಜಿಕ ಕಲಿಕಾ ಸಿದ್ಧಾಂತ/ ವೀಕ್ಷಣಾ ಕಲಿಕೆ.

ಪರಿಣಾಮಕಾರಿ ಮಾದರೀಕರಣಕ್ಕೆ ಅವಶ್ಯಕತೆಗಳು

1. ಅವಧಾನ 2. ಧಾರಣ 3. ಪುನರುತ್ಪಾದನೆ 4.ಅಭಿಪ್ರೇರಣೆ.

**ಜೆರೋಮ್ ಬ್ರೂನರ್ ರವರ ಕಲಿಕಾ ಸಿದ್ಧಾಂತ :**

ಜೆರೋಮ್ ಬ್ರೂನರ್‌ರವರ ಪರಿಕಲ್ಪನಾ ಸಿದ್ಧಾಂತ ಮಕ್ಕಳಿಗೆ ಹೇಗೆ ಕಲಿಸಬೇಕು ಮತ್ತು ಅವರು ಹೇಗೆ ಕಲಿಯುತ್ತಾರೆ ಎಂಬುದನ್ನು ತಿಳಿಸುತ್ತದೆ.

ಜೆರೋಮ್ ಬ್ರೂನರ್ (1915) – ಅಮೇರಿಕನ್ ಮನೋವಿಜ್ಞಾನಿ ಇವರು ಜ್ಞಾನಾತ್ಮಕ ವಿಕಾಸಕ್ಕೆ ಕೊಡುಗೆ ನೀಡಿದ್ದಾರೆ. ಇವರು ಕಲಿಕೆಯ ಮೇಲಿನ ತಮ್ಮ ಅಭಿಪ್ರಾಯಗಳನ್ನು ಪರಿಕಲ್ಪನಾ ಸಿದ್ಧಾಂತ ಎಂದು ಕರೆದಿದ್ದಾರೆ. ಇವರಿಗೆ ವ್ಯಕ್ತಿಯ ಬೆಳವಣಿಗೆ, ಕಲಿಕೆ, ಅವನು ತನ್ನ ಸುತ್ತಲೂ ಸಂಘಟಿತವಾದ ಗ್ರಹಿಕೆಯ ಕ್ಷೇತ್ರವನ್ನು ತಿಳಿದುಕೊಳ್ಳುವ ವಿಷಯವಾಗಿದೆ ಎಂದು ಪ್ರತಿಪಾದಿಸಿದ್ದಾರೆ.

**ಗ್ರಹಿಕೆಯ ಕ್ಷೇತ್ರ :** ಬ್ರೂನರರ ಪ್ರಕಾರ ವ್ಯಕ್ತಿಯು ಪ್ರಜ್ಞೆಯಿಂದಿರುವ ಭೌತಿಕ ಜಗತ್ತಿನ ಎಲ್ಲಾ ಅಂಶಗಳು ಅವನ ಗ್ರಹಿಕೆಯ ಕ್ಷೇತ್ರಗಳಾಗಿವೆ. ಪ್ರತಿಯೊಬ್ಬ ವ್ಯಕ್ತಿಯು ಮೂರು ತರಹದ ಮಾನಸಿಕ ಕೌಶಲ್ಯಗಳನ್ನು ವಿಸ್ತರಿಸುವ ಮೂಲಕ ಪರಿಕಲ್ಪನೆಗಳನ್ನು ಅರ್ಥಮಾಡಿಕೊಳ್ಳುವನು ಎಂದು ಸಂಶೋಧನೆ ತಿಳಿಸುತ್ತದೆ. ಈ ಮೂರು ಕೌಶಲಗಳು ಬ್ರೂನರ್‌ರವರ ಮೂರು ಪ್ರಾತಿನಿಧಿಕ ಮಾರ್ಗಗಳಾಗಿವೆ. ಅವುಗಳೆಂದರೆ,

ಕ್ರಿಯಾ ಪ್ರಾತಿನಿಧ್ಯ (Enactive)

ಪ್ರತಿಮಾ / ಬಿಂಬ ಪ್ರಾತಿನಿಧ್ಯ (Iconic)

ಸಾಂಕೇತಿಕ ಪ್ರಾತಿನಿಧ್ಯ (Symbolic)

**ಕ್ರಿಯಾ ಪ್ರಾತಿನಿಧ್ಯ :**ಇದನ್ನು ಅಭಿನಯ ಪ್ರಾತಿನಿಧ್ಯ ಎಂತಲೂ ಕರೆಯುತ್ತಾರೆ. ಯಾವುದೇ ವಿಷಯವನ್ನು ಮಗು ಚಟುವಟಿಕೆಗಳ ಮೂಲಕ ಕಲಿಯುತ್ತದೆ. ಈ ಹಂತದಲ್ಲಿ ಕಲಿಕೆಯು ಕ್ರಿಯೆ, ಅಭಿನಯ, ಕ್ರೀಡೆಗಳಂತಹ ಚಟುವಟಿಕೆಯ ಮೂಲಕ ವಸ್ತು, ಪ್ರಾಣಿ ಮತ್ತು ಘಟನೆಗಳನ್ನು ವ್ಯಾಖ್ಯಾನಿಸುತ್ತದೆ. ಈ ಹಂತದಲ್ಲಿ ಮಗು ಅಭಿನಯ ಅಥವಾ ಕ್ರಿಯೆಯ ಮೂಲಕ ತನ್ನ ಹಿಂದಿನ ಅನುಭವಗಳನ್ನು ವ್ಯಕ್ತಪಡಿಸುವುದು. ಆದುದರಿಂದ ಬ್ರೂನರ್‌ರವರ ಪ್ರಕಾರ ಈ ಹಂತದಲ್ಲಿ ವಿಷಯವನ್ನು ಕ್ರಿಯೆ ಅಥವಾ ಅಭಿನಯದ ಮೂಲಕ ಮಕ್ಕಳಿಗೆ ಕಲಿಸುವುದು ಸೂಕ್ತ.

**ಪ್ರತಿಮಾ / ಬಿಂಬ ಪ್ರಾತಿನಿಧ್ಯ :** ಇದನ್ನು ಚಿತ್ರರೂಪ ಪ್ರಾತಿನಿಧಿಕರಣ ಎಂತಲೂ ಕರೆಯುತ್ತಾರೆ. ಇದು ಮಗುವಿನ ಆಂತರಿಕ ಪರಿಕಲ್ಪನೆಯ ಮೇಲೆ ಆಧಾರಿತವಾಗಿದೆ. ಈ ಹಂತದಲ್ಲಿ ಮಗು ವಸ್ತು, ಪ್ರಾಣಿ ಅಥವಾ ಸನ್ನಿವೇಶವನ್ನು ಚಿತ್ರದ ಮೂಲಕವೇ ಕಲಿಯುತ್ತದೆ. ಆದ್ದರಿಂದ ಬ್ರೂನರ್‌ರವರ ಪ್ರಕಾರ ಈ ಹಂತದಲ್ಲಿ ಬೋಧನೋಪಕರಣ ಬಳಸಿ ಬೋಧಿಸುವುದು ಸೂಕ್ತ.

**ಸಾಂಕೇತಿಕ ಪ್ರಾತಿನಿಧ್ಯ:**ಬ್ರೂನರ್ ರವರ ಪ್ರಕಾರ ಇದು ಮುಂದುವರೆದ ಪ್ರಾತಿನಿಧಿಕ ರೂಪವಾಗಿದೆ. ಈ ಹಂತದಲ್ಲಿ ಮಕ್ಕಳು ಅಮೂರ್ತ ಕಲ್ಪನೆಗಳನ್ನು ಮೂಡಿಸಿಕೊಳ್ಳಲು ಶಕ್ತರಾಗುತ್ತಾರೆ. ಅವರು ತಮ್ಮ ಅನುಭವವನ್ನು ಬಾಷೆಯಲ್ಲಿ ರೂಪಾಂತರ ಮಾಡಲು ಪ್ರಾರಂಭಿಸುತ್ತಾರೆ ಮತ್ತು ಭಾಷೆಯನ್ನು ಚಿಂತನೆಯ ಒಂದು ಸಾಧನದಂತೆ ಬಳಸುತ್ತಾರೆ.

## ಬ್ರೂನರ್ ರವರ ಸಿದ್ಧಾಂತದ ಶೈಕ್ಷಣಿಕ ನಿಹಿತಾರ್ಥಗಳು :

ಮಕ್ಕಳು ಕ್ರಿಯಾತ್ಮಕವಾಗಿ, ನಂತರ ಚಿತ್ರದ ರೂಪದಲ್ಲಿ ಹಾಗೂ ಅಮೂರ್ತ ರೂಪದಲ್ಲಿರುವ ವಿಷಯಗಳನ್ನು ಗ್ರಹಿಸುವ ಸಾಮರ್ಥ್ಯವನ್ನು ಹೊಂದುತ್ತಾರೆ. ಆದುದರಿಂದ ಪೂರ್ವ ಪ್ರಾಥಮಿಕ ಹಾಗೂ ಪ್ರಾಥಮಿಕ ಹಂತದಲ್ಲಿ ಮಕ್ಕಳಿಗೆ ದೃಶ್ಯದ ಮತ್ತು ಸಂವೇದನಾ ಅನುಭವಗಳ ಮೂಲಕ ಕಲಿಯಲು ಪ್ರೋತ್ಸಾಹ ಕೊಟ್ಟು ಪ್ರತಿಮಾ ಪ್ರಾತಿನಿಧ್ಯಕ್ಕೆ ಅವಕಾಶ ನೀಡಬೇಕು. ಪ್ರಾಥಮಿಕ ಹಂತಗಳಲ್ಲಿ ಮಕ್ಕಳು ಕೆಲವು ವೇಳೆ ಪ್ರತಿಮೆಯ ರೂಪದ ಪ್ರಾತಿನಿಧ್ಯ, ಇನ್ನೂ ಕೆಲವು ವೇಳೆ ಸಾಂಕೇತಿಕ ಚಿಂತನೆಯನ್ನು ಬಳಸುವರು ಎಂಬುದನ್ನು ಶಿಕ್ಷಕರು ನೆನಪಿನಲ್ಲಿಟ್ಟುಕೊಳ್ಳಬೇಕು. ಇದನ್ನು ಬಲಪಡಿಸಲು ಕೆಲವು ಸಮಯ ಪಾಠದ ಕೆಲವು ಭಾಗಗಳ ದೃಶ್ಯ ಪ್ರತಿಮೆಗಳ ಮತ್ತು ಸಂಕೇತಗಳ ಮೇಲೆ ಒತ್ತುಕೊಟ್ಟು ಕಲಿಸಬಹುದು. ಇನ್ನೂ ಕೆಲವು ಭಾಗಗಳನ್ನು ಭಾಷೆಯ ಮೇಲೆ ಒತ್ತುಕೊಟ್ಟು ಹೇಳಬಹುದು. ಇವುಗಳ ಜೊತೆಗೆ ವಿದ್ಯಾರ್ಥಿಗಳ ನಡುವೆ ಶಾಬ್ದಿಕ ಪರಸ್ಪರ ವಿನಿಮಯಕ್ಕೆ ಅವಕಾಶವನ್ನು ಕಲ್ಪಿಸಬೇಕು. ವಿದ್ಯಾರ್ಥಿಗಳು ಸಾಂಕೇತಿಕ ಪ್ರಾತಿನಿಧಿಕದ ಮೇಲೆ ಸಮರ್ಥರಾದರೆ ಪರಿಕಲ್ಪನೆಗಳು ಮತ್ತು ತತ್ವಗಳ ಮೇಲೆ ಪ್ರಭುತ್ವ ಸಾಧಿಸಲು ಸಹಾಯ ಮಾಡಬೇಕು ಮತ್ತು ಅಂತಹ ಸಂಬಂಧಗಳ ಮೇಲೆ ಒತ್ತುಕೊಟ್ಟು ಒಂದು ಅಧ್ಯಯನ ಕ್ಷೇತ್ರದ ಸಂರಚನೆಯ ಕಡೆಗೆ ಅವರ ಗಮನವನ್ನು ಸೆಳೆಯಬೇಕು.

## ಗ್ಯಾನೆಯವರ ಪದಸೋಪಾನ ಕಲಿಕಾ ಸಿದ್ಧಾಂತ

ರಾಬರ್ಟ್ ಗ್ಯಾನೆಯವರು ಕಲಿಕೆಯನ್ನು ಅವುಗಳ ಕ್ಲಿಷ್ಟತೆ ಹಾಗೂ ಸ್ವರೂಪಗಳಿಗನುಸಾರವಾಗಿ ಎಂಟು ರೀತಿಯಲ್ಲಿ ವಿಂಗಡಿಸಿದ್ದಾರೆ. ಇವರು ಸೂಚಿಸಿರುವ 8 ಕಲಿಕಾ ಪ್ರಕಾರಗಳು ವಿವಿಧ ಬೌದ್ಧಿಕ ಕೌಶಲಗಳನ್ನೊಳಗೊಂಡಿವೆ. ಅವು ಹಲವಾರು ಘಟನೆಗಳಿಗೆ ಸಂಬಂಧಿಸಿವೆ. ಬಾಹ್ಯ ಹಾಗೂ ಆಂತರಿಕ ಸ್ಥಿತಿಗಳು ಇವುಗಳಲ್ಲಿ ಸೇರಿದ್ದು.

ಗ್ಯಾನೆಯ ಕಲಿಕಾ ಮಾದರಿಯಲ್ಲಿ ಎಲ್ಲಾ ಕಲಿಕೆಯ ಪ್ರಕಾರಗಳು ಸಮಾನ ಮಹತ್ವವನ್ನು ಪಡೆದಿವೆ. ಅಲ್ಲದೆ ಪ್ರತಿಯೊಂದು ಹಂತವು ಅದರ ಮುಂದಿನ ಹಂತವನ್ನು ಕಲಿಯಲು ಅತ್ಯವಶ್ಯಕವಾಗಿರುತ್ತದೆ. ರಾಬರ್ಟ್ ಗ್ಯಾನೆಯು ತಮ್ಮ ಸಮಗ್ರ ಕಲಿಕೆಯ ಮಾದರಿಯಲ್ಲಿ ಮೇಲ್ಮಟ್ಟದ ಕಲಿಕೆಯು ಕೆಳಹಂತದ ಕಲಿಕೆಯ ಪ್ರಭುತ್ವವನ್ನು ಅವಲಂಭಿಸಿದೆ. ಈ ರೀತಿಯ ಕಲಿಕಾ ವಿಧಗಳನ್ನು ಸರಳತೆಯಿಂದ ಕಠಿಣತೆಯಡೆಗೆ ಸೋಪಾನದಂತೆ ಸೂಚಿಸಿದ್ದಾರೆ. ಅವುಗಳೆಂದರೆ,

1. ಸಂಜ್ಞಾ ಕಲಿಕೆ
2. ಉದ್ದೀಪನಾ – ಅನುಕ್ರಿಯಾ ಕಲಿಕೆ
3. ಸರಪಳಿ ಕಲಿಕೆ
4. ಶಾಬ್ದಿಕ ಸಹಚರ್ಯ ಕಲಿಕೆ
5. ಬಹುಮುಖ ವಿಬೇಧನಾ ಕಲಿಕೆ
6. ಪರಿಕಲ್ಪನಾ ಕಲಿಕೆ
7. ನಿಯಮ ಕಲಿಕೆ
8. ಸಮಸ್ಯಾ ಪರಿಹಾರ ಕಲಿಕೆ

**ಸಂಜ್ಞಾ ಕಲಿಕೆ** :ಒಬ್ಬ ವ್ಯಕ್ತಿಯು ನಿರ್ದಿಷ್ಟ ಪ್ರಚೋದನೆಗೆ ತೋರಿಸುವ ಪ್ರತಿಕ್ರಿಯೆಯನ್ನು ಯಾವುದಾದರೂ ಒಂದು ಸಂಜ್ಞೆಯ ಮೂಲಕ ವ್ಯಕ್ತಪಡಿಸುತ್ತಾನೆ. ಇಂತಹ ಕಲಿಕೆಯನ್ನು ಸಂಜ್ಞಾ ಕಲಿಕೆ ಎನ್ನುವರು. ಈ ಪ್ರಕಾರದ ಕಲಿಕೆಯು ಪಾವಲೋ ಮತ್ತು ವ್ಯಾಟ್ಸನ್‌ರವರ ಅಭಿಜಾತ ಅನುಬಂಧನಾ ಕಲಿಕೆಯ ತತ್ವದ ಮೇಲೆ ನೆಲೆಯೂರಿದೆ.

**ಉದಾ:**

* ಕೆಂಡ ಸಮೀಪಿಸುವಿಕೆ (ಸಂಜ್ಞೆ) ಸುಡುವುದು.
* ಹುಣಿಸೇ ಹಣ್ಣು (ಸಂಜ್ಞೆ) ಬಾಯಲ್ಲಿ ನೀರೂರುವುದು.

**ಉದ್ದೀಪನಾ ಅನುಕ್ರಿಯಾ ಕಲಿಕೆ :** ಈ ರೀತಿಯ ಕಲಿಕೆಯಲ್ಲಿ ನಿರ್ದಿಷ್ಟ ಉದ್ದೀಪನಕ್ಕೆ ನಿರ್ಧಿಷ್ಟ ಅನುಕ್ರಿಯೆ ಇರುತ್ತದೆ. ಇದು ಒಂದು ರೀತಿಯಲ್ಲಿ ಪ್ರಯತ್ನ–ಪ್ರಮಾದ ಕಲಿಕೆಯಾಗಿರುತ್ತದೆ. ಈ ಕಲಿಕೆಯು ನಿರಂತರತೆ, ಅಭ್ಯಾಸ ಮತ್ತು ಪುನರ್ಬಲನದ ಮುಖಾಂತರ ಸಾಗುತ್ತದೆ. ಈ ರೀತಿಯ ಕಲಿಕೆಯಲ್ಲಿ ಅನುಪಯುಕ್ತ ಕ್ರಿಯೆಗಳು ತ್ಯಜಿಸಲ್ಪಟ್ಟ ಕೇವಲ ಯುಕ್ತ ಅನುಕ್ರಿಯೆಗಳು ಉದ್ದೀಪನಕ್ಕೆ ಸಂಪರ್ಕ ಕಲ್ಪಿಸುತ್ತವೆ. ಇದು ಪುನರ್ಬಲನದಿಂದ ನಿರ್ಧರಿಸಲ್ಪಡುತ್ತದೆ.
**ಉದಾ:** ಆಕಸ್ಮಿಕವಾಗಿ ಬಿಸಿ ವಸ್ತುವನ್ನು ಸ್ಪರ್ಶಿಸಿದಾಗ ಸ್ವಯಂಚಾಲಿತವಾಗಿ ಕೈಯನ್ನು ಹಿಂತೆಗೆದುಕೊಳ್ಳುವುದು.

**ಸರಪಳಿ ಕಲಿಕೆ :** ಸರಪಳಿ ಕಲಿಕೆಯು ಪರಸ್ಪರ ಜೋಡಿಸಲ್ಪಟ್ಟ ನಿರಂತರ ಪ್ರಕ್ರಿಯೆಗಳ ಸರಣಿಯಾಗಿದೆ. ಈ ವಿವಿಧ ಕಲಿಕೆಯಲ್ಲಿ ಅನೇಕ ಪ್ರಚೋದನೆಗಳಿಗೆ ಒಂದಕ್ಕಿಂತ ಹೆಚ್ಚು ಪ್ರತಿಕ್ರಿಯೆಗಳನ್ನು ಒದಗಿಸಲಾಗುವುದು ಅವುಗಳಲ್ಲಿ ಸೂಕ್ತವಾದ ಪ್ರತಿಕ್ರಿಯೆಗಳನ್ನು ಕ್ರಮಬದ್ಧವಾಗಿ ಜೋಡಿಸಬೇಕು. ಇಲ್ಲಿ ಪುನರ್ಬಲನವಾದಾಗ ಮಾತ್ರ ಕಲಿಕೆ ಉಂಟಾಗುತ್ತದೆ.
**ಉದಾ:** ಬ್ಯಾಟ್ ಮೇಲಿನ ಹಿಡಿತ, ಚೆಂಡನ್ನು ಹೊಡೆಯುವಲ್ಲಿ

**ಶಾಬ್ದಿಕ ಸಹಚರ್ಯ ಕಲಿಕೆ :** ಈ ರೀತಿಯ ಕಲಿಕೆ ಕೇವಲ ಮಾನವನಿಗೆ ಮಾತ್ರ ಸೀಮಿತವಾಗಿದ್ದು, ಕೇವಲ ಭಾಷೆಯಿದ್ದಲ್ಲಿ ಮಾತ್ರ ಇಂತಹ ಕಲಿಕೆ ನಡೆಯುತ್ತದೆ. ಇಲ್ಲಿ ಶಬ್ದಗಳು ಉದ್ದೀಪನ ಮತ್ತು ಅನುಕ್ರಿಯೆಯ ಸರಪಳಿಯ ಮಧ್ಯದಲ್ಲಿರುತ್ತವೆ. ಪ್ರತಿಯೊಂದು ಶಬ್ದಕ್ಕೂ ಸಂಬಂಧ ಕಲ್ಪಿಸುವುದರ ಮೂಲಕ ಕಲಿಕೆ ನಡೆಯುತ್ತದೆ. ಒಂದು ಪ್ರಚೋದನೆಗೆ ಪ್ರತಿಕ್ರಿಯೆ ತೋರಿಸಲು ಭಾಷೆಯು ಸಹಕಾರಿಯಾಗಿದೆ.

**ಉದಾ:** 'ಉಂಗುರ' ಪದವು 'ಬೆರಳು' ಪದದ ಜೊತೆಗೆ ಸಹಚರ್ಯ ಹೊಂದಿರುತ್ತದೆ.

ಟೋಪಿ – ತಲೆ

ಮಳೆ – ಛತ್ರಿ

**ಬಹುಮುಖ ವಿಭೇಧನಾ ಕಲಿಕೆ :**ಈ ವಿಧದ ಕಲಿಕೆಯಲ್ಲಿ ಬಾಹ್ಯ ನೋಟದಿಂದ ಕಲಿಕೆ ಸಾಗುತ್ತದೆ. ಬಾಹ್ಯ ನೋಟದಲ್ಲಿ ಒಂದೇ ತೆರನಾಗಿರುವುದನ್ನೆ ಸರಿಯಾದ ರೀತಿಯಲ್ಲಿ ಗುರುತಿಸಿ ನಿರ್ಧಿಷ್ಟ ಹೇಳಿಕೆ ನೀಡುವುದೇ ಬಹುಮುಖ ವಿಭೇಧನಾ ಅಥವಾ ಪ್ರತ್ಯೇಕತೆಯ ಕಲಿಕೆಯಾಗಿದೆ. ಒಂದು ನಿರ್ದಿಷ್ಟ ಪ್ರಚೋದನೆಗೆ ಒಂದು ನಿರ್ದಿಷ್ಟ ಅನುಕ್ರಿಯೆ ತೋರಿಸುವ ಕಲಿಕೆ ಇದಾಗಿದೆ.

**ಉದಾ:** ಬಣ್ಣ : ಹಸಿರು, ಕೆಂಪು, ನೀಲಿ, ಹಳದಿ

ವಿದ್ಯಾರ್ಥಿಗಳ ಹೆಸರು : ರಘು, ಮೋಹನ, ಕಮಲ

**ಪರಿಕಲ್ಪನಾ ಕಲಿಕೆ :**ಒಂದು ವಸ್ತು, ಪ್ರಾಣಿ ಅಥವಾ ಸನ್ನಿವೇಶದ ಸಾಮಾನ್ಯ ಗುಣಲಕ್ಷಣ ಅರ್ಥೈಸಿಕೊಂಡು ಬೇರೆ ವ್ಯಕ್ತಿ, ಸನ್ನಿವೇಶಗಳ ಗುಣಲಕ್ಷಣಗಳಿಂದ ಪ್ರತ್ಯೇಕಿಸಿ, ಸಾಮಾನ್ಯೀಕರಿಸಿಕೊಂಡು ತನ್ನದೇ ಆದ ರೀತಿಯಲ್ಲಿ ವ್ಯಾಖ್ಯಾನಿಸುವುದನ್ನು ಪರಿಕಲ್ಪನೆ ಎನ್ನುತ್ತೇವೆ. ಇದರಿಂದ ವ್ಯಕ್ತಿಯು ಆಯಾ ವಸ್ತು ಅಥವಾ ಸನ್ನಿವೇಶವನ್ನು ಗುರುತಿಸುವ ಪ್ರತಿಕ್ರಿಯೆಯ ಸಾಮರ್ಥ್ಯ ಪಡೆಯುವನು.

**ಉದಾ:** ಹುಲಿ, ಚಿರತೆ, ಸಿಂಹ, ತೋಳ – ಕಾಡು ಪ್ರಾಣಿಗಳು

ನಾಯಿ, ಬೆಕ್ಕು, ಹಸು, ಎಮ್ಮೆ – ಸಾಕು ಪ್ರಾಣಿಗಳು

**ನಿಯಮ / ಸಿದ್ಧಾಂತ ಕಲಿಕೆ :** ನಿಯಮ ಅಥವಾ ಸಿದ್ಧಾಂತ ಕಲಿಕೆ ಒಂದು ಪರಿಕಲ್ಪನೆಯ ಮೇಲೆ ಕ್ರಿಯಾತ್ಮಕವಾಗಿ ವರ್ತಿಸುವ ಸಾಮಾರ್ಥ್ಯವಾಗಿದೆ. ಯಾವುದೇ ಒಂದು ಪರಿಕಲ್ಪನೆಯನ್ನು ಸ್ಪಷ್ಟವಾಗಿ ಕಲಿಯಲು ಸಿದ್ಧಾಂತಗಳು ಸಹಾಯ ಮಾಡುತ್ತವೆ. ಇಲ್ಲಿ ಸರಪಳಿ ಕಲಿಕೆಯಲ್ಲಿ ಕಲಿತ ಅಂಶಗಳನ್ನು ಅಳವಡಿಸಿಕೊಂಡು ಸೈದ್ಧಾಂತಿಕವಾಗಿ ಮಗು ಕಲಿಕೆ ಮುಂದುವರೆಸುತ್ತದೆ.

**ಉದಾ:** ನೀರಿನ ಉಷ್ಣತೆ $212^0$ F ನ್ನು ದಾಟಿದಾಗ ಅದು ಕುದಿಯುತ್ತದೆ.

ಯಾವುದಾದರೂ ವಸ್ತು ಬೆಂಕಿಯಲ್ಲಿ ಉರಿಯುತ್ತಿರಲು ಅದರಲ್ಲಿರುವ ಆಮ್ಲಜನಕ ನಶಿಸಿ ಹೋಗುತ್ತದೆ.

**ಸಮಸ್ಯಾ ಪರಿಹಾರ ಕಲಿಕೆ :**ಸಮಸ್ಯಾ ಪರಿಹಾರವು ಸರಿಯಾದ ನಿಯಮಗಳನ್ನು ಆಯ್ಕೆ ಮಾಡಿ ಅವುಗಳನ್ನು ಒಂದು ಸಮಸ್ಯೆಯ ಮೇಲೆ ಒಟ್ಟಾಗಿ ಪ್ರಯೋಗಿಸುವುದನ್ನು ಈ ಕಲಿಕೆಯು ಒಳಗೊಂಡಿರುತ್ತದೆ. ಸಿದ್ಧಾಂತ ಕಲಿಕೆಯಲ್ಲಿ ಕಲಿತುಕೊಂಡ ವಿಷಯಗಳ ತತ್ವಗಳನ್ನು ಗಣನೆಗೆ ತೆಗೆದುಕೊಂಡು ತನ್ನ ಸಮಸ್ಯೆಗಳನ್ನು ಮಗು ಬಗೆಹರಿಸಿಕೊಳ್ಳುವುದು. ಇದು ಮಗುವಿನಲ್ಲಿ ನೈಸರ್ಗಿಕವಾಗಿ ವೃದ್ಧಿಯಾದದ್ದು ಮತ್ತು ಈ ಕಲಿಕೆ ಹೊಸ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯುವಾಗ ತನ್ನ ಪೂರ್ವಾನುಭವಗಳನ್ನು ಬಳಸಿ ಸಂಕೀರ್ಣ ಸಮಸ್ಯೆಗಳನ್ನು ಬಿಡಿಸಲು ಮಗುವಿಗೆ ಸಹಾಯಕವಾಗುವುದು.

## ಶೈಕ್ಷಣಿಕ ನಿಹಿತಾರ್ಥಗಳು

* ಗ್ಯಾನೆಯವರ ಕಲಿಕೆಯ ಪದ್ಧತಿಯು ತರಗತಿಯ ಶಿಕ್ಷಕರಿಗೆ ಕಲಿಕೆಗಾಗಿ ಯೋಜನೆಯನ್ನು ತಯಾರಿಸಲು ಸಹಾಯಕವಾಗುತ್ತದೆ.
* ಕಲಿಕೆಯ ಸ್ಥಿತಿಗಳನ್ನು ಗುರುತಿಸಿ ಕಲಿಕೆಯ ಸನ್ನಿವೇಶವನ್ನು ನಿರೂಪಿಸಲು ಮತ್ತು ವಿದ್ಯಾರ್ಥಿಗಳ ಕಲಿಕೆಯ ಪೂರ್ವದಲ್ಲಿನ ಮತ್ತು ಕಲಿಕೆಯ ನಂತರದ ಸಾಮರ್ಥ್ಯಗಳೆರೆಡನ್ನೂ ಗಣನೆಗೆ ತೆಗೆದುಕೊಂಡು ಪಾಠವನ್ನು ಯೋಜಿಸಲು ಸಹಾಯಕ.
* ವಿದ್ಯಾರ್ಥಿಯು ಹೇಗೆ ಕಲಿಕೆ ಪ್ರಾರಂಬಿಸುವನು ಮತ್ತು ಪ್ರೇರಣೆ ಹೊಂದುವನು, ಕಲಿಕೆ ಮುಂದುವರೆಸಲು ಬೇಕಾದ ಸಾಮರ್ಥ್ಯಗಳು, ಮಾರ್ಗದರ್ಶನ, ಕಲಿಕೆಯ ಅನುಭವಗಳನ್ನು ಹೇಗೆ ಮಕ್ಕಳಿಗೆ ಒದಗಿಸಬೇಕು ಎನ್ನುವುದನ್ನು ಕಲಿಕೆಯ ಸರಿಯಾದ ನಿರ್ವಹಣೆಯಿಂದ ಶಿಕ್ಷಕರು ತಿಳಿಯುವರು.
* ವಿದ್ಯಾರ್ಥಿಯ ಪ್ರತಿಯೊಂದು ಕಲಿಕಾ ಹಂತ, ಅವನು ಸಂಪಾದಿಸಿದ ಪೂರ್ವದ ಸಾಮರ್ಥ್ಯಗಳು, ಆ ಸಾಮರ್ಥ್ಯಗಳನ್ನು ಉಳಿಸಿಕೊಳ್ಳಬೇಕಾದ ಅವಶ್ಯಕತೆಗಳು ಮತ್ತು ಕಲಿಕೆಯ ನಂತರದ ಹಂತಕ್ಕೆ ಅಗತ್ಯವಿರುವ ನಿರ್ದಿಷ್ಟ ಉದ್ದೀಪನಾ ಸನ್ನಿವೇಶವನ್ನು ಗಣನೆಗೆ ತೆಗೆದುಕೊಳ್ಳುವಲ್ಲಿ ಸಹಾಯಕ.
* ಗ್ಯಾನೆಯವರ ವರ್ಗೀಕರಣ ಕಲಿಕಾ ಪದ್ಧತಿಯು ತರಗತಿಯ ಶಿಕ್ಷಕರಿಗೆ ಕಲಿಕಾ ಸನ್ನಿವೇಶ ಮತ್ತು ಕಲಿಯುವವನ ಸ್ಥಿತಿಗತಿಗಳನ್ನು ತಿಳಿಯಪಡಿಸುತ್ತದೆ.

* ಶಿಕ್ಷಕರಿಗೆ ತಮ್ಮ ಬೋಧನೆಯನ್ನು ಯೋಜಿಸಿಕೊಳ್ಳಲು ಮತ್ತು ಬೋಧನೆಗಾಗಿ ಸೂಕ್ತ ಮಾಧ್ಯಮವನ್ನು ಅಳವಡಿಸಿಕೊಳ್ಳಲು ಸಹಾಯಕ.
* ಪ್ರಾಥಮಿಕ ತರಗತಿಗಳಲ್ಲಿ ಕಲಿಕೆಯಲ್ಲಿ ತೋರಿದ ಅಲಕ್ಷತನದಿಂದಾಗಿ ಮಕ್ಕಳು ಮೇಲ್ವರ್ಗಕ್ಕೆ ಬಂದಾಗ ಕಲಿಕೆಯಲ್ಲಿ ಕುಸಿತ ಕಂಡುಬರುತ್ತದೆ ಎಂಬ ಅರಿವು ಶಿಕ್ಷಕರಲ್ಲಿ ಮೂಡಿಸುತ್ತದೆ.

ಗ್ಯಾನೆಯವರ ಪ್ರಕಾರ ಕಲಿಕೆಯು ಮಾನವರ ಶಕ್ತಿ, ಸಾಮರ್ಥ್ಯಗಳಲ್ಲಿ ಬದಲಾವಣೆಯನ್ನು ತರುತ್ತದೆ. ಕಲಿಕೆಯು ಪೂರ್ವಾನುಭವದಿಂದ ಮುನ್ನಡೆಯಬೇಕು ಮತ್ತು ಆಂತರಿಕ ಸಾಮರ್ಥ್ಯಗಳಲ್ಲಿ ಬದಲಾವಣೆಯನ್ನುಂಟು ಮಾಡುವಲ್ಲಿ ಕಲಿಕೆ ಸಹಾಯಕವಾಗಬೇಕು. ಇವುಗಳ ಜೊತೆಗೆ ಶಿಕ್ಷಕರು ಬಾಹ್ಯ ಸ್ಥಿತಿಗಳನ್ನು ಅರಿತುಕೊಂಡು ವಿದ್ಯಾರ್ಥಿಗಳಲ್ಲಿ ಆಂತರಿಕ ಸಾಮರ್ಥ್ಯಗಳ ಪೋಷಣೆಗೆ ನೆರವಾಗಬೇಕು.

**ಬೆಂಜಮಿನ್ ಬ್ಲೂಮ್ ರವರ ಪ್ರಭುತ್ವ ಕಲಿಕೆಯ ಮಾದರಿ**

ಪ್ರಭುತ್ವ ಕಲಿಕೆಯ ಮಾದರಿಯನ್ನು ಪ್ರತಿಪಾದಿಸಿದವರು ಬೆಂಜಮೀನ್ ಎಸ್. ಬ್ಲೂಮ್ ರವರು ಪ್ರಭುತ್ವ ಕಲಿಕೆಯು ಶಿಕ್ಷಣದ ಒಂದು ಮಹತ್ವಾಕಾಂಕ್ಷೆಯ ನೋಟವನ್ನು ಹೊಂದಿದೆ.

ಬ್ಲೂಮ್ ರವರ ಪ್ರಕಾರ ಸಾಂಪ್ರದಾಯಿಕ ವಿಧಾನದ ಕಲಿಕೆಯಲ್ಲಿ ತರಗತಿಯ ಸಾಮಾನ್ಯ ವಿತರಣೆಯ ಮಕ್ಕಳನ್ನು ಒಂದು ಸಾಮಾನ್ಯ ಪಠ್ಯಕ್ರಮಕ್ಕೆ ಒಳಪಡಿಸಿದಾಗ, ಬೋಧನೆಯ ನಂತರ ಕಂಡುಬರುವ ಸಾಧನೆಯು ಸಹ ಸಂಭಾವ್ಯದ ವಕ್ರದ ರೀತಿಯಲ್ಲಿ ಹಂಚಿಕೆಯಾಗಿರುತ್ತದೆ. ಇದರಿಂದ ತರಗತಿಯ ಕೇವಲ ಮೂರನೇ ಒಂದು ಭಾಗ ವಿದ್ಯಾರ್ಥಿಗಳು ಮಾತ್ರ ತರಗತಿಯಲ್ಲಿ ಬೋಧಿಸಿದ ವಿಚಾರಗಳನ್ನು ಸಮರ್ಪಕವಾಗಿ ಕಲಿಯಲು ಸಾಧ್ಯವಾಗುತ್ತದೆ.ಆದರೆ ಉಳಿದ ಮಕ್ಕಳು ನಿರೀಕ್ಷಿತ ಮಟ್ಟವನ್ನು ತಲುಪಲು ಸಾಧ್ಯವಾಗುವುದಿಲ್ಲ. ಈ ರೀತಿಯ ಸಾಂಪ್ರದಾಯಿಕ ಕಲಿಕೆಯಿಂದ ವಿದ್ಯಾರ್ಥಿಗಳ ಮತ್ತು ಶಿಕ್ಷಕರ ಶೈಕ್ಷಣಿಕ ಗುರಿಗಳ ಸಾಧನೆ ಆಗುವುದಿಲ್ಲ.

ಬ್ಲೂಮ್ ರವರ ಸಂಶೋಧನೆಯಿಂದ ತಿಳಿದುಬರುವ ಅಂಶವೆಂದರೆ ನಿಧಾನಗತಿಯಲ್ಲಿ ಕಲಿಯುವ ಶೇಕಡ ಐದು ಭಾಗದ ವಿದ್ಯಾರ್ಥಿಗಳು ವೇಗವಾಗಿ ಕಲಿಯುವ ಶೇಕಡ ಐದು ಭಾಗ ವಿದ್ಯಾರ್ಥಿಗಳಿಗಿಂತ 5 ಪಟ್ಟು ಹೆಚ್ಚಿನ ಸಮಯ ದೊರೆತರೆ ಅವರಂತೆಯೇ ಕಲಿಯಲು ಸಾಧ್ಯ ಎಂದು ತಿಳಿಸುತ್ತದೆ.

## ಪ್ರಭುತ್ವ ಕಲಿಕೆಯ ಪ್ರಕಾರ

- ವಿದ್ಯಾರ್ಥಿಗಳ ಕಲಿಕೆಯಲ್ಲಿ ಯಾವಾಗ ಮತ್ತು ಎಲ್ಲಿ ತೊಂದರೆ ಕಂಡು ಬರುತ್ತದೆಯೋ ಆಗ ಸಹಾಯ ಮಾಡಬೇಕು.
- ವಿದ್ಯಾರ್ಥಿಗಳಿಗೆ ಕಲಿಯಲು ಅಗತ್ಯವಿರುವಷ್ಟು ಸಮಯ ನೀಡಬೇಕು
- ವಿದ್ಯಾರ್ಥಿ ಏನನ್ನು ಕಲಿಯಬೇಕು ಮತ್ತು ಯಾವ ಮಟ್ಟದಲ್ಲಿ ಕಲಿಯಬೇಕು ಎಂಬುದನ್ನು ಸ್ಪಷ್ಟವಾಗಿ ನಿರೂಪಿಸಬೇಕು
- ಪ್ರತಿಯೊಂದು ಮಗುವು ತನ್ನ ಜೀವನದಲ್ಲಿ ಬಳಸಬೇಕಾದಂತಹ ತಥ್ಯಗಳು ಮತ್ತು ಕೌಶಲ್ಯಗಳ ಮೇಲೆ ಪ್ರಭುತ್ವ ಸಾಧಿಸಬೇಕು
- ಸ್ವಾಭಾವಿಕವಾಗಿ ಸಂತೋಷವಾಗಿ ಹಾಗೂ ಪರಿಪೂರ್ಣವಾದ ಜೀವನ ಸಾಗಿಸಬೇಕು
- ಮಾನವನ ಪ್ರಗತಿಯು ಪ್ರತಿಯೊಬ್ಬ ವ್ಯಕ್ತಿಯು ಅವನ ಪರಿಪೂರ್ಣ ಮಟ್ಟಕ್ಕೆ ವಿಕಾಸ ಹೊಂದುವುದರ ಮೇಲೆ ಅವಲಂಬಿತವಾಗಿರುತ್ತದೆ
- ಒಂದು ಕಾರ್ಯವನ್ನು ಪೂರೈಸಲು ಸಾಕಷ್ಟು ಸಮಯ ಮತ್ತು ಅವಕಾಶ ದೊರೆತಲ್ಲಿ ವಿದ್ಯಾರ್ಥಿಗಳು ತಮ್ಮ ಸಾಮರ್ಥ್ಯದ ಪರಿಪೂರ್ಣ ಮಟ್ಟವನ್ನು ತಲುಪಲು ಸಾಧ್ಯವಾಗುತ್ತದೆ

## ಪ್ರಭುತ್ವ ಕಲಿಕೆಯ ಪ್ರಕಾರ ಕಲಿಕೆಯ ಮೇಲೆ ಪ್ರಭಾವ ಬೀರುವ ಅಂಶಗಳೆಂದರೆ,

- ಅಭಿಕ್ಷಮತೆ,
- ಬೋಧನೆಯನ್ನು ಅರ್ಥ ಮಾಡಿಕೊಳ್ಳುವ ಸಾಮರ್ಥ್ಯ
- ಬೋಧನೆಯ ಗುಣಮಟ್ಟ
- ಕಲಿಕೆಗೆ ನೀಡಿದ ಸಮಯ
- ಪರಿಶ್ರಮ

## ಪ್ರಭುತ್ವ ಕಲಿಕೆಯ ವಿಧಾನ

- ಯಾವುದನ್ನು ಕಲಿಯಬೇಕೆಂಬುದನ್ನು ನಿರ್ದಿಷ್ಟ ಪಡಿಸತಕ್ಕದ್ದು
- ಕಲಿಯಲು ವಿದ್ಯಾರ್ಥಿಗಳನ್ನು ಅಭಿಪ್ರೇರಿಸತಕ್ಕದ್ದು
- ಕಲಿಕೆಯನ್ನು ಹೆಚ್ಚಿಸಲು ಅಗತ್ಯವಾದ ಬೋಧನಾ ಸಾಮಗ್ರಿಗಳನ್ನು ಒದಗಿಸತಕ್ಕದ್ದು

- ವಿವಿಧ ವಿದ್ಯಾರ್ಥಿಗಳ ಮಟ್ಟಕ್ಕನುಸಾರವಾಗಿ ಕಲಿಯುವ ವಿಷಯಗಳನ್ನು ನೀಡಬೇಕು
- ವಿದ್ಯಾರ್ಥಿಗಳ ಪ್ರಗತಿಯನ್ನು ಎಚ್ಚರಿಕೆಯಿಂದ ಗಮನಿಸಬೇಕು
- ವಿದ್ಯಾರ್ಥಿಗಳ ಕಲಿಕಾ ತೊಂದರೆಗಳನ್ನು ನೈದಾನಿಕ ಪರೀಕ್ಷೆಗಳಿಂದ ಪತ್ತೆ ಹಚ್ಚಿ ಪರಿಹಾರ ಕ್ರಮಗಳನ್ನು ಒದಗಿಸಬೇಕು
- ಉತ್ತಮ ಸಾಧನೆ ತೋರಿದಾಗ ಹೊಗಳಿಕೆ ಮತ್ತು ಪ್ರೋತ್ಸಾಹ ನೀಡಬೇಕು
- ಪುನರಾವರ್ತನೆ ಮತ್ತು ಅಭ್ಯಾಸದ ಕಲಿಕೆಗೆ ಅವಕಾಶ ನೀಡಬೇಕು
- ಉತ್ತಮ ಮಟ್ಟದ ಕಲಿಕೆಯನ್ನು ಕಾಯ್ದುಕೊಳ್ಳಬೇಕು

ಪ್ರಭುತ್ವ ಕಲಿಕೆಗಾಗಿ ಬೋಧನಾ ತಂತ್ರವು ಸಾಂಪ್ರದಾಯಿಕ ಬೋಧನೆಗಿಂತ ಭಿನ್ನವಾಗಿರುತ್ತದೆ. ಸಾಮಾನ್ಯ ತರಗತಿಯ ಬೋಧನೆಯಲ್ಲಿ ಎಲ್ಲಾ ವಿದ್ಯಾರ್ಥಿಗಳು ಒಂದೇ ರೀತಿಯ ಬೋಧನೆಗೆ ಒಳಗಾಗುತ್ತಾರೆ ಮತ್ತು ಅದನ್ನು ಬೇರೆ ಬೇರೆ ಪ್ರಮಾಣದಲ್ಲಿ ಗ್ರಹಿಸುತ್ತಾರೆ. ಆದರೆ ಪ್ರಭುತ್ವ ಕಲಿಕೆಯ ಬೋಧನೆಯಲ್ಲಿ ಕಲಿಯಬೇಕಾದ ವಿಷಯದ ಪ್ರಮಾಣ ಒಂದೇ ಆಗಿರುತ್ತದೆ. ಆದರೆ ಕಲಿಕೆಗೆ ನಿಗದಿತವಾಗಿರುವ ಕಾಲ ವಿದ್ಯಾರ್ಥಿಗಳ ಅವಶ್ಯಕತೆಗಳಿಗೆ ಅನುಗುಣವಾಗಿ ವ್ಯತ್ಯಾಸವಾಗುತ್ತದೆ.

ಬ್ಲೂಮ್ ರವರ ಪ್ರಕಾರ ಪ್ರಭುತ್ವ ಕಲಿಕೆಯ ಅತಿ ಮುಖ್ಯ ಅಂಶ ಪರಿಹಾರಾತ್ಮಕ ಬೋಧನೆ ಮತ್ತು ನಿರಂತರ ಮೌಲ್ಯಮಾಪನ. ಇದು ಬೋಧನೆಯ ಉದ್ದಕ್ಕೂ ಕ್ರಮವಾಗಿ ನಡೆಯಬೇಕು. ಪ್ರತಿ ಘಟಕ ಬೋಧನೆಯ ನಂತರ ಒಂದು ಘಟಕ ಪರೀಕ್ಷೆ ಇರಬೇಕು. ಇದರ ಮುಖ್ಯ ಉದ್ದೇಶ ವಿದ್ಯಾರ್ಥಿಯು ನಿರ್ದಿಷ್ಟ ಕ್ಷೇತ್ರದಲ್ಲಿ ಪ್ರಭುತ್ವಗಳಿಸಿದ್ದಾನೆಯೇ ಅಥವಾ ಇಲ್ಲವೇ ಎಂಬುದನ್ನು ಖಚಿತಪಡಿಸಿಕೊಳ್ಳುವುದು. ಇದರ ಫಲಿತಾಂಶವನ್ನು ವಿದ್ಯಾರ್ಥಿಗಳ ಬಡ್ತಿಗಾಗಿ ಬಳಸುವುದಿಲ್ಲ. ಆದರೆ ಒಬ್ಬ ವಿದ್ಯಾರ್ಥಿ ಒಂದು ಘಟಕದಲ್ಲಿ ಪ್ರಭುತ್ವವನ್ನು ಪಡೆದಿದ್ದರೆ ಅವನು ಮುಂದೆ ಸಾಗುತ್ತಾನೆ. ಇಲ್ಲದಿದ್ದರೆ ಅವನಿಗೆ ಪರಿಹಾರ ಬೋಧನಾ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ. ಪ್ರಭುತ್ವ ಕಲಿಕೆಯಲ್ಲಿ ಯಾವುದಾದರು ನಿರ್ದಿಷ್ಟ ಕಾರ್ಯ ಅಥವಾ ಉಪ ಘಟಕದ ಪ್ರಭುತ್ವವನ್ನು ಮೊದಲೇ ನಿರ್ಧರಿಸಿದ ನಿರ್ಣಾಯಕಗಳ ಮೇಲೆ ತೀರ್ಮಾನಿಸಲಾಗುತ್ತದೆ. ಆದುದರಿಂದ

- ವಿದ್ಯಾರ್ಥಿಗಳಲ್ಲಿ ಕಲಿಕೆಯನ್ನು ಉಂಟುಮಾಡುವುದು ಶಿಕ್ಷಕರ ಜವಾಬ್ದಾರಿ
- ಪ್ರತಿ ವಿದ್ಯಾರ್ಥಿಯು ತನ್ನದೇ ಆದ ವೇಗದಲ್ಲಿ ಕಲಿಯಲು ಅವಕಾಶ ಕೊಡಬೇಕು
- ಪ್ರತಿ ಹಂತದಲ್ಲಿ ಸೂಕ್ತ ಹಿಮ್ಮಾಯಿತಿ ನೀಡತಕ್ಕದ್ದು
- ಸಾಮರ್ಥ್ಯಗಳ ಬೆಳವಣಿಗೆಯನ್ನು ಕ್ರಮವಾಗಿ ಪರೀಕ್ಷಿಸಬೇಕು
- ಉತ್ತಮ ಕಲಿಕಾ ಸಾಮಗ್ರಿಗಳನ್ನು ಬೋಧನೆಯಲ್ಲಿ ಬಳಸಬೇಕು
- ಅಂಕ ಆಧಾರಿತ ಪರೀಕ್ಷೆಗಳಿಗಿಂತ ಸಾಮರ್ಥ್ಯದಾರಿತ ಪರೀಕ್ಷೆಗಳಿಗೆ ಒತ್ತು ನೀಡಬೇಕು

ಪ್ರಭುತ್ವ ಕಲಿಕಾ ಮಾದರಿಯ ಪ್ರಕಾರ ನಿಧಾನಗತಿಯಲ್ಲಿ ಕಲಿಯುವ ಮಕ್ಕಳಿಗೆ ಹೆಚ್ಚಿನ ಸಮಯ ನೀಡಿದ್ದಲ್ಲಿ ಮತ್ತು ಉತ್ತಮ ಬೋಧನಾ ವಿಧಾನ ಬಳಸಿದ್ದಲ್ಲಿ ಪ್ರತಿಯೊಬ್ಬರೂ ಸಹ ಕಲಿಕೆಯಲ್ಲಿ ಪ್ರಭುತ್ವ ಸಾಧಿಸಬಲ್ಲರು

### ಸ್ಕಿನ್ನರ್ ಅವರ ಕ್ರಿಯಾಜನ್ಯ ಅನುಬಂಧಿತ ಕಲಿಕೆ

ಕಲಿಕೆಯ ಸಮಸ್ಯೆಗಳ ಮೇಲೆ ಅಸಾಧಾರಣ ಪ್ರಯೋಗ ಮಾಡಿ ಥಾರ್ನ್‌ಡೈಕ್ ನ ಸಾಂಪ್ರದಾಯಿಕ ಪ್ರಯೋಗವನ್ನು ವಿಸ್ತರಿಸಿ ಪ್ರಾಯಶಃ ಭಿನ್ನವಾದ ಕಲಿಕೆಗೆ ಕಾರಣರಾದವರೆಂದರೆ ಹಾರ್ವರ್ಡ್ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಾದ ಬಿ ಎಫ್ ಸ್ಕಿನ್ನರ್ (1904). ಇವರು ಇಲಿ ಹಾಗೂ ಪಾರಿವಾಳಗಳ ಮೇಲೆ ವಿವಿಧ ಪ್ರಯೋಗಗಳನ್ನು ಕೈಗೊಂಡು ತನ್ನದೇ ಆದ ಸಿದ್ಧಾಂತವನ್ನು ಮಂಡಿಸಿದ್ದಾರೆ.

### ಸ್ಕಿನ್ನರ್ ನ ಸಿದ್ಧಾಂತ

"ಸಮ್ಮಿಶ್ರ ಸನ್ನಿವೇಶದಲ್ಲಿ ಜೀವಿ ಇಚ್ಛಿತ ಅನುಕ್ರಿಯೆ ಪ್ರಕಟಿಸಿದಾಗ ಯುಕ್ತ ಪುಷ್ಠೀಕರಣ ನೀಡುವುದರ ಮೂಲಕ ಇಚ್ಛಿತ ಉದ್ದೀಪಕ ಅನುಕ್ರಿಯೆಗಳ (ಪ್ರಚೋದನೆ ಮತ್ತು ಪ್ರತಿಕ್ರಿಯೆ) ಬಂಧವನ್ನು ಏರ್ಪಡಿಸಬಹುದು. ಇದನ್ನು ಮನೋವಿಜ್ಞಾನದ ಪರಿಭಾಷೆಯಲ್ಲಿ ಹೇಳುವುದಾದರೆ ಸೋಪಾದಿತ ಉದ್ದೀಪಕಕ್ಕೆ ಸೋಪಾದಿತ ಅನುಕ್ರಿಯೆ ಜೀವಿ ತೋರಿದರೆ ತೃಪ್ತಿದಾಯಕ ಪುಷ್ಠೀಕರಣವನ್ನು ನೀಡಿ ಸೋಪಾದಿಕ ಕಲಿಕೆ ನಡೆಯುವಂತೆ ಮಾಡಬಹುದು.

ಸ್ಕಿನ್ನರ್ ಅವರ ಕಲಿಕೆಯ ವಾದವು "ಪುಷ್ಟಿಕರಣವಾದ" ಎಂತಲು "ಕ್ರಿಯಾಜನ್ಯ ಅನುಬಂಧಿತ ಕಲಿಕೆ" ಎಂತಲೂ ಹೆಸರು ಪಡೆದಿದೆ. ಸ್ಕಿನ್ನರ್ ತತ್ವವನ್ನು ಅರ್ಥ ಮಾಡಿಕೊಳ್ಳಲು ಸ್ಕಿನ್ನರ್ ಪ್ರಯೋಗದ ವಿವರಣೆಯನ್ನು ನೋಡೋಣ

## ಸ್ಕಿನ್ನರ್ ಪ್ರಯೋಗ (1938)

**ಪ್ರಯೋಗದ ಉದ್ದೇಶ:** ಅನುಬಂಧಿತ ಉದ್ಧಿಪಕಕ್ಕೆ ಅನುಬಂಧಿತ ಅನುಕ್ರಿಯೆ ಜೀವಿ ತೋರಿಸಿದರೆ ತೃಪ್ತಿದಾಯಕ ಪುಷ್ಠೀಕರಣವನ್ನು ನೀಡಿ ಅನುಬಂಧಿತ ಕಲಿಕೆ ನಡೆಯುವಂತೆ ಮಾಡಬಹುದು

**ಪ್ರಯೋಗಕ್ಕೆ ಬಳಸಿದ ಸಾಧನಗಳು:** ಇಲಿ, ಪಾರಿವಾಳ, ಸ್ಕಿನ್ನರ್ ಪೆಟ್ಟಿಗೆ(ಫಝಲ್ ಬಾಕ್ಸ್), ಆಹಾರದಾನಿ ಇತ್ಯಾದಿ

## ಪ್ರಯೋಗದ ವಿಧಾನ :

**ಪ್ರಯೋಗ 1**: ಸ್ಕಿನ್ನರ್ ತನ್ನ ಕ್ರಿಯಾಜನ್ಯ ಅನುಬಂದಿತ ಕಲಿಕೆಯ ಪ್ರಯೋಗಕ್ಕಾಗಿ ಒಂದು ವೈಶಿಷ್ಠ್ಯ ಪೂರ್ಣವಾದ ಪೆಟ್ಟಿಗೆಯನ್ನು ಸಿದ್ಧಪಡಿಸಿಕೊಂಡನು. ಅದಕ್ಕೆ ಸ್ಕಿನ್ನರ್ ಪೆಟ್ಟಿಗೆ ಅಥವಾ ಫಜಲ್ ಬಾಕ್ಸ್ ಎಂದು ಹೆಸರು. ಇದು ಒಂದು ಚೌಕಾಕಾರದ ಪೆಟ್ಟಿಗೆಯಾಗಿದ್ದು ಅದರ ಒಳಗೆ ಎರಡು ರಂದ್ರಗಳನ್ನು ಮಾಡಲಾಗಿತ್ತು. ಒಂದರಲ್ಲಿ ಒತ್ತು ಗುಂಡಿ ಹಾಗೂ ಅದರ ಕೆಳಗೆ ಇರುವ ಇನ್ನೊಂದು ರಂದ್ರದಲ್ಲಿ ಆಹಾರದಾನಿ ಇಡಲಾಗಿತ್ತು. ಆ ಎರಡು ರಂದ್ರಗಳ ವೈಶಿಷ್ಟವೆಂದರೆ ಮೇಲಿನ ಒತ್ತು ಗುಂಡಿಯನ್ನು ಒತ್ತಿದಾಗ ಮಾತ್ರ ಕೆಳಗಿನ ರಂದ್ರದ ಮೂಲಕ ಆಹಾರದಾನಿಯಲ್ಲಿ ಆಹಾರ ಬರುವ ವ್ಯವಸ್ಥೆ ಮಾಡಲಾಗಿತ್ತು.

ಈ ಪ್ರಯೋಗಕ್ಕಾಗಿ ಸ್ಕಿನ್ನರ್ ಅವರು ಒಂದು ಹಸಿದ ಪಾರಿವಾಳವನ್ನು ಬಳಸಿಕೊಂಡರು. ಪಾರಿವಾಳವಿದ್ದ ಈ ಪೆಟ್ಟಿಗೆಯಲ್ಲಿ ಏಳು ವಿವಿಧ ಬಣ್ಣದ ಬಿಲ್ಲೆಯಿಂದ ಕೂಡಿದ ಹಲಗೆಯನ್ನು ಇಟ್ಟಿದ್ದರು. ಜೊತೆಗೆ ಆಹಾರ ಧಾನ್ಯ ವ್ಯವಸ್ಥೆ ಕೂಡ ಇತ್ತು. ಇಲ್ಲಿ ಪಾರಿವಾಳ ಬಿಳಿ ಬಣ್ಣದ ಬಿಲ್ಲೆಯನ್ನು ಕುಟುಕಿದಾಗ ಮಾತ್ರ ಆಹಾರ ಧಾನ್ಯ ಸಿಗುವ ವ್ಯವಸ್ಥೆ ಮಾಡಲಾಗಿತ್ತು. ಅನುಬಂಧಿತ ಉದೀಪಕ ಬಿಳಿಯ ಬಣ್ಣದ ಬಿಲ್ಲೆ. ಈ ಉದ್ದೀಪನೆಗೆ ಕುಟುಕುವ ಅನುಬಂಧಿತ ಅನುಕ್ರಿಯೆ ತೋರಿದರೆ ಪುಷ್ಟಿಕರಿಸುವ ಅನುಬಂಧಿತವಲ್ಲದ ಉದ್ದೀಪಕವಾದ ಆಹಾರ ದೊರೆಯುತ್ತದೆ. ಅನುಬಂಧಿತವಲ್ಲದ ಉದ್ದೀಪಕ ಆಹಾರಕ್ಕೆ ತಿನ್ನುವ ಅನುಬಂಧಿತವಲ್ಲದ ಅನುಕ್ರಿಯೆಯನ್ನು ಪಾರಿವಾಳ ತೋರಿ ತೃಪ್ತಿ ಪಡೆಯುತ್ತದೆ. ಇದರ ಪರಿಣಾಮವಾಗಿ ಅನುಬಂಧಿತ ಉದ್ದೀಪಕ ಮತ್ತು ಅನುಬಂಧಿತ ಅನುಕ್ರಿಯೆಗಳ ನಡುವೆ ಬಂದ ಏರ್ಪಡುತ್ತದೆ. ಅಂದರೆ ಕ್ರಿಯಾಜನ್ಯ ಅನುಬಂಧಿತ ಕಲಿಕೆ ನಡೆಯುತ್ತದೆ. ಇದನ್ನು ಈ ಕೆಳಗಿನಂತೆ ಸಾರಾಂಶೀಕರಿಸಬಹುದಾಗಿದೆ

ಅನುಬಂಧಿತ ಉದ್ದೀಪಕ → ಅನುಬಂಧಿತ ಅನುಕ್ರಿಯೆ → ಪುಷ್ಟೀಕರಿಸುವ ಅನುಬಂಧಿತವಲ್ಲದ ಉದ್ದೀಪಕ → ಅನುಬಂಧಿತವಲ್ಲದ ಅನುಕ್ರಿಯೆಯ ಮೂಲಕ ತೃಪ್ತಿ

ಬಿಲ್ಲೆ → ಕುಟುಕು → ಆಹಾರ → ತಿನ್ನು

### ಪ್ರಯೋಗ ಎರಡು:

ಈ ಪ್ರಯೋಗದಲ್ಲಿ ಸ್ಕಿನ್ನರ್ ಅವರು ವರ್ತನೆಯನ್ನು ನಿಷೇಧಾತ್ಮಕ ಪುನರ್ಬಲನ (ಪುಷ್ಟಿಕರಣ)ದಿಂದ ಯಾವ ರೀತಿ ಹಿಡಿತದಲ್ಲಿ ತರಬಹುದೆಂಬುದನ್ನು ಸ್ಪಷ್ಟಪಡಿಸಿದ್ದಾರೆ.

ಸ್ಕಿನ್ನರ್ ತನ್ನ ಈ ಪ್ರಯೋಗಕ್ಕೆ ಇಲಿಯನ್ನು ಬಳಸಿಕೊಂಡನು. ಈ ಪ್ರಯೋಗಕ್ಕೂ ಸ್ಕಿನ್ನರ್ ವೈಶಿಷ್ಟ ಪೂರ್ಣವಾದ ಪೆಟ್ಟಿಗೆಯನ್ನೇ ಬಳಸಿಕೊಳ್ಳುತ್ತಾನೆ. ಈ ಪೆಟ್ಟಿಗೆಗಳಿಗೆ ಎರಡು ಕೋಣೆಗಳಿದ್ದವು ಒಂದು ಬೆಳಕಿನ ಇನ್ನೊಂದು ಕತ್ತಲೆ ತುಂಬಿದ ಕೋಣೆಯಾಗಿತ್ತು. ಪ್ರಯೋಗಾರ್ಥವಾಗಿ ಸ್ಕಿನ್ನರ್ ಬೆಳಕಿದ್ದ ಕೋಣೆಯೊಳಗೆ ಇಲಿಯನ್ನು ಬಿಟ್ಟು ಆಹಾರವನ್ನು ಕೊಡುತ್ತಾನೆ ಇಲಿಗೆ ಆಹಾರ ಬೆಳಕಿದ್ದ ಕೋಣೆಯಲ್ಲಿ ದೊರೆತರೂ ಸಹ ಅದನ್ನು ಕತ್ತಲೆ ಇದ್ದ ಕೋಣೆಗೆ ಕೊಂಡೊಯ್ದು ತಿನ್ನುತ್ತದೆ. ಇಲಿಯ ಸಹಜ ಗುಣ ಧರ್ಮವೆಂದರೆ ಆಹಾರವನ್ನು ಕತ್ತಲೆಯಲ್ಲಿ ತಿನ್ನುವುದಾಗಿದೆ. ಹಸಿದ ಇಲಿ ಆಹಾರವನ್ನು ಕಚ್ಚಿಕೊಂಡು ಬೆಳಕಿನ ಕೋಣೆಯಿಂದ ಕತ್ತಲೆ ಕೋಣೆಗೆ ಓಡಿತು. ಆದರೆ ಕತ್ತಲೆ ಕೋಣೆಯಲ್ಲಿ ವಿದ್ಯುತ್ ಪ್ರವಾಹದ ವ್ಯವಸ್ಥೆಯನ್ನು ಸ್ಕಿನ್ನರ್ ಮೊದಲೇ ಮಾಡಿಟ್ಟಿದ್ದರು. ಕತ್ತಲೆ ಕೋಣೆಯೊಳಗೆ ಓಡಿದ ಇಲಿ ವಿದ್ಯುತ್ ಪ್ರವಾಹಕ್ಕೆ ಬೆದರಿ ಬೆಳಕಿನ ಕೊಣೆಗೆ ಪುನಃ ಬಂದು ಆಹಾರ ಸೇವಿಸಿತು. ಇದೇ ರೀತಿ ಹಲವು ಸಲ ಮಾಡಿದ ನಂತರ ಇಲಿಯು ಕತ್ತಲೆಯಲ್ಲಿ ಆಹಾರ ತಿನ್ನುವುದನ್ನೇ ನಿಲ್ಲಿಸಿತು. ಈ ಪ್ರಯೋಗದಿಂದ ತಿಳಿದುಬರುವ ಅಂಶವೆಂದರೆ ಯಾವುದೇ ವರ್ತನೆಯನ್ನಾದರೂ ಬಲಪಡಿಸಲು ಇಲ್ಲವೇ ಬದಲಾಯಿಸಲು ಪುನರ್ಬಲನ ಕೊಡುವುದು ಅವಶ್ಯಕವಾಗಿದೆ. ಅಲ್ಲದೆ ಕಲಿತಂತಹ ವರ್ತನೆಯ ಬದಲಾವಣೆಗೆ ಆಗಾಗ ಪುನರ್ಬಲನ ಕೊಡದಿದ್ದರೆ ಪ್ರಾಯೋಗಿಕ ವಿಲೋಪನ ಉಂಟಾಗುತ್ತದೆ.

### ಕ್ರಿಯಾಜನ್ಯ ಅನುಬಂಧ ಕಲಿಕೆಯಲ್ಲಿ ಕಂಡು ಬರುವ ಪ್ರಮುಖ ಅಂಶಗಳು

### ಪುನರ್ಬಲನ ಅಥವಾ ಪುಷ್ಟಿಕರಣ

ಪುನರ್ಬಲನ ಪರಿಕಲ್ಪನೆಯು ಸ್ಕಿನ್ನರ್ ಅವರ ಸಿದ್ಧಾಂತದ ಪ್ರಮುಖ ಪ್ರಮೇಯವಾಗಿದೆ.ಇದನ್ನು ಅವನು ಕೇವಲ ಪರಿಕಲ್ಪನೆಯಾಗಿ ಪರಿಭಾವಿಸದೆ ವರ್ತನೆಯನ್ನು ನಿಯಂತ್ರಿಸುವ ಕ್ರಮವಾಗಿ ಕಂಡುಕೊಂಡಿದ್ದಾನೆ. ಪರಿಣಾಮವನ್ನು ಅವಲಂಬಿಸಿದ ಹಾಗೆ ಅದರ ಅರ್ಥವನ್ನು ಹೇಳಲಾಗಿದೆ.ಅನುಕ್ರಿಯೆಯನ್ನು ತೋರುವ ಸಂಭಾವ್ಯತೆಯನ್ನು ಹೆಚ್ಚಿಸುವ ಎಲ್ಲಾ ಉದ್ದೀಪನಗಳು ಪುನರ್ಬಲನಗಳೆನಿಸಿಕೊಳ್ಳುತ್ತವೆ. ಇವುಗಳನ್ನು ಮೂಲ ಪುನರ್ಬಲನಗಳೆಂದು ಕರೆಯಬಹುದು. ಮುನರ್ಬಲನವನ್ನು ಈ ಪ್ರಕಾರವಾಗಿ ವಿಂಗಡಿಸಲಾಗಿದೆ

- ಧನಾತ್ಮಕ ಪುನರ್ಬಲನ
- ಋಣಾತ್ಮಕ ಪುನರ್ಬಲ

#### ಧನಾತ್ಮಕ ಪುನರ್ಬಲನ

ಅನುಕ್ರಿಯಾತ್ಮಕ ಅನುಕ್ರಿಯೆ ನಂತರ ಬರುವ ಉದ್ದಿಪನವು ಅನುಕ್ರಿಯೆಯನ್ನು ಉಂಟುಮಾಡುವ ಸಂಭಾವ್ಯತೆಯನ್ನು ಹೆಚ್ಚಿಸುತ್ತದೆ. ಅವುಗಳನ್ನು ಧನಾತ್ಮಕ ಪುನರ್ಬಲನ ಎನ್ನುವರು/ ಕಲಿಕೆಯಲ್ಲಿ ಉತ್ತಮ, ಅತ್ಯುತ್ತಮ, ಪರವಾಗಿಲ್ಲಾ, ಮುಂದುವರಿಸು, ಶಹಭಾಸ್ ಇತ್ಯಾದಿಗಳು ಧನಾತ್ಮಕ ಶಾಬ್ದಿಕ ಪುನರ್ಬಲನೆಗೆ ಉದಾಹರಣೆಗಳಾಗಿವೆ.

ಸ್ಕಿನ್ನರ್ ಪ್ರಯೋಗದಲ್ಲಿ ಆಹಾರವು ಪುನರ್ಬಲನವಾಗಿದೆ

### ಋಣಾತ್ಮಕ ಪುನರ್ಬಲನ

ಪ್ರತಿಕೂಲ ಉದ್ದೀಪನಗಳನ್ನು ತೆಗೆದುಹಾಕುವುದರಿಂದ ಅನುಕ್ರಿಯೆ ಸಂಭಾವ್ಯತೆಯನ್ನು ಹೆಚ್ಚಿಸುತ್ತಿದ್ದರೆ ಅಂತಹ ಪುನರ್ಬಲನಗಳನ್ನು ಸೂಚಿಸಲಾಗಿದೆ ಉದಾಹರಣೆಗೆ, ಕಲಿಕೆಯಲ್ಲಿ ದಡ್ಡ, ಮೂರ್ಖ, ಸುಮ್ಮನೆ ಕುಳಿತುಕೋ, ನಿನಗೇನು ಬರುವುದಿಲ್ಲ ಇತ್ಯಾದಿಗಳು ಋಣಾತ್ಮಕ ಪುನರ್ಬಲನಗಳಿಗೆ ಉದಾಹರಣೆಯಾಗಿದೆ.

ಸ್ಕಿನ್ನರ್ ನ ಪ್ರಯೋಗದಲ್ಲಿ ಇಲಿಗೆ ತಾಗುವ ವಿದ್ಯುತ್ ಶಾಕ್ ಋಣಾತ್ಮಕ ಪುನರ್ಬಲನಕ್ಕೆ ಉದಾಹರಣೆಯಾಗಿದೆ.

### ರೂಪ ನಿರ್ಮಾಣ

ಸ್ಕಿನ್ನರ್ ಅವರ ಕ್ರಿಯಾಜನ್ಯ ಅನುಬಂಧ ಕಲಿಕೆಯ ಒಂದು ಪ್ರಮುಖವಾದ ಪ್ರಕ್ರಿಯೆ ಎಂದರೆ ರೂಪ ನಿರ್ಮಾಣ. ವರ್ತನೆಗಳನ್ನು ನವೀನ ರೂಪದಲ್ಲಿ ಹೇಗೆ ಉಂಟು ಮಾಡಬಹುದು ಎಂಬುದನ್ನು ಸ್ಕಿನ್ನರ್ ಪ್ರಾಣಿಗಳ ಪ್ರಯೋಗದ ಆಧಾರದಿಂದ ತೋರಿಸಿಕೊಟ್ಟಿದ್ದಾರೆ. ಈ ಪ್ರಕ್ರಿಯೆಯನ್ನು ರೂಪ ನಿರ್ಮಾಣವೆಂದು ಕರೆಯಲಾಗಿದೆ. ಮೂಲ ವರ್ತನೆಯಲ್ಲಿ ಅಪೇಕ್ಷಿತ ಬದಲಾವಣೆಗಳನ್ನು ತರಲು ಪುನರ್ಬಲನಗಳಲ್ಲಿ ಸರಿಯಾದ ಆಯ್ಕೆ ಮಾಡಿಕೊಳ್ಳುವ ಕ್ರಿಯೆಯೇ ರೂಪ ನಿರ್ಮಾಣವಾಗಿದೆ.ರೂಪ ನಿರ್ವಹಣೆ ಮೂರು ತತ್ವಗಳನ್ನು ಒಳಗೊಂಡಿದೆ.

1) ಸಾಧಾರಣೀಕರಣ
2) ಪರಿಪಾಠಸ್ಪರ್ಧೆ
3) ಸರಪಣಿ

ಉದಾಹರಣೆ 1. ಪಾರಿವಾಳ ಸರಿಯಾದ ವರ್ತನೆಯ ನಿರ್ಮಾಣ

## ಸ್ಕಿನ್ನರ್ ಸಿದ್ಧಾಂತದ ಶೈಕ್ಷಣಿಕ ನಿಹಿತಾರ್ಥಗಳು

ಸ್ಕಿನ್ನರ್ ಅವರ ಕ್ರಿಯಾಜನ್ಯ ಅನುಬಂಧಿತ ಕಲಿಕೆಯು ಶಿಕ್ಷಣದಲ್ಲಿ ಕ್ರಾಂತಿಯನ್ನು ಉಂಟು ಮಾಡಿದೆ. ಇತ್ತೀಚೆಗಷ್ಟೇ ಬಂದ ಬೋಧನಾ ತಂತ್ರ ಹಾಗೂ ಹಂತ ಗೊಳಿಸಿದ ಕಲಿಕೆಯ ಇದರ ಮೇಲೆ ಅವಲಂಬಿತವಾಗಿದೆ. ಹಂತ ಗೊಳಿಸಿದ ಕಲಿಕೆಯಲ್ಲಿ ಕಲಿಯಬೇಕಾದ ಪಠ್ಯ ವಿಷಯವನ್ನು ಹಲವು ಚಿಕ್ಕ ಚಿಕ್ಕ ಘಟಕಗಳಲ್ಲಿ ಒಡೆಯಲಾಗುತ್ತದೆ. ಹಾಗೂ ಕಲಿಯುವನು ಪ್ರತಿಯೊಂದು ಘಟಕಕ್ಕೆ ಅನುಕ್ರಿಯೆಯನ್ನು ತೋರಿಸಬೇಕಾಗುತ್ತದೆ.

- ಪುನರ್ಬಲನವನ್ನು ಅನುಕ್ರಿಯೆ ನಡೆದ ತಕ್ಷಣ ಕೊಡತಕ್ಕದ್ದು.
- ವಿದ್ಯಾರ್ಥಿಗಳಲ್ಲಿ ಉತ್ತಮ ಗುಣಗಳ, ಉತ್ತಮ ನಡತೆಗಳ, ಉತ್ತಮ ಹವ್ಯಾಸಗಳ ನಿರೂಪಣೆಯಲ್ಲಿ ಪ್ರಯೋಜನಕಾರಿ.
- ಬಾಹ್ಯ ಪ್ರೇರಕಗಳು ವಿದ್ಯಾರ್ಥಿಗಳ ಕಲಿಕೆಯನ್ನು ಹೆಚ್ಚಿಸುವಂತೆ ಮಾಡಬೇಕು.
- ಬಹುಮಾನ ಮತ್ತು ಶಿಕ್ಷೆಯನ್ನು ನೈಪುಣ್ಯತೆಯಿಂದ ಬಳಸಬೇಕು.
- ಕಲಿಕಾ ವಾತಾವರಣ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಧೈರ್ಯ ತುಂಬುವ ಹಾಗಿರಬೇಕು.
- ಕ್ರಮಾನುಗತ ಬೋಧನೆ (ಹಂತ ಗೊಳಿಸಿದ ಬೋಧನ) ಕಂಪ್ಯೂಟರ್ ಆಧಾರಿತ ಕಲಿಕೆ ಶೈಕ್ಷಣಿಕ ತಂತ್ರಗಳ ಕಲಿಕೆಯಲ್ಲಿ ಈ ತತ್ವ ಬಳಸಲಾಗಿದೆ.
- ಸಾಂಕೇತಿಕ ಪುನರ್ಬಲನಗಳಾದ ಅಂಕಗಳನ್ನು ಹಾಗೂ ದರ್ಜೆಗಳನ್ನು ಕೊಟ್ಟು ಮಕ್ಕಳ ಕಲಿಕೆಯನ್ನು ಪ್ರೋತ್ಸಾಹಿಸಬೇಕು.
- ಮಗುವಿಗೆ ಅರಿವಾಗುವಂತಹ ಪಠ್ಯಕ್ರಮವಿರಬೇಕು.
- ಮಗು ಸುಖ ನೀಡುವಂತದ್ದನ್ನು ಬೇಗ ಕಲಿಯುತ್ತದೆ.
- ತಂದೆ ತಾಯಿಯರು ಶಿಕ್ಷಕರು ತಮ್ಮ ಅನುಭವದ ಆಧಾರದ ಮೇಲೆ ಮಕ್ಕಳ ವರ್ತನೆಗಳನ್ನು ತಿದ್ದಬೇಕು.
- ಒಳ್ಳೆಯ ನುಡಿಗಳನ್ನು ನಡತೆಗಳನ್ನು ಹೇಳಬೇಕು ಹೊಗಳುತ್ತಾ ಮಕ್ಕಳಲ್ಲಿ ಹುಮ್ಮಸ್ಸನ್ನು ತುಂಬಿ ಒಳ್ಳೆಯವರಾಗುವಲ್ಲಿ ಪ್ರೋತ್ಸಾಹಿಸಬೇಕು ಈ ಪುಷ್ಟೀಕರಣದಿಂದ ಮಕ್ಕಳು ಉತ್ತಮ ವ್ಯಕ್ತಿಗಳಾಗಲು ಕಲಿಯುತ್ತಾರೆ.

### ಮಕ್ಕಳು ಹೇಗೆ ಮತ್ತು ಏಕೆ ನಿರೀಕ್ಷಿತ ಸಾಧನೆಯನ್ನು ಸಾಧಿಸಲು ವಿಫಲರಾಗುತ್ತಾರೆ?

ಶೈಕ್ಷಣಿಕ ಸಾಧನೆ ಎಂದರೆ ಒಬ್ಬ ವಿದ್ಯಾರ್ಥಿ, ಶಿಕ್ಷಕ ಅಥವಾ ಸಂಸ್ಥೆಯು ತಮ್ಮ ಅಲ್ಪಾವಧಿಯ ಅಥವಾ ದೀರ್ಘಾವಧಿಯ ಶೈಕ್ಷಣಿಕ ಗುರಿಗಳನ್ನು ಸಾಧಿಸಿದ ಮಟ್ಟ, ಇದು ವಿವಿಧ ಶೈಕ್ಷಣಿಕ ವಿಷಯಗಳಲ್ಲಿ ವಿದ್ಯಾರ್ಥಿಗಳ ಸಾಧನೆಯ ಅಳತೆ ಕೂಡ ಆಗಿದೆ.

ಶೈಕ್ಷಣಿಕ ಸಾಧನೆಯನ್ನು ಸಾಮಾನ್ಯವಾಗಿ ಸಾಧನಾ ಪರೀಕ್ಷೆಗಳು ಅಥವಾ ನಿರಂತರ ಮೌಲ್ಯಮಾಪನದ ಮೂಲಕ ಅಳೆಯಲಾಗುತ್ತದೆ. ತರಗತಿಯಲ್ಲಿ ನಿರೀಕ್ಷಿಸಿದ ಸಾಧನೆಯ ಮಟ್ಟ ವಿದ್ಯಾರ್ಥಿಗಳ ಬೌದ್ಧಿಕ ಮಟ್ಟ, ವ್ಯಕ್ತಿತ್ವ, ಪ್ರೇರಣೆ, ಕೌಶಲಗಳು, ಆಸಕ್ತಿ, ಅಧ್ಯಯನ, ಅಭ್ಯಾಸಗಳು, ಅವಧಾನ ಮತ್ತು ಶಿಕ್ಷಕ–ವಿದ್ಯಾರ್ಥಿ ಸಂಬಂಧಗಳ ಮೇಲೆ ಆಧಾರಿತವಾಗಿರುತ್ತದೆ.

ಕೆಲವೊಮ್ಮೆ ತರಗತಿಗಳಲ್ಲಿ ಕಲಿಕೆಗೆ ಸಮಾನವಾದ ಅವಕಾಶ, ಪೂರಕ ವಾತಾವರಣ, ಕಲಿಕಾ ಸಾಮಾಗ್ರಿಗಳು, ನುರಿತ ಶಿಕ್ಷಕ ವೃಂದ ಇದ್ದರೂ ಕೂಡ ಕೆಲವು ವಿದ್ಯಾರ್ಥಿಗಳು ನಿರೀಕ್ಷಿತ ಸಾಧನೆಯನ್ನು ಸಾಧಿಸಲು ವಿಫಲರಾಗುತ್ತಾರೆ. ಇದಕ್ಕೆ ಕಾರಣಗಳೇನೆಂದರೆ,

* ಕಲಿಕಾರ್ಥಿಗಳ ಕಡಿಮೆ ಬುದ್ಧಿಮಟ್ಟ.
* ಭಾವನಾತ್ಮಕ ಸಮಸ್ಯೆಗಳು ( ಭಯ, ಆತಂಕ, ಕೀಳರಿಮೆ)
* ಮಾನಸಿಕ ಆರೋಗ್ಯ ಸಮಸ್ಯೆಗಳು
* ಅನಾಸಕ್ತಿ
* ಕಲಿಕೆಗೆ ಪೂರಕವಾಗದ ಮನೆಯ ವಾತಾವರಣ
* ಶಿಕ್ಷಕರ ಗಮನದ ಕೊರತೆ
* ಆತ್ಮ ವಿಶ್ವಾಸದ ಕೊರತೆ
* ಸಹಪಾಠಿಗಳ ಸಹವಾಸ
* ಪೋಷಕರ ಅತಿಯಾದ ರಕ್ಷಣೆ ಮತ್ತು ನಿರೀಕ್ಷೆಗಳು
* ಸಂಬಾಷಣಾ ಕೌಶಲಗಳ ಕೊರತೆ
* ಕಲಿಕಾ ನ್ಯೂನತೆಗಳು
* ಕಡಿಮೆ ಅವಧಾನ
* ಕಠಿಣ ಪಠ್ಯಕ್ರಮ
* ಸಾಮಾಜಿಕ ಒತ್ತಡ
* ಗುರಿ ಸ್ಪಷ್ಟತೆ ಇಲ್ಲದಿರುವುದು
* ಮಾರ್ಗದರ್ಶನದ ಕೊರತೆ
* ಅವಾಸ್ತವಿಕ ನಿರೀಕ್ಷೆಗಳು
* ಪರೀಕ್ಷಾ ಪದ್ಧತಿಗಳು
* ಬೋಧನಾ ವಿಧಾನ
* ಶಾಲಾ ವಾತಾವರಣ

ತರಗತಿಯಲ್ಲಿನ ಎಲ್ಲಾ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಯ ಜವಾಬ್ದಾರಿ ಪ್ರತಿಯೊಬ್ಬ ಶಿಕ್ಷಕನದ್ದಾಗಿದೆ. ಆದ್ದರಿಂದ ಶಿಕ್ಷಕರು ವಿದ್ಯಾರ್ಥಿಗಳಲ್ಲಿನ ವ್ಯಕ್ತಿ ಭಿನ್ನತೆ, ಅವರ ಆಸಕ್ತಿಗಳು, ಕಲಿಯುವ ಶೈಲಿಯನ್ನು ಅರ್ಥಮಾಡಿಕೊಂಡು ಕಲಿಕಾ ಅನುಭವಗಳನ್ನು ನೀಡಬೇಕಾಗುತ್ತದೆ.

**ಕಲಿಕೆಯ ಮೇಲೆ ಪ್ರಭಾವ ಬೀರುವ ಕೆಲವು ವೈಯಕ್ತಿಕ ಅಂಶಗಳು;**

ವಿವೇಚನೆ ಮತ್ತು ಭಾವನಾತ್ಮಕತೆ

- ವಿವೇಚನೆ ಮತ್ತು ಭಾವನಾತ್ಮಕತೆಗೆ ಸಂಬಂಧವಿದೆ. ವಿವೇಚನೆಯೂ ಸ್ಮೃತಿ ,ಅವಧಾನ .ಭಾಷೆ ,ಸಮಸ್ಯೆ ಪರಿಹಾರ, ಮತ್ತು ಯೋಜನಾ ಪ್ರಕ್ರಿಯೆಯನ್ನು ಒಳಗೊಂಡಿದೆ.
- ವಿವೇಚನೆ ಮತ್ತು ಭಾವನಾತ್ಮಕತೆ ನಡುವೆ ಸಹ ಸಂಬಂಧವಿದೆ ವಿವೇಚನೆ ಒಂದು ಪರಿಜ್ಞಾನಾತ್ಮಕ ಕ್ರಿಯೆ ಯಾಗಿದ್ದು ತೀರ್ಮಾನ ಕೈಗೊಳ್ಳಲು ಮತ್ತು ಸಮಸ್ಯೆ ಬಗೆಹರಿಸಲು ಸಹಕಾರಿಯಾಗಿದೆ. ವಿವೇಚನೆಯಲ್ಲಿ ಔಪಚಾರಿಕ ವಿವೇಚನೆ. ದೈನಂದಿನ ವಿವೇಚನೆ ಎಂದು ಎರಡು ವಿಧ.

**ಅಭಿಪ್ರೇರಣೆ;**

ಇಂಗ್ಲೀಷ್ ನ ಮೋಟಿವೇಷನ್ ಎಂಬ ಪದಕ್ಕೆ ಲ್ಯಾಟಿನ್ ಭಾಷೆಯ 'ಮೂವರ್ಸ್' ಪದ ಮೂಲವಾಗಿದೆ. ಮೂವರ್ಸ್ ಎಂದರೆ 'ಚಲಿಸುವ ಕಡೆಗೆ' ಎಂದರ್ಥ ಹಾಗಾಗಿ ವ್ಯಕ್ತಿಯನ್ನು ನಿರ್ದಿಷ್ಟ ಗುರಿಯ ಕಡೆಗೆ ಪ್ರಚೋದಿಸುವ ನಿರ್ದೇಶಸುವ ಪ್ರೇರಕ ಶಕ್ತಿಯೇ ಅಭಿಪ್ರೇರಣೆ.

**ಆಂತರಿಕ ಅಭಿಪ್ರೇರಣೆ,;**

ವ್ಯಕ್ತಿಯ ಅಂತರಾಳದಿಂದ ಗುರಿಯನ್ನು ತಲುಪಿಸಲು ಎಚ್ಚರಿಸುವ ನಿರ್ದೇಶಸುವ ಪ್ರೇರಣಶಕ್ತಿಯೇ ಆಂತರಿಕ ಅಭಿಪ್ರೇರಣೆ.

**ಬಾಹ್ಯ ಅಭಿಪ್ರೇರಣೆ,**

ವ್ಯಕ್ತಿಯು ಗುರಿಯತ್ತ ಸಾಗಲು ಬಾಹ್ಯವಾಗಿ ಪ್ರಚೋದಿಸುವ ಅಥವಾ ನಿರ್ದೇಶಸುವ ಪ್ರೇರಣಾಶಕ್ತಿಯೇ ಬಾಹ್ಯ ಬಹುಮಾನ ಶಿಕ್ಷೆ, ಪ್ರಶಂಸೆ, ತೆಗಳಿಕೆ ಇತ್ಯಾದಿ.

**ಅಭಿಪ್ರೇರಣೆಯ ಗುಣಲಕ್ಷಣಗಳು;**

- ಕಲಿಕೆಯಲ್ಲಿ ಆಸಕ್ತಿ ಮೂಡುವಂತೆ ಮಾಡುತ್ತದೆ.

- ಮಗುವನ್ನು ನಿರ್ದಿಷ್ಟ ಗುರಿಯತ್ತ ಸಾಗಿಸುತ್ತದೆ.
- ಮಗುವನ್ನು ಕಲಿಕೆಯತ್ತ ಪ್ರಚೋದಿಸುತ್ತದೆ.

**ಪಕ್ವತೆ:–**

ಪಕ್ವತೆಯು ನೈಸರ್ಗಿಕ ಕ್ರಿಯೆಯಾಗಿದ್ದು ಇದು ಕಲಿಕೆಯ ಮೇಲೆ ಮಹತ್ತರವಾದ ಪ್ರಭಾವ ಬೀರುತ್ತದೆ. ಪಕ್ವತೆ ಹಾಗೂ ಕಲಿಕೆ ಒಂದಕ್ಕೊಂದು ಅಂತರ್ ಸಂಬಂಧ ಹೊಂದಿದೆ. ಉದಾಹರಣೆಗೆ ಮಗು ಮಾತು ಕಲಿಯುವುದು ಒಂದು ನಿರ್ದಿಷ್ಟ ವಯಸ್ಸು ತಲುಪಿದಾಗ ಇದನ್ನೇ ಪಕ್ವತೆ ಎಂದು ಕರೆಯುವರು.

**ಶೈಕ್ಷಣಿಕ ನಿಹಿತಾರ್ಥಗಳು**

1. ಪಕ್ವತೆಯು ಕಲಿಕೆಯನ್ನು ಸುಲಭಗೊಳಿಸುವುದು
2. ಮಗುವು ಪಕ್ವತೆಯ ಹಂತ ತಲುಪುವವರೆಗೂ ಕಲಿಕೆಗೆ ಒತ್ತಾಯಿಸಬಾರದು.
3. ದೈಹಿಕ ಮತ್ತು ಮಾನಸಿಕ ಪಕ್ವತೆಯಾಗದೆ ಕಲಿಕೆ ಉಂಟಾಗಲಾರದು.
4. ಪಕ್ವತೆಗೆ ಅನುಸಾರವಾಗಿ ಕಲಿಕಾ ಚಟುವಟಿಕೆಯನ್ನು ಶಿಕ್ಷಕರು ನಿಯೋಜಿಸಬೇಕು.

**ಆಸಕ್ತಿ:–**

ಕಲಿಕೆಯಲ್ಲಿ ಒಬ್ಬ ವ್ಯಕ್ತಿ ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದಾನೆ ಎಂದರೆ ಅದಕ್ಕೆ ಮುಖ್ಯ ಕಾರಣ ಆಸಕ್ತಿಯೇ ಆಗಿರುತ್ತದೆ. ಆಸಕ್ತಿಗೆ ಆಸ್ಥೆ, ಒಲವು, ಇಷ್ಟ ಎಂಬ ಬೇರೆ ಹೆಸರುಗಳು ಕೂಡ ಇವೆ. ಯಾವುದೇ ಒಂದು ವಿಷಯದ ಕಡೆ ಅಥವಾ ವಸ್ತು ವಿನ ಕಡೆಗೆ ನಮ್ಮ ಮನಸ್ಸನ್ನು ಕೇಂದ್ರೀಕರಿಸಬೇಕೆಂದರೆ ಅದರ ಬಗ್ಗೆ ಆಸಕ್ತಿ ಇದ್ದಾಗ ಮಾತ್ರ ಸಾಧ್ಯ.

**ಆಸಕ್ತಿಯ ಗುಣಲಕ್ಷಣಗಳು**

1. ಆಸಕ್ತಿಯು ಅನುವಂಶಿಕವಾದದಲ್ಲ ಇದು ಕಲಿಕೆಯಿಂದ ಉಂಟಾಗುವಂತಹದು.
2. ಆಸಕ್ತಿಯು ಶಾಶ್ವತವಾದುದಲ್ಲ ಇದು ಚಲನಶೀಲವಾದುದು.
   - ಶಿಕ್ಷಕರು ಆಸಕ್ತಿ ಮೂಡಿಸಲು ಮಕ್ಕಳ ಕುತೂಹಲ ಗುರುತಿಸಿ ಅಂತಹ ಅಂಶಗಳಿಗೆ ಆದ್ಯತೆ ನೀಡಿ ಬೋಧಿಸಬೇಕು
   - ಆಸಕ್ತಿದಾಯಕ ಉದಾಹರಣೆಗಳನ್ನು ಕೊಡುವುದು.
   - ಕಥೆಗಳನ್ನು ಸ್ವಾರಸ್ಯಕರ ವಿಷಯಗಳನ್ನು ಬೋಧನೆಯಲ್ಲಿ ಸೇರ್ಪಡಿಸಿ ಬೋಧಿಸುವ ಮೂಲಕ ಮಕ್ಕಳಲ್ಲಿ ಆಸಕ್ತಿ ಬೆಳೆಸಬಹುದು.

**ಅವಧಾನ:–**

ಕಲಿಕೆಯ ಮೇಲೆ ಹೆಚ್ಚು ಪ್ರಭಾವವನ್ನು ಅವಧಾನವೂ ಬೀರುತ್ತದೆ ಇದನ್ನು ಏಕಾಗ್ರತೆ ಮತ್ತು ಗಮನ ಎಂದು ಕರೆಯುತ್ತೇವೆ. ನಮ್ಮ ಮನಸ್ಸನ್ನು ಕಲಿಯುವ ವಸ್ತುವಿನ ಕಡೆಗೆ ಕೇಂದ್ರೀಕರಿಸುವುದೇ ಅವಧಾನ. ಅವಧಾನದಲ್ಲಿ ಸ್ವಾಭಾವಿಕ ಅವಧಾನ ಒತ್ತಾಯದ ಅವಧಾನ ಮತ್ತು ಅರ್ಜಿತ ಅವಧಾನ ಎಂದು 3 ಭಾಗಗಳಿವೆ.

**ಸ್ವಾಭಾವಿಕ ಅವಧಾನ:** ಶಿಕ್ಷಕರು ಬೋಧಿಸುವಾಗ ಬಹುತೇಕ ಮಕ್ಕಳಿಗೆ ಯಾವ ವಸ್ತುವಿನ ಕಡೆ ಸ್ವಾಭಾವಿಕ ಅವಧಾನ ಉಂಟಾಗುವುದು, ಆ ಉದಾಹರಣೆಗಳನ್ನು ಕೊಡಬೇಕು ಉದಾಹರಣೆಗೆ ನಾಯಿ ದನ ಕರು ಪಕ್ಷಿ.

**ಒತ್ತಾಯದ ಅವಧಾನ:** ಕೆಲವು ವೇಳೆ ವಿದ್ಯಾರ್ಥಿಗಳ ಗಮನ ವಿಷಯದ ಮೇಲೆ ಇರುವುದಿಲ್ಲ ಅಂತಹ ಸಂದರ್ಭದಲ್ಲಿ "ಇಲ್ಲಿ ನೋಡಿ" "ಸರಿಯಾಗಿ ಗಮನಿಸಿ" ಹೀಗೆ ಶಿಕ್ಷಕರು ಹೇಳುತ್ತಾ ಒತ್ತಾಯಪೂರ್ವಕವಾಗಿ ಕಲಿಕೆಯ ಕಡೆಗೆ ವಿದ್ಯಾರ್ಥಿಗಳ ಗಮನ ತರಲಾಗುತ್ತದೆ ಇದೆ ಒತ್ತಾಯದ ಅವಧಾನ

**ಆರ್ಜಿತ ಅವಧಾನ:** ಒತ್ತಾಯದ ಅವಧಾನವು ಹೆಚ್ಚು ಕಾಲ ವಿದ್ಯಾರ್ಥಿಗಳಿಗೆ ಬಳಸಿದರೆ ವಿದ್ಯಾರ್ಥಿಗಳಲ್ಲಿ ಆಸಕ್ತಿ ಹೋಗಿ ಕಲಿಕೆ ಹೊರೆ ಎನಿಸುತ್ತದೆ ಆದ್ದರಿಂದ ವಿದ್ಯಾರ್ಥಿಗಳಿಗೆ ಒತ್ತಾಯ ಪೂರ್ವಕವಾಗಿ ವಿಷಯದ ಕಡೆಗೆ ಗಮನಹರಿಸುವಂತೆ ಮಾಡಿದ ಅವಧಾನವನ್ನ ಸ್ವಾಭಾವಿಕ ಅವಧಾನವನ್ನಾಗಿ ಪರಿವರ್ತಿಸಬೇಕು. ಇಂತಹ ಅವಧಾನಕ್ಕೆ **ಆರ್ಜಿತ ಅವಧಾನ** ಎಂದು ಕರೆಯುತ್ತೇವೆ.

**ಮನೋಭಾವ:** ಮಗುವಿನಲ್ಲಿ ಅಪೇಕ್ಷಿತ ಮನೋಭಾವ ಬೆಳೆಸುವುದು ಶಿಕ್ಷಕರ ಪ್ರಮುಖ ಉದ್ದೇಶವಾಗಿದೆ, ವ್ಯಕ್ತಿಯು ನಿರ್ದಿಷ್ಟವಾದ ಪ್ರಚೋದನೆಯಾದ ಸಮುದಾಯ ಸಂಸ್ಕೃತಿ ಸಂಸ್ಥೆ ರಾಷ್ಟ್ರದ ಬಗ್ಗೆ ಹೊಂದಿರುವ ಹಿತಕರ ಅಥವಾ ಅಹಿತಕರ ಧೋರಣೆಯೇ **ಮನೋಭಾವ.**

ಗ್ಯಾರೆಟ್‌ರವರ ಪ್ರಕಾರ ಸಾಮಾಜಿಕ ಮೌಲ್ಯಗಳ ಪರ ಅಥವಾ ವಿರುದ್ಧವಾಗಿ ಸೂಚಿತವಾಗುವ ಅನುಕ್ರಿಯೆ ಮನೋಭಾವ.

**ಆಯಾಸ :** ಯಾವುದೇ ಒಂದು ಕಾರ್ಯದಲ್ಲಿ ವ್ಯಕ್ತಿಯು ನಿರಂತರವಾಗಿ ತೊಡಗಿಸಿಕೊಂಡರೆ ಆ ವ್ಯಕ್ತಿಗೆ ಕೆಲಸವನ್ನು ಮುಂದುವರಿಸಲು ದೈಹಿಕವಾಗಿ ಆಗಲಿ ಅಥವಾ ಮಾನಸಿಕವಾಗಲಿ ಅಸಾಧ್ಯವಾದ ಸ್ಥಿತಿಯನ್ನು ತಲುಪುತ್ತಾನೆ ಇದನ್ನೇ ಆಯಾಸ ಎನ್ನುತ್ತೇವೆ. ಇದರಲ್ಲಿ ದೈಹಿಕ ಆಯಾಸ ಮತ್ತು ಮಾನಸಿಕ ಆಯಾಸ ಎಂಬ ಎರಡು ವಿಧಗಳಿವೆ.

## ಸ್ಮೃತಿ :

ಕಲಿತದ್ದನ್ನ ಮತ್ತೆ ಸ್ಮರಣೆಗೆ ತಂದುಕೊಳ್ಳುವುದೇ ಸ್ಮೃತಿ.

## ಸ್ಮೃತಿಯ ಹಂತಗಳು

1. **ಕಲಿಕೆ :** ಕಲಿಕೆಯು ಉಂಟಾದರೆ ಮಾತ್ರ ಕಲಿತದ್ದು ನೆನಪಿಗೆ ಬರಲು ಸಾಧ್ಯ ಹಾಗಾಗಿ ಅರ್ಥಪೂರ್ಣವಾಗಿ ಕಲಿಕೆಯು ಉಂಟಾಗಿದ್ದರೆ ಕಲಿತದ್ದು ಸುಲಭವಾಗಿ ಮರೆಯಲಾಗುವುದಿಲ್ಲ.
2. **ಧಾರಣೆ :** ಕಲಿತ ವಿಷಯ ಎಷ್ಟರಮಟ್ಟಿಗೆ ಉಳಿದಿರುತ್ತದೆ ಅಷ್ಟರಮಟ್ಟಿಗೆ ಕಲಿಕೆ ಉಳಿಯುತ್ತದೆ ಇದನ್ನೇ ಧಾರಣೆ ಎನ್ನುವರು
3. **ಪುನಃ ಸ್ಮರಣೆ:** ಸ್ಮೃತಿಯ ಮೂರನೇ ಹಂತ ಇದಾಗಿದ್ದು, ಕಲಿತ ವಿಷಯವನ್ನು ಮತ್ತೆ ಮತ್ತೆ ಜ್ಞಾಪಕಕ್ಕೆ ತಂದುಕೊಂಡಾಗ ಕಲಿತದ್ದು ಶೀಘ್ರವಾಗಿ ಮನಸ್ಸಿನಿಂದ ಮರೆಯಾಗದು.

## ವಿಸ್ಮೃತಿ

ಕಲಿಕೆಯ ಶಾಶ್ವತವಾದ ಆಥವ ತಾತ್ಕಾಲಿಕವಾದ ನಷ್ಟಕ್ಕೆ ಮರೆವು ಅಥವಾ ವಿಸ್ಮೃತಿ ಎನ್ನುತ್ತೇವೆ.

## ಮರೆವಿಗೆ ಕಾರಣ:–

1. ಕಾಲ; ಕಾಲ ಕಳೆದಂತೆ ಮತ್ತೆ ಮತ್ತೆ ಜ್ಞಾಪಿಸಿಕೊಳ್ಳದಿದ್ದರೆ ಕಲಿಕೆಯು ಮರೆವಿಗೆ ಸರಿಯುತ್ತದೆ.
2. ಅಭ್ಯಾಸ:– ಕಲಿತ ವಿಷಯ ಅಭ್ಯಾಸಕ್ಕೆ ಒಳಪಡದೆ ಇದ್ದಾಗ ಮರೆತು ಹೋಗುತ್ತದೆ.
3. ವಿಶ್ರಾಂತಿ:– ವಿಶ್ರಾಂತಿ ಇಲ್ಲದೆ ನಿರಂತರವಾಗಿ ಕಲಿಯುವುದು ಕೂಡ ಮರೆವಿಗೆ ಕಾರಣವಾಗುತ್ತದೆ. ಆದ್ದರಿಂದ ವಿಸ್ಮೃತಿಯನ್ನು ಹೋಗಲಾಡಿಸಬೇಕಾದರೆ ಪುನರಾವರ್ತನೆ, ಅರ್ಥಪೂರ್ಣ ವ್ಯವಸ್ಥಿತ ಜೋಡಣೆ, ಆಸಕ್ತಿದಾಯಕವಾಗಿ ಕಲಿಯುವುದು, ವಿಶ್ರಾಂತಿ ಪಡೆಯುವುದು, ಕಾಲಕಾಲಕ್ಕೆ ಪುನಃಸ್ಮರಣೆ ಮಾಡುವುದು, ಆಯಾಸ ಕಡಿಮೆಗೊಳಿಸಿ ಕಲಿಯುವುದು ಇವೆಲ್ಲವೂ ವಿಸ್ಮೃತಿಯನ್ನು ಹೋಗಲಾಡಿಸುವ ತಂತ್ರವಾಗಿದೆ.

## <u>ಕಲಿಕೆ ಮತ್ತು ಪರಿಸರ;</u>

ಕಲಿಕೆಯು ಪರಿಸರದಿಂದ ಅತ್ಯಧಿಕವಾಗಿ ಪ್ರಭಾವಿಸಲ್ಪಡುತ್ತದೆ ಅವುಗಳಲ್ಲಿ

1. ಶಾಲೆಯ ಪರಿಸರ: ಶಾಲೆಯ ಪರಿಸರವು ಕಲಿಕೆಗೆ ಪೂರಕವಾಗಿರಬೇಕು ಕಲಿಕೆಗೆ ಹೆಚ್ಚಿನ ಪ್ರೋತ್ಸಾಹವನ್ನು ನೀಡುವಂತಿರಬೇಕು ಕಲಿಕೆಗೆ ಸೂಕ್ತ ಪುನರ್ಬಲನ ನೀಡಿ ಮಗುವನ್ನು ಕಲಿಕೆಯ ಕಡೆಗೆ ಅಭಿಪ್ರೇರಿಸಬೇಕು.
2. ಸಹವರ್ತಿಗಳು; ಶಿಕ್ಷಕರು ಸ್ನೇಹಿತರು ಕೂಡ ಕಲಿಕೆಯಲ್ಲಿ ಪ್ರೇರಣದಾಯಕರಾಗಿರಬೇಕು. ಕಲಿಕೆಯ ಕಡೆಗೆ ನಮ್ಮ ಮನಸ್ಸನ್ನು ಕೇಂದ್ರೀಕರಿಸಿ, ಸಾಧನೆಗೆ ತೊಡಗುವಂತೆ ಅಭಿಪ್ರೇರಿಸಬೇಕು ಸಾಧನೆಯಲ್ಲಿ ಕಡಿಮೆ ಸಾಮರ್ಥ್ಯ ತೋರಿದಾಗ ಹೆಚ್ಚಿನ ಸಾಧನೆಗೆ ನಮ್ಮನ್ನ ತೊಡಗಿಸಿಕೊಳ್ಳುವಂತೆ ಉತ್ತೇಜಿಸಬೇಕು.
3. ಪಠ್ಯಕ್ರಮ:– ಶಾಲಾ ಪಠ್ಯಕ್ರಮವು ವಿದ್ಯಾರ್ಥಿಗಳ ಆಸಕ್ತಿ ಮತ್ತು ಸಾಮರ್ಥ್ಯ ಹಾಗೂ ಮನೋಮಟ್ಟಕ್ಕೆ ಅನುಗುಣವಾಗಿ ರೂಪಿಸಬೇಕು. ಪಠ್ಯಕ್ರಮವು ವೈವಿಧ್ಯಮಯವಾಗಿದ್ದು ಅದು ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಗೆ ನೆರವಾಗುವಂತಿರಬೇಕು.
4. ಬೋಧನಾ ವಿಧಾನ; ಇದೂ ಕೂಡ ಮಗುವಿನ ಕಲಿಕೆಯಲ್ಲಿ ಉತ್ತಮವಾಗಿ ಸಹಕರಿಸುತ್ತದೆ ಶಿಕ್ಷಕನು ಒಂದೇ ರೀತಿಯ ಬೋಧನಾ ವಿಧಾನ ಅಳವಡಿಸಿಕೊಳ್ಳದೆ ವೈವಿಧ್ಯಮಯವಾದ ಬೋಧನಾ ವಿಧಾನವನ್ನು ಮತ್ತು ಸೂಕ್ತವಾದ ಬೋಧನಾ ಉಪಕರಣಗಳನ್ನು ಅಳವಡಿಸಿಕೊಂಡು ಬೋಧಿಸಿದಾಗ ಮಗುವಿಗೆ ಸುಲಭವಾಗಿ ಅರ್ಥವಾಗುತ್ತದೆ.
5. ಮೌಲ್ಯಮಾಪನ: ಮೌಲ್ಯಮಾಪನವು ಕೂಡ ಮಗುವಿನ ಕಲಿಕೆಯ ಮೇಲೆ ಪ್ರಬಲವಾಗಿ ಪ್ರಭಾವ ಬೀರುತ್ತದೆ ನಿರಂತರ ವ್ಯಾಪಕ ಮೌಲ್ಯಮಾಪನವು ವಿದ್ಯಾರ್ಥಿಗಳ ಸಾಧನೆ ಸಾಮರ್ಥ್ಯ ದೌರ್ಬಲ್ಯಗಳ ಮೇಲೆ ಬೆಳಕು ಚೆಲ್ಲಿ ವಿದ್ಯಾರ್ಥಿಯು ದೌರ್ಬಲ್ಯದಿಂದ ಹೊರ ಬಂದು ಮತ್ತೆ ಸಾಧನೆ ಮಾಡುವಂತೆ ಕಲಿಕೆಯಲ್ಲಿ ಅಭಿಪ್ರೇರಿಸಿ ವಿದ್ಯಾರ್ಥಿಗಳ ಸಾಮರ್ಥ್ಯವನ್ನು ಹೆಚ್ಚಿಸುವಲ್ಲಿ ಸಹಕಾರಿಯಾಗಿದೆ.

\

# ಮಗುವಿನ ಅಭಿವೃದ್ಧಿ ಮತ್ತು ಬೋಧನಾ ಶಾಸ್ತ್ರ

## ಬಹು ಆಯ್ಕೆ ಪ್ರಶ್ನೆಗಳು

1. ಪ್ರಯತ್ನ ಮತ್ತು ದೋಷ ಸಿದ್ಧಾಂತದ ಮತ್ತೊಂದು ಹೆಸರು

   a. **ಪ್ರಚೋದನೆ ಪ್ರತಿಕ್ರಿಯೆ ಸಿದ್ಧಾಂತ** b. ಶಾಸ್ತ್ರೀಯ ಅನುಬಂಧಿತ ಸಿದ್ಧಾಂತ

   c. ಕ್ರಿಯಾಜನ್ಯ ಅನುಬಂಧಿತ ಸಿದ್ಧಾಂತ d. ಯಾವುದು ಅಲ್ಲ

2. ವಿದ್ಯಾರ್ಥಿಗಳು ಪರೀಕ್ಷೆಯನ್ನು ಮುಗಿಸಿದ ನಂತರ ಅವರ ಪ್ರತಿಕ್ರಿಯೆಯನ್ನು ಪಡೆಯಬೇಕು ಎಂಬ ಪ್ರಸ್ತಾವನೆ ಪ್ರಸ್ತಾಪಿಸುವ ಕಲಿಕೆಯ ನಿಯಮ

   a. ಸಿದ್ಧತೆಯ ನಿಯಮ b.**ಪರಿಣಾಮದ ನಿಯಮ** c. ಬಳಕೆಯ ನಿಯಮ d.ಅಭ್ಯಾಸದ ನಿಯಮ

3. ಅಭ್ಯಾಸದ ನಿಯಮದ ಪ್ರಕಾರ ಪ್ರಚೋದನೆ ಮತ್ತು ಪ್ರತಿಕ್ರಿಯೆಯ ನಡುವೆ ಸಂಪರ್ಕವು ತೃಪ್ತಿಕರ ಸ್ಥಿತಿಯೊಂದಿಗೆ ಇದ್ದಾಗ ಅದರ ಶಕ್ತಿ

   a. **ಹೆಚ್ಚಾಗಿರುತ್ತದೆ** b. ಕಡಿಮೆಯಾಗುತ್ತದೆ c. ಹಾಗೆಯೇ ಉಳಿಯುತ್ತದೆ d. ಋಣಾತ್ಮಕವಾಗಿರುತ್ತದೆ

4. ಅನಾರೋಗ್ಯದ ಮನೋಧೋರಣೆ, ಮೂಢನಂಬಿಕೆ ಮತ್ತು ಭಯ ಇವುಗಳನ್ನು ತೊಡೆದು ಹಾಕಲು ಬಳಸಬಹುದಾದ ಸಿದ್ಧಾಂತ

   a. ಪ್ರಯತ್ನ ಮತ್ತು ದೋಷ ಕಲಿಕೆ b. ಒಳನೋಟ ಕಲಿಕೆ

   c. ಕ್ರಿಯಾಜನ್ಯ ಅನುಬಂಧನ ಕಲಿಕೆ d. **ಸಾಂಪ್ರದಾಯಿಕ ಅನುಬಂಧನ ಕಲಿಕೆ**

6. ಶಾಸ್ತ್ರೀಯ ಅನುಬಂಧಿತ ಕಲಿಕಾ ಸಿದ್ಧಾಂತವನ್ನು ಪ್ರತಿಪಾದಿಸಿದವರು

   a. ಸ್ಕಿನ್ನರ್ b. ಕೋಹ್ಲರ್ c. **ಪಾವಲೋವ್** d. ಬ್ರೂನರ್

7. ಕೋಹ್ಲರ್‌ರವರು ತಮ್ಮ ಒಳನೋಟ ಕಲಿಕೆಯನ್ನು ಪ್ರತಿಪಾದಿಸಲು ಪ್ರಯೋಗಕ್ಕೆ ಬಳಸಿದ ಚಿಂಪಾಂಜಿಯ ಹೆಸರು

   a. ಸಮೀನಾ b. ಸುಹಾನ c. **ಸುಲ್ತಾನ** d. ಸುಲೇಮಾನ್

8. ಇದು ವರ್ತನೆಯ ಸಂಭವನೀಯತೆಯನ್ನು ಹೆಚ್ಚು ಮಾಡುವ ಅಂಶವಾಗಿದೆ.

   a. ಹೊಗಳಿಕೆ b. ತೆಗಳಿಕೆ c. ಬಹುಮಾನ d. **ಪುನರ್ಬಲನ**

9. ಇದು ಕಲಿಕೆಯ ಪ್ರಕ್ರಿಯೆಯನ್ನು ರೂಪಿಸುವ ಅಂಶಗಳ ಅನುಕ್ರಮವಾಗಿದೆ.

   a. ಪ್ರಚೋದನೆ, ಕಲಿಯುವವರು ಮತ್ತು ಮರುಪ್ರತಿಕ್ರಿಯೆ b. **ಕಲಿಯುವವರು, ಪ್ರಚೋದನೆ ಮತ್ತು ಮರುಪ್ರತಿಕ್ರಿಯೆ**

   c. ಪ್ರತಿಕ್ರಿಯೆ, ಪ್ರಚೋದನೆ ಮತ್ತು ಕಲಿಯುವವರು d. ಪ್ರಚೋದಕ. ಪ್ರತಿಕ್ರಿಯೆ ಮತ್ತು ಮರುಪ್ರತಿಕ್ರಿಯೆ

10. ಕಲಿಕೆಯ ಯಾವ ಸಾಮಾಜಿಕ ಅರಿವಿನ ದೃಷ್ಟಿಕೋನಗಳ ಪ್ರಕಾರ ವಿದ್ಯಾರ್ಥಿಗಳು ಉತ್ತಮವಾಗಿ ಕಲಿಯುತ್ತಾರೆ ?

   a. ವಯಸ್ಕರನ್ನು ನಿಷ್ಕ್ರಿಯವಾಗಿ ಅನುಸರಿಸುವುದು b. **ತಮ್ಮ ಪರಿಸರದೊಂದಿಗೆ ಸಕ್ರಿಯವಾಗಿ ತೊಡಗಿಸಿಕೊಳ್ಳುವುದು**

   c. ನಡವಳಿಕೆಯ ಬಹಿರಂಗ ಬೇಡಿಕೆ d. ಅಸಂದರ್ಭಕರಿಸಿದ ಮಾಹಿತಿಯ ಕಂಠಪಾಠ

11. ಆಲ್ಬರ್ಟ್ ಬಂಡೂರ ಪ್ರತಿಪಾದಿಸಿದ ಸಿದ್ಧಾಂತ

   a. **ಸಾಮಾಜಿಕ ಕಲಿಕಾ ಸಿದ್ಧಾಂತ** b. ವರ್ತನೆಯ ಸಿದ್ಧಾಂತ

   c. ಅಭಿವೃದ್ಧಿಯ ಅರಿವಿನ ಸಿದ್ಧಾಂತ d. ಅಭಿವೃದ್ಧಿಯ ಮಾನಸಿಕ ಸಾಮಾಜಿಕ ಸಿದ್ಧಾಂತ

12. ಪ್ರತಿ ವರ್ಷ ಈ ಕೆಳಗಿನ ಯಾವ ದಿನದಂದು ವಿಶ್ವ ಆಟಿಸಂ ಜಾಗೃತಿ ದಿನವನ್ನಾಗಿ ಚರಿಸಲಾಗುತ್ತಿದೆ?

   a. ಏಪ್ರಿಲ್ 1 **b. ಏಪ್ರಿಲ್ 2** c. ಏಪ್ರಿಲ್ 3 d. ಏಪ್ರಿಲ್ 4

13. ವಿಕಲಾಂಗ ವಿದ್ಯಾರ್ಥಿಗಳ ಸೇರ್ಪಡೆಗೆ ಅಗತ್ಯವಿರುವ ಅಂಶ

   a. ಪ್ರವೇಶಿಸಲಾಗದ ಮೂಲಸೌಕರ್ಯ b. ಅವಕಾಶಗಳ ಅಸಮಾನತೆ

   c. ಭಾಗವಹಿಸುವಿಕೆಗೆ ಅಡೆತಡೆಗಳು d. **ತಾರತಮ್ಯವಲ್ಲದ ಶಿಕ್ಷಣ**

14. IEDSS ವಿಸ್ತೃತ ರೂಪ

a. **ಇನ್ಕ್ಲೂಸಿವ್ ಎಜುಕೇಶನ್ ಫಾರ್ ಡಿಸೆಬಲ್ಡ್ ಅಟ್ ಸೆಕೆಂಡರಿ ಸ್ಟೇಜ್**

b. ಇಂಟಿಗ್ರೇಟೆಡ್ ಎಜುಕೇಶನ್ ಫಾರ್ ಡಿಸೆಬಲ್ಡ್ಅಟ್ ಸೆಕೆಂಡರಿ ಸ್ಟೇಜ್

c. ಇಂಟೆಗ್ರೇಟೆಡ್ ಎಜುಕೇಶನ್ ಫಾರ್ ಡಿಫೆಕ್ಟಿವ್ ಅಟ್ ಸೆಕೆಂಡರಿ ಸ್ಟೇಜ್

d. ಇನ್ಕ್ಲೂಸಿವ್ ಎಜುಕೇಶನ್ ಫಾರ್ ಡಿಫೆಕ್ಟಿವ್ ಅಟ್ ಸೆಕೆಂಡರಿ ಸ್ಟೇಜ್

15. ಸಮಗ್ರ ಪಠ್ಯಕ್ರಮವು ಈ ಕೆಳಗಿನ ಯಾವ ಆಯಾಮಗಳನ್ನು ಹೊಂದಿದೆ?

a. ಸಂಚಿಕೆ/ಥೀಮ್ ಆಯಾಮ b. ನಿಯಂತ್ರಿತ ಆಯಾಮ ಪ್ರಕ್ರಿಯೆ

c. ಪ್ರಕ್ರಿಯೆ/ಉತ್ಪನ್ನದ ಆಯಾಮ d. ಸುಧಾರಿತ ವಿಷಯ ಆಯಾಮ

a. **ಎ ಸಿ ಮತ್ತು ಡಿ ಮಾತ್ರ** b. ಬಿ ಸಿ ಮತ್ತು ಡಿ ಮಾತ್ರ

c. ಎ ಬಿ ಮತ್ತು ಡಿ ಮಾತ್ರ d. ಬಿ ಸಿ ಮತ್ತು ಎ ಮಾತ್ರ

16. ಅಸಾಧಾರಣ ವರ್ಗದ ಅಡಿಯಲ್ಲಿ ಯಾವ ವರ್ಗದ ಕಲಿಯುವವರನ್ನು ಸೇರಿಸಲಾಗಿಲ್ಲ?

a. ನಿಧಾನವಾಗಿ ಕಲಿಯುವವರು b. ಹಿಂದುಳಿದ ವರ್ಗದವರು

c. **ಸಾಮಾನ್ಯ ವರ್ಗದವರು** d. ಪ್ರತಿಭಾನ್ವಿತರು

17. ದೃಷ್ಟಿ ಸವಾಲುಳ್ಳ ಮಕ್ಕಳನ್ನು ಗುರುತಿಸುವ ಪ್ರಮುಖ ವಿಧಾನ ಇದಾಗಿದೆ.

a. ವ್ಯಕ್ತಿ ಅಧ್ಯಯನ b. **ಅವಲೋಕನ ವಿಧಾನ** c. ಮಾನಸಿಕ ಪರೀಕ್ಷೆ d. ರೋಗಿಯ ಸಂದರ್ಶನ

18. ಕೆಳಗಿನವುಗಳಲ್ಲಿ ಯಾವುದು ವಿಕಲಚೇತನ ಮಾದರಿಯಲ್ಲ

a. ವಿಕಲಚೇತನ ಸಾಂಸ್ಕೃತಿಕ ಮಾದರಿ b. ವಿಕಲಚೇತನ ಆರ್ಥಿಕ ಮಾದರಿ

c. **ವಿಕಲಚೇತನ ಶಿಕ್ಷಣ ಮಾದರಿ** d. ವಿಕಲಚೇತನ ಚಾರಿಟಿ ಮಾದರಿ

19. ಇವುಗಳಲ್ಲಿ ಯಾವುದು ಅತ್ಯಂತ ಹಳೆಯ ವಿಕಲಚೇತನ ಮಾದರಿಯಾಗಿದೆ

a. ವಿಕಲಚೇತನ ಸಾಮಾಜಿಕ ಮಾದರಿ b. **ವಿಕಲಚೇತನ ನೈತಿಕ/ಧಾರ್ಮಿಕ ಮಾದರಿ**

c. ವಿಕಲಚೇತನ ಸಾಂಸ್ಕೃತಿಕ ಮಾದರಿ d. ವಿಕಲಚೇತನ ಚಾರಿಟಿ ಮಾದರಿ

20. ಯಾವ ಹೇಳಿಕೆಯು ವಿಕಲಚೇತನ ಮಾದರಿಯ ಪ್ರಮುಖ ಉದ್ದೇಶವಲ್ಲ

a. ವಿಕಲಚೇತನ ಮಾದರಿ ಮೌಲ್ಯ ತಟಸ್ಥವಾಗಿದೆ

b. ಮಾದರಿ ನೀತಿಗಳ ರಚನೆ ಮತ್ತು ಸೂಚ್ಯಾರ್ಥವನ್ನು ಮಾರ್ಗದರ್ಶನ ಮಾಡುತ್ತದೆ

c. ವಿಕಲಚೇತನ ಮಾದರಿಯು ಸಂಪತ್ತು ಮತ್ತು ಸಮರ್ಪಕತೆಯನ್ನು ಆಧರಿಸಿದೆ

d. **ಎ ಮತ್ತು ಬಿ**

21. ಯಾವ ಮಾದರಿಯ ವಿಕಲಚೇತನವನ್ನು ಅಲ್ಪಸಂಖ್ಯಾತ ಗುಂಪಿನ ವಿಕಲಚೇತನ ಮಾದರಿ ಎಂದು ಕರೆಯಲಾಗುತ್ತದೆ

a. ವಿಕಲಚೇತನ ನೈತಿಕ ಧಾರ್ಮಿಕ ಮಾದರಿ b. ವಿಕಲಚೇತನ ಸಾಂಸ್ಕೃತಿಕ ಮಾದರಿ

c. **ವಿಕಲಚೇತನ ಸಾಮಾಜಿಕ ಮಾದರಿ** d. ವಿಕಲಚೇತನ ಆರ್ಥಿಕ ಮಾದರಿ

22. ವಿಕಲಚೇತನ ಸಾಮಾಜಿಕ ಮಾದರಿ ಎಂಬ ಪದವನ್ನು ಯಾರು ಪ್ರಚಲಿತಕ್ಕೆ ತಂದರು

a. **ಮೈಕ್ ಆಲಿವರ್** b. ಪ್ಯಾಟ್ರಿಕ್ ಡೆವಿಲೀಜರ್ c. ಡಾ ಥಾಮಸ್ ಸ್ಟಾರ್ಸ್ d. ಓಲ್ಕಿನ್

23. ಅಸಾಧಾರಣ ಮಕ್ಕಳ ಬಗ್ಗೆ ಅತ್ಯುತ್ತಮ ವ್ಯಾಖ್ಯಾನ ನೀಡಿದ ಶಿಕ್ಷಣ ತಜ್ಞ

a. **ಎಸ್ ಎ ಕಿರ್ಕ್** b. ಎಸ್ ಹಾಲಿಂಗ್ ವರ್ಥ್ c. ಕೆ ಪಿ ಪಾಂಡೆ d. ಎಸ್ ಕೆ ನಂದ

24. ದೈಹಿಕ ಸವಾಲುಳ್ಳ ಮಕ್ಕಳ ವರ್ಗೀಕರಣಕ್ಕೆ ಸೇರದ ಮಕ್ಕಳು

a. ದೃಷ್ಟಿ ಸವಾಲುಳ್ಳ ಮಕ್ಕಳು b. ಶ್ರವಣ ಸವಾಲುಳ್ಳ ಮಕ್ಕಳು

c. **ಕಲಿಕಾ ಸವಾಲುಳ್ಳ ಮಕ್ಕಳು** d. ವಾಕ್ ಸವಾಲುಳ್ಳ ಮಕ್ಕಳು

25. ಬೆನ್ನುಹುರಿಯ ಅಶಕ್ತತೆಯನ್ನು ಹೊಂದಿರುವ ಮಕ್ಕಳನ್ನು ಯಾವ ವಿಭಾಗದ ಸವಾಲುಳ್ಳ ಮಕ್ಕಳ ಗುಂಪಿಗೆ ಸೇರಿಸಬಹುದು.

a. **ದೈಹಿಕ ಸವಾಲುಳ್ಳ ಮಕ್ಕಳು**
b. ಕಲಿಕಾ ಸವಾಲುಳ್ಳ ಮಕ್ಕಳು
c. ಮಾನಸಿಕ ಸವಾಲುಳ್ಳ ಮಕ್ಕಳು
d. ಸಂವೇಗಾತ್ಮಕ ಸವಾಲುಳ್ಳ ಮಕ್ಕಳು

26. ಈ ಕೆಳಗಿನವುಗಳಲ್ಲಿ ಯಾವುದು ಮೂಳೆ ಮತ್ತು ಕೀಲುಗಳಿಗೆ ಸಂಬಂಧಿಸಿದ ಸವಾಲು ಮಕ್ಕಳ ಲಕ್ಷಣವಲ್ಲ.

a. ಬೆನ್ನೆಲುಬು ಒಂದು ಪಾರ್ಶ್ವಕ್ಕೆ ಬಾಗಿರುವುದು
b. ಮೂಳೆ ಮತ್ತು ಕೀಲುಗಳ ನ್ಯೂನತೆ.
c. ದೇಹದ ಒಂದು ಭಾಗ ಒಂದೇ ಸಮನೆ ಚಲಿಸುತ್ತಿರುವುದು
d. **ಮಾನಸಿಕ ಅಸ್ಥಿರತೆ**

27. ದೃಷ್ಟಿ ಹೀನತೆಯನ್ನು ಹೊಂದಿರುವ ವಿದ್ಯಾರ್ಥಿಗಳಿಗೆ ಈ ಕೆಳಗಿನವುಗಳಲ್ಲಿ ಯಾವುದನ್ನು ಒದಗಿಸುವುದರಿಂದ ಪರಿಣಾಮಕಾರಿಯಾಗಿ ಕಲಿಯಲು ಮತ್ತು ಸಂವಹನ ಮಾಡಲು ಸಾಧ್ಯವಾಗುತ್ತದೆ.

a. ಸಂಕೇತ ಭಾಷಾ ತರಬೇತಿ
b. ಬ್ರೈಲ್ ಭಾಷಾ ತರಬೇತಿ
c. ಪಠ್ಯದಿಂದ ಭಾಷಣಕ್ಕೆ ಪರಿವರ್ತಿಸುವ ತಂತ್ರಾಂಶ
d. ಸ್ಪರ್ಶ ಮುದ್ರಿತ ವಸ್ತು

a. ಸಿ ಮಾತ್ರ
b. ಬಿ ಮತ್ತು ಡಿ ಮಾತ್ರ
c. ಎ ಮತ್ತು ಡಿ ಮಾತ್ರ
d. **ಬಿ, ಸಿ ಮತ್ತು ಡಿ ಮಾತ್ರ**

28. ದೃಷ್ಟಿ ಹೀನತೆಯು ಈ ಕೆಳಗಿನ ಯಾವ ಕಾರಣದಿಂದ ಉಂಟಾಗಬಹುದು

a. ಗರ್ಭಾಶಯದ ಸೋಂಕು,
b. ವಿಟಮಿನ್‌ಗಳ ಕೊರತೆ
c. ರೋಗ ಮತ್ತು ಗಾಯ
d. ಅಂತರ್ಗತ ಅಸ್ವಸ್ಥತೆಗಳು

a. **ಎ ಬಿಸಿ ಮತ್ತು ಡಿ ಎಲ್ಲವೂ**
b. ಬಿ ಸಿ ಮತ್ತು ಡಿ ಮಾತ್ರ
c. ಎ ಬಿ ಮತ್ತು ಡಿ ಮಾತ್ರ
d. ಬಿ ಸಿ ಮತ್ತು ಎ ಮಾತ್ರ

29. ದೃಷ್ಟಿಹೀನ ಮಕ್ಕಳ ದೈಹಿಕ ಮತ್ತು ನಡವಳಿಕೆಯ ಲಕ್ಷಣಗಳು ಇದನ್ನು ಒಳಗೊಂಡಿಲ್ಲ

a. ಅನಿಯಮಿತ ಕಣ್ಣಿನ ಚಲನೆ ಅಥವಾ ಕಣ್ಣುಮಿಟುಕಿಸುವುದು.
b. **ನಿಯಮಿತವಾಗಿ ಕಣ್ಣು ಮಿಟುಕಿಸುವುದು**
c. ಪುಸ್ತಕಗಳನ್ನು ಕಣ್ಣುಗಳ ಹತ್ತಿರ ಹಿಡಿದಿಟ್ಟುಕೊಳ್ಳುವುದು
d. ಒಂದೇ ಬಾರಿಗೆ ಹೆಚ್ಚು ಸಮಯ ಕುಳಿತು ಓದಲು ಅಥವಾ ಬರೆಯಲು ಸಾಧ್ಯವಿಲ್ಲದಿರುವುದು

30. ಜನ್ಮಜಾತ ಕುರುಡುತನ ಎಂದರೆ

a. ಜನನದ ನಂತರ ಐದನೇ ವಯಸ್ಸಿನಲ್ಲಿ ದೃಷ್ಟಿ ಕಳೆದುಕೊಳ್ಳುವುದು
b. **ಜನನದ ಸಂದರ್ಭದಲ್ಲಿ ಅಥವಾ ಜನನದ ಮೊದಲು ದೃಷ್ಟಿ ಕಳೆದುಕೊಳ್ಳುವುದು**
c. ಅಪಘಾತದ ಪರಿಣಾಮವಾಗಿ ದೃಷ್ಟಿ ಕಳೆದುಕೊಳ್ಳುವುದು
d. ರೋಗದ ಪರಿಣಾಮವಾಗಿ ದೃಷ್ಟಿ ಕಳೆದುಕೊಳ್ಳುವುದು

31. ದೃಷ್ಟಿ ಹೀನತೆ ಹೊಂದಿರುವ ವಿದ್ಯಾರ್ಥಿಗಳ ಶಿಕ್ಷಣ ಯಶಸ್ವಿಯಾಗಲು ಈ ಕೆಳಗಿನ ಯಾವ ಅಭ್ಯಾಸವು ಸಹಾಯಕವಾಗಿದೆ

a. ಸಣ್ಣ ಮುದ್ರಣ ಮತ್ತು ಚಿತ್ರಗಳಿರುವ ಪುಸ್ತಕಗಳ ಬಳಕೆ
b. **ಸ್ಪರ್ಶ ಮತ್ತು ಉಬ್ಬು ವಸ್ತುಗಳ ಬಳಕೆ**
c. ಶಿಕ್ಷಕರು ಮತ್ತು ಗೆಳೆಯರಿಂದ ಸಂಕೇತ ಭಾಷೆಯ ಬಳಕೆ
d. ಕಪ್ಪು ಹಲಗೆಯ ಮೇಲೆ ಲಿಖಿತ ಸೂಚನೆಗಳು

32. ಶ್ರವಣ ದೋಷವು ಇವುಗಳಲ್ಲಿ ಯಾವ ಅಂಶವನ್ನು ಸೂಚಿಸುತ್ತದೆ?

a. ಕೇಳುವ ಸಾಮರ್ಥ್ಯದ ಭಾಗಶಃ ನಷ್ಟ
b. ಕೇಳುವ ಸಾಮರ್ಥ್ಯದ ಸಂಪೂರ್ಣ ನಷ್ಟ
c. **ಎ ಮತ್ತು ಬಿ**
d. ಯಾವುದು ಅಲ್ಲ

33. ಶ್ರವಣದೋಷವನ್ನು ಅಳೆಯುವ ಘಟಕ ಯಾವುದು?

a. ಹರ್ಡ್ಸ್ b. ಆವರ್ತನ c. **ಡೆಸಿಬಲ್** d. ಕ್ಯಾಪಿಲಿಯರ್

34. ಆಟಿಸಂ ಒಂದು ಬಗೆಯ

a. ಸಾಮಾಜಿಕ ರೋಗ ಸಮಷ್ಠಿ
b. ವರ್ತನಾ ರೋಗ ಸಮಷ್ಠಿ
c. **ನರ ಸಂಬಂಧಿ ರೋಗ ಸಮಷ್ಠಿ**
d. ಭಾವನಾತ್ಮಕ ರೋಗ ಸಮಷ್ಠಿ

35. ಕೆಳಗಿನವುಗಳಲ್ಲಿ ಯಾವುದು ಮಾತಿನ ನಿರರ್ಗಳತೆಗೆ ಸಂಬಂಧಿಸಿಲ್ಲ

a. **ಮೊನೋಟೋನ್ ಧ್ವನಿ** b. ತೊದಲುವಿಕೆ

c. ಪದಗಳ ನಡುವೆ 'ಉಮ್' ಎಂದು ಹೇಳುವುದು d. ಉಗ್ಗುವಿಕೆ

36. ಭಾಷಾ ಅಸ್ವಸ್ಥತೆಯೊಂದಿರುವ ವಿದ್ಯಾರ್ಥಿಗಳು

a. **ಏನನ್ನು ಅರ್ಥೈಸುತ್ತಾರೆ ಎಂಬುದನ್ನು ತಿಳಿಯಲು ಕಷ್ಟವಾಗುತ್ತದೆ**

b. ಸರಿಯಾದ ಮಾತಿನ ಶಬ್ದಗಳನ್ನು ರೂಪಿಸಲು ಸಾಧ್ಯವಿಲ್ಲ

c. ಅರಿವಿನ ದುರ್ಬಲರಾಗಿರುತ್ತಾರೆ d. ನಿರರ್ಗಳವಾಗಿ ಓದಬಲ್ಲರು

37. ಸಾಮಾಜಿಕ ಸಂದರ್ಭದಲ್ಲಿ ನಾವು ಭಾಷೆಯನ್ನು ಹೇಗೆ ಬಳಸುತ್ತೇವೆ ಎಂಬುದನ್ನು ಹೀಗೆನ್ನುವರು

a. ಮಾರ್ಗಲಜಿ b. ಸಿಮ್ಯಾಂಟಿಕ್ಸ್

c. **ಪ್ರಾಗ್ಮ್ಯಾಟಿಕ್ಸ್** d. ಫೊನೋಟಿಕ್ಸ್

38. ಯಾವ ವಯಸ್ಸಿನವರಿಗೆ ಅಭಿವ್ಯಕ್ತಿ ಸಂಪೂರ್ಣವಾಗಿ ಅಭಿವೃದ್ಧಿ ಆಗಿರುವುದಿಲ್ಲ?

**a. 4** b. 8 c. 6 d. 5

39. ಪ್ರತಿಭಾನ್ವಿತ ಮಕ್ಕಳೊಂದಿಗೆ ವ್ಯವಹರಿಸುವ ವಿಶೇಷ ನಿಬಂಧನೆಗಳಲ್ಲಿ ಯಾವುದನ್ನು ಸೇರಿಸಲಾಗಿಲ್ಲ

a. ವೇಗ ವರ್ಧನೆ b. ಮರುಹೊಂದಾಣಿಕೆ ಅಥವಾ ಪುಷ್ಟೀಕರಣ

c. ಸಾಮರ್ಥ್ಯ ಗುಂಪುಗಾರಿಕೆ d. **ವಿಶೇಷ ವಿದ್ಯಾರ್ಥಿ ವೇತನಗಳು ಮತ್ತು ಪ್ರಶಸ್ತಿಗಳ ಯೋಜನೆಗಳು**

40. ಪ್ರತಿಭಾನ್ವಿತ ವಿದ್ಯಾರ್ಥಿಗಳು

a. **ತೀರ್ಪುಗಳಲ್ಲಿ ಸ್ವತಂತ್ರರು** b. ಶಿಕ್ಷಕರಿಂದ ಸ್ವತಂತ್ರರು

c. ಸ್ವಭಾವದಲ್ಲಿ ಅಂತರ್ಮುಖಿ d. ಅಗತ್ಯಗಳನ್ನು ಹೇಳಿಕೊಳ್ಳುವುದಿಲ್ಲ

41. ಪ್ರತಿಭಾನ್ವಿತ ಮಗುವಿನ ನಕಾರಾತ್ಮಕ ಗುಣಲಕ್ಷಣ ಇದಾಗಿದೆ

a. ಸ್ಪರ್ಧಾತ್ಮಕ ಪ್ರವೃತ್ತಿ

b. ಅಪಾಯವನ್ನು ತೆಗೆದುಕೊಳ್ಳುವ ಪ್ರವೃತ್ತಿ

c. ಸಾಧನೆ ಆಧರಿತ

d. **ಕೆಲವೊಮ್ಮೆ ಉತ್ಸಾಹ ಮತ್ತು ಬೋಧನೆಯ ಕಡೆಗೆ ಗಮನವನ್ನು ನೀಡುವುದಿಲ್ಲ**

42. ಪ್ರತಿಭಾನ್ವಿತ ಮಕ್ಕಳನ್ನು ಗುರುತಿಸುವ ವಿಧಾನ

a. ವೀಕ್ಷಣೆ b. ಗುಪ್ತಚರ ಪರೀಕ್ಷೆ c. ವ್ಯಕ್ತಿತ್ವ ಪರೀಕ್ಷೆ d. **ಮೇಲಿನ ಎಲ್ಲವೂ**

43. ಪ್ರತಿಭಾನ್ವಿತ ಮಗುವನ್ನು ಹೇಗೆ ವ್ಯಾಖ್ಯಾನಿಸಲಾಗಿದೆ

a. **ಐಕ್ಯೂ 140 ಅಥವಾ ಅದಕ್ಕಿಂತ ಹೆಚ್ಚಿನದಾಗಿದೆ**

b. ಸಂಗೀತ ಅಥವಾ ಸಾಮಾಜಿಕ ನಾಯಕತ್ವ ಮತ್ತು ಅಭಿವ್ಯಕ್ತಿಯ ಇತರ ಪ್ರಕಾರಗಳಲ್ಲಿ ಅವರ ಅಭಿನಯವೂ ಸ್ಥಿರವಾಗಿ ಗಮನಾರ್ಹವಾಗಿದೆ

c. ಯಾರ ಸಾಮರ್ಥ್ಯವು ಮೇಲಿನ ಎರಡು ಪರ್ಸೆಂಟ್ ಅಥವಾ ಮೂರು ಪರ್ಸೆಂಟ್ ಜನಸಂಖ್ಯೆಯ ವ್ಯಾಪ್ತಿಯಲ್ಲಿದೆ.

d. ತನ್ನ ವಯಸ್ಸಿನ ಇತರರಿಗಿಂತ ಹೆಚ್ಚು ಭಿನ್ನವಾಗಿರುವುದು

44. ನಿಧಾನವಾಗಿ ಕಲಿಯುವವರಿಗೆ ಸಮಾಲೋಚನೆ ಮತ್ತು ಮಾರ್ಗದರ್ಶನವನ್ನು ಒದಗಿಸುವಲ್ಲಿ ಸಾಮಾನ್ಯವಾಗಿ ಯಾವ ನಿಬಂಧನೆಯೂ ಹೆಚ್ಚು ಸೂಕ್ತವಾಗಿದೆ

a. ಪುಷ್ಠಿಕರಣ b. ವೇಗ ವರ್ಧನೆ

c. ಸ್ಪರ್ಧೆ d. **ಪರಿಹಾರ ಬೋಧನೆ**

45. ಈ ಕೆಳಗಿನವುಗಳಲ್ಲಿ ಯಾವ ಅಂಶವು ಮಾನಸಿಕ ಕುಂಠಿತಕ್ಕೆ ಸಾಮಾನ್ಯ ಕಾರಣವಾಗಿದೆ?

a. ತಾಯಿಯಲ್ಲಿ ಮಧುಮೇಹ b. ಗರ್ಭಾವಸ್ಥೆಯಲ್ಲಿ ಮಾನಸಿಕ ಸಮಸ್ಯೆಗಳು

c. ತಾಯಿಯಲ್ಲಿ ಕಾಮಾಲೆ d. **ತಾಯಿಯಲ್ಲಿ ಜರ್ಮನ್ ದಡಾರ**

46. ಬೌದ್ಧಿಕ ಅಸಾಮರ್ಥ್ಯ ಹೊಂದಿರುವ ವಿದ್ಯಾರ್ಥಿಗಳಿಗೆ ವೃತ್ತಿಪರ ತರಬೇತಿಯ ಪ್ರಾಥಮಿಕ ಗುರಿ

a. ಶೈಕ್ಷಣಿಕ ಸಾಧನೆಯನ್ನು ವೇಗಗೊಳಿಸುವುದು b. **ಸ್ಪರ್ಧಾತ್ಮಕ ಉದ್ಯೋಗಕ್ಕಾಗಿ ತಯಾರಿ ಮಾಡುವುದು**

c. ಆರೈಕೆದಾರರ ಮೇಲೆ ಅವಲಂಬನೆಯನ್ನು ಉತ್ತೇಜಿಸುವುದು d. ಪ್ರತ್ಯೇಕತೆಯನ್ನು ಉತ್ತೇಜಿಸುವುದು

47. ಯಾವ ಐಕ್ಯೂ ಶ್ರೇಣಿಯನ್ನು ತರಬೇತಿ ನೀಡಬಹುದಾದ ಬುದ್ಧಿಮಾಂದ್ಯ ಮಕ್ಕಳ ಐಕ್ಯೂ ಮಟ್ಟ ಎಂದು ಕರೆಯಲಾಗುತ್ತದೆ

a. 70–79 b. 50–69 c. **36–49** d. 35 ಮತ್ತು ಕೆಳಗೆ

48. ಕೆಳಗಿನವುಗಳಲ್ಲಿ ಯಾವುದು ಬುದ್ಧಿಮಾಂದ್ಯ ಮಗುವಿನ ಲಕ್ಷಣವಲ್ಲ?

a. ತಡವಾದ ಪ್ರತಿಕ್ರಿಯೆ b. ಸಾಮಾಜಿಕ ಬುದ್ಧಿವಂತಿಕೆಯ ಕೊರತೆ

c. ಅಭಿವೃದ್ಧಿಯ ಮೈಲಿಗಲ್ಲುಗಳಲ್ಲಿ ವಿಳಂಬ d. **ನೆನಪಿಡುವ ಸಾಮರ್ಥ್ಯ**

49. ಮಾನಸಿಕ ಕುಂಠಿತಕ್ಕೆ ಕಾರಣವಾಗುವ ಫೆನಿಲ್ಕೆಟೋನೂರಿಯಾ

a. **ಚಯಾಪಚಯ ಅಸ್ವಸ್ಥತೆ** b. ವ್ಯಕ್ತಿತ್ವ ಅಸ್ವಸ್ಥತೆ c. ಮಾನಸಿಕ ಅಸ್ವಸ್ಥತೆ d. ಮೇಲಿನ ಯಾವುದು ಅಲ್ಲ

50. ಈ ಕೆಳಗಿನ ಯಾವ ಹೇಳಿಕೆ ಸರಿಯಾಗಿಲ್ಲ?

a. ಯಾವುದೇ ಕಲೆಯಲ್ಲಿ ಸೃಜನಶೀಲತೆ ಸ್ವಂತಿಕೆ

b. **ಸೃಜನಶೀಲತೆಗೆ ಆಲೋಚನೆ ಅಗತ್ಯವಿಲ್ಲ**

c. ಸೃಜನಶೀಲತೆಯು ನಿರ್ವಹಿಸಿದ ಕೆಲಸದ ಹೊಸ ಪರಿಣಾಮವಾಗಿದೆ

d. ಸೃಜನಶೀಲತೆ ಸಾಮಾಜಿಕ ಅಥವಾ ಯಾವುದೇ ಗುಂಪಿಗೆ ಉಪಯುಕ್ತತೆಯನ್ನು ಹೊಂದಿರಬೇಕು

51. ಈ ಕೆಳಗಿನವುಗಳಲ್ಲಿ ಸೃಜನಶೀಲತೆಯನ್ನು ಪ್ರಾಥಮಿಕ ಹಂತದಲ್ಲಿ ಗುರುತಿಸುವ ಲಕ್ಷಣವಾಗಿದೆ

a. **ವಿಭಿನ್ನ ಚಿಂತನೆ** b. ದೈಹಿಕ ಚಟುವಟಿಕೆಗಳು c. ಅಜಾಗರೂಕತೆ d. ಕಡಿಮೆ ಗ್ರಹಿಕೆ

52. ಸೃಜನಶೀಲತೆಯನ್ನು ಈ ಕೆಳಗಿನ ಯಾವ ಪದದಿಂದ ಅರ್ಥೈಸಲಾಗಿದೆ?

a. ಉತ್ಪನ್ನ b. ಪ್ರಕ್ರಿಯೆ c. ನವೀನತೆ d. **ಮೇಲಿನ ಎಲ್ಲವೂ**

53. ಕೆಳಗಿನವುಗಳಲ್ಲಿ ಯಾವುದು ಸೃಜನಶೀಲತೆಯ ಪ್ರಕ್ರಿಯೆಯಲ್ಲಿ ಕಂಡುಬರುವ ಹಂತವಲ್ಲ

a. ಸುಪ್ತ ಚಿಂತನೆಯ ಹಂತ b. **ಸ್ಫೂರ್ತಿ** c. ಸಿದ್ದತೆ d. ಸಾಮಾನ್ಯೀಕರಣ

54. ಈ ಕೆಳಗಿನವುಗಳಲ್ಲಿ ಯಾವುದು ಅಪೂರ್ಣ ಸಾಧಕರ ಗುಣಲಕ್ಷಣವಲ?

a. ಉತ್ತಮ ಓದುವ ಕೌಶಲಗಳ ಕೊರತೆ b. ಶಾಲಾ ಚಟುವಟಿಕೆಗಳಲ್ಲಿ ಆಸಕ್ತಿ ಕೊರತೆ

c. ನಾಚಿಕೆ ಸ್ವಭಾವ ಮತ್ತು ಕೀಳರಿಮೆಯ ಮನೋಭಾವ d. **ಸಂವಹನ ಕೌಶಲ**

55. ಅಪೂರ್ಣ ಸಾಧಕರೆಂದರೆ

a. **ಸಹಜತೆಗಿಂತ ಕೆಳಮಟ್ಟದ ಶೈಕ್ಷಣಿಕ ಸಾಧನೆ** b. ಸಮಾಜ ವಿರೋಧಿ ನಡತೆ

c. ಕೌಶಲ್ಯಗಳ ಕೊರತೆ d. ಮೇಲಿನ ಎಲ್ಲವೂ

56. ಅರಿವಿನ ಕೌಶಲಗಳಾದ ಗಮನ, ಸ್ಮರಣ ಶಕ್ತಿ ಮತ್ತು ಸಮಸ್ಯೆ ಪರಿಹಾರ ಇತ್ಯಾದಿಗಳು ಇದಕ್ಕೆ ಸಂಬಂಧಿಸಿದೆ.

a. ವ್ಯಕ್ತಿಯ ಭಾವನಾತ್ಮಕ ಸ್ಥಿತಿಯಿಂದ ಪ್ರಭಾವಿತವಾಗಿಲ್ಲ b. ಧನಾತ್ಮಕ ಭಾವನೆಗಳಿಂದ ಋಣಾತ್ಮಕ ಪ್ರಭಾವ

c. ನಕಾರಾತ್ಮಕ ಭಾವನೆಗಳಿಂದ ಧನಾತ್ಮಕವಾಗಿ ಪ್ರಭಾವಿತವಾಗಿರುತ್ತದೆ

d. **ವ್ಯಕ್ತಿಯ ಭಾವನಾತ್ಮಕ ಸ್ಥಿತಿಯಿಂದ ಗಮನಾರ್ಹವಾಗಿ ಪ್ರಭಾವಿತವಾಗಿರುತ್ತದೆ**

57. ಕೆಳಗಿನ ಯಾವ ಹೇಳಿಕೆಯು ಭಾವನೆ ಮತ್ತು ಅರಿವಿನ ಬಗ್ಗೆ ಸರಿಯಾಗಿದೆ?

a. ಹೆಚ್ಚಿನ ಒತ್ತಡವು ಕಲಿಕೆಯನ್ನು ಪ್ರತಿಬಂಧಿಸುತ್ತದೆ b. ಆಸಕ್ತಿಯು ಕಲಿಕೆಯನ್ನು ತಡೆಯುತ್ತದೆ

c. **ಹೆಚ್ಚಿನ ಒತ್ತಡವು ಕಲಿಕೆಯನ್ನು ಉತ್ತೇಜಿಸುತ್ತದೆ** d. ನಿರಾಸಕ್ತಿ ಕಲಿಕೆಯನ್ನು ಉತ್ತೇಜಿಸುತ್ತದೆ

58. ಬಾಲಾಪರಾಧಿ ಎಂದು ಯಾವ ವಯಸ್ಸಿನ ವರ್ಗವನ್ನು ವ್ಯಾಖ್ಯಾನಿಸಲಾಗಿದೆ?

a. 18 ವರ್ಷಕ್ಕಿಂತ ಹೆಚ್ಚು b. **18 ವರ್ಷದ ಕೆಳಗೆ** c. 16 ವರ್ಷಕ್ಕಿಂತ ಹೆಚ್ಚು d. 25 ವರ್ಷದವರು

59. ಬಾಲಾಪರಾದವು ಸಾಮಾನ್ಯವಾಗಿ ಇದರೊಂದಿಗೆ ಸಂಬಂಧಿಸಿದೆ?

a. ಮನೆಯ ಕಲುಷಿತ ವಾತಾವರಣ b. ಸೂಕ್ತವಲ್ಲದ ಶಿಸ್ತು

c. ಕುಟುಂಬದ ಅಪಶ್ರುತಿ d. **ಮೇಲಿನ ಎಲ್ಲಾ**

60. ಬಾಲಾಪರಾಧಿ ನ್ಯಾಯದಲ್ಲಿ ಎಷ್ಟು ಸಿದ್ಧಾಂತಗಳಿವೆ

a. ಒಂದು b. **ಮೂರು** c. ಎಂಟು d. ನಾಲ್ಕು

61. ಡಿಸ್ಲೆಕ್ಸಿಯಾ ಈ ಸಾಮರ್ಥ್ಯದ ಕಲಿಕಾ ನ್ಯೂನತೆ

a. ಬರವಣಿಗೆ b. ಓದುವುದು c. ಉಚ್ಚಾರಣೆ d. ದೃಷ್ಟೀಕರಿಸುವುದು

62. ಕಲಿಕೆಯಲ್ಲಿ ಹಿಂದುಳಿಯುವಿಕೆಯು ಕೆಳಗಿನ ಒಂದನ್ನು ಬಿಟ್ಟು ಯಾವುದರಿಂದಲಾದರು ಉಂಟಾಗಬಹುದು

a. ಶಿಕ್ಷಕರ ಬೋಧನೆ b. ಮಂದ ಬುದ್ಧಿ

c. ಪ್ರಸವಪೂರ್ವ ಹಂತದಲ್ಲಿ ಮದ್ಯಪಾನ ಮಾಡುವುದು d. ಶೈಸವಾವ್ಯಸ್ಥೆಯಲ್ಲಿ ಮಾನಸಿಕ ಕಾಯಿಲೆ

63. ಕಲಿಕಾ ದೌರ್ಬಲ್ಯಕ್ಕೆ ಕಾರಣಗಳು

a. ದೈಹಿಕ ಅಂಶಗಳು b. ಪರಿಸರದ ಅಂಶಗಳು

c. ಮನೋವೈಜ್ಞಾನಿಕ ಅಂಶಗಳು d. ಈ ಮೇಲಿನ ಎಲ್ಲವೂ

64. ಈ ಕೆಳಗಿನವುಗಳಲ್ಲಿ ಯಾವುದು ಭಾಷಾ ದೌರ್ಬಲ್ಯವನ್ನು ಸೂಚಿಸುತ್ತದೆ

a. ಅಕ್ಷರದ ಪುನರಾವರ್ತನೆ b. ಪದೇ ಪದೇ ಕೇಳುವಿಕೆ

c. ತೀರಾ ಹತ್ತಿರದಿಂದ ಓದುವುದು d. ತೀರ ದೂರದಿಂದ ಓದುವುದು

65. ಭಾಷಾ ದೌರ್ಬಲ್ಯವನ್ನು ಹೋಗಲಾಡಿಸಲು ಸಲಹೆ ನೀಡಿದ ಭಾಷಾ ತಜ್ಞ

a. ವಾನ್ ರಿಪ್ಪನ್ b. ಕಾರ್ಕ್ c. ಹಡ್ಸನ್ d. ವೀರಪ್ಪ

66. ಭಾಷಾ ದೌರ್ಬಲ್ಯ ಹೋಗಲಾಡಿಸಲು ಯಾವ ಚಟುವಟಿಕೆ ಸೂಕ್ತವಾಗಿದೆ?

a. ಬಾಯ್ದೆರೆ ಚಟುವಟಿಕೆ b. ಕ್ರೀಡಾ ಚಟುವಟಿಕೆ

c. ಆಲಿಸುವ ಚಟುವಟಿಕೆ d. ಪುನರಾವರ್ತನೆ ನಿಲ್ಲಿಸುವುದು

67. ಭಾಷಾ ದೌರ್ಬಲ್ಯವುಳ್ಳ ಮಕ್ಕಳು ಯಾವ ವಿಷಯದಲ್ಲಿ ತೊಂದರೆ ಅನುಭವಿಸುತ್ತಾರೆ?

a. ವಿಷಯ ಅಭಿವ್ಯಕ್ತಿ b. ಗ್ರಹಿಕೆ c. ಬರವಣಿಗೆ d. ದೃಷ್ಟಿಸುವಿಕೆ

68. ವಾನ್ ರಿಪ್ಪನ್ ಪ್ರಕಾರ ಭಾಷಾ ದೌರ್ಬಲ್ಯ ಹೋಗಲಾಡಿಸಲು ಯಾವ ರೀತಿಯ ಪರಿಸರ ಹಿತಕರವಾಗಿದೆ?

a. ಕೌಟುಂಬಿಕ b. ಗೆಳೆಯರು c. ಸಮಾರಂಭ d. ಎಲ್ಲವೂ

69. ಸ್ವಲೀನತೆಯನ್ನು ಇದರೊಂದಿಗೆ ಗುಣಪಡಿಸಬಹುದು

a. ವರ್ತನೆಯ ಚಿಕಿತ್ಸೆ b. ಔಷಧಿಗಳು c. ಮೆದುಳಿನಶಸ್ತ್ರ ಚಿಕಿತ್ಸೆ d. ಮೇಲಿನ ಯಾವುದು ಅಲ್ಲ

70. ಯಾವ ಶೈಕ್ಷಣಿಕ ಹಂತದಲ್ಲಿ ಸ್ವಲೀನತೆ ಹೊಂದಿರುವ ವ್ಯಕ್ತಿಗಳನ್ನು ಮೊದಲು ಗುರುತಿಸಲಾಗುತ್ತದೆ

a. ಮಾಧ್ಯಮಿಕ ಶಾಲೆ b. ಪ್ರೌಢಶಾಲೆ c. ಪ್ರಾಥಮಿಕ ಶಾಲೆ d. ಶಾಲಾ ಪೂರ್ವ

70. ಹಿಂದುಳಿದ ಮಕ್ಕಳಿಗೆ ಇರುವ ಪರಿಣಾಮಕಾರಿ ಪರಿಹಾರ

a. ಪಠ್ಯಕ್ರಮದ ಬದಲಾವಣೆ b. ಬೋಧನಾ ವಿಧಾನದ ಬದಲಾವಣೆ

c. ತರಗತಿಯ ಗಾತ್ರವನ್ನು ಕಡಿಮೆಗೊಳಿಸುವುದು d. ವೈಯಕ್ತಿಕ ಗಮನ ನೀಡುವುದು.

71. ಸೆರೆಬ್ರಲ್ ಪಾಲ್ಸಿಯನ್ನು ಮೊದಲು ವಿವರಿಸಿದವರು

a. ವಿಲಿಯಂ ಹಂಟರ್ b. ವಿಲಿಯಂ ಲಿಟಲ್ c. ವಿಲಿಯಂ ಫಿಷರ್ d. ವಿಲಿಯಂ ವೇಲ್ಸ್

72. ಸೆರೆಬ್ರಲ್ ಪಾಲ್ಸಿ ಹೊಂದಿರುವ ಮಗುವನ್ನು ಪತ್ತೆ ಹಚ್ಚಲು ವೈದ್ಯರು ಎಷ್ಟು ಸಮಯ ತೆಗೆದುಕೊಳ್ಳುತ್ತಾರೆ ?

a. ಮಗು ಹುಟ್ಟಿದ ಒಂದೆರಡು ಗಂಟೆ ನಂತರ b. ಮಗು ಹುಟ್ಟಿದ ಆರು ತಿಂಗಳ ನಂತರ

c. ಮಗು ಹುಟ್ಟಿದ ಒಂದರಿಂದ ಎರಡು ವರ್ಷ ನಂತರ d. ಮಗು ಹುಟ್ಟಿದ ಎಂಟು ವರ್ಷ ನಂತರ

73. ಯಾವ ಲಿಂಗವು ಹೆಚ್ಚಿನ ಶೇಕಡವಾರು ಸೆರೆಬ್ರಲ್ ಪಾಲ್ಸಿ ತೊಂದರೆಯಿಂದ ಬಳಲುತ್ತಾರೆ?

a. ಗಂಡು b. ಹೆಣ್ಣು c. ಇಬ್ಬರೂ d. ಯಾವುದು ಇಲ್ಲ

74. ಹೆಚ್ಚು ಸೆರೆಬ್ರಲಿ ಪಾಲಿಸಿ ಹೊಂದಿರುವ ಜನರು ಇದರಿಂದ ಬಳಲುತ್ತಿದ್ದಾರೆ

a. ಬೊಜ್ಜು b. ಮಧುಮೇಹ c. ಅಪೌಷ್ಟಿಕತೆ ಮತ್ತು ನ್ಯುಮೋನಿಯಾ d. ಸ್ನಾಯು ಸೆಳೆತ

75. ಡೌನ್ ಸಿಂಡ್ರೋಮ್‌ನ ಮತ್ತೊಂದು ಹೆಸರು

a. ಟ್ರೈಸೋಮಿ 20 b. ಟ್ರೈಸೋಮಿ 30 c. **ಟ್ರೈಸೋಮಿ 21** d. ಟ್ರೈಸೋಮಿ 23

76. ಸಾಮಾನ್ಯವಾಗಿ ಡೌನ್ ಸಿಂಡ್ರೋಮ್ ಹೊಂದಿರುವ ವ್ಯಕ್ತಿಯ ಐಕ್ಯೂ ಪ್ರಮಾಣ

a. 20 –30 b. **40 –50** c. 60– 70 d. 80 –90

77. ಡೌನ್ ಸಿಂಡ್ರೋಮ್ ಹೊಂದಿರುವ ವ್ಯಕ್ತಿಯಲ್ಲಿ ಈ ಲಕ್ಷಣ ಕಂಡುಬರುವುದಿಲ್ಲ

a. **ಹೆಚ್ಚಿನ ಸ್ನಾಯು ಟೋನ್** b. ಸಣ್ಣ ನಿಲುವು

c. ಮೇಲ್ಮುಖವಾಗಿ ಓರೆಯಾದ ಕಣ್ಣು, d. ಚಿಕ್ಕ ಕುತ್ತಿಗೆ

78. ಡೌನ್ ಸಿಂಡ್ರೋಮ್ ಹೊಂದಿರುವ ಮಗು ಹೊಂದಿರುವ ಕ್ರೋಮೋಸೋಮ್‌ಗಳ ಸಂಖ್ಯೆ

a. 45 b. 46 c. **47** d. 48

79. ಡೌನ್ ಸಿಂಡ್ರೋಮ್ ಹೊಂದಿರುವ ಮಕ್ಕಳು ತಮ್ಮ ನಾಲಿಗೆಯನ್ನು ಹೊರ ಚಾಚಿಕೊಳ್ಳಲು ಕಾರಣವೇನು ?

a. **ಸರಾಸರಿ ನಾಲಿಗೆಗಿಂತ ದೊಡ್ಡದು ಮತ್ತು ಸರಾಸರಿ ಬಾಯಿಗಿಂತ ಚಿಕ್ಕದು**

b. ಸರಾಸರಿ ತುಟಿಗಳಿಗಿಂತ ದೊಡ್ಡದಾಗಿದೆ ಮತ್ತು ಸರಾಸರಿ ಹಲ್ಲುಗಳಿಗಿಂತ ಚಿಕ್ಕದಾಗಿದೆ

c. ಸರಾಸರಿ ಮುಖಕ್ಕಿಂತ ದೊಡ್ಡದಾಗಿದೆ ಮತ್ತು ಸರಾಸರಿ ಕೆನ್ನೆಗಿಂತ ಚಿಕ್ಕದಾಗಿದೆ

d. ಮೇಲಿನ ಎಲ್ಲವೂ

80. ADHD ನ್ಯೂನತೆಯನ್ನು ಹೊಂದಿರುವ ಮಕ್ಕಳು ಈ ಕೆಳಗಿನ ಯಾವ ಮೆದುಳಿನ ಪ್ರದೇಶದಲ್ಲಿ ಕೊರತೆಯನ್ನು ಹೊಂದಿರುತ್ತಾರೆ

a. ಗ್ರಹಿಕೆ b. ಚಲನ ಕಾರ್ಯನಿರ್ವಹಣೆ c. **ಕಾರ್ಯನಿರ್ವಾಹಕ ಕಾರ್ಯನಿರ್ವಹಣೆ** d. ಸ್ಮೃತಿ

81. ಯಾವುದು ADHD ಲಕ್ಷಣವಲ್ಲ

a. ಅಜಾಗರೂಕತೆ b. ಹಠಾತ್ ಪ್ರವೃತ್ತಿ c. ಚಡಪಡಿಸುವಿಕೆ d. **ತೊದಲುವಿಕೆ**

82. ಮಕ್ಕಳು ಅಥವಾ ವಯಸ್ಕರಲ್ಲಿ ADHD ಚಿಕಿತ್ಸೆಗಾಗಿ ಯಾವ ವರ್ಗದ ಔಷಧಿಗಳನ್ನು ಬಳಸಲಾಗುವುದಿಲ್ಲ

a. ಸೈಕೋಸ್ಟಿಮ್ಯುಲಂಡ್ ಔಷಧಿಗಳು b. ಖಿನ್ನತೆ ಶಮನಕಾರಿ ಔಷಧಿಗಳು

c. **ಆಂಟಿ ಸೈಕೋಟಿಕ್ ಔಷಧಿಗಳು** d. ಬಿ ಮತ್ತು ಸಿ

83. ಸಂವಿಧಾನವು ಇಲ್ಲಿಯವರೆಗೆ ಎಷ್ಟು ಪರಿಶಿಷ್ಟ ಪಂಗಡವನ್ನು ಗುರುತಿಸಿದೆ ?

a. **700** b. 735 c. 746 d. 750

84. 2014ರಲ್ಲಿ ಸರ್ಕಾರವು ಯಾವ ಧರ್ಮವನ್ನು ಅಲ್ಪಸಂಖ್ಯಾತ ಗುಂಪಿಗೆ ಸೇರಿಸಿದೆ

a. ಮುಸ್ಲಿಂ b. ಕ್ರಿಶ್ಚಿಯನ್ c. ಮರಾಠಿ d. **ಜೈನ್**

85. ಪ್ರತಿಭಾವಂತ ಮಗುವನ್ನು ಈ ಕೆಳಗಿನ ಯಾವ ಪರಿಭಾಷೆಯಲ್ಲಿ ನಿರ್ಣಯಿಸಲಾಗುವುದಿಲ್ಲ

a. ಸ್ವಂತಿಕೆ b. ನವ್ಯತೆ c. **ನಿರರ್ಗಳತೆ** d. ಬೌದ್ಧಿಕ ಶ್ರೇಷ್ಠತೆ

86. ಭಾವನಾತ್ಮಕ ಪ್ರಕ್ರಿಯೆಗಳು

a. **ತಾತ್ಕಾಲಿಕವಾಗಿರುತ್ತದೆ** b. ಶಾಶ್ವತವಾಗಿರುತ್ತದೆ

c. ವೈವಿಧ್ಯಮಯವಾಗಿರುತ್ತದೆ d. ನಾವಿನ್ಯತೆಯಿಂದ ಕೂಡಿರುತ್ತದೆ

87. ಸೃಜನಶೀಲ ವ್ಯಕ್ತಿಯು

a. ಅಪಾಯವನ್ನು ಎದುರಿಸುವವನು b. ಶಿಕ್ಷಕರಿಗೆ ಪ್ರೀತಿ ಪಾತ್ರರಾಗಿರುವುದಿಲ್ಲ

c. ಹಾಸ್ಯ ಪ್ರಜ್ಞೆಯನ್ನು ಹೊಂದಿರುವವನು d. **ಈ ಮೇಲಿನ ಎಲ್ಲವೂ**

88. ಮಾನಸಿಕ ಸವಾಲುಳ್ಳ ಮಕ್ಕಳ ವರ್ಗೀಕರಣದಲ್ಲಿ ಈ ಕೆಳಗಿನ ಯಾವ ವಿಭಾಗದ ಮಕ್ಕಳು ಸೇರುವುದಿಲ್ಲ

a. ಶಿಕ್ಷಣಾರ್ಹ ಮಾನಸಿಕ ಸವಾಲುಳ್ಳ ಮಕ್ಕಳು b. ತರಬೇತಿ ನೀಡಬಹುದಾದ ಮಾನಸಿಕ ಸವಾಲುಳ್ಳ ಮಕ್ಕಳು

c. ಆಶ್ರಿತ ಮಾನಸಿಕ ಸವಾಲುಳ್ಳ ಮಕ್ಕಳು d. **ನಿಧಾನವಾಗಿ ಕಲಿಯುವ ಮಕ್ಕಳು**

89. ಮಾನವರಲ್ಲಿ ಸಾರ್ವತ್ರಿಕವಾದ ವೈಯಕ್ತಿಕಭಿನ್ನತೆಯನ್ನು ಮೊದಲಿಗೆ ಗುರುತಿಸಿದವರು.

ಎ) **ಪ್ಲೇಟೋ** ಬಿ) ಜೀನ್ ಪಿಯಾಜೆ ಸಿ) ಅರಿಸ್ಟಾಟಲ್ ಡಿ) ಟಿಚ್ನರ್

90. ವ್ಯಕ್ತಿಗಳಲ್ಲಿ ಕಂಡುಬರುವ ಕ್ರಿಯಾತ್ಮಕ ಅಭಿವ್ಯಕ್ತಿ, ವಿವೇಚನಾಶಕ್ತಿ, ಸೃಜನಶೀಲತೆ, ಗ್ರಹಣಶಕ್ತಿ ಮುಂತಾದವುಗಳು ಈ ಭಿನ್ನತೆಗೆ ಸೇರಿವೆ.

ಎ) ಸಂವೇಗಾತ್ಮಕ ಭಿನ್ನತೆಗಳು **ಬಿ) ಮಾನಸಿಕ ಭಿನ್ನತೆಗಳು** ಸಿ) ದೈಹಿಕ ಭಿನ್ನತೆಗಳು ಡಿ) ಸಾಮಾಜಿಕ ಭಿನ್ನತೆಗಳು

91. ಲಿಂಗತ್ವವು ಒಂದು

ಎ) ಜೈವಿಕ ಪರಿಕಲ್ಪನೆ ಬಿ) ಮಾನಸಿಕ ಪರಿಕಲ್ಪನೆ ಸಿ) ಭಾವನಾತ್ಮಕ ಪರಿಕಲ್ಪನೆ **ಡಿ) ಸಾಮಾಜಿಕ ಪರಿಕಲ್ಪನೆ**

92. ಗಂಡು ಅಥವಾ ಹೆಣ್ಣು ಯಾವುದಾದರೂ ಒಂದು ಲಿಂಗಕ್ಕೆ ಕೊಡುವ ಆಧ್ಯತೆ.

ಎ) ಲಿಂಗದ ಅರಿವು **ಬಿ) ಲಿಂಗ ತಾರತಮ್ಯ** ಸಿ) ಲಿಂಗ ಅಸ್ಥಿರತೆ ಡಿ) ಲಿಂಗ ಸಮಾನತೆ

93. ವಿದ್ಯಾರ್ಥಿ ಏನನ್ನು ಕಲಿಕಯಬೇಕು ಮತ್ತು ಯಾವ ಮಟ್ಟದಲ್ಲಿ ಕಲಿಯಬೇಕು ಎಂಬುದನ್ನು ಸ್ಪಷ್ಟವಾಗಿ ನಿರೂಪಿಸುವ ಕಲಿಕಾ ಮಾದರಿ.

ಎ) ಅನ್ವೇಷಣಾ ಕಲಿಕೆ ಬಿ) ವೀಕ್ಷಣಾ ಕಲಿಕೆ ಸಿ) ಅರ್ಥಪೂರ್ಣ ಸ್ವೀಕಾರ ಕಲಿಕೆ **ಡಿ) ಪ್ರಭುತ್ವ ಕಲಿಕೆ**

94. ಕಲಿಕೆಯ ಕ್ಷೇತ್ರಗಳಲ್ಲಿ ಸಮಾನ ಪ್ರಾತಿನಿಧ್ಯ ಮತ್ತು ಭಾಗವಹಿಸುವಿಕೆಯನ್ನು ಖಚಿತಪಡಿಸಿಕೊಳ್ಳಲು ಸಂಸ್ಥೆಯೊಳಗೆ ಎಲ್ಲಾ ಹಂತಗಳಲ್ಲಿ ಸಮ ಸಂಖ್ಯೆಯ ಪುರುಷರು ಹಾಗೂ ಮಹಿಳೆಯರನ್ನು ಹೊಂದಿರುವುದು.

ಎ) ಸಬಲೀಕರಣ ಬಿ) ಲಿಂಗ ಸಮಾನತೆ **ಸಿ) ಲಿಂಗ ಸಮತೋಲನ** ಡಿ) ಲಿಂಗತ್ವ ಪಾತ್ರ

95. ಮಹಿಳೆಯರ ಮೇಲೆ ಪುರುಷರ ದೈಹಿಕ, ಸಾಮಾಜಿಕ ಮತ್ತು ಆರ್ಥಿಕ ಶಕ್ತಿಯನ್ನು ಸಾಂಸ್ಥಿಕಗೊಳಿಸುವ ಸಾಮಾಜಿಕ ರಚನೆ.

ಎ) ಲಿಂಗ ತಾರತಮ್ಯ ಬಿ) ಪುರುಷತ್ವ **ಸಿ) ಪಿತೃ ಪ್ರಭುತ್ವ** ಡಿ) ಸ್ತ್ರೀತ್ವ

96. ಸಮಸ್ಯಾತ್ಮಕ ಮಗುವೊಂದನ್ನು ಆಳವಾಗಿ ವಿಶ್ಲೇಷಿಸಲು ಅತ್ಯಂತ ಸೂಕ್ತ ವಿಧಾನ

ಎ) ಅಂತರಾವಲೋಕನ ಬಿ) ಚಿಕಿತ್ಸಾ ವಿಧಾನ

ಸಿ) ಪ್ರಾಯೋಗಿಕ ವಿಧಾನ **ಡಿ) ವ್ಯಕ್ತಿ ಅಧ್ಯಯನ**

97. ವ್ಯಕ್ತಿಗಳಲ್ಲಿ ವೈಯಕ್ತಿಕ ವ್ಯತ್ಯಾಸಗಳನ್ನು ನಿರ್ಧರಿಸುವ ಅಂಶಗಳು ಇದಕ್ಕೆ ಸಂಬಂಧಿಸಿವೆ.

ಎ) ಪರಿಸರದೊಂದಿಗಿನ ಅವರ ಸಂವಹನ ಬಿ) ಅನುವಂಶೀಯ ವ್ಯತ್ಯಾಸಗಳು

ಸಿ) ಅನುವಂಶೀಯತೆ ಮತ್ತು ಪರಿಸರ ಎರಡರಲ್ಲಿಯೂ ವ್ಯತ್ಯಾಸಗಳು

**ಡಿ) ಅನುವಂಶೀಯತೆ ಮತ್ತು ಪರಿಸರದ ನಡುವಿನ ಪರಸ್ಪರ ಕ್ರಿಯೆ.**

98. ಪಿಯಾಜೆಯ ಜ್ಞಾನಾತ್ಮಕ ಸಿದ್ಧಾಂತದ ಪ್ರಕಾರ ಅಮೂರ್ತ ಚಿಂತನೆಯು ಈ ಹಂತದಲ್ಲಿ ವಿಕಸನಗೊಳ್ಳುತ್ತದೆ.

ಎ) ಕಾರ್ಯಪೂರ್ವ ಹಂತ ಬಿ) ಸಂವೇದನಾ ಗತಿಶೀಲ ಹಂತ

ಸಿ) ಮೂರ್ತ ಕಾರ್ಯಗಳ ಹಂತ **ಡಿ) ಔಪಚಾರಿಕ ಕಾರ್ಯಗಳ ಹಂತ**

99. ಕಲಿಕೆಯ ಅತ್ಯವಶ್ಯಕ ಅಂಶ

ಎ) ಬೋಧನಾ ವಿಧಾನಗಳು **ಬಿ) ಕಲಿಯುವವನ ಸಿದ್ಧತೆ**

ಸಿ) ಕಲಿಕಾ ಸನ್ನಿವೇಶ ಡಿ) ಶಿಕ್ಷಕನ ನೈಪುಣ್ಯತೆ

100. ಉತ್ತಮ 'ಸ್ಮೃತಿ' ಶಕ್ತಿ ಎಂದರೆ

ಎ) ನಮ್ಮ ಎಲ್ಲಾ ಪೂರ್ವಾನುಭಗಳನ್ನು ಜ್ಞಾಪಿಸಿಕೊಳ್ಳುವ ಸಾಮರ್ಥ್ಯ

ಬಿ) ಕಲಿತ ಎಲ್ಲವನ್ನು ಧಾರಣೆ ಮಾಡಿಕೊಳ್ಳುವ ಸಾಮರ್ಥ್ಯ

**ಸಿ) ನಾವು ಪಡೆದ ಅನುಭವಗಳನ್ನು ಸಂಗ್ರಹ ಮಾಡಿಕೊಳ್ಳುವ ಮತ್ತು ಕೆಲವು ಕಾಲದ ನಂತರ ಅವುಗಳನ್ನು ನಮಗೆ ಬೇಕಾದಾಗ ಪುನಃ ಸ್ಮರಣೆ ಮಾಡುವ ಸಾಮರ್ಥ್ಯ**

ಡಿ) ವಸ್ತುಗಳನ್ನು ಗುರುತಿಸುವ ಸಾಮರ್ಥ್ಯ

101. ಗಂಡು ಮತ್ತು ಹೆಣ್ಣು ಎಂಬುದಕ್ಕೆ ಸಂಬಂಧಿಸಿದ ಸಮಾಜದ ನಿರೀಕ್ಷೆಗಳನ್ನು ಹೀಗೆ ಕರೆಯುತ್ತಾರೆ.

ಎ) ಲಿಂಗತ್ವದ ಪಡಿಯಚ್ಚು **ಬಿ) ಲಿಂಗತ್ವದ ಪಾತ್ರಗಳು**

ಸಿ) ಲಿಂಗತ್ವದ ಸ್ಥಿರತೆ ಡಿ) ಲಿಂಗತ್ವ ತಾರತಮ್ಯ

102. ನಾವು ಮಾತನಾಡುವ ಭಾಷೆ, ಬಳಸುವ ಸಂವಹನ ತಂತ್ರಗಳು ಯಾವ ರೀತಿಯ ಕಲಿಕೆಯ ಫಲಿತ.

ಎ) ಪರಿಕಲ್ಪನಾ ಕಲಿಕೆ **ಬಿ) ಶಾಬ್ದಿಕ ಕಲಿಕೆ** ಸಿ) ತತ್ವಗಳ ಕಲಿಕೆ ಡಿ) ಸಮಸ್ಯಾ ಪರಿಹಾರ ಕಲಿಕೆ

103. ಬ್ರೂನರ್ ರವರ ಕಲಿಕಾ ವಿಧಾನದ ಪ್ರಕಾರ ಅನುಭವಗಳನ್ನು ಪ್ರತಿನಿಧಿಸುವ ವಿಧಾನಗಳು
ಎ) **ಕ್ರಿಯಾತ್ಮಕ, ಬಿಂಬಾತ್ಮಕ, ಸಾಂಕೇತಿಕ** ಬಿ) ಕಲ್ಪನಾತ್ಮಕ, ವ್ಯವಸ್ಥಿತ, ಆದರ್ಶೀಕರಣ
ಸಿ) ಸಮಸ್ಯಾ ಪರಿಹಾರ, ಪರಿಕಲ್ಪನಾತ್ಮಕ, ಅನುಕ್ರಿಯಾ
ಡಿ) ಶಾಬ್ದಿಕ ಸಹಚರ್ಯ, ನಿಯಮ ಸಿದ್ಧಾಂತ, ಮೂರ್ತೀಕರಿಸುವಿಕೆ

104. ಪಿಯಾಜೆಯವರ ಪ್ರಕಾರ ಸ್ಕೀಮಾ ಎಂದರೆ.
ಎ) ಆಲೋಚನೆಗಳಿಂದ ಮಾರ್ಗದರ್ಶಿತವಾದ ಕ್ರಿಯಾನುಕ್ರಮ
ಬಿ) ಅನುಭವಗಳಿಂದ ಮಾರ್ಗದರ್ಶಿತವಾದ ಆಲೋಚನಾ ಕ್ರಮ
ಸಿ) ಮನೋಧೋರಣೆಗಳಿಂದ ಮಾರ್ಗದರ್ಶಿತವಾದ ಭಾವನಾಕ್ರಮ
**ಡಿ) ಉದ್ದೀಪನಗಳ ಪ್ರಭಾವಕ್ಕೊಳಗಾದ ಕ್ರಿಯಾನುಕ್ರಮ**

105. ಕಲಿಕೆಯ ವಕ್ರರೇಖೆಯು ಏನನ್ನು ತಿಳಿಸುತ್ತದೆ?
ಎ) ಕಲಿಕೆಯು ಧನಾತ್ಮಕ ಅಥವಾ ಋಣಾತ್ಮಕವಾಗಿದೆ ಎಂದು
ಬಿ) ನಿರ್ದಿಷ್ಟ ಅವಧಿಯಲ್ಲಿ ಕಲಿಕಾರ್ಥಿ ಎಷ್ಟನ್ನು ಮರೆತಿದ್ದಾನೆ ಎಂದು
ಸಿ) ಕಲಿಯುವ ಸಾಮರ್ಥ್ಯವನ್ನು **ಡಿ) ಕಲಿಕೆಯ ಪ್ರಗತಿಯ ವೇಗ ಮತ್ತು ಅದರಲ್ಲಿ ಆಗುವ ಬದಲಾವಣೆಗಳನ್ನು**

106. ಪಿಯಾಜೆಯವರ ಕಲಿಕಾ ಸಿದ್ಧಾಂತದ ಪ್ರಕಾರ ಕಾರ್ಯಪೂರ್ವ ಹಂತದಲ್ಲಿನ ಮಕ್ಕಳು
ಎ) ಸಂವೇದನೆಯ ಮುಖಾಂತರ ಪರಿಸರವನ್ನು ಅನ್ವೇಷಿಸುತ್ತಾರೆ
ಬಿ) ಅಮೂರ್ತ ಆಲೋಚನೆಯನ್ನು ಮಾಡುತ್ತಾರೆ ಸಿ) ಪ್ರಾಕಲ್ಪನೆಗಳನ್ನು ರಚಿಸುತ್ತಾರೆ
**ಡಿ) ವಸ್ತುಗಳನ್ನು, ಘಟನೆಗಳನ್ನು ಮತ್ತು ಆಲೋಚನೆಗಳನ್ನು ಆಂತರಿಕವಾಗಿ ಪ್ರತಿನಿಧಿಸುತ್ತಾರೆ**

107. ಇದು ಅಸ್ತಿತ್ವದಲ್ಲಿರುವ ಜ್ಞಾನ ಸಂರಚನೆ.
**ಅ. ಸ್ಕೀಮಾ** ಆ. ಸ್ವಾಂಗೀಕರಣ ಇ. ಸಮತೋಲನ ಈ. ಹೊಂದಾಣಿಕೆ

108. ಕಲಿಕೆಯು ಪರಿಣಾಮಕಾರಿಯಾಗುವುದು ಪುಷ್ಟಿಕರಣವನ್ನು
ಅ. ತಡ ಮಾಡಿದಾಗ ಆ. ದುರ್ಬಲಗೊಳಿಸಿದಾಗ
**ಇ. ತಕ್ಷಣ ನೀಡಿದಾಗ** ಈ. ಶಾಬ್ದಿಕವಾಗಿದಾಗ

109. ಜೀವಿಯು ಸರಿಯಾದ ವರ್ತನೆಯನ್ನು ತೋರುತ್ತಿರುವ ಸಂದರ್ಭದಲ್ಲಿ ಪುಷ್ಟೀಕರಣವನ್ನು ತಡೆಹಿಡಿಯುವುದು
ಅ. ಅನುಕ್ರಿಯೆಯನ್ನು ಬಲಗೊಳಿಸಲು ನೆರವಾಗುತ್ತದೆ **ಆ. ವರ್ತನೆಯ ಅಳಿಯುವಿಕೆಗೆ ಕಾರಣವಾಗುತ್ತದೆ**
ಇ. ಕಲಿಕೆಯು ಸ್ಥಿರವಾಗಿ ನೆಲೆಗೊಳ್ಳಲು ಕಾರಣವಾಗುತ್ತದೆ ಈ. ಕ್ರಿಯೆಯ ತೀವ್ರತೆಯನ್ನು ಕಡಿಮೆ ಮಾಡುತ್ತದೆ

110. ಮಗು ಗಣಿತದ ಐದು ಸಮಸ್ಯೆಗಳನ್ನು ಬಿಡಿಸಿ ಒಂದು ಚಾಕಲೇಟನ್ನು ಬಹುಮಾನವಾಗಿ ಪಡೆಯುವನು. ಈ ರೀತಿಯ ಪುಷ್ಟಿಕರಣ.
ಅ. ಸ್ಥಿರ ವಿರಾಮ ಪುಷ್ಟೀಕರಣ ಆ. ಅಸ್ಥಿರ ವಿರಾಮ ಪುಷ್ಟಿಕರಣ
**ಇ. ಸ್ಥಿರ ಪ್ರಮಾಣ ಪುಷ್ಟಿಕರಣ** ಈ. ಅಸ್ಥಿರ ಪ್ರಮಾಣ ಪುಷ್ಟೀಕರಣ

111. ವ್ಯಕ್ತಿಯಲ್ಲಿ ಸುವ್ಯವಸ್ಥಿತ ಹಾಗೂ ಸುಸಂಬದ್ಧವಾದ ರೀತಿಯಲ್ಲಿ ಉಂಟಾಗುವ ಪರಿವರ್ತನೆಯ ಸರಣಿಗೆ ಹೀಗೆನ್ನುವರು.
a) ಬೆಳವಣಿಗೆ **b) ವಿಕಾಸ** c) ವೃದ್ಧಿಕಾಲ d) ವಿನ್ಯಾಸ

112. ಕೆಳಗಿನವುಗಳಲ್ಲಿ ಯಾವುದು ವಿಕಾಸದ ತತ್ವವಾಗಿಲ್ಲ
a) ನಿರಂತರತೆ b) ನಿರ್ದಿಷ್ಟತೆ c) ಕ್ರಮಬದ್ಧತೆ **d) ನಿಖರತೆ**

113. ವಿದ್ಯಾರ್ಥಿಗೆ ಕಲಿಕೆಯಲ್ಲಿನ ಲೋಪದೋಷಗಳನ್ನು ತಿಳಿಸಿ ಸರಿಪಡಿಸಿಕೊಳ್ಳುವಂತೆ ಪ್ರೇರೇಪಿಸುವುದನ್ನು ಹೀಗೆನ್ನುವರು
**a) ಮೌಲ್ಯಮಾಪನ** b) ಪುಷ್ಟಿಕರಣ c) ಪುನರ್ಬಲನ d) ಉದ್ದೀಪನ

114. ವಂಶವಾಹಿಗಳ ಮುಖಾಂತರ ಸ್ವಭಾವ ಗುಣಲಕ್ಷಣವನ್ನು ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ಸಾಗಿಸುವ ಗುಣಕ್ಕೆ ಹೀಗೆನ್ನುವರು
**a) ಅನುವಂಶೀಯತೆ** b) ವರ್ಗಾವಣೆ c) ಪರಿವರ್ತನೆ d) ಪ್ರಸರಣೆ

115. ವರ್ತನೆಯಲ್ಲಾದ ಅಪೇಕ್ಷಿತ ಬದಲಾವಣೆಗೆ ಕಾರಣ
**a) ಕಲಿಕೆ ಮತ್ತು ಪರಿಪಕ್ವತೆ** b) ವಿಕಾಸ c) ತರಬೇತಿ d) ಅಭ್ಯಾಸ

116. ಈ ಕೆಳಗಿನವುಗಳಲ್ಲಿ ಯಾವುದು ಹದಿ ಹರೆಯದ ವಿಕಾಸ ಕ್ರಿಯೆಯಾಗಿದೆ
a) ಬಾಳ ಸಂಗಾತಿಯ ಆಯ್ಕೆ b) ಉದ್ಯೋಗದ ಆರಂಭ
**c)ಜವಾಬ್ದಾರಿ ಅರಿಯುವುದು** d) ಸಾಮಾಜಿಕ ಜವಾಬ್ದಾರಿ ವಹಿಸಿಕೊಳ್ಳುವುದು

117. ತರಗತಿಯಲ್ಲಿ ಮಕ್ಕಳ ಮನಸ್ಥಿತಿಯನ್ನು ಶಿಕ್ಷಕರು ಅರಿತು ಮಕ್ಕಳನ್ನು ಕಾರ್ಯದೆಡೆಗೆ ಕೇಂದ್ರೀಕರಿಸುವ ಧಾರಣೆಯನ್ನು ಈ ರೀತಿ ಕರೆಯುತ್ತೇವೆ.
a) ಬಹು ಅನುಕ್ರಿಯಾ ನಿಯಮ b) ಧೋರಣೆಯ ನಿಯಮ
**c) ಸಾದೃಶೀಕರಣ ನಿಯಮ** d) ಸ್ಥಾನಾಂತರ ನಿಯಮ

118. ಒಬ್ಬ ವ್ಯಕ್ತಿಯ ವರ್ತನೆ ಒಳನೋಟ, ಆಸಕ್ತಿ, ಚಿಂತನೆ ಇವುಗಳಲ್ಲಿ ಉಂಟಾಗುವ ಬದಲಾವಣೆಗೆ

**a) ಕಲಿಕೆ** b) ಮನೋಭಾವ c) ಅನುಭವ d) ಅಭ್ಯಾಸ

119. ವಿಶ್ವಾಸನೀಯತೆಯನ್ನು ಗುರುತಿಸಲು ಕಷ್ಟಕರವಾದ ಪ್ರಶ್ನೆಯ ಪ್ರಕಾರ

a) ಬಹು ಆಯ್ಕೆಯ ಪ್ರಶ್ನೆಗಳು **b) ರಚನಾತ್ಮಕ ಪ್ರಬಂಧ ಪ್ರಶ್ನೆಗಳು**

c) ಕಿರು ಉತ್ತರ ಪ್ರಶ್ನೆಗಳು d) ರಚನಾತ್ಮಕವಲ್ಲದ ಪ್ರಬಂಧ ಮಾದರಿ ಪ್ರಶ್ನೆಗಳು

120. ಪ್ರಬಂಧ ಮಾದರಿಯ ಪ್ರಶ್ನೆಗಳು ಇದಕ್ಕೆ ಅನುಕೂಲವಾಗಿದೆ

a) ಸುಲಭವಾಗಿ ಅಂಕಗಳನ್ನ ಗಳಿಸಬಹುದು b) ಉತ್ತರವನ್ನು ವಿದ್ಯಾರ್ಥಿಗಳು ಊಹಿಸಬಹುದು

**c) ಶಿಕ್ಷಕರು ಕಲಿಕಾ ತಡೆಗಳನ್ನು ನಿರ್ಣಯಿಸಬಹುದು** d) ಇದು ಸಂಕೀರ್ಣ ಕಲಿಕಾ ಫಲಿತಗಳನ್ನು ಅಳೆಯುತ್ತದೆ

121. ಅನುವಂಶಿಯತೆಯಿಂದ ನಿರ್ಧರಿಸಲ್ಪಡುವ ಮಾನವ ಲಕ್ಷಣ

a) ಅಂತರ್ ಪ್ರಜ್ಞೆ **b) ಬುದ್ಧಿವಂತಿಕೆ** c) ಒಳನೋಟ d) ಸಹಜತೆ

122. ಈ ಹಂತದಲ್ಲಿ ಸಾಮಾನ್ಯ ಆಸಕ್ತಿಗಳು ಮತ್ತು ಗುಣಲಕ್ಷಣಗಳು ಮಕ್ಕಳ ನಡುವೆ ದೃಢವಾದ ಮತ್ತು ನಿಕಟ ಸ್ನೇಹದ ರಚನೆಗೆ ಕಾರಣವಾಗುತ್ತದೆ

a) ಪೂರ್ವ ಬಾಲ್ಯ b) ಮಧ್ಯ ಬಾಲ್ಯ c) ಉತ್ತರ ಬಾಲ್ಯ d) ಹದಿಹರೆಯ

123. ಮೂಲಭೂತವಾಗಿ ಸ್ವಯಂ ಆಧಾರಿತ ಸಂವಾದದಿಂದ ಇತರ ಆಧಾರಿತ ಪರಸ್ಪರ ಕ್ರಿಯೆಗಳಿಗೆ ಪರಿವರ್ತನೆ ನಡೆಯುವ ಹಂತವೇ.

a) ಶೈಶವಾವಸ್ಥೆಯ ಅವಧಿ **b) ಶಾಲಾ ಪೂರ್ವ ಅವಧಿ** c) ಶಾಲಾ ಅವಧಿ d) ಹದಿಹರೆಯದ ಅವಧಿ

124. ಕಾರ್ಯಕ್ಷಮತೆ ಆಧಾರಿತ ಮೌಲ್ಯಮಾಪನವನ್ನು ಬೆಂಬಲಿಸದ ಅಂಶಗಳು ವಿದ್ಯಾರ್ಥಿಗಳ ಉನ್ನತ ಕ್ರಮದ ಆಲೋಚನಾ ಕೌಶಲಗಳನ್ನು ಸೃಷ್ಟಿಸುತ್ತದೆ.

**a) ಅನುಗಮನ ಮತ್ತು ನಿಗಮನ ತಾರ್ಕಿಕತೆಯನ್ನು ಬೆಳೆಸುತ್ತದೆ**

b)ಜ್ಞಾನ ಆಧಾರಿತ ಮಾಹಿತಿಯನ್ನು ಪುನರ್ ಉತ್ಪಾದಿಸುವುದು

c) ತೀರ್ಮಾನಕ್ಕೆ ಬರಲು ಅಗತ್ಯವಾದ ಮಾಹಿತಿಯನ್ನು ಸಂಶ್ಲೇಷಿಸುವುದು

d) ಮಾಹಿತಿಯ ಮೂಲಗಳ ಮೌಲ್ಯಮಾಪನ ವಿಶ್ವಾಸಾರ್ಹತೆ

125. ಬ್ಲೂಮ್ ಪ್ರತಿಪಾದಿಸಿದ ಕಲಿಕಾ ಸಿದ್ಧಾಂತ

a) ಶ್ರೇಣೀಕೃತ b) ಸಾಮಾಜಿಕ ಕೌಶಲ್ಯ ಕಲಿಕೆ **c) ಪ್ರಭುತ್ವ ಕಲಿಕೆ** d) ಅನುಕರಣೆ

126. ಅರ್ಥಪೂರ್ಣ ಕಲಿಕೆ

**a) ಸ್ಮೃತಿ ಹೆಚ್ಚಿಸುತ್ತದೆ** b) ಸ್ಮೃತಿ ಕಡಿಮೆ ಮಾಡುತ್ತದೆ c) ಸ್ಮೃತಿ ತಟಸ್ಥವಾಗಿರುತ್ತದೆ d) ಮೇಲಿನ ಎಲ್ಲವೂ

127. ಕಲಿತ 20 ನಿಮಿಷದ ನಂತರ ಮರವಿನ ಶೇಕಡ ಪ್ರಮಾಣ

a) 51 % **b) 53%** c) 66% d) 80%

128. ವರ್ತನಾವಾದಿ ಮನೋವಿಜ್ಞಾನಿಗಳ ಗುಂಪಿಗೆ ಸೇರಿದ ಮನೋವಿಜ್ಞಾನಿ

a) ಕೋಹ್ಲರ್ b) ಸಿಗ್ಮಂಡ್ ಫ್ರಾಯ್ಡ್ c) ಸ್ಕಿನ್ನರ್ **d) ಥಾರ್ನ್‌ಡೈಕ್**

129. ಮನೋವಿಜ್ಞಾನವನ್ನು ಪ್ರಜ್ಞೆಯ ವಿಜ್ಞಾನ ಎಂದು ಪರಿಭಾವಿಸಿದ ಮನೋವಿಜ್ಞಾನಿ

**a) ವಿಲ್ ಹಲ್ಮ ಉಂಟ್** b) ವುಲ್ ಗ್ಯಾಂಗ್ ಕೋಹ್ಲರ್ c)ಜೆ ಬಿ ವ್ಯಾಟ್ಸನ್ d) ಸ್ಕಿನ್ನರ್

130. ತರಗತಿಯಲ್ಲಿ ಚೂಟಿ ವಿದ್ಯಾರ್ಥಿ ಇತರ ವಿದ್ಯಾರ್ಥಿಗಳಿಗೆ ತೊಂದರೆ ಕೊಡುತ್ತಿದ್ದಾನೆ. ಈ ಸಂದರ್ಬದಲ್ಲಿ ಶಿಕ್ಷಕರು ಯಾವ ವಿಧಾನವನ್ನು ಬಳಸಬೇಕು.

a) ಸರ್ವೇಕ್ಷಣ ವಿಧಾನ **b) ವ್ಯಕ್ತಿ ಅಧ್ಯಯನ ವಿಧಾನ** c) ಪ್ರಾಯೋಗಿಕ ವಿಧಾನ d) ಅವಲೋಕನ ವಿಧಾನ

131. ನೀವು ಕೇಳಿರುವ ಪ್ರಶ್ನೆಗೆ ವಿದ್ಯಾರ್ಥಿಯೊಬ್ಬ ತಪ್ಪು ಉತ್ತರ ಕೊಟ್ಟರೆ ಏನು ಮಾಡುವಿರಿ

a) ಇನ್ನೊಂದು ಪ್ರಶ್ನೆಯನ್ನು ಕೇಳುವ ಮೂಲಕ ಅಭ್ಯರ್ಥಿಯು ತನ್ನ ತಪ್ಪನ್ನು ಅರಿಯುವಂತೆ ಮಾಡುವುದು

b) ಅಭ್ಯರ್ಥಿಯ ಉತ್ತರವು ಏಕೆ ತಪ್ಪು ಎಂದು ಅಭ್ಯರ್ಥಿಗೆ ತಿಳಿಸುವುದು

**c) ಇನ್ನೋರ್ವ ವಿದ್ಯಾರ್ಥಿಗೆ ಉತ್ತರಿಸಲು ಹೇಳುವುದು** d) ಸರಿ ಉತ್ತರವನ್ನು ಹೇಳುವುದು

132. ವಿಶೇಷವಾಗಿ ಪ್ರಾಥಮಿಕ ಹಂತದಲ್ಲಿ ವಿದ್ಯಾರ್ಥಿಗಳ ಕಲಿಕಾ ತೊಂದರೆಗಳನ್ನು ಪರಿಹರಿಸಲು ಉತ್ತಮ ವಿಧಾನ

a) ಕಥೆ ಹೇಳುವ ವಿಧಾನ

**b) ಅಸಮರ್ಥತೆಗೆ ಸಮಂಜಸವಾಗಿರುವ ವಿಭಿನ್ನ ಬೋಧನಾ ವಿಧಾನಗಳ ಬಳಕೆ**

c) ವೆಚ್ಚದಾಯಕ ಹಾಗೂ ಆಕರ್ಷಕ ಪೂರಕ ಸಾಮಗ್ರಿ ಒದಗಿಸುವಿಕೆ

d) ಸರಳ ಹಾಗೂ ಆಸಕ್ತಿದಾಯಕ ಪಠ್ಯಪುಸ್ತಕಗಳನ್ನು ಒದಗಿಸುವಿಕೆ

133. ಕಲಿಕೆ ಉಂಟಾಗಲು ಯಾವುದು ಅವಶ್ಯಕ

a) ಸ್ವ – ಅನುಭವ b) ಸ್ವ – ಅವಲೋಕನ c) ಸ್ವ – ಚಟುವಟಿಕೆ **d) ಎಲ್ಲವೂ**

134. ಕಲಿಕಾ ನಿಯಮಗಳನ್ನು ಪರಿಚಯಿಸಿದವರು

**a) ಥಾರ್ನ್‌ಡೈಕ್** b) ಪಾವ್‌ಲಾವ್ c) ಸ್ಕಿನ್ನರ್ d) ಕೋಹ್ಲರ್

135. ಗೆಸ್ಟಾಲ್ಟ್ ಪಂಥವು ಯಾವ ದೇಶದ್ದು

a)ರಷ್ಯಾ b) ಅಮೆರಿಕ c)ಜಪಾನ್ **d) ಜರ್ಮನಿ**

136. ಗೆಸ್ಟಾಲ್ಟ್ ಪದದ ಮೂಲ ಅರ್ಥ

a) ಒಂದು ಸಮಗ್ರತೆ b) ಬಿಡಿಗಳ ಜೋಡಣೆ **c) ಎ ಮತ್ತು ಬಿ** d) ಯಾವುದು ಅಲ್ಲ

137. ಒಳನೋಟ ಕಲಿಕಾ ಸಿದ್ಧಾಂತ ಪ್ರದೀಪಾದಕರು

**a) ಕೋಹ್ಲರ್** b) ಸ್ಕಿನ್ನರ್ c) ಲೆವಿನ್ d) ವರ್ಧಮೀಯರ್

138. ಶೈಕ್ಷಣಿಕ ಮನೋವಿಜ್ಞಾನದ ಪಿತಾಮಹ ಎಂದು ಯಾರನ್ನು ಕರೆಯುತ್ತಾರೆ?

a)ಸ್ಕಿನ್ನರ್ **b) EL ಥಾರ್ನ್‌ಡೈಕ್** c) ಕೋಹ್ಲರ್ d) ಪಾವಲವ್

139. ಮಕ್ಕಳ ಬುದ್ಧಿಮತ್ತೆ ಮತ್ತು ಅವರ ಕಲಿಯುವ ಸಾಮರ್ಥ್ಯವನ್ನು ಅಳೆಯಲು ಮತ್ತು ಪರೀಕ್ಷಿಸಲು ವಿಧಾನಗಳನ್ನು ವಿನ್ಯಾಸಗೊಳಿಸಿದ ಮನೋಶಾಸ್ತ್ರಜ್ಞ

a) ಪಾವ್ಲೋವ್ b) ಸ್ಕಿನ್ನರ್ c) ಕೋಹ್ಲರ್ **d) EL ಥಾರ್ನ್‌ಡೈಕ್**

140. ಪಿಯಾಜೆಯವರ ಪ್ರಕಾರ ಮಗುವಿನಲ್ಲಿ ಮೂರ್ತ ಕಾರ್ಯಗಳ ಹಂತವು ಕೆಳಗಿನ ಯಾವ ವಯಸ್ಸಿಗೆ ಸಂಬಂಧಿಸಿದೆ?.

a). 2 ರಿಂದ 7 ವರ್ಷಗಳು b). 11 ವರ್ಷಕ್ಕಿಂತ ಮೇಲ್ಪಟ್ಟು

**c) 7 ರಿಂದ 11 ವರ್ಷಗಳವರೆಗೆ** d)ಹುಟ್ಟಿನಿಂದ 2 ವರ್ಷಗಳವರೆಗೆ

141. ನೈತಿಕ ವಿಕಾಸದಲ್ಲಿ ಮಕ್ಕಳು ತಾರ್ಕಿಕವಾಗಿ ಆಲೋಚಿಸಿ ಮಾನವ ಹಕ್ಕುಗಳನ್ನು ಮತ್ತು ಸಮಾಜದ ಕಲ್ಯಾಣವನ್ನು ಈ ಹಂತದಲ್ಲಿ ಒಪ್ಪಿಕೊಳ್ಳುತ್ತಾರೆ/ ಮಾನ್ಯಮಾಡುತ್ತಾರೆ.

**d). ಸ್ವಯಂ ಸ್ವೀಕೃತ ನೈತಿಕತೆಯ ಹಂತ (13 ವರ್ಷಕ್ಕಿಂತ ಮೇಲ್ಪಟ್ಟು)**

ಆ. ಸಾಂಪ್ರದಾಯಿಕ ನೈತಿಕತೆಯ ಹಂತ (10 ರಿಂದ 13 ವರ್ಷಗಳು)

ಇ. ಸಾಂಪ್ರದಾಯಿಕ ಪೂರ್ವ ನೈತಿಕತೆಯ ಹಂತ 4 ರಿಂದ 10 ವರ್ಗಳು)

ಈ. ಮೇಲಿನ ಯಾವುದೂ ಅಲ್ಲ

142. ಈ ಹಂತದ ಮಕ್ಕಳಲ್ಲಿನ ನೈತಿಕತೆಯು ಶಿಕ್ಷೆಯ ಭಯದಿಂದ ನಿಯಂತ್ರಿಸಲ್ಪಡುತ್ತದೆ.

ಅ. ಸಾಂಪ್ರದಾಯಿಕ ನೈತಿಕತೆಯ ಹಂತ **ಆ. ಸಾಂಪ್ರದಾಯಿಕ ಪೂರ್ವ ನೈತಿಕತೆಯ ಹಂತ**

ಇ. ಸ್ವಯಂ ಸ್ವೀಕೃತ ನೈತಿಕತೆಯ ಹಂತ ಈ. ಮೇಲಿನ ಎಲ್ಲವೂ.

143. ಬಹುಬುದ್ಧಿಶಕ್ತಿ ಸಿದ್ಧಾಂತವನ್ನ ಪ್ರತಿಪಾದಿಸಿದವರು.

**ಅ. ಹೋವರ್ಡ್ ಗಾರ್ಡನರ್** ಆ. ಜೆ ಪಿ ಗಿಲ್ ಫೋರ್ಡ್

ಇ. ರಾಬರ್ಟ್ ಸ್ಟನ್ ಬರ್ಗ್ ಈ. ಜಿ ಹೆಚ್ ಥಾಮಸ್

144. ಇದು ಬುದ್ಧಿಶಕ್ತಿ ಸೂಚ್ಯಂಕದ ಸೂತ್ರವಾಗಿದೆ.

ಎ. $\frac{CA}{MA} \times 100$ **ಆ. $\frac{MA}{CA} \times 100$**

ಇ. $\frac{MA}{CA} \times 1000$ ಈ. $\frac{CA}{MA} \times 1000$

145. "ಉದ್ದೇಶಪೂರ್ವಕವಾಗಿ ಕಾರ್ಯಮಾಡುವ, ತರ್ಕ ಸಮ್ಮತವಾಗಿ ಆಲೋಚನೆ ಮಾಡುವ ಮತ್ತು ಪರಿಸರದೊಂದಿಗೆ ಪ್ರತಿವರ್ತಿಸುವ ಸಾಮರ್ಥ್ಯಗಳ ಮೊತ್ತ ಅಥವಾ ಸಮಷ್ಟಿಯೇ ಬುದ್ಧಿಶಕ್ತಿ." ಈ ಹೇಳಿಕೆ ನೀಡಿದವರು.

**ಅ. ಡೇವಿಡ್ ವೆಷ್ಲರ್** ಆ. ಸ್ಪಿಯರ್ ಮೆನ್ ಇ. ಸ್ಟಾಡ್ಡರ್ಡ್ ಈ. ಗಾರ್ಡನರ್

146. 18 ವರ್ಷ ಮಾನಸಿಕ ಹೊಂದಿರುವ ವ್ಯಕ್ತಿಯ ದೈಹಿಕ ವಯಸ್ಸೂ ಕೂಡ 18 ವರ್ಷ ಆಗಿದ್ದರೆ ಅವನ ಬುದ್ಧಿಶಕ್ತಿ ಸೂಚ್ಯಂಕವು.

ಅ. 110 **ಆ. 100** ಇ. 120 ಈ. 90

147. ಕೋಲ್ ಬರ್ಗ್ ರವರ ಪ್ರಕಾರ ತಾನು ತಪ್ಪು ಮಾಡಿದರೆ ಶಿಕ್ಷಿಸುತ್ತಾರೆ ಎಂಬ ಭಯದಿಂದ ಮಗುವು ಹಿರಿಯರಿಗೆ ವಿಧೇಯನಾಗಿ ಈ ಹಂತದಲ್ಲಿ ವರ್ತಿಸುತ್ತಾನೆ.

**ಅ. ಸಾಂಪ್ರದಾಯಿಕ ಪೂರ್ವ ನೈತಿಕತೆಯ ಹಂತ** ಆ. ಸಾಂಪ್ರದಾಯಿಕ ನೈತಿಕತೆಯ ಹಂತ

ಇ. ಸಾಂಪ್ರದಾಯಿಕ ನೈತಿಕತೆಯ ಸ್ಥಿರತೆಯ ಹಂತ ಈ. ಸ್ವಯಂ ಸ್ವೀಕೃತ ನೈತಿಕ ತತ್ವಗಳ ಹಂತ

148. ಪಿಯಾಜೆಯವರ ಪ್ರಕಾರ ಈ ಹಂತದ ಶಿಶುವಿನಲ್ಲಿ ಸ್ಕೀಮಾ (ವಸ್ತುಗಳನ್ನು ಕಂಡುಕೊಳ್ಳುವ ಪ್ರಜ್ಞೆ) ಇರುವುದು.

**ಅ. ಸಂವೇದನಾಗತಿ ಹಂತ** ಆ. ಕಾರ್ಯಪೂರ್ವ ಹಂತ

ಇ. ಮೂರ್ತಕಾರ್ಯಗಳ ಹಂತ ಈ. ಔಪಚಾರಿಕ ಕಾರ್ಯಗಳ ಹಂತ

149. ಎಮೋಷನಲ್ ಇಂಟಲಿಜೆನ್ಸ್ ಎಂಬ ಪುಸ್ತಕವನ್ನು ಬರೆದು ಸಂವೇಗಾತ್ಮಕ ಬುದ್ಧಿಶಕ್ತಿಯನ್ನು ಪ್ರಚುರಪಡಿಸಿದವರು.

**ಅ. ಡೇನಿಯಲ್ ಗೋಲ್‌ಮನ್** ಆ. ಪಾಲ್ ಟಾರೆನ್ಸ್

ಇ. ಜಾನ್ ಮಿಯರ್ ಈ. ಪೀಟರ್ ಸಾಲೋವೈ

150. ಮಕ್ಕಳಲ್ಲಿ ಸಂವೇಗಾತ್ಮಕ ಬುದ್ಧಿಶಕ್ತಿಯನ್ನು ಹೆಚ್ಚಿಸಬೇಕಾದರೆ ಅತ್ಯಂತ ಅಗತ್ಯವಾದುದು.

ಅ. ಪ್ರಾರ್ಥನೆ ಆ. ಧ್ಯಾನ **ಇ. ಜೀವನ ಕೌಶಲ ಶಿಕ್ಷಣ** ಈ. ಶ್ರೇಷ್ಠ ಸಾಹಿತ್ಯ ವಾಚನ

151. ಸರಾಸರಿ ಬುದ್ಧಿವಂತ ವ್ಯಕ್ತಿಯ ಬುದ್ಧಿಶಕ್ತಿ ಸೂಚ್ಯಂಕ ಇದಾಗಿದೆ.

ಅ. 110 ರಿಂದ 119 ಆ. 60 ರಿಂದ 69 **ಇ. 90 ರಿಂದ 109** ಈ. 130 ರಿಂದ 139

152. ಈ ಕೆಳಗಿನ ಯಾವ ಚಟುವಟಿಕೆಯ ಮೂಲಕ ಮಕ್ಕಳಲ್ಲಿ ಸೃಜನಶೀಲತೆಯನ್ನು ಅಭಿವೃದ್ಧಿ ಪಡಿಸಲಾಗದು.

**ಅ. ಉತ್ತಮ ಅಥವಾ ಶ್ರೇಷ್ಠ ಶಿಕ್ಷಕರುಗಳಿಂದ ಬೋಧನೆ ಮಾಡಿಸುವುದು**

ಆ. ಮಗು ಸೃಜನಶೀಲ ಸಾಮರ್ಥ್ಯ ಪ್ರದರ್ಶಿಸಿದಾಗ ಅವರಿಗೆ ಬಹುಮಾನ ಅಥವಾ ಪುನರ್ಬಲನ ಒದಗಿಸುವುದು

ಇ. ಮನಮಂಥನ ಅಥವಾ ಬುದ್ಧಿಮಂಥನ

ಈ. ಮಕ್ಕಳ ಅಸಮಾನ್ಯ ಪ್ರಶ್ನೆಗಳನ್ನು ಅಸಾಧಾರಣ ಮತ್ತು ವಿಭಿನ್ನ ಉತ್ಪಾದನೆಯನ್ನು ಶಿಕ್ಷಕರು ಗೌರವಿಸಿ ಉತ್ತೇಜಿ ಸುವುದು

153. ರೂಸೋ ಪ್ರೊಬೆಲ್, ಮರಿಯಾ ಮೌಂಟೇಸರಿ ಇವರುಗಳು ಈ ಕೆಳಗಿನ ಯಾವ ಶಿಕ್ಷಣ ಪದ್ಧತಿಯನ್ನು ಪ್ರತಿನಿಧಿಸುತ್ತಾರೆ.

ಅ. ಪಠ್ಯಕ್ರಮ ಕೇಂದ್ರಿತ ಶಿಕ್ಷಣ ಆ. ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ

**ಇ. ಶಿಶು ಕೇಂದ್ರಿತ ಶಿಕ್ಷಣ** ಈ. ಮೂಲ ಶಿಕ್ಷಣ

154. ಸೃಜನಶೀಲತೆಗೆ ಸಂಬಂಧಿಸಿದಂತೆ ಯಾವ ಹೇಳಿಕೆಗಳು ಸರಿಯಾಗಿದೆ.

1. ಮಗುವಿನ ಕ್ರಿಯೆಯಲ್ಲಿ ಹೊಸತನ ಮತ್ತು ಸ್ವಂತಿಕೆಯನ್ನು ಕಾಣಬಹುದು
2. ಸೃಜನಶೀಲರು ವಿಭಿನ್ನ ಚಿಂತನಾ ಸಾಮರ್ಥ್ಯ ಹೊಂದಿರುತ್ತಾರೆ
3. ಸಮಸ್ಯೆ ಪರಿಹರಿಸುವಾಗ ಒಳನೋಟ ಪಡೆಯುತ್ತಾನೆ
4. ಹೆಚ್ಚು ಬುದ್ಧಿಶಕ್ತಿಯುಳ್ಳವರು ಸೃಜನಶೀಲರಾಗಿಯೇ ಇರುತ್ತಾರೆ

ಅ. ಒಂದು ಮತ್ತು ನಾಲ್ಕು ಮಾತ್ರ ಆ. ಎರಡು, ಮೂರು ,ನಾಲ್ಕು, ಮಾತ್ರ

**ಇ. ಒಂದು ಎರಡು ಮೂರು ಮಾತ್ರ** ಈ. ಮೇಲಿನ ಎಲ್ಲವೂ

155. ಇವರನ್ನು ಸೃಜನಶೀಲತೆಯ ಪಿತಾಮಹ ಎಂದು ಕರೆಯುತ್ತಾರೆ

ಅ. ಸಿಗ್ಮಂಡ್ ಫ್ರಾಯ್ಡ್ **ಆ. ಪಾಲ್ ಟಾರೆನ್ಸ್** ಇ. ಕಿಲ್ ಪ್ಯಾಟ್ರಿಕ್ ಈ. ರೋಷಾರ್ಕ್

156. ಮಗುವಿನ ಆಸಕ್ತಿ, ಅಭಿರುಚಿ, ಬುದ್ಧಿಶಕ್ತಿ, ಮನೋಭಾವಕ್ಕೆ ಆದ್ಯತೆ ನೀಡುವುದು ಈ ಶಿಕ್ಷಣ ಪದ್ಧತಿ.

**ಅ. ಶಿಶು ಶಿಕ್ಷಣ** ಆ. ಪಠ್ಯಕ್ರಮ ಆಧಾರಿತ ಶಿಕ್ಷಣ ಇ. ಪ್ರಾಯೋಗಿಕ ಶಿಕ್ಷಣ ಈ. ಶಿಕ್ಷಕ ಕೇಂದ್ರಿತ ಶಿಕ್ಷಣ

157. ಸಾಮಾಜಿಕ ಸಂರಚನವಾದವನ್ನು ಮಂಡಿಸಿದವರು

ಅ. ಜೋಮ್ಸ್ ಕಿ ಆ. ಸ್ಕಿನ್ನರ್ **ಇ. ವೈಗಾಟ್‌ಸ್ಕಿ** ಈ. ಥಾರ್ನ್‌ಡೈಕ್

157. ಯಾವ ಮಕ್ಕಳಿಗೆ ಮೆದುಳು ಕಾರ್ಯಪಟುತ್ವಗೊಳಿಸುವ ತಂತ್ರದ ಮೂಲಕ ಅವರ ಸಾಮರ್ಥ್ಯವನ್ನು ಹೆಚ್ಚಿಸಬಹುದು

ಅ. ಆಶ್ರಿತ ಮಾನಸಿಕ ಸವಾಲುಗಳುಳ್ಳ ಮಕ್ಕಳು ಆ. ಕಲಿಕಾ ನ್ಯೂನ್ಯತೆ ಹೊಂದಿರುವವರು

**ಇ. ಸೃಜನಶೀಲ ಮಕ್ಕಳು** ಈ. ಒರಟು ಹಾಗೂ ತುಂಟ ಸ್ವಭಾವದವರು

159. ಈ ಕೆಳಗಿನ ಯಾವ ಚಟುವಟಿಕೆಯು ಮಕ್ಕಳ ಆಲೋಚನೆಯನ್ನು ಪ್ರಭಾವಗೊಳಿಸಿ ಅವರನ್ನು ಕಲಿಕೆಗೆ ಪ್ರೇರೇಪಿಸುತ್ತದೆ.

ಅ. ಉಪನ್ಯಾಸ ಪದ್ದತಿಯ ಮೂಲಕ ಬೋಧಿಸುವುದು

ಆ. ಮಕ್ಕಳಲ್ಲಿ ಕಂಠಪಾಠ ಮಾಡಿಸುವ ಚಟುವಟಿಕೆ ನೀಡುವುದು

**ಇ. ಮಕ್ಕಳಿಗೆ ಸ್ವತಂತ್ರ ವಾತಾವರಣ ನಿರ್ಮಿಸಿಕೊಟ್ಟು ಸಮಸ್ಯ ಪರಿಹಾರ ಚಟುವಟಿಕೆಯನ್ನು ನೀಡುವುದು**

ಈ. ಮೇಲಿನ ಯಾವುದು ಅಲ್ಲ

160. ಮಗುವು ಕಲಿಕೆಯಲ್ಲಿ ಯಾವಾಗಲೂ ತೀರ ಕೆಳಮಟ್ಟದ ಸಾಧನೆ ತೋರುವುದಕ್ಕೆ ಮುಖ್ಯ ಕಾರಣ

ಅ. ಬಾಹ್ಯ ಪ್ರೇರಣೆಯ ಕೊರತೆ **ಆ. ಕಲಿಕೆಯ ಬಗೆಗಿನ ತೀವ್ರ ನಿರಾಸಕ್ತಿ**

ಇ. ಪೋಷಕರ ಭಯ ಇಲ್ಲದಿರುವುದು ಈ. ಶಿಕ್ಷಕರ ಭಯ ಇಲ್ಲದೆ ಇರುವುದು

161. 'ಸಾಮಾಜಿಕ ಒಪ್ಪಂದ ಮತ್ತು ಎಮಿಲಿ' , ಈ ಗ್ರಂಥಗಳ ಕರ್ತೃ

ಅ. ಪೆಸ್ಟಾಲಜಿ ಆ. ಮರಿಯಾ ಮಾಂಟೇಸ್ಸೋರಿ ಇ. ಜಾನ್‌ಡ್ಯೂಯಿ **ಈ. ಜೀನ್ ಜಾಕ್ ರುಸೋ**

162. ಆಧುನಿಕ ಬುದ್ಧಿಶಕ್ತಿ ಪರೀಕ್ಷೆಗಳ ಪಿತಾಮಹನೆಂದು ಖ್ಯಾತಿ ಪಡೆದವರು

**ಅ. ಆಲ್‌ಫ್ರೆಡ್ ಬೀನೆ** ಆ. ಜೆಸಿ ರೇವನ್ ಇ. ವಿಲಿಯಂ ಸ್ಟರ್ನ್ ಈ. ಜೆ ಪಿ ಗಿಲ್‌ಫೋರ್ಡ್

163. ಬುದ್ಧಿಶಕ್ತಿಯ ದ್ವಿಕಾರಕ ಸಿದ್ದಾಂತವನ್ನು 1904ರಲ್ಲಿ ಅಭಿವೃದ್ಧಿಪಡಿಸಿದವರು

ಅ. ಡೇವಿಡ್ ವೆಷ್ಲರ್ **ಆ. ಚಾರ್ಲ್ಸ್ ಸ್ಪಿಯರ್‌ಮನ್** ಇ. ಸ್ಟಡ್ಡಾರ್ಡ್ ಈ. ಟರ್ಮನ್

164. ಬುದ್ಧಿಶಕ್ತಿಯ ಬಹುಕಾರಕ ಸಿದ್ದಾಂತವನ್ನು ಪ್ರಸ್ತುತಪಡಿಸಿ ದವರು

**ಅ. ಈ ಎಲ್ ಥಾರ್ನ್‌ಡೈಕ್** ಆ. ಆಲ್ಫೆಡ್ ಬೀನೆ ಇ. ಜೆ ಸಿ ರೇವನ್ಸ್ ಈ. ಬರ್ಟ್

165. ಬುದ್ಧಿಶಕ್ತಿಯ ಸಮೂಹಕಾರಕ ಸಿದ್ಧಾಂತವನ್ನು ಪ್ರತಿಪಾದಿಸಿದವರು.

ಅ. ಹೋವರ್ಡ್ ಗಾರ್ಡನರ್ ಆ. ಆಲ್ಫೆಡ್ ಬೀನೆ ಇ. ವಿಲಿಯಂ ಹಾಕಿನ್ಸ್ **ಈ. ಎಲ್.ಎಲ್. ತರ್ಸ್ಟನ್**

166. ಬುದ್ಧಿ ಶಕ್ತಿಯ 3 ಆಯಾಮಗಳ ಸಿದ್ಧಾಂತವನ್ನು ಅಭಿವೃದ್ಧಿ ಪಡಿಸಿದವರು

ಅ. ಜೆ ಸಿ ರೇವನ್ಸ್ ಆ. ಟರ್ಮನ್ **ಇ. ಇ.ಪಿ ಗಿಲ್ ಫೋರ್ಟ್** ಈ. ಬರ್ಟ್

167. ಹುಡುಗರು ತುಂಬಾ ಶಕ್ತಿವಂತರು ಮತ್ತು ಕಠಿಣರು, ಹುಡುಗಿಯರು ಮೃದು ಮತ್ತು ಸಂವೇದನಾಶೀಲರು ಇಂತಹ ಹೇಳಿಕೆಗಳು ಏನನ್ನು ಬಲಗೊಳಿಸುತ್ತವೆ.

ಎ) ಲಿಂಗತ್ವ ಸಮಾನತೆ ಬಿ) ಲಿಂಗತ್ವ ಸಬಲೀಕರಣ **ಸಿ) ಲಿಂಗತ್ವ ಪಡಿಯಚ್ಚು** ಡಿ) ಲಿಂಗತ್ವ ಅರಿವು

168. ನಿರ್ದಿಷ್ಟ ವಸ್ತು ವ್ಯಕ್ತಿ ಕಾರ್ಯ ಇಂತಹವುಗಳ ಕಡೆಗೆ ವ್ಯಕ್ತಿ ಆಕರ್ಷಿಸಲ್ಪಡುವಂತೆ ಮಾಡುವ ಕಾರಕಗಳೇ.

ಅ. ಮನೋಧೋರಣೆ ಆ. ಅವಧಾನ ಇ. ಅಭಿಕ್ಷಮತೆ **ಈ. ಆಸಕ್ತಿ**

169. ಮಗುವು ಕಲಿಕೆಯಲ್ಲಿ ತನ್ನನ್ನು ಹೆಚ್ಚಾಗಿ ತೊಡಗಿಸಿಕೊಂಡು ಅಧಿಕ ಅಂಕ ಪಡೆಯುತ್ತಿರುವುದು ತನ್ನ ತಂದೆ ತಾಯಿಯ ಪ್ರಶಂಸೆಯ ಮಾತುಗಳಿಗಾಗಿ.

ಅ. ಇದು ಶೂನ್ಯ ಅಭಿಪ್ರೇರಣೆಯಾಗಿದೆ **ಆ. ಇದು ಬಾಹ್ಯ ಅಭಿಪ್ರೇರಣೆಯಾಗಿದೆ**

ಇ. ಇದು ಪಾರ್ಶ್ವ ಅಭಿಪ್ರೇರಣೆಯಾಗಿದೆ ಈ. ಇದು ಆಂತರಿಕ ಅಭಿಪ್ರೇರಣೆಯಾಗಿದೆ

170. ತಂದೆ ತಾಯಿಗಳ ಮೇಲಿನ ಭಯ ಶಿಕ್ಷಕರನ್ನು ಕಂಡರೂ ಭಯವಾಗಬಹುದು, ಶಿಕ್ಷಕರ ಮೇಲಿನ ದ್ವೇಷ ಇಡೀ ಶಾಲೆಯ ವಿಚಾರಕ್ಕೆ ದ್ವೇಷವಾಗಬಹುದು. ಕಲಿಕಾರ್ಥಿಗಳಲ್ಲಿ ಇಂತಹ ವೈಪರಿತ್ಯಗಳನ್ನು ಹೋಗಲಾಡಿಸಲು ಸೂಕ್ತವಾದ ಕಲಿಕಾ ಸಿದ್ದಂತಾ

ಅ. ಸೋಫಾದಿಕ ಅನುಬಂಧಿತ ಕಲಿಕೆ ಆ. ಪ್ರಯತ್ನ ಮತ್ತು ಪ್ರಮಾದ ಕಲಿಕೆ

ಇ. ಕ್ರಿಯಾಜನ್ಯ ಅನುಬಂಧಿತ ಕಲಿಕೆ ಈ. ಒಳನೋಟ ಕಲಿಕೆ

# ಮಾದರಿ ಪ್ರಶ್ನೆ ಪತ್ರಿಕೆ –1

## PART – III ಶಿಶು ವಿಕಸನ ಮತ್ತು ಬೋಧನಾಶಾಸ್ತ್ರ

**61.ಪಠ್ಯ ಪುಸ್ತಕಗಳಲ್ಲಿ ಕೊಡುವಂತಹ ನಿದರ್ಶನಗಳು**

ಎ) ಲಿಂಗತ್ವ ದ್ವೇಷಿಯಾಗಿರತಕ್ಕದ್ದು ಬಿ) ಲಿಂಗತ್ವ ತಟಸ್ಥವಾಗಿರತಕ್ಕದ್ದು

ಸಿ) ಲಿಂಗತ್ವ ಪೂರ್ವಗ್ರಹ ಹೊಂದಿರಬೇಕು ಡಿ) ಒಂದು ಲಿಂಗಕ್ಕೆ ಪ್ರಾತಿನಿಧ್ಯ ದೊರೆಯುವಂತಿರಬೇಕು

**62. ವೈಯಕ್ತಿಕ ಭಿನ್ನತೆಯ ಅಂಶಗಳನ್ನು ಆವರ್ತರೇಖೆಗೆ ಅಳವಡಿಸಿದಾಗ ಅದು.**

ಎ) ಸಾಮಾನ್ಯ ಸಂಭಾವ್ಯತಾ ವಕ್ರರೇಖೆಯನ್ನು ಹೋಲುತ್ತದೆ ಬಿ) ಓರೆಯಾದ ವಿತರಣೆಯನ್ನು ಹೋಲುತ್ತದೆ

ಸಿ) ಬಹುಮಾದರಿ ವಿತರಣೆಯನ್ನು ಹೋಲುತ್ತದೆ ಡಿ) ಏಕರೂಪದ ವಿತರಣೆಯನ್ನು ಹೋಲುತ್ತದೆ

**63.ವಿದ್ಯಾರ್ಥಿಗಳು ತಮ್ಮದೇ ಆದ ಕಾರ್ಯಕ್ಷಮತೆಯನ್ನು ಪ್ರತಿಬಿಂಬಿಸುವ ಮೌಲ್ಯಮಾಪನ**

ಎ) ಪಿಯರ್ ಮೌಲ್ಯಮಾಪನ ಬಿ) ರಚನಾತ್ಮಕ ಮೌಲ್ಯಮಾಪನ

ಸಿ) ಸಂಕಲನಾತ್ಮಕ ಮೌಲ್ಯಮಾಪನ ಡಿ) ಸ್ವ– ಮೌಲ್ಯಮಾಪನ

**64. ಡಿಸ್‌ಗ್ರಾಫಿಯ ಎಂಬ ನ್ಯೂನತೆಯು ಇದಕ್ಕೆ ಸಂಬಂಧಿಸಿದಾಗಿದೆ**

a. ಬರವಣಿಗೆ b. ಓದುವುದು c.ಮಾತನಾಡುವುದು d. ಈ ಮೇಲಿನ ಎಲ್ಲವೂ

**65. ಕೆಳಗಿನವುಗಳಲ್ಲಿ ಯಾವುದು ಸೃಜನಶೀಲ ಮಗುವಿನ ಲಕ್ಷಣ ಅಲ್ಲ**

a. ಸ್ವಂತಿಕೆ b. ವಿವರಣೆ c. ನವೀನತೆ d ನಿಖರತೆ

**66. ಟ್ರಾಫಿಕ್ ಸಿಗ್ನಲ್ ನಲ್ಲಿ ಹಸಿರು ಬಣ್ಣದ ದೀಪ ಕಾಣಿಸಿದೊಡನೆ ನಿಂತಿರುವ ವಾಹನಗಳ ಸಾಲು ಮುಂದೆ ಚಲಿಸುತ್ತದೆ ಇದು ಯಾವ ಕಲಿಕೆಯ ಸಿದ್ಧಾಂತಕ್ಕೆ ಉದಾಹರಣೆಯಾಗಿದೆ**

a.ಪಾವ್‌ಲೋವ್‌ಅವರ ಸೋಪಾದಿಕ ಅನುಬಂಧಿತ ಕಲಿಕೆ b. ಥಾರ್ನ್‌ಡೈಕ್‌ಅವರ ಪ್ರಯತ್ನ ಪ್ರಮಾದ ಕಲಿಕೆ

c.ಸ್ಕಿನ್ನರ್‌ರವರ ಕ್ರಿಯಾಜನ್ಯಅನುಬಂಧಿತ ಕಲಿಕೆ d. ಕೋಹ್ಲರ್‌ರವರ ಒಳನೋಟ ಕಲಿಕೆ

**67. ಸಾಮಾಜಿಕ ಸಂರಚನಾ ಸಿದ್ದಾಂತವು ಇದಕ್ಕೆ ಹೆಚ್ಚಿನ ಗಮನ ನೀಡುತ್ತದೆ.**

a. ಸಹಭಾಗಿತ್ವದ ಕಲಿಕೆಗೆ b. ಕೌಶಲಗಳ c. ಸ್ವಯಂ ಸಹಜ ಕಲಿಕೆಗೆ d. ಶಿಶು ಕೇಂದ್ರಿತ ಶಿಕ್ಷಣಕ್ಕೆ

**68. ಮಾನವನ ವಿಕಾಸದಲ್ಲಿ ಬದಲಾವಣೆಗಳು ಕಂಡು ಬರಲು ಕಾರಣ**

a) ಅನುವಂಶೀಯತೆ b) ಪರಿಸರ c) ಅನುವಂಶೀಯತೆ ಮತ್ತು ಪರಿಸರ d) ಪಾಲನೆ

**69. "ಜ್ಞಾನಾತ್ಮಕ ಆಂಶಗಳಾದ ಆಲೋಚನೆ ಮತ್ತು ತಾರ್ಕಿಕತೆಯು ಮಗುವಿನ ನೈತಿಕ ವಿಕಾಸದಲ್ಲಿ ಪ್ರಧಾನ ಪಾತ್ರ ವಹಿಸುತ್ತದೆ." ಎಂಬ ಹೇಳಿಕೆ ನೀಡಿದವರು.**

a. ಎರಿಕ್ ಸನ್ b. ಬ್ರೂನರ್ c. ಹೋವಾರ್ಡ್ ಗಾರ್ಡನರ್ d.ಕೋಹ್ಲ್‌ಬರ್ಗ್

**70. ತರಗತಿಯಲ್ಲಿ ವೈವಿಧ್ಯತೆಯನ್ನು ಗುರುತಿಸುವುದು ಮತ್ತು ಗೌರವಿಸುವುದು ಮುಖ್ಯ ಏಕೆಂದರೆ.**

ಎ) ಪ್ರಮಾಣಿತ ದೈನಂದಿನ ವೇಳಾಪಟ್ಟಿ ತಯಾರಿಸಲು ಬಿ) ತರಗತಿಯಲ್ಲಿ ಸಕಾರಾತ್ಮಕ ವಾತಾವರಣವನ್ನು ಸೃಷ್ಟಿಸಲು

ಸಿ) ವಿದ್ಯಾರ್ಥಿಗಳ ಬಲಹೀನತೆಗಳನ್ನು ಕಂಡುಕೊಳ್ಳಲು ಡಿ) ಕಲಿಕೆಯಲ್ಲಿ ಹಿಂದುಳಿದಿರುವ ಮಕ್ಕಳನ್ನು ಪತ್ತೆ ಹಚ್ಚಲು

**71. ಬಾಲಾಪರಾಧಿ ನ್ಯಾಯ ಕಾಯ್ದೆ ಯಾವಾಗ ಜಾರಿಗೆ ಬಂದಿತು**

a. 2015 b. 2019 c. 2002 d.2000

**72. ಮಗು ನಿಲ್ಲುವ ಸಾಮರ್ಥ್ಯವನ್ನು ಪಡೆಯುವ ಮೊದಲು ನಡೆಯಲು ಸಾಧ್ಯವಿಲ್ಲ .ಅದೇ ರೀತಿ ಓಡಲು ಪ್ರಾರಂಭಿಸುವ ಮೊದಲು ಹೇಗೆ ನಡೆಯಬೇಕೆಂಬುದನ್ನ ಕಲಿಯಬೇಕು ಈ ಕಲ್ಪನೆಯು ಕೆಳಗಿನ ತತ್ವಕ್ಕೆ ಸಂಬಂಧಿಸಿದೆ.**

a) ನಿರಂತರತೆಯ ತತ್ವ b)ಏಕರೂಪತೆಯ ತತ್ವ c)ಅಭಿವೃದ್ಧಿಯ ತತ್ವ d) ನಿರ್ದೇಶನ ಅಭಿವೃದ್ಧಿಯ ತತ್ವ

**73. ಮಗಳಿಗೆ ಗಂಡನ್ನು ಹುಡುಕುತ್ತಿರುವ ವ್ಯಕ್ತಿ ದಿನಪತ್ರಿಕೆಯಲ್ಲಿ ವಧು ವರರ ಜಾಹೀರಾತಿನ ಮೇಲೆ ಮಾತ್ರ ಗಮನಹರಿಸುವುದು ಇದಕ್ಕೆ ಉದಾಹರಣೆಯಾಗಿದೆ**

a. ಅಭ್ಯಾಸ ಅವಧಾನ b. ಐಚ್ಚಿಕ ಅವಧಾನ c. ಅನೈಚ್ಛಿಕ ಅವಧಾನ d. ಮನೋಧೋರಣೆ

**74. ಲಿಂಗದ ಬಗೆಗಿನ ಅರಿವು ಮತ್ತು ಅದರ ಶಾಶ್ವತತೆಯ ಜ್ಞಾನ.**

ಎ) ಲಿಂಗ ತೀವ್ರತೆ ಬಿ) ಲಿಂಗ ಪಡಿಯಚ್ಚು ಸಿ) ಲಿಂಗ ಅನನ್ಯತೆ ಡಿ) ಲಿಂಗ ಪ್ರತ್ಯೇಕತೆ

**75. ಡಿಸ್‌ಗ್ರಾಫಿಯ ಎಂಬ ನ್ಯೂನತೆಯುಇದಕ್ಕೆ ಸಂಬಂಧಿಸಿದಾಗಿದೆ**

a. ಬರವಣಿಗೆ b. ಓದುವುದು c. ಮಾತನಾಡುವುದು d. ಈ ಮೇಲಿನ ಎಲ್ಲವೂ

**76. ದೃಷ್ಟಿ ಹೀನತೆ ಹೊಂದಿರುವ ವಿದ್ಯಾರ್ಥಿಗಳ ಶಿಕ್ಷಣ ಯಶಸ್ವಿಯಾಗಲು ಈ ಕೆಳಗಿನ ಯಾವ ಅಭ್ಯಾಸವು ಸಹಾಯಕವಾಗಿದೆ**

a. ಸಣ್ಣ ಮುದ್ರಣ ಮತ್ತು ಚಿತ್ರಗಳಿರುವ ಪುಸ್ತಕಗಳ ಬಳಕೆ b. ಸ್ಪರ್ಶ ಮತ್ತು ಉಬ್ಬು ವಸ್ತುಗಳ ಬಳಕೆ

c. ಶಿಕ್ಷಕರು ಮತ್ತು ಗೆಳೆಯರಿಂದ ಸಂಕೇತ ಭಾಷೆಯ ಬಳಕೆ d. ಕಪ್ಪು ಹಲಗೆಯ ಮೇಲೆ ಲಿಖಿತ ಸೂಚನೆಗಳು

**77. ಇದು ಆಲ್ಫ್ರೆಡ್ ಬೀನೆಯವರು ನೀಡಿದ ಪರಿಕಲ್ಪನೆಯಾಗಿದೆ**

a. ಸೃಜನಶೀಲತೆ b. ಬಹು ಬುದ್ಧಿಶಕ್ತಿ c. ಮಾನಸಿಕ ವಯಸ್ಸು d. ಸಂವೇಗಾತ್ಮಕ ಬುದ್ಧಿಶಕ್ತಿ

**78. ಭಾಷೆಯನ್ನುಗ್ರಹಿಸುವ ಸಾಧನದ ಪರಿಕಲ್ಪನೆಯನ್ನು ನೀಡಿದವರು (Language Acquisition Device)**

a. ನೋಮ್ ಚೋಮ್ಸ್ಕೀ b. ವೈಗೋಟ್ಸ್ಕಿ c. ಜಾನ್‌ಡ್ಯೂಯಿ d. ಪೆಟ್ರೋವಿಚ್ ಪಾವ್ಲೋವ್

**79. ಈ ಕೆಳಗಿನವುಗಳಲ್ಲಿ ಯಾವುದು ಮಕ್ಕಳ ಲಿಂಗ ಪಡಿಯಚ್ಚು ಕಡಿಮೆ ಮಾಡಲು ಪರಿಣಾಮಕಾರಿ ತಂತ್ರವಾಗಿದೆ.**

ಎ) ಲಿಂಗ ನಿರ್ದಿಷ್ಟ ಪಾತ್ರಗಳಿಗೆ ಒತ್ತು ನೀಡುವುದು ಬಿ) ಲಿಂಗ ಬೇರ್ಪಡಿಸಿದ ಆಟದ ಗುಂಪುಗಳು

ಸಿ) ಲಿಂಗ ತಾರತಮ್ಯ ಕುರಿತು ಚರ್ಚೆ ಡಿ) ಲಿಂಗಾಧಾರಿತವಾಗಿ ತರಗತಿಯಲ್ಲಿ ಪ್ರತ್ಯೇಕ ಆಸನ ವ್ಯವಸ್ಥೆ

**80. ಪಿಯಾಜೆಯವರ ಪ್ರಕಾರ ಬೌದ್ಧಿಕ ವಿಕಾಸದ ಮೊಟ್ಟಮೊದಲ ಬದಲಾವಣೆಇದರಿಂದ ಪ್ರಾರಂಭವಾಗುತ್ತದೆ.**

a. ಸ್ಥಳಾವಕಾಶ ಒದಗಿಸಿಕೊಳ್ಳುವಿಕೆ b. ಹೊಂದಾಣಿಕೆ

c. ಮನೋಗತ ಮಾಡಿಕೊಳ್ಳುವಿಕೆ d. ಸ್ಕೀಮಾ

**81. ಸ್ವನಿಯಂತ್ರಣ, ಸಾಮಾಜಿಕ ಕೌಶಲ, ಕರುಣೆ, ಸ್ವಯಂ ತಿಳುವಳಿಕೆ ಈ ಗುಣ ಲಕ್ಷಣಗಳನ್ನು ಒಳಗೊಂಡಿರುವುದು.**

a. ಸಾಮಾಜಿಕ ಬುದ್ಧಿಶಕ್ತಿ. b. ಬಹು ಬುದ್ಧಿಶಕ್ತಿ

ಇ. ಸಂವೇಗಾತ್ಮಕ ಬುದ್ಧಿಶಕ್ತಿ d. ಸೃಜನಶೀಲತೆ.

**82. ತನ್ನದೇ ವಯಸ್ಸಿನ ಮಕ್ಕಳಿಗಿಂತ ಮಗು ತಪ್ಪುಉಚ್ಚಾರಣೆ ಮಾಡುವುದು ಮತ್ತುಕಡಿಮೆ ಪದ ಸಂಪತ್ತನ್ನು ಹೊಂದಿರುವುದಕ್ಕೆ ಮುಖ್ಯಕಾರಣವೆಂದರೆ,**

a. ಸೃಜನಶೀಲತೆ ಇಲ್ಲದಿರುವುದು b. ವಿಕಾಸದಲ್ಲಿನ ದೋಷ

c. ಬೆಳವಣಿಗೆಯಲ್ಲಿನ ಕೊರತೆ d. ನಾಲಿಗೆ ಮಂದವಿರುವುದು

**83. ವಿಶೇಷ ಶಿಕ್ಷಣದ ಪಿತಾಮಹ**

a. ಸೆಗುಯಿನ್ b. ಇಟಾರ್ಡ್ c. ಬ್ರೈಲ್ d. ಕಿರ್ಕ್

**84. ಮಾನವನ ಅಂಡಾಣುವಿನಲ್ಲಿ ವರ್ಣತಂತುಗಳ ಸಂಖ್ಯೆ**

a) 46 b) 23 ಮಾತ್ರ c) 23 ಜೊತೆ d) 22 ಜೊತೆ

**85.ವಿದ್ಯಾರ್ಥಿಗಳು ತಮ್ಮದೇಆದಕಾರ್ಯಕ್ಷಮತೆಯನ್ನು ಪ್ರತಿಬಿಂಬಿಸುವ ಮೌಲ್ಯಮಾಪನ**

a) ಪಿಯರ್ ಮೌಲ್ಯಮಾಪನ b)ರಚನಾತ್ಮಕ ಮೌಲ್ಯಮಾಪನ

c) ಸಂಕಲನಾತ್ಮಕ ಮೌಲ್ಯಮಾಪನ d) ಸ್ವ– ಮೌಲ್ಯಮಾಪನ

**86. ತರಗತಿಯಲ್ಲಿಒಬ್ಬ ವಿದ್ಯಾರ್ಥಿ ಹೆಚ್ಚು ಜನಪ್ರಿಯನಾಗಿರುತ್ತಾನೆ ಮತ್ತು ಗುಂಪಿನಲ್ಲಿ ಇರಲು ಬಯಸುತ್ತಾನೆ. ಆದರೆ ಮತ್ತೊಬ್ಬ ವಿದ್ಯಾರ್ಥಿ ಯಾವಾಗಲೂ ಒಂಟಿಯಾಗಿರಲು ಇಚ್ಚಿಸುತ್ತಾನೆ. ಈ ರೀತಿಯ ವ್ಯತ್ಯಾಸವು**

a. ಭಾವನಾತ್ಮಕ b. ಶೈಕ್ಷಣಿಕ ಸಾಧನೆಯಲ್ಲಿನ ವ್ಯತ್ಯಾಸ c. ಸಾಮಾಜಿಕ d. ಮಾನಸಿಕ

**87. ಇದು ಕಾರ್ಯಕ್ಷಮತೆ ಆಧಾರಿತ ಮೌಲ್ಯಮಾಪನದ ಪ್ರಮುಖ ಲಕ್ಷಣವಾಗಿದೆ**

a) ಪೇಪರ್ ಪೆನ್ಸಿಲ್ ಪರೀಕ್ಷೆಯ ಮೂಲಕ ಪರಿಣಾಮಕಾರಿಯಾಗಿ ನಿರ್ಣಯಿಸಬಹುದು

b)ಉನ್ನತ ಶ್ರೇಣಿಗಳಲ್ಲಿ ಮಾತ್ರ ಕಾರ್ಯಗತಗೊಳಿಸಬಹುದು

c) ಪ್ರಕ್ರಿಯೆ ಮತ್ತು ಉತ್ಪನ್ನದ ಬಗ್ಗೆ ಸುಳಿವುಗಳನ್ನು ಒದಗಿಸುತ್ತದೆ

d) ವಿದ್ಯಾರ್ಥಿಗಳು ತಮ್ಮ ಕೌಶಲ ಮತ್ತು ಸಾಮರ್ಥ್ಯದ ಪ್ರದರ್ಶನಕ್ಕಾಗಿ ಬಳಸಲಾಗುತ್ತದೆ

**88. ಮಗುವು ತನ್ನ ತಾಯಿಯನ್ನು ಗುರುತಿಸುವ ಪ್ರಕ್ರಿಯೆಯು ಯಾವ ವಿಕಾಸದಲ್ಲಿ ಕಂಡು ಬರುತ್ತದೆ**

a)ದೈಹಿಕ ವಿಕಾಸ b) ಮಾನಸಿಕ ವಿಕಾಸ c) ಸಂವೇಗಾತ್ಮಕ ವಿಕಾಸ d) ಸಾಮಾಜಿಕ ವಿಕಾಸ

**89. ಅಡೋಲೆಸೆನ್ಸ್ (Adolescence) ಎಂಬ ಆಂಗ್ಲ ಪದದ ಮೂಲ ಈ ಭಾಷೆಯಿಂದ ತೆಗೆದುಕೊಳ್ಳಲಾಗಿದೆ**

a) ಫ್ರೆಂಚ್ b)ಗ್ರೀಕ್ c) ಲ್ಯಾಟಿನ್ d) ಸ್ಪ್ಯಾನಿಷ್

**90. ಉತ್ತಮ ಪರೀಕ್ಷೆಯ ಗುಣಲಕ್ಷಣಗಳು**


a) ಸಮಂಜಸತೆ b) ವಿಶ್ವಾಸನೀಯತೆ c) ವಸ್ತುನಿಷ್ಠತೆ d)ಎಲ್ಲವೂ

## MODEL QUESTION PAPER- 1
## KEY ANSWERS

| | | | | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|---|
| 61 | b | 62 | a | 63 | d | 64 | a | 65 | d | 66 | a | 67 | a | 68 | c | 69 | d | 70 | b |
| 71 | a | 72 | b | 73 | b | 74 | c | 75 | a | 76 | b | 77 | c | 78 | a | 79 | c | 80 | d |
| 81 | c | 82 | b | 83 | b | 84 | b | 85 | d | 86 | c | 87 | d | 88 | d | 89 | c | 90 | d |



ಡಯಟ್ ನ ಪ್ರಾಂಶುಪಾಲರಾದ ಶ್ರೀಯು ನಾಗರಾಜಯ್ಯ ರವರಿಂದ ಸಂಪನ್ಮೂಲ ಸಾಹಿತ್ಯ ಪರಿಶೀಲನೆ



ಶ್ರೀಮತಿ ಭಾನುಮತಿ ಟಿ ವಿ ಹಿ.ಸ ನಿರ್ದೇಶಕರು ಡಿಎಸ್.ಇ ಆರ್.ಟಿ ಇವರ ಉಪಸ್ಥಿತಿಯಲ್ಲಿ
ಸಂಪನ್ಮೂಲ ಸಾಹಿತ್ಯ ರಚನಾ ತಂಡದಿಂದ ಪ್ರಸ್ತುತಿ

## ಮಾದರಿ ಪ್ರಶ್ನೆ ಪತ್ರಿಕೆ –2

### PART – III ಶಿಶು ವಿಕಸನ ಮತ್ತು ಬೋಧನಾಶಾಸ್ತ್ರ

**61. ಗ್ಯಾನೆಯವರ ಪದ ಸೋಪಾನ ಕಲಿಕೆಯಲ್ಲಿ ಯಾವುದು ಅತ್ಯುನ್ನತ ಮಟ್ಟದ ಕಲಿಕೆಯಾಗಿದೆ.**

ಎ) ಸಂಜ್ಞಾ ಕಲಿಕೆ ಬಿ) ಸಮಸ್ಯಾ ಪರಿಹಾರ ಕಲಿಕೆ

ಸಿ) ಸರಪಳಿ ಕಲಿಕೆ ಡಿ) ನಿಯಮ ಕಲಿಕೆ

**62.ಬೋಧನಾ ಕಲಿಕಾ ಪ್ರಕ್ರಿಯೆಯಲ್ಲಿ ಕಲಿಕಾರ್ಥಿಗಳ ಕಲಿಕಾ ಶೈಲಿಗಳನ್ನು**

ಎ) ತಡೆ ಅಥವಾ ಅಡಚಣೆಯಾಗಿ ಪರಿಗಣಿಸಬೇಕು ಬಿ) ನಿರ್ಲಕ್ಷಿಸಿ, ಏಕರೂಪತೆಯನ್ನು ತರಲು ಪ್ರಯತ್ನಿಸಬೇಕು

ಸಿ) ವೈವಿಧ್ಯತೆಯ ಪ್ರತಿಬಿಂಬವಾಗಿ ನೋಡಬೇಕು ಡಿ) ಗಣನೆಗೆ ತೆಗೆದುಕೊಳ್ಳಬಾರದು

**63.ಈ ಕೆಳಗಿನವುಗಳಲ್ಲಿ ಯಾವ ಅಂಶಗಳು ಮಕ್ಕಳು ನಿರೀಕ್ಷಿತ ಸಾಧನೆಯನ್ನು ಮಾಡಲು ವಿಫಲರಾಗಲು ಕಾರಣ.**

**ಎ) ಬುದ್ಧಿಮಟ್ಟ ಬಿ) ಶಾಲಾ ಪರಿಸರ ಸಿ) ಸಮಾಜದ ನೀತಿಗಳು ಡಿ) ಶಿಕ್ಷಕರ ಮನೋಧೋರಣೆ**

1. ಬಿ, ಸಿ, ಡಿ 2. ಸಿ, ಡಿ, ಎ

3. ಎ, ಬಿ, ಸಿ 4. ಎ, ಬಿ, ಡಿ

**64.ಅಮೂರ್ತ ಮಟ್ಟದಲ್ಲಿ ಮಕ್ಕಳಲ್ಲಿ ಕೆಲಸ ಮಾಡುವ ಕೌಶಲ್ಯವನ್ನು ಅಭಿವೃದ್ಧಿಪಡಿಸಲು ಈ ಕೆಳಗಿನ ಯಾವ ಪ್ರಾತಿನಿಧ್ಯದ ಅನುಕ್ರಮವು ಸೂಕ್ತವಾಗಿದೆ?**

ಎ) ಸಾಂಕೇತಿಕ, ಕ್ರಿಯಾತ್ಮಕ, ಬಿಂಬಾತ್ಮಕ ಬಿ) ಕ್ರಿಯಾತ್ಮಕ, ಬಿಂಬಾತ್ಮಕ, ಸಾಂಕೇತಿಕ

ಸಿ) ಬಿಂಬಾತ್ಮಕ, ಸಾಂಕೇತಿಕ, ಕ್ರಿಯಾತ್ಮಕ ಡಿ) ಸಾಂಕೇತಿಕ, ಬಿಂಬಾತ್ಮಕ, ಕ್ರಿಯಾತ್ಮಕ

**65.ಆಲೋಚನಾ ಸಾಮರ್ಥ್ಯ ಹೆಚ್ಚು ತಾರ್ಕಿಕವಾಗುವ ಅವಧಿ**

ಎ) ಮೂರ್ತ ಕಾರ್ಯಗಳ ಹಂತ ಬಿ) ಔಪಚಾರಿಕ ಕಾರ್ಯಗಳ ಹಂತ

ಸಿ) ಕಾರ್ಯ ಪೂರ್ವ ಹಂತ ಡಿ) ಸಂವೇದನಾಗತಿಶೀಲ ಹಂತ

**66.ಈ ಕೆಳಗಿನವುಗಳಲ್ಲಿ ಯಾವುದು ಗ್ಯಾನೆಯ ಕಲಿಕಾ ಶ್ರೇಣಿಯ ಸರಿಯಾದ ಕ್ರಮ.**

ಎ) ಉದ್ದೀಪನಾ ಅನುಕ್ರಿಯಾ ಕಲಿಕೆ ಬಿ) ಶಾಬ್ದಿಕ ಸಹಚರ್ಯ ಕಲಿಕೆ ಸಿ) ಸಂಜ್ಞಾ ಕಲಿಕೆ ಡಿ) ಸರಪಳಿ ಕಲಿಕೆ

a) 1, 2, 3, 4 b) 3, 1, 2, 4

c) 3, 1, 4, 2 d) 4, 2, 1, 3

**67.ಬಾಲ್ಯದಲ್ಲಿ ಹೆಚ್ಚು ವ್ಯಾಪಕವಾಗಿ ಬಳಕೆಯಲ್ಲಿರುವ ಕಲಿಕಾ ವಿಧಾನವೆಂದರೆ.**

ಎ) ಪ್ರಯತ್ನ ಹಾಗೂ ಪ್ರಮಾದ ಕಲಿಕೆ ಬಿ) ಒಳನೋಟ ಕಲಿಕೆ

ಸಿ) ಸಮಸ್ಯಾ ಪರಿಹಾರ ಕಲಿಕೆ ಡಿ) ಅನ್ವೇಷಣಾ ಕಲಿಕೆ

**68. ಈ ಕೆಳಗಿನ ಯಾವ ಅಂಶ ಪ್ರಗತಿದಾಯಕ ಶಿಕ್ಷಣಕ್ಕೆ ಸಂಬಂಧಿಸಿದೆ**

1. ಪ್ರಗತಿದಾಯಕ ಶಿಕ್ಷಣವು ಸಾಂಪ್ರದಾಯಿಕ ಶಿಕ್ಷಣಕ್ಕಿಂತ ಭಿನ್ನವಾಗಿಲ್ಲ
2. ಪ್ರಗತಿದಾಯಕ ಶಿಕ್ಷಣದಲ್ಲಿ ಸಮಸ್ಯೆ ಪರಿಹಾರ ಮತ್ತು ತಾರ್ಕಿಕ ಆಲೋಚನೆ ಮತ್ತು ಸಾಮಾಜಿಕ ಕೌಶಲಕ್ಕೆ ಒತ್ತು ನೀಡಲಾಗಿದೆ
3. ಕ್ರೀಡೆ ಹಾಗೂ ವಿಶ್ರಾಂತಿಗೆ ಹೆಚ್ಚಿನ ಅವಕಾಶ ನೀಡಲಾಗಿದೆ
4. ಸಂಯೋಜಿತ ಮತ್ತು ಸಹಕಾರಿ ಕಲಿಕೆ ಹಾಗೂ ಪ್ರಾಯೋಗಿಕ ಕಲಿಕೆಗೆ ಹೆಚ್ಚಿನಆದ್ಯತೆ ನೀಡಲಾಗಿದೆ.

a. ಒಂದು ಮತ್ತು ನಾಲ್ಕು ಮಾತ್ರ b. ಮೂರು ಮತ್ತು ನಾಲ್ಕು ಮಾತ್ರ

c. ಎರಡು ಮತ್ತು ನಾಲ್ಕು ಮಾತ್ರ d. ಒಂದುಎರಡು ಮತ್ತು ನಾಲ್ಕು ಮಾತ್ರ

**69. ವ್ಯಕ್ತಿಯು ಹೇಗೆ ಯೋಚಿಸುತ್ತಾನೆ ಎಂಬುದು ಅವನ ಭಾಷೆ ಮತ್ತು ಭಾಷೆಯನ್ನು ಬಳಕೆ ಮಾಡುವ ಮೂಲಕ ತಿಳಿಯುತ್ತಾನೆ. ಈ ಪ್ರಾಕಲ್ಪನೆಯನ್ನು ರಚಿಸಿದವರು.**

a ನೋಯಮ್ ಚೋಮ್‌ಸ್ಕಿ b ವೈಗಾಟ್‌ಸ್ಕಿ

c ಸಿಗ್ಮಂಡ್ ಫ್ರಾಯ್ಡ್ d. ಬೆಂಜಮಿನ್ ಲೀ ವೋರ್ಫ್

**70. ಶಿಶು ಕೇಂದ್ರಿತ ಶಿಕ್ಷಣ ಪದ್ಧತಿಯಲ್ಲಿ ಮಗುವಿಗೆ ಸಹಜವಾದ ಕಲಿಕೆಯು ಈ ಮೂಲಕ ಉಂಟಾಗುತ್ತದೆ**

a. ಪಠ್ಯಕ್ರಮದಿಂದಾಗಿ b. ಸ್ವಯಂ ಕಲಿಕೆಯಿಂದ

c. ಸಹಪಾಠಿಗಳೊಂದಿಗೆ ಬೆರೆತು ಕಲಿಯುವುದರಿಂದ d. ಸ್ವಯಂ ಕಲಿಕೆ ಮತ್ತು ಸಹಪಾಠಿಗಳೊಂದಿಗೆ ಬೆರೆತು ಕಲಿಯುವುದರಿಂದ

**71. ಭಾಷೆಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆ ಸರಿಯಾಗಿದೆ.**

a. ಭಾಷೆ ಮತ್ತು ಆಲೋಚನೆ ಇವೆರಡೂ ಪ್ರತ್ಯೇಕ ಪ್ರಕ್ರಿಯೆಯಾಗಿದೆ

b. ಪರಿಸರದ ಪ್ರಚೋದನೆಯಿಂದ ಭಾಷೆಯ ವಿಕಾಸವಾಗುತ್ತದೆ

c. ಭಾಷೆಯುದ್ಯೆವ ಮೂಲ ಸಿದ್ದಾಂತದ ಕೊಡುಗೆ.

d. ಭಾಷೆಯು ಆಲೋಚನೆಯನ್ನು ಮುಂದುವರಿಸುವುದಿಲ್ಲ

**72. ವಿದ್ಯಾರ್ಥಿಗಳ ಅವಧಾನವನ್ನು ನಿರ್ಧರಿಸುವ ಅಂಶಗಳಿಗೆ ಇದು ಸಂಭಂದಿಸುವುದಿಲ್ಲ**

a. ದೃಕ್ ಶ್ರವಣೋಪಕರಣಗಳ ಬಳಕೆ b. ಅಭಿಪ್ರೇರಣೆ ಮತ್ತು ಆಸಕ್ತಿ

c. ತರಗತಿಯ ವಾತಾವರಣ d. ಅನುವಂಶಿಯತೆ

**73. ಸ್ಕೂಲ್ ಆಫ್ ಅಮೆರಿಕನ್ ಎಜುಕೇಶನಲ್ ಸೈಕಾಲಜಿಸ್ಟ್‌ರವರ ಅಧ್ಯಯನದ ಪ್ರಕಾರ ಒಬ್ಬರ ಜೀವನದ ಏರಿಳಿತಗಳನ್ನು ನಿರ್ಧರಿಸುವಲ್ಲಿ ಇದು ಪ್ರಮುಖ ಪಾತ್ರ ವಹಿಸುತ್ತದೆ**

a. ವ್ಯಕ್ತಿಯ ಕುಟುಂಬ b. ಪರಿಸರ

c. ಅನುವಂಶಿಯತೆ d. ಮೇಲಿನ ಯಾವುದೂ ಅಲ್ಲ

**74. IEDSS ವಿಸ್ತೃತರೂಪ**

a.ಇನ್ಕ್ಲೂಸಿವ್ ಎಜುಕೇಶನ್ ಫಾರ್‌ಡಿಸೆಬಲ್ಡ್‌ಅಟ್ ಸೆಕೆಂಡರಿ ಸ್ಟೇಜ್

b. ಇಂಟಿಗ್ರೇಟೆಡ್‌ಎಜುಕೇಶನ್ ಫಾರ್‌ಡಿಸೆಬಲ್ಡ್‌ಅಟ್ ಸೆಕೆಂಡರಿ ಸ್ಟೇಜ್

c ಇಂಟೆಗ್ರೇಟೆಡ್‌ಎಜುಕೇಶನ್ ಫಾರ್‌ಡಿಫೆಕ್ಟಿವ್‌ಅಟ್ ಸೆಕೆಂಡರಿ ಸ್ಟೇಜ್

d. ಇನ್ಕ್ಲೂಸಿವ್ ಎಜುಕೇಶನ್ ಫಾರ್ ಡಿಫೆಕ್ಟಿವ್‌ಅಟ್ ಸೆಕೆಂಡರಿ ಸ್ಟೇಜ್

**75. ಸೃಜನಾತ್ಮಕತೆಯ ಸಂಶೋಧನೆಗೆ ಮಹತ್ತರ ಕೊಡುಗೆ ನೀಡಿದ ಭಾರತದ ಶಿಕ್ಷಣ ತಜ್ಞ**

a. ಬಿ.ಕೆ ಪಾಸಿ b. ಆರ್. ಪಿ ಸಿಂಗ್

c. ಎಸ್. ಕೆ ಮಂಗಲ್ d. ಆರ್.ಡಿ ಶರ್ಮ

**76. ಡಿಸ್ಕ್ಯಾಲ್ಕುಲಿಯ ಎಂಬುವುದು**

a. ಓದುವ ಸಮಸ್ಯೆ b.ಬರೆಯುವ ಸಮಸ್ಯೆ

c. ಅಂಕಗಣಿತ ಸಮಸ್ಯೆ d. ಕಾಗುಣಿತ ಸಮಸ್ಯೆ

**77. ಸೆರಬ್ರಲ್ ಪಾಲ್ಸಿ ಎಂಬ ಪದದ ಅರ್ಥ**

a. ಮೆದುಳಿನ ಹಾನಿ b. ತಲೆಗೆ ಗಾಯ

c. ಮೆದುಳಿನ ಗೊಂದಲ d. ಮೆದುಳಿನ ಪಾರ್ಶ್ವವಾಯು

**78. ನವಜಾತ ಶಿಶುಗಳಲ್ಲಿ ಮೆದುಳಿನ ಹಾನಿಗೆ ಸಾಮಾನ್ಯ ಕಾರಣ**

a. ಆಮ್ಲಜನಕದ ಕೊರತೆ b. ರಕ್ತದ ಕೊರತೆ

c. ಪೋಷಣೆಯ ಕೊರತೆ d. ನೀರಿನ ಅಭಾವ

**79. ಕಲಿಕೆಯಲ್ಲಿ ಸ್ವಯಂ ಮೌಲ್ಯಮಾಪನಕ್ಕೆ ಸಂಬಂಧಿಸಿದ ಸಾಧನ**

a)ರುಬ್ರಿಕ್ಸ್‌ನೊಂದಿಗೆ ಮೌಲ್ಯಮಾಪನ b) ಪ್ರತಿಫಲಿತಾ ಹಾಳೆ

c)ತಾಳೆಪಟ್ಟಿ d) ವರ್ಗ ಪರೀಕ್ಷೆ

**80. ವಿದ್ಯಾರ್ಥಿಗಳ ಕಲಿಕೆಯಲ್ಲಿರುವ ನ್ಯೂನ್ಯತೆಗಳ ನೈದಾನಿಕ ಪರೀಕ್ಷೆಯು ಯಾವುದನ್ನು ಹಿಂಬಾಲಿಸಬೇಕು.**

a) ಸೂಕ್ತ ಪರಿಹಾರ ಬೋಧನೆ b) ಸಮಗ್ರ ರೂಢಿ ಮತ್ತು ಅಭ್ಯಾಸ

c) ಎಲ್ಲಾ ಪಾಠಗಳ ವ್ಯವಸ್ಥಿತ ಪುನರಾವಲೋಕನ d)ಸಾಧನಾ ಪರೀಕ್ಷೆ

**81. ಒಂದು ವೇಳೆ ವಿದ್ಯಾರ್ಥಿಯೊಬ್ಬ ನಿಮಗೆ ಗೊತ್ತಿರದ ಪ್ರಶ್ನೆಯನ್ನು ಕೇಳಿದರೆ ಏನು ಮಾಡುವಿರಿ?**

a)ಅಂತಹ ವಿದ್ಯಾರ್ಥಿಗೆ ಅವನ ಪ್ರಶ್ನೆಯು ಅರ್ಥರಹಿತ ಎಂದು ಹೇಳುವುದು

b)ಅಂತಹ ವಿದ್ಯಾರ್ಥಿಯ ಪ್ರಶ್ನೆಯನ್ನು ಕಡೆಗಣಿಸಲು ಪ್ರಯತ್ನಿಸುವುದು

c) ಆ ಪ್ರಶ್ನೆಯ ಉತ್ತರವನ್ನು ಹುಡುಕಿ ನಂತರದ ದಿನ ವಿದ್ಯಾರ್ಥಿಗೆ ತಿಳಿಸುವುದು

d)ಅನಗತ್ಯ ಪ್ರಶ್ನೆಗಳನ್ನು ಕೇಳಿದ ವಿದ್ಯಾರ್ಥಿಗೆ ಗದರಿಸುವುದು

**82. ವಿಕಾಸವು ಎಲ್ಲರಲ್ಲೂ**

a) ದ್ವಿಪಾರ್ಶ್ವತೆಯಿಂದ ಏಕ ಪಾರ್ಶ್ವತೆಯೆಡೆಗೆ ಸಾಗುತ್ತದೆ b) ಏಕ ಪಾಶ್ವತೆಯಿಂದ ದ್ವಿ ಪಾರ್ಶ್ವತೆಯೆಡೆಗೆ

c)ಅನುವಂಶೀಯತೆಯನ್ನು ಮಾತ್ರ ಹೊಂದಿರುತ್ತದೆ d)ಪರಿಸರದ ಮೇಲೆ ಮಾತ್ರಅವಲಂಬಿತವಾಗಿರುತ್ತದೆ.

**83. ಮಾನವನಲ್ಲಿ ಅತ್ಯಂತ ವೇಗದ ಬೆಳವಣಿಗೆ ಈ ಅವಧಿಯಲ್ಲಿ ಕಂಡುಬರುತ್ತದೆ**

a) ಪೂರ್ವ ಬಾಲ್ಯಾವಸ್ಥೆ b)ವಯಸ್ಕತನ

c) ಶೈಶವಾವಸ್ಥೆ d)ತಾರುಣ್ಯಾವಸ್ಥೆ

**84. ಅನುವಂಶೀಯತೆ ನಿಯಮಗಳನ್ನು ಪ್ರತಿಪಾದಿಸಿದವರು**

a)ಜಾನ್ ಗ್ರಿಗರ್ ಮೆಂಡಲ್ b)ಎಡ್ವರ್ಡ್ ಜೆನ್ನರ್

c)ಜಗದೀಶ್ ಚಂದ್ರ ಬೋಸ್ d)ಚಾರ್ಲ್ಸ್ ಡಾರ್ವಿನ್

**85. ಪರಿಪಕ್ವತೆ ಈ ಕೆಳಗಿನ ಯಾವುದರಲ್ಲಿ ಸಹಾಯ ಮಾಡುತ್ತದೆ**

a) ಕಲಿಕೆ b)ಕಲ್ಪನೆ

c) ಹಗಲುಗನಸು d) ಊಹೆ

**86. ಔಪಚಾರಿಕ ಮೌಲ್ಯಮಾಪನವು ಸಾಮಾನ್ಯವಾಗಿಯಾವುದನ್ನು ಸೂಚಿಸುತ್ತದೆ.**

a) ಸಾಧನ ಪರೀಕ್ಷೆ b) ಲಿಖಿತ ದಾಖಲೆ

c) ಮೌಖಿಕ ಪರೀಕ್ಷೆ d) ಮೇಲಿನ ಎಲ್ಲವೂ

**87. ಕೌಶಲಗಳ ಸಾಧನೆಯ ಅವಲೋಕನವನ್ನು ಒದಗಿಸುವ ಮೌಲ್ಯಮಾಪನ**

a)ರಚನಾತ್ಮಕ b) ಸಂಕಲನಾತ್ಮಕ

c) ನೈದಾನಿಕ d) ಪ್ರಾಯೋಗಿಕ

**88. ಎಷ್ಟೋ ಬಾರಿ ಸಮಸ್ಯೆಗೆಉತ್ತರಇದ್ದಕ್ಕಿದ್ದಂತೆ ಹೊಳೆಯುತ್ತದೆ ಎಂಬ ಹೇಳಿಕೆಯ ಹಿಂದಿರುವ ಸಿದ್ಧಾಂತ**

a. ಸೋಪಾಧಿಕಅನುಬಂಧದ ಸಿದ್ದಾಂತ b. ಕ್ರಿಯಾಜನ್ಯಅನುಬಂಧನ ಸಿದ್ದಾಂತ

c. ಒಳನೋಟ ಕಲಿಕೆಯ ಸಿದ್ಧಾಂತ d. ಜ್ಞಾನಾತ್ಮಕ ವಿಕಾಸ ಸಿದ್ಧಾಂತ

**89. ಪರಿಶಿಷ್ಟ ಜಾತಿ ಎಂಬ ಪದನಾಮವನ್ನು ಯಾವ ಆಯೋಗ ನೀಡಿತು?**

a. ಸೈಮನ್ಆಯೋಗ b. ವುರ್ಡ್ಸ್ ವರದಿ

c. ಕೊಠಾರಿಆಯೋಗ d. ಹಂಟರ್ಆಯೋಗ

**90. ಸ್ಥಳಾವಕಾಶ ಸಂಬಂಧಿತ ಬುದ್ಧಿಶಕ್ತಿ ಇವರಲ್ಲಿ ಹೆಚ್ಚಾಗಿರುತ್ತದೆ**

a. ಕಾರ್ಯಕ್ರಮ ನಿರೂಪಕರು, ಕವಿಗಳು

b. ಚಿತ್ರಕಲಾವಿದರು ,ಶಿಲ್ಪಿಗಳು, ವಿಮಾನಚಾಲಕರು

c. ಸಸ್ಯಾ ಮತ್ತು ಪ್ರಾಣಿ ಶಾಸ್ತ್ರಜ್ಞರು

d. ಸಂಗೀತಗಾರರು ಮತ್ತು ಗಣಿತಜ್ಞರು

## MODEL QUESTION PAPER- 2
## KEY ANSWERS

| | | | | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|---|
| 61 | b | 62 | c | 63 | d | 64 | b | 65 | a | 66 | c | 67 | a | 68 | c | 69 | d | 70 | d |
| 71 | b | 72 | d | 73 | b | 74 | a | 75 | b | 76 | c | 77 | d | 78 | a | 79 | b | 80 | a |
| 81 | c | 82 | a | 83 | d | 84 | a | 85 | a | 86 | d | 87 | d | 88 | c | 89 | a | 90 | b |



ಸಂಪನ್ಮೂಲ ಸಾಹಿತ್ಯ ರಚನಾ ಕಾರ್ಯದಲ್ಲಿ ತೊಡಗಿರುವ ತಂಡದ ಸದಸ್ಯರು



ಶ್ರೀಮತಿ ಟಿ ವಿ ಭಾನುಮತಿ ಹಿ.ಸ.ನಿರ್ದೇಶಕರು ಡಿಎಸ್, ಇ ಆರ್. ಟಿ ಬೆಂಗಳೂರು

ಇವರಿಂದ ಸಂಪನ್ಮೂಲ ಸಾಹಿತ್ಯ ರಚನಾ ಕಾರ್ಯದ ಕುರಿತು ಮಾರ್ಗದರ್ಶನ

# *Bibliography*


- ರಾಜು.ಜಿ 2009,"ಶೈಕ್ಷಣಿಕ ಮನೋವಿಜ್ಞಾನ" ವಿದ್ಯಾನಿಧಿ ಪ್ರಕಾಶನ, ಗದಗ
- ಎ ವಿ ಗೋವಿಂದ್ ರಾವ್ 1976 ಶಿಕ್ಷಣದ ಮನೋವಿಜ್ಞಾನ ಲಕ್ಷ್ಮಿ ಪಬ್ಲಿಕೆ ಪಬ್ಲಿಶಿಂಗ್ ಹೌಸ್ ಮೈಸೂರು
- ಆರ್ ಜಿ ಪ್ರಭು, 2005,ಶೈಕ್ಷಣಿಕ ಮನೋವಿಜ್ಞಾನ ವಿಜ್ಞಾನಿಧಿ ಪ್ರಕಾಶನ ,ಗದಗ
- ಡಾಕ್ಟರ್ ಹೆಚ್ ವಿ ವಾಮದೇವಪ್ಪ, 2013,ಕಲಿಕಾ ಪ್ರಕ್ರಿಯೆಯ ಮನೋವಿಜ್ಞಾನ ಮತ್ತು ಮೌಲ್ಯಮಾಪನ, ಶ್ರೇಯಸ್ ಪಬ್ಲಿಕೇಶನ್ ,ದಾವಣಗೆರೆ.
- ಡಾಕ್ಟರೇಟ್ ಹೆಚ್ ವಿ ವಾಮದೇವಪ್ಪ 2005 ಶೈಕ್ಷಣಿಕ ಮನೋವಿಜ್ಞಾನ ಶ್ರೇಯಸ್ ಪಬ್ಲಿಕೇಶನ್ ದಾವಣಗೆರೆ
- ಡಾಕ್ಟರ್ ಎಸ್ ಬಿ ಕೊಂಗವಾಡ 1997 ಶೈಕ್ಷಣಿಕ ಮನೋವಿಜ್ಞಾನ ಸುಮುಖ ಪ್ರಿಂಟರ್ಸ್ ಬೆಂಗಳೂರು.
- ಕೆ ಎನ್ ರಾಜಶೇಖರಯ್ಯ 2011 ಶೈಕ್ಷಣಿಕ ಮನೋವಿಜ್ಞಾನ ಸುಮುಖ ಪ್ರಿಂಟರ್ಸ್ ಬೆಂಗಳೂರು
- S S Chauhan 1996 Advanced Educational Psychology Vikas publishing house Private Limited New Delhi.
- SK Mangal 2006 advanced educational Prentice Hall of India Private Limited New Delhi
- Elizabeth Herlock, 1997 ,child development 6th Edition , Mc grow hill India Private Limited New Delhi
- SK Mangal 2017 Educating exceptional children PHI learning Private Limited Haryana
- Dr HP Vamadevappa 2021 psychology of learning and Instruction print point, Bangalore

TET




*'The destiny of a nation is being shaped in it's classrooms'*

***D S Kothari***